ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪ್ರಭ್, ಅಯ್ಯರ್ ಭರ್ಜರಿ ಆಟ

ಮುಂಬೈನಲ್ಲಿ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ವಿರುದ್ಧ 139 ರನ್ ಜೊತೆಯಾಟವಾಡಿದ ಪ್ರಭ್‌ಸಿಮ್ರನ್ ಸಿಂಗ್ (80) ಶ್ರೇಯಸ್ ಅಯ್ಯರ್ (66) ಪಂಜಾಬ್‌ಗೆ ಸುಲಭ ಜಯ ತಂದಿತ್ತರು. ಪಂಜಾಬ್ ಇದೀಗ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಸೊಂಪಾದ ಪುಟಗಳು

ಇದೆಲ್ಲ ಸವತಿ ಮಕ್ಕಳ ನಾಲ್ಕು ಸಾವಿರ ವರ್ಷದ ವ್ಯಾಜ್ಯವೇ?

ಶಿಶಿರಕಾಲ
ಶಿಶಿರ್ ಹೆಗಡೆ 6

ಬೇಸಗೆಯ ಬಿಸಿಲಿನಲ್ಲಿ ಮಕ್ಕಳೇಕೆ ಕಾಡಲ್ಲಿ ಸುತ್ತುತ್ತಿದ್ದರು?

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ಎಲ್ಲಿಯವರೆಗೆ ನೀವು ಪ್ರಯತ್ನಿಸುವುದನ್ನು ನಿಲ್ಲಿಸುವುದಿಲ್ಲವೋ, ಅಲ್ಲಿಯವರೆಗೆ ನೀವು ಸೋಲನ್ನು ಅನುಭವಿಸಲು ಸಾಧ್ಯವಿಲ್ಲ. ಸತತ ಪರಿಶ್ರಮ ಮತ್ತು ಛಲವಿದ್ದರೆ ಪ್ರತಿಯೊಂದು ಅಡೆತಡೆಯೂ ಯಶಸ್ಸಿನ ಹಾದಿಯ ಮೆಟ್ಟಿಲಾಗುತ್ತದೆ. ಆತ್ಮವಿಶ್ವಾಸದಿಂದ ಮುನ್ನಡೆದರೆ ಗೆಲುವು ಖಂಡಿತವಾಗಿಯೂ ನಿಮ್ಮದಾಗುತ್ತದೆ.

ವಕ್ರತುಂಡೋಕ್ತಿ

ಇಷ್ಟವಾದ ಪದಾರ್ಥಗಳನ್ನು ತಿನ್ನುವಾಗ ಕಾಡುವ 'ಅಪರಾಧ ಪ್ರಜ್ಞೆ'ಯನ್ನು ಮರೆಮಾಚಲು ಮಾಡುವ ಒಂದು ವಾರದ ನಾಟಕಕ್ಕೆ 'ಡಯಟ್' ಎನ್ನಬಹುದು.

ಲಷ್ಕರ್ ಉಗ್ರನ ಮೇಲೆ ಗುಂಡೇಟು

ಲಾಹೋರ್: 2005ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸೇರಿದಂತೆ ಭಾರತದ ಹಲವು ಕಡೆ ದಾಳಿ ನಡೆಸಿದ್ದ ಲಷ್ಕರ್ ತೊಯ್ಬಾ ಸಂಘಟನೆಯ ಸಹ ಸಂಸ್ಥಾಪಕ ಅಮೀರ್ ಹಮ್ಜಾನ ಮೇಲೆ ಲಾಹೋರ್‌ನಲ್ಲಿ ಗುರುವಾರ ಅಪರಿಚಿತ ವ್ಯಕ್ತಿಗಳಿಂದ ಗುಂಡಿನ ದಾಳಿ ನಡೆದಿದೆ. ಗಂಭೀರವಾಗಿ ಗಾಯಗೊಂಡಿರುವ ಹಮ್ಜಾನ ಸ್ಥಿತಿ ಚಿಂತಾಜನಕವಾಗಿದೆ.

ಡಾ ಎಂ.ಎ.ಸಲೀಂ ಅಧಿಕಾರಾವಧಿ ವಿಸ್ತರಣೆ

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ ಎಂ.ಎ.ಸಲೀಂ ಅವರ ಅಧಿಕಾರಾವಧಿಯನ್ನು 2027ರ ಆಗಸ್ಟ್‌ವರೆಗೆ ವಿಸ್ತರಣೆ ಮಾಡಿ ರಾಜ್ಯ ಸರಕಾರ ಆದೇಶಿಸಿದೆ.

ಈ ಹಿಂದೆ ಪ್ರಕಾಶ್ ಸಿಂಗ್ ವರ್ಸಸ್ ಕೇಂದ್ರ ಸರಕಾರದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2006ರಲ್ಲಿ ನೀಡಿದ ತೀರ್ಪಿನ ಅನ್ವಯ ಒಮ್ಮೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ ಆಯ್ಕೆಯಾದ ಅಧಿಕಾರಿಯನ್ನು ಕಡ್ಡಾಯವಾಗಿ ಎರಡು ವರ್ಷಗಳ ಕಾಲ ಮುಂದುವರಿಸಬೇಕು. ಈ ಆದೇಶ ಉಲ್ಲೇಖಿಸಿ ರಾಜ್ಯ ಸರಕಾರ ಸಲೀಂ ಅವರ ಸೇವಾವಧಿಯನ್ನು ವಿಸ್ತರಣೆ ಮಾಡಿದೆ. 1993ನೇ ಬ್ಯಾಚ್‌ನ ಹಿರಿಯ ಐಪಿಎಸ್ ಅಧಿಕಾರಿ ಡಾ.ಎಂ.ಎ ಸಲೀಂ ಅವರು ಇದೇ ವರ್ಷ ಜೂನ್ 25ರಂದು ಸಲೀಂ ಅವರು ನಿವೃತ್ತಿ ಆಗಬೇಕಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

ಪೊಲೀಸರಿಂದ ತಪ್ಪಿಸಿಕೊಳ್ಳಲು 5 ಗಂಟೆ 'ಕೆರೆಯಲ್ಲೇ ಅಡಗಿದ್ದ ಕಳ್ಳ'



ಸಂಸತ್ತಿನಲ್ಲಿ ಮಹಿಳಾ ಮೀಸಲು, ಕ್ಷೇತ್ರ ಮರುವಿಂಗಡಣೆ ತಿದ್ದುಪಡಿ ವಿಧೇಯಕ ಮಂಡನೆ

ಮೀಸಲಿಗೆ ಬೆಂಬಲ, ವಿಂಗಡಣೆಗೆ ವಿರೋಧ

ಮೀಸಲು ಜತೆ ಕ್ಷೇತ್ರ ವಿಂಗಡಣೆ ವಿಧೇಯಕ ಮಂಡನೆಗೆ ಪ್ರತಿಪಕ್ಷ ನಾಯಕರ ತೀವ್ರ ಆಕ್ಷೇಪ

ನಮಗೆ ಕ್ರೆಡಿಟ್ ಬೇಕಾಗಿಲ್ಲ, ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗೋಣ: ಪ್ರತಿಪಕ್ಷಕ್ಕೆ ಮೋದಿ ಮನವಿ

ದೆಹಲಿ: ಪ್ರತಿಪಕ್ಷಗಳ ತೀವ್ರ ವಿರೋಧ, ಗದ್ದಲ, ಕೋಲಾಹಲದ ನಡುವೆಯೇ ಐತಿಹಾಸಿಕ ಮಹಿಳಾ ಮೀಸಲು ವಿಧೇಯಕ, ಕ್ಷೇತ್ರ ಮರುವಿಂಗಡಣೆ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು ತಿದ್ದುಪಡಿ ವಿಧೇಯಕಗಳನ್ನು ಲೋಕಸಭೆಯಲ್ಲಿ ಗುರುವಾರ ಮಂಡಿಸಲಾಗಿದೆ. ಮಹಿಳಾ ಮೀಸಲು ವಿಧೇಯಕಕ್ಕೆ ಬೆಂಬಲ ಘೋಷಿಸಿರುವ ಪ್ರತಿಪಕ್ಷ ಇಂಡಿ ಒಕ್ಕೂಟ, ಕ್ಷೇತ್ರ ಮರುವಿಂಗಡಣೆ ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದೆ. ಶುಕ್ರವಾರ ಸಂಜೆ 4 ಗಂಟೆಗೆ ಈ ಮೂರೂ ವಿಧೇಯಕಗಳ ಮೇಲೆ ಮತದಾನ ನಡೆಯಲಿದ್ದು ದೀರ್ಘ ಕಾಲದಿಂದ ನಿರೀಕ್ಷಿತ ಮಸೂದೆಯ ಭವಿಷ್ಯ ನಿರ್ಧಾರವಾಗಲಿದೆ.

ವಿಶೇಷ ಅಧಿವೇಶನದಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ನಾವು ಅವರ ಹಕ್ಕುಗಳನ್ನು ನೀಡುತ್ತಿದ್ದೇವೆ. ನಮಗೆ ಯಾವುದೇ ಕ್ರೆಡಿಟ್ ಬೇಕಾಗಿಲ್ಲ, ಬೇಕಾದರೆ ನೀವೇ ತೆಗೆದುಕೊಳ್ಳಿ. ಈ ವಿಚಾರದಲ್ಲಿ ರಾಜಕೀಯ ಮಾಡಬಾರದು. ಮಸೂದೆ ಬೆಂಬಲಿಸುವ ಮೂಲಕ ನಾವೆಲ್ಲರೂ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಬೇಕಾಗಿದೆ ಎಂದು ಪ್ರತಿಪಕ್ಷಗಳಿಗೆ ಮನವಿ ಮಾಡಿದರು. ಮಹಿಳಾ ಮೀಸಲಾತಿಯನ್ನು ವಿರೋಧಿಸುವವರನ್ನು ದೇಶಾದ್ಯಂತ ಮಹಿಳೆಯರು ಕ್ಷಮಿಸುವುದಿಲ್ಲ ಅವರು ದೀರ್ಘಕಾಲದವರೆಗೆ ಬೆಲೆ ತೆರಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ರವಾನಿಸಿದರು.

ಮೂರು ಮಸೂದೆ ಮಂಡನೆ: ಮಹಿಳಾ ಮೀಸಲು ಅಂಗೀಕಾರಕ್ಕಾಗಿಯೇ ಕರೆಯಲಾದ ಮೂರು ದಿನಗಳ ವಿಶೇಷ ಅಧಿವೇಶನದ ಅಂಗವಾಗಿ ಬೆಳಿಗ್ಗೆ 11 ಗಂಟೆಗೆ ಲೋಕಸಭೆ ಕಲಾಪ ಆರಂಭವಾಗುತ್ತಿದ್ದಂತೆ ಭಾನುವಾರ ನಿಧನರಾದ ಖ್ಯಾತ ಗಾಯಕಿ ಆಶಾ ಭೋಸ್ಲೆ ಅವರಿಗೆ ಸಂತಾಪ ಸಲ್ಲಿಸಲಾಯಿತು. ಬಳಿಕ ಕೇಂದ್ರ ಕಾನೂನು ಮತ್ತು ಸಾಮಾಜಿಕ ನ್ಯಾಯ ಸಚಿವ ಅರ್ಜುನ್ ರಾಮ್ ಮೇಗರ್‌ವಾಲ್ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಒದಗಿಸುವ ನಾರಿ ವಂದನ್ ಅಧಿನಿಯಮ, ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು ಮತ್ತು ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಗಳನ್ನು ಮಂಡಿಸಿದರು.

ಮಸೂದೆ ಮಂಡನೆಯಾಗುತ್ತಿದ್ದಂತೆ ಇಂಡಿಯಾ ಮೈತ್ರಿಕೂಟದ ಅಂಗಪಕ್ಷಗಳಾದ ಟಿಎಂಸಿ, ಎಸ್‌ಪಿ, ಡಿಎಂಕೆ, ಎಎಪಿ, ಡಿಆರ್‌ಎಸ್, ಶಿವಸೇನೆ (ಯುಬಿಟಿ), ಎಐಎಂಐಎಂ ಸೇರಿದಂತೆ ಹಲವು ಪಕ್ಷಗಳು ಮಹಿಳಾ ಮೀಸಲು ಮಸೂದೆ ಹೊರತುಪಡಿಸಿ ಉಳಿದಿರುವ ಎರಡು ವಿವಾದಾತ್ಮಕ ಮಸೂದೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದವು. ಕಾಂಗ್ರೆಸ್ ಸಂಸದ ಕೆ.ಸಿ.ವೇಣುಗೋಪಾಲ್ ಅವರು ಐದು ರಾಜ್ಯಗಳ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರಕಾರ ಆತುರಾತುರವಾಗಿ ಮಸೂದೆಯನ್ನು ಏಕೆ ಮಂಡನೆ ಮಾಡುತ್ತಿದೆ ಎಂದು ಪ್ರಶ್ನಿಸಿದರು. ನಾವು ಮೀಸಲು ಮಸೂದೆಗೆ ವಿರೋಧ ವ್ಯಕ್ತಪಡಿಸುವುದಿಲ್ಲ, ಆದರೆ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗೆ ನಮ್ಮ ವಿರೋಧವಿದೆ.

2011 ರ ಜನಗಣತಿ ಪ್ರಕಾರ, ಕ್ಷೇತ್ರ ಪುನರ್ ವಿಂಗಡನೆ ಮಾಡಿದರೆ ಉತ್ತರ ಭಾರತದ ರಾಜ್ಯಗಳ ಸಂಖ್ಯೆ ಹೆಚ್ಚಳವಾಗಿ ದಕ್ಷಿಣ ಭಾರತಕ್ಕೆ ಅನ್ಯಾಯವಾಗುತ್ತದೆ ಎಂದು ಆಕ್ಷೇಪಿಸಿದರು. ಪ್ರತಿಪಕ್ಷ ಸದಸ್ಯರು ಚರ್ಚೆಗೆ ಮುನ್ನವೇ ಮಸೂದೆಯನ್ನು ಮತಕ್ಕೆ ಹಾಕುವಂತೆ ಒತ್ತಾಯಿಸಿದರು. ಇದಕ್ಕೆ ಸ್ಪೀಕರ್ ಓಂ ಬಿರ್ಲಾ ಅವರು ಸಮ್ಮತಿಸಿ, ಮತಕ್ಕೆ ಹಾಕಿದಾಗ, ಮಹಿಳಾ ಮಸೂದೆ ಪರವಾಗಿ 251 ಸಂಸದರು ಮತ ಚಲಾಯಿಸಿದರೆ, 185 ಸಂಸದರು ವಿರೋಧ ವ್ಯಕ್ತ ಪಡಿಸಿದರು.

ಚಾರಿತ್ರಿಕ ಕ್ಷಣ ಎಂದ ಮೋದಿ: ಮಹಿಳಾ ಮೀಸಲಾತಿ ಕುರಿತು ಮಾತನಾಡಿದ ಪ್ರಧಾನಿ ಮೋದಿ, 25-30 ವರ್ಷಗಳ ಹಿಂದೆಯೇ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕಾಗಿತ್ತು. ಈಗ ಅದನ್ನು ಹೆಚ್ಚು ಪ್ರಬುದ್ಧ ಹಂತಕ್ಕೆ ತರಲಾಗಿದೆ. ಅಗತ್ಯಗಳಿಗೆ ಅನುಗುಣವಾಗಿ ಕಾಲಾನಂತರದಲ್ಲಿ ಇದನ್ನು ಪರಿಷ್ಕರಿಸಲಾಗುವುದು ಎಂದು ಹೇಳಿದರು.

ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುವವರು ದೀರ್ಘಕಾಲದವರೆಗೆ ಬೆಲೆ ತೆರಬೇಕಾಗುತ್ತದೆ. ಮಹಿಳೆಯರಿಗೆ ಮೀಸಲಾತಿ ನೀಡುವ ಈ ಮಹತ್ವದ ಅವಕಾಶವನ್ನು ನಾವೆಲ್ಲರೂ ಕಳೆದುಕೊಳ್ಳಬಾರದು ಎಂದು ಹೇಳಿದರು. ಚುನಾವಣೆಯಲ್ಲೂ ಮಹಿಳೆಯರ ಈ ಹಕ್ಕನ್ನು ವಿರೋಧಿಸಿದವರು ಯಾರೇ ಆಗಿರಲಿ, ದೇಶದ ಮಹಿಳೆಯರು ಅವರನ್ನು ಕ್ಷಮಿಸಿಲ್ಲ ಎಂದು ಎಚ್ಚರಿಸಿದರು. ನಾವು ಈಗಾಗಲೇ ಅದನ್ನು ವಿಳಂಬ ಮಾಡಿದ್ದೇವೆ. ಕಾರಣಗಳು ಏನೇ ಇರಲಿ, ಯಾರೇ ಜವಾಬ್ದಾರರಾಗಿದ್ದರೂ, ನಾವು ಈ ವಾಸ್ತವವನ್ನು ಒಪ್ಪಿಕೊಳ್ಳಬೇಕು ಎಂದರು.



ನಮ್ಮ 'ವಿಕಸಿತ ಭಾರತ' ಸೀಮಿತ ದೃಷ್ಟಿಕೋನ ಹೊಂದಿರುವ ಜನರದ್ದಲ್ಲ. 'ವಿಕಸಿತ ಭಾರತ' ಎಂದರೆ ರೈಲ್ವೆಗಳು, ರಸ್ತೆಗಳು, ಮೂಲಸೌಕರ್ಯ ಅಥವಾ ಆರ್ಥಿಕ ಅಥವಾ ಪ್ರಗತಿಯ ವ್ಯಕ್ತಿಗಳು ಮಾತ್ರವಲ್ಲ. ನಮ್ಮ ವಿಕಸಿತ ಭಾರತ ನೀತಿ ನಿಜವಾಗಿಯೂ 'ಸಬ್ ಕಾ ಸಾಥ್ , ಸಬ್ ಕಾ ವಿಕಾಸ್' ಎಂಬ ಮಂತ್ರವನ್ನು ಸಾಕಾರಗೊಳಿಸಲಿದೆ

ನರೇಂದ್ರ ಮೋದಿ, ಪ್ರಧಾನಿ

ಮಹಿಳಾ ಮೀಸಲಾತಿಯ ಹೆಸರಿನಲ್ಲಿ ಜಾರಿಗೆ ತರಲು ಹೊರಟಿರುವ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗೆ ನಮ್ಮ ವಿರೋಧವಿದೆ. ಮಸೂದೆ ಹೆಸರಿನಲ್ಲಿ ಸಂಸತ್ತನ್ನು ಹೈಜಾಕ್ ಮಾಡಲು ವಿರೋಧ ಪಕ್ಷಗಳು ಬಿಡುವುದಿಲ್ಲ. ನಾವು ಒಗ್ಗಟ್ಟಾಗಿ ನಿಲ್ಲುತ್ತೇವೆ ಮತ್ತು ನಮ್ಮ ಪ್ರಜಾಪ್ರಭುತ್ವದ ಮೇಲಿನ ಈ ಕುಟಿಲ ದಾಳಿಯನ್ನು ಪೂರ್ಣ ಬಲದಿಂದ ಎದುರಿಸಲಿದ್ದೇವೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಈಗಿರುವ ಪ್ರಸ್ತಾವನೆಯಡಿ ಲೋಕಸಭೆಯ ಒಟ್ಟು ಸೀಟುಗಳನ್ನು 543ರಿಂದ 816ಕ್ಕೆ ಹೆಚ್ಚಿಸಿದರೆ, ದಕ್ಷಿಣ ಭಾರತದ ರಾಜ್ಯಗಳು ಲೋಕಸಭಾ ಸ್ಥಾನಗಳಲ್ಲಿಯೂ ಶೇ. 50ರಷ್ಟು ಹೆಚ್ಚಾಗುತ್ತದೆ. ಕರ್ನಾಟಕದ ಲೋಕಸಭಾ ಸದಸ್ಯರ ಸಂಖ್ಯೆ 42ಕ್ಕೇರುತ್ತದೆ. ಉಳಿದ ರಾಜ್ಯಗಳ ಪ್ರಾತಿನಿಧ್ಯವು ಇದೇರೀತಿ ಏರಿಕೆಯಾಗಲಿದೆ.

ಅಮಿತ್ ಶಾ, ಗೃಹ ಸಚಿವ

ಹಾಲಿ ಸೀಟುಗಳಲ್ಲೇ ಮೀಸಲು ಕೊಡಿ: ಪ್ರಿಯಾಂಕಾ

ಪ್ರಸ್ತುತ ಲೋಕಸಭೆಯಲ್ಲಿರುವ 543 ಸ್ಥಾನಗಳಲ್ಲೇ ಶೇಕಡಾ 33ರಷ್ಟು ಮಹಿಳಾ ಮೀಸಲಾತಿಯನ್ನು ಏಕೆ ನೀಡಬಾರದು ಎಂದು ಪ್ರಶ್ನಿಸಿದ ವಯನಾಡು ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಒಂದು ವೇಳೆ ಈ ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರವಾದರೆ, ಈ ದೇಶದಲ್ಲಿ ಪ್ರಜಾಪ್ರಭುತ್ವವೇ ನಾಶವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು. ಗೃಹ ಸಚಿವರ ವಿರುದ್ಧ ಹರಿಹಾಯ್ದ ಪ್ರಿಯಾಂಕಾ, ನಿಮ್ಮ ಸುಳ್ಳುಗಳು ಮಹಿಳೆಯರಿಗೆ ಚೆನ್ನಾಗಿ ಗೊತ್ತಾಗುತ್ತದೆ. ಮಹಿಳಾ ಮೀಸಲಾತಿ ವಿಷಯ ಸ್ವಾಗತಾರ್ಹ. ಆದರೆ, ಇದರ ಹಿಂದೆ ರಾಜಕೀಯ ವಾಸನೆ ಇದೆ. ನಿಮ್ಮ ಕುತಂತ್ರ ನೋಡಿ ಚಾಣಕ್ಯನೇ ಶಾಕ್ ಆಗುತ್ತಿದ್ದ ಎಂದು ಟಾಂಗ್ ನೀಡಿದರು.

ಮೂರನೇ ಎರಡು ಬಹುಮತದ್ದೇ ಕುತೂಹಲ

ಲೋಕಸಭೆಯ ಒಟ್ಟು 540 (3 ಸ್ಥಾನ ಖಾಲಿ) ಸ್ಥಾನಗಳ ಪೈಕಿ ಬಿಜೆಪಿ ನೇತೃತ್ವದ ಎನ್‌ಡಿಎ 293 ಸದಸ್ಯರನ್ನು ಹೊಂದಿದ್ದರೆ ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ 231 ಸದಸ್ಯರನ್ನು ಹೊಂದಿದೆ. ಮೂರು ಮಸೂದೆಗಳು ಅಂಗೀಕಾರವಾಗಬೇಕಾದರೆ ಲೋಕಸಭೆಯಲ್ಲಿ 360 ಸದಸ್ಯರ ಬೆಂಬಲ ಬೇಕು. ರಾಜ್ಯಸಭೆಯ ಒಟ್ಟು 245 ಸ್ಥಾನಗಳ ಪೈಕಿ ಎನ್‌ಡಿಎ 134, ಇಂಡಿಯಾ ಮೈತ್ರಿಕೂಟ 74 ಹಾಗೂ ಇತರರು 37 ಸದಸ್ಯರಿದ್ದಾರೆ. ಇಲ್ಲಿ ಮೂರನೇ ಎರಡರಷ್ಟು ಬಹುಮತದಿಂದ ಮಸೂದೆ ಅಂಗೀಕಾರವಾಗಬೇಕಾದರೆ 163 ಸದಸ್ಯರ ಬೆಂಬಲ ಬೇಕು. ಎನ್‌ಡಿಎ ಮಸೂದೆ ಅಂಗೀಕಾರಕ್ಕೆ ಉಳಿದಿರುವ ಸದಸ್ಯರ ಬೆಂಬಲ ಹೇಗೆ ಪಡೆಯುತ್ತದೆ ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಐಟಿ-ಬಿಟಿ ಇಲಾಖೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ವಾಪಸ್

ಸಿದ್ದರಾಮಯ್ಯ, ಡಿಕೆಶಿ ಇಂದು ದೆಹಲಿಗೆ: ವರಿಷ್ಠರ ಭೇಟಿ ದೌಟು

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದ ಗದ್ದಲ, ವಜಾ, ರಾಜೀನಾಮೆ ಪರ್ವ ನಡೆಯುತ್ತಿರುವ ಸಮಯದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿ ಪ್ರವಾಸ ಕೈಗೊಂಡಿದ್ದಾರೆ.

ಶುಕ್ರವಾರ ಮಧ್ಯಾಹ್ನ ದೆಹಲಿಗೆ ಪ್ರಯಾಣಿಸಲಿರುವ ಈ ಇಬ್ಬರು ನಾಯಕರು, ಕರ್ನಾಟಕ ಸರಕಾರದ ಐಟಿ-ಬಿಟಿ ಇಲಾಖೆಯ ವತಿಯಿಂದ ಆಯೋಜಿಸಿರುವ 'ಬ್ರಿಡ್ಜ್ ಟು ಬೆಂಗಳೂರು' ಎನ್ನುವ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ದೇಶಗಳ ರಾಯಭಾರಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ಕೆಲವರು ಈ ಕಾರ್ಯಕ್ರಮದ ಬಳಿಕ ಪಕ್ಷದ ನಾಯಕರನ್ನು ಭೇಟಿಯಾಗುತ್ತಾರೆ ಎನ್ನುತ್ತಿದ್ದಾರೆ. ಆದರೆ ರಾತ್ರಿ 9 ಗಂಟೆಗೆ ಇಬ್ಬರೂ ಬೆಂಗಳೂರಿಗೆ ವಾಪಸಾಗಲಿರುವುದರಿಂದ ರಾಜಕೀಯ ಭೇಟಿ ಕಷ್ಟಸಾಧ್ಯ ಎನ್ನಲಾಗಿದೆ.

ವಿಶೇಷ ಅಧಿವೇಶನದ ಹಿನ್ನಲೆಯಲ್ಲಿ ಹೈಕಮಾಂಡ್ ನಾಯಕರೆಲ್ಲರೂ ದೆಹಲಿಯಲ್ಲಿಯೇ ಉಳಿದಿದ್ದರೂ, ಸಿಎಂ ಮಂಗಳವಾರವೇ ವಾಪಸಾಗುತ್ತಿರುವುದರಿಂದ, ರಾಜಕೀಯ ಚರ್ಚೆಗೆ ಅವಕಾಶ ಸಿಗುವುದು ತೀರಾ ಕಡಿಮೆ ಎನ್ನಲಾಗಿದೆ. ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆಗೆ ಒತ್ತಡಗಳು ಹೆಚ್ಚಾಗಿದ್ದರೂ, ಪಂಚರಾಜ್ಯ ಚುನಾವಣೆಯ ಮುಗಿಯುವ ತನಕ ಈ ವಿಷಯದ ಚರ್ಚೆಯಿಂದ ಯಾವುದೇ ಲಾಭವಿಲ್ಲ. ಆದ್ದರಿಂದ ಪಂಚರಾಜ್ಯ ಚುನಾವಣಾ ಪ್ರಕ್ರಿಯೆ ಮುಗಿದ ಬಳಿಕ ದೆಹಲಿಗೆ ತೆರಳಿ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಚರ್ಚಿಸಲು ಮುಖ್ಯಮಂತ್ರಿಗಳು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

→ 4



ದೆಹಲಿಗೆ ಬರಬೇಡಿ

ಸಚಿವ ಸಂಪುಟ ಪುನಾರಚನೆಗೆ ಪಕ್ಷದ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗಳು ಕೂತು ಚರ್ಚಿಸಲಿದ್ದಾರೆ. ಅದಕ್ಕಾಗಿ ಶಾಸಕರು ದೆಹಲಿಗೆ ಭೇಟಿ ನೀಡುವ ಅಗತ್ಯ ಇಲ್ಲ. ಹೀಗಾಗಿ ಎಲ್ಲರೂ ವಾಪಸ್ ಹೋಗಿ ಎನ್ನುವ ಸ್ಪಷ್ಟ ಸಂದೇಶವನ್ನು ವರಿಷ್ಠರು ರವಾನಿಸಿ ದ್ದಾರೆ. ಆದ್ದರಿಂದ ಗುರುವಾರ ರಾತ್ರಿ, ಬಹುತೇಕ ಶಾಸಕರು ಬೆಂಗಳೂರಿಗೆ ವಾಪಸಾಗಲಿದ್ದಾರೆ.

17ರೊಳಗಿನ ಮಕ್ಕಳ ಆಧಾರ್ ಅಪ್‌ಡೇಟ್‌ಗೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಐದರಿಂದ 17 ವರ್ಷದೊಳಗಿನ ಮಕ್ಕಳಿಗೆ ಆಧಾರ್ ಚೀಟಿಯ ಕಡ್ಡಾಯ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಿಸುವಂತೆ ಸರಕಾರ ಆದೇಶ ಹೊರಡಿಸಿದೆ. 5ರಿಂದ 17 ವರ್ಷದ ಎಲ್ಲಾ ಮಕ್ಕಳಿಗೆ ಸೆ.30ರೊಳಗೆ ಬಯೋ ಮೆಟ್ರಿಕ್ ಅಪ್‌ಡೇಟ್‌ಗೆ ಅವಕಾಶ ನೀಡಿದ್ದು, ಉಚಿತವಾಗಿ ಎಲ್ಲಾ ಆಧಾರ್ ಸೇವಾ ಕೇಂದ್ರಗಳಲ್ಲಿ ಈ ಸೌಲಭ್ಯವನ್ನು ಒದಗಿಸಲಾ ಗುವುದು. ಪೋಷಕರು ತಮ್ಮ ಮಕ್ಕಳ ಆಧಾರ್ ಕಾರ್ಡ್ ಹಾಗೂ ಅಗತ್ಯ ದಾಖಲೆಗಳೊಂದಿಗೆ ಹತ್ತಿರದ ಆಧಾರ್ ಕೇಂದ್ರಕ್ಕೆ ಭೇಟಿ ನೀಡಿ ಅಪ್‌ಡೇಟ್ ಮಾಡಿಕೊಳ್ಳಬಹುದು ಎಂದು ತಿಳಿಸಿದೆ. ಆಧಾರ್ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಿಸುವುದರಿಂದ ಸರಕಾರಿ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಸುಲಭ ವಾಗಿ ಪಡೆಯಲು ಸಾಧ್ಯವಾಗುತ್ತದೆ ಎಂದು ಸರಕಾರ ತಿಳಿಸಿದೆ.

ಸಂತೋಷ್ ಭಟ್ ಸೇರಿ 368 ಜಡ್ಜ್‌ಗಳ ವರ್ಗ

ಬೆಂಗಳೂರು: ರಾಜ್ಯಾದ್ಯಂತ ಸಂಚಲನ ಮೂಡಿಸಿದ್ದ ಯೋಗೇಶ್ ಕೊಲೆ ಪ್ರಕರಣದಲ್ಲಿ ಶಾಸಕ ವಿನಯ್ ಕುಲಕರ್ಣಿ ಸೇರಿ 17 ಆರೋಪಿಗಳನ್ನು ತಪ್ಪಿತಸ್ಥರೆಂದು ಘೋಷಿಸಿರುವ ಬೆಂಗಳೂರು ಜನಪ್ರತಿನಿಧಿಗಳ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಸೇರಿ 368 ನ್ಯಾಯಾಧೀಶರನ್ನು ವರ್ಗಾಯಿಸಿ ಕರ್ನಾಟಕ ಹೈಕೋರ್ಟ್ ಗುರುವಾರ ಆದೇಶ ಹೊರಡಿಸಿದೆ.

ಸಾರ್ವಜನಿಕ ಹಿತದೃಷ್ಟಿ ಹಾಗೂ ಆಡಳಿತಾತ್ಮಕ ಕಾರಣಗಳಿಗಾಗಿ 114 ಜಿಲ್ಲಾ ನ್ಯಾಯಾಧೀಶರು, 115 ಹಿರಿಯ ಸಿವಿಲ್ ನ್ಯಾಯಾಧೀಶರು, 139 ಸಿವಿಲ್ ನ್ಯಾಯಾಧೀಶರನ್ನು ವರ್ಗಾವಣೆ ಮಾಡಲಾಗಿದೆ. ಈ ಎಲ್ಲಾ ವರ್ಗಾವಣೆಗಳು ಜೂನ್ 1 ರಿಂದ ಜಾರಿಗೆ ಬರಲಿವೆ ಎಂದು ಹೈಕೋರ್ಟ್ ಪ್ರಕಟಣೆ ತಿಳಿಸಿದೆ.

ಚಿಕ್ಕಮಗಳೂರಿನ 8 ಮಂದಿ ಕರ್ನೂಲ್ ಬಳಿ ಅಪಘಾತಕ್ಕೆ ಬಲಿ

ರಾಯರ ದರ್ಶನಕ್ಕೆ ಹೊರಟಿದ್ದ 8 ಭಕ್ತರ ಸಾವು

ರಾಯಚೂರು: ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಚಿಕ್ಕಮಗಳೂರು ಮೂಲದ ಎಂಟು ಭಕ್ತರು ಮೃತಪಟ್ಟಿದ್ದಾರೆ. ರಾಯರ ದರ್ಶನಕ್ಕೆ ಅಶೋಕ್ ಲೇಲ್ಯಾಂಡ್ ವಾಹನದಲ್ಲಿ ತೆರಳುತ್ತಿದ್ದಾಗ ಹಾರು ಬೂದಿ ತುಂಬಿದ್ದ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ.

ಚಿಕ್ಕಮಗಳೂರು ಜಿಲ್ಲೆಯಿಂದ ಒಟ್ಟು 21 ಮಂದಿ ಭಕ್ತರು ಬೊಲೆರೊ ವಾಹನದಲ್ಲಿ ಮಂತ್ರಾಲಯಕ್ಕೆ ಹೊರಟಿದ್ದರು. ಅಪಘಾತದಲ್ಲಿ ಮೃತಪಟ್ಟರನ್ನು ಪ್ರತಾಪ್ ಕುಮಾರ್ (50),ಸುನೀಲ್ (40),ದೀಪಿಕಾ, ವೀಣಾ (42), ಪುಟ್ಟಮ್ಮ(55), ಲೋಲಾಕ್ಷಿ, ಯಶೋಧಾ (60) ಹಾಗೂ ಬಾಲಕಿ ಬೆಳ್ಳಿ(5) ಎಂದು ಗುರುತಿಸಲಾಗಿದೆ. ಇನ್ನುಳಿದ ಏಳು ಜನರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕರ್ನೂಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಲ್ವರು ಎಮ್ಮಿಗನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಳಗ್ಗಿನ ಜಾವ 4 ಗಂಟೆ ಸುಮಾರಿಗೆ ಎಮ್ಮಿಗನೂರು ಸಬ್ ಡಿವಿಷನ್ ವ್ಯಾಪ್ತಿಯ ಧರ್ಮಪುರಂ ಟೋಲ್ ಪ್ಲಾಜಾ ಹತ್ತಿರದ ಚಿಲಕಲಡೋಣ ಗ್ರಾಮದ ಬಳಿ ದುರ್ಘಟನೆ ನಡೆದಿದೆ. ಮಂತ್ರಾಲಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯಾತ್ರಿಕರ ವಾಹನ ಅಪ್ಪಚ್ಚಿಯಾಗಿದೆ.

ಯಾರಿಗೂ ಅನ್ಯಾಯ ಮಾಡಿಲ್ಲ ಎಂದ ಕುಲಕರ್ಣಿ

ಯೋಗೇಶ್ ಕೊಲೆ: ವಿನಯ್ ಸೇರಿ 17 ಕೈದಿಗಳಿಗೆ ಇಂದು ಶಿಕ್ಷೆ ಪ್ರಕಟ

ಬೆಂಗಳೂರು: ರಾಜ್ಯ ರಾಜಕಾರಣದಲ್ಲಿ ಭಾರಿ ಸಂಚಲನ ಮೂಡಿಸಿದ್ದ ಬಿಜೆಪಿ ಮುಖಂಡ ಯೋಗೇಶ್ ಗೌಡ ಹತ್ಯೆ ಪ್ರಕರಣವು ಇದೀಗ ಅಂತಿಮ ಘಟ್ಟಕ್ಕೆ ತಲುಪಿದೆ. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ ಒಟ್ಟು 17 ಅಪರಾಧಿಗಳ ವಾದವನ್ನು ಆಲಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಶುಕ್ರವಾರ ಶಿಕ್ಷೆಯ ಪ್ರಮಾಣ ಘೋಷಿಸುವುದಾಗಿ ತಿಳಿಸಿದೆ.



ಗುರುವಾರ ಅಪರಾಧಿಗಳ ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು ಶುಕ್ರವಾರಕ್ಕೆ ತೀರ್ಪನ್ನು ಕಾಯ್ದಿರಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಎಲ್ಲಾ ಸಾಕ್ಷ್ಯಧಾರಗಳನ್ನು ಪರಿಶೀಲಿಸಿ ವಿನಯ್ ಕುಲಕರ್ಣಿ ಸೇರಿದಂತೆ 17 ಜನರನ್ನು ದೋಷಿ ಗಳು ಎಂದು ತೀರ್ಪು ನೀಡಿತ್ತು. ಗುರುವಾರ ಶಿಕ್ಷೆಯ ಪ್ರಮಾಣದ ಕುರಿತು ಸುದೀರ್ಘ ವಾದ-ಪ್ರತಿವಾದ ನಡೆಯಿತು. ನ್ಯಾಯಾ ಧೀಶರ ಮುಂದೆ ಪ್ರತಿಯೊಬ್ಬ ಅಪರಾಧಿಯೂ ತಮ್ಮ ವೈಯಕ್ತಿಕ ಸಮಸ್ಯೆಗಳು, ಆರೋಗ್ಯದ ಸ್ಥಿತಿ ಹಾಗೂ ಕುಟುಂಬದ ಜವಾಬ್ದಾರಿಯನ್ನು ವಿವರಿಸುತ್ತಾ ಶಿಕ್ಷೆ ಕಡಿಮೆ ಮಾಡುವಂತೆ ಮನವಿ ಮಾಡಿದರು.

ನ್ಯಾಯಾಧೀಶರ ಮುಂದೆ ಕಣ್ಣೀರಿಟ್ಟ ವಿನಯ್ ಕುಲಕರ್ಣಿ: ಪ್ರಕರಣದ 15ನೇ ಆರೋಪಿಯಾಗಿರುವ ವಿನಯ್ ಕುಲಕರ್ಣಿ, ನ್ಯಾಯಾಧೀಶರ ಮುಂದೆ ಅಕ್ಷರಶಃ ಕಣ್ಣೀರಿಟ್ಟರು. ತಮ್ಮ ಅಭಿಪ್ರಾಯ ತಿಳಿಸಿದ ವಿನಯ್ ಕುಲಕರ್ಣಿ, ನಾನು ಕಳೆದ 27 ವರ್ಷಗಳಿಂದ ಸಕ್ರಿಯವಾಗಿ ಸಾರ್ವಜನಿಕ ಜೀವನದಲ್ಲಿದ್ದೇನೆ. ರಾಜಕೀಯದಲ್ಲಿ ಜನಸೇವೆಯನ್ನು ಮಾಡುತ್ತಾ ಬಂದಿದ್ದೇನೆ ಹೊರತು, ಈವರೆಗೆ ಯಾರಿಗೂ ನೋವು ನೀಡಿಲ್ಲ. ನನಗೆ ಮದುವೆ ವಯಸ್ಸಿಗೆ ಬಂದಿರುವ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ನಾನೊಬ್ಬ ಕೃಷಿಕನಾಗಿದ್ದು, ಮೂರೂವರೆ ಸಾವಿರ ಹಸುಗಳನ್ನು ಸಾಕುತ್ತಿದ್ದೇನೆ. ನನ್ನನ್ನು ನಂಬಿ ನೂರಾರು ಕುಟುಂಬಗಳು ಬದುಕುತ್ತಿವೆ. ರಾಜಕೀಯ ದ್ವೇಷದ ಕಾರಣದಿಂದಲೇ ನನ್ನ ಮೇಲೆ ಇಂತಹ ಗಂಭೀರ ಆರೋಪಗಳನ್ನು ಹೊರಿಸಲಾಗಿದೆ ಎಂದು ವಾದ ಮಂಡಿಸಿದರು.

ಈಗಿನಿಂದಲೇ ಬರ ನಿರ್ವಹಣೆಗೆ ಸಜ್ಜಾಗಲು ಡಿಸಿಗಳಿಗೆ ಸಿಎಂ ಸೂಚನೆ

ಈ ಬಾರಿ ರಾಜ್ಯದಲ್ಲಿ ಮುಂಗಾರು ಕೊರತೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿರುಬೇಸಿಗೆಯಿಂದ ಬಳಲಿರುವ ಕರ್ನಾಟಕಕ್ಕೆ ಈ ಬಾರಿ ಮುಂಗಾರು ಮಳೆಯೂ ಕೈಕೊಡಲಿದೆ ಎನ್ನುವ ವರದಿ ಇದೀಗ ಜನರ ಆತಂಕಕ್ಕೆ ಕಾರಣವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತಾದ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಈ ಬಾರಿ ರಾಜ್ಯದ ಐದು ಜಿಲ್ಲೆಗಳನ್ನು ಹೊರತುಪಡಿಸಿ, ಇನ್ನುಳಿದ ಎಲ್ಲ ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮುಂಗಾರು ಬರುವುದಿಲ್ಲ. ಆದ್ದರಿಂದ ಈಗಿನಿಂದಲೇ ಕುಡಿಯುವ ನೀರಿನ ಸಮಸ್ಯೆ ಎದುರಿಸಲು, ಜಾನುವಾರುಗಳಿಗೆ ಮೇವು ಪೂರೈಸಲು ಅಗತ್ಯ ಕ್ರಮವಹಿಸುವಂತೆ ಸೂಚನೆ ನೀಡಲಾಗಿದೆ.

ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದ್ದು, ಆಗಸ್ಟ್‌ನಲ್ಲಿ ವಾಡಿಕೆ ಮಳೆಯಾದರೂ, ಸೆಪ್ಟಂಬರ್‌ನಲ್ಲಿ ಮಳೆ ಪ್ರಮಾಣ ಕುಸಿತವಾಗುವ ಸಾಧ್ಯತೆಯಿದೆ. ಈ ಬಾರಿ ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡು ಬರುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ವರದಿ ನೀಡಿದೆ. ಆದ್ದರಿಂದ ಪರಿಸ್ಥಿತಿ ನಿಭಾಯಿಸಲು ಜಿಲ್ಲಾಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ.

ಕುಡಿಯುವ ನೀರಿಗೆ ಅಗತ್ಯ ಅನುದಾನ: ಕುಡಿಯುವ ನೀರಿಗೆ ತೊಂದರೆಯಾಗದಂತೆ ಜಿಲ್ಲಾಧಿಕಾರಿಗಳು ಕ್ರಮವಹಿಸಬೇಕು. ಸಮಸ್ಯೆ ಎದುರಾದರೆ, ಆಯಾ ಜಿಲ್ಲಾಧಿಕಾರಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ, ಎಂ.ಬಿ. ಪಾಟೀಲ್, ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಭೋಸರಾಜು ಚಲುವರಾಜಸ್ವಾಮಿ ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವರು, ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಹಿರಿಯ ಅಧಿಕಾರಿಗಳಿದ್ದರು.

598 ಗ್ರಾ.ಪಂನಲ್ಲಿ ನೀರಿನ ಸಮಸ್ಯೆ

ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತಿಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಟ್ಯಾಂಕರ್‌ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಇದರ ಮೂಲಕ 515ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕಳ್ಳತನ ಪ್ರಕರಣ: ಆರೋಪಿ ಸೆರೆ

ಬೆಂಗಳೂರು: ಬಾಗಿಲ ಚಿಲಕ ತೆಗೆದು ಮನೆಯೊಳಗೆ ನುಗ್ಗಿ ಹಣ, ಆಭರಣ ದೋಚಿ ಪರಾರಿಯಾಗಿದ್ದ ಆರೋಪಿಯೊಬ್ಬನನ್ನು ತಿಲಕನಗರ ಪೊಲೀಸರು ಬಂಧಿಸಿ 35 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಜಯನಗರ 4ನೇ ಟಿ ಬ್ಲಾಕ್ ನಿವಾಸಿಯೊಬ್ಬರು ಮನೆಯ ಬಾಗಿಲ ಚಿಲಕ ಹಾಕಿಕೊಂಡು ದಿನಸಿ ತರಲು ಸಮೀಪದ ಅಂಗಡಿಗೆ ಹೋಗಿದ್ದಾರೆ. ನಿವಾಸಿಯ ತಂದೆ ಮನೆಗೆ ಬಂದಾಗ ಗೇಟ್ ಹಾಗೂ ಮನೆ ಬಾಗಿಲು ತೆರೆದಿರುವುದು ಗಮನಿಸಿ ಒಳಗೆ ಹೋಗಿ ನೋಡಿದಾಗ ಬೀರುವಿನ ಲ್ಲಿಟ್ಟಿದ್ದ 423 ಗ್ರಾಂ ಚಿನ್ನಾಭರಣ, 110 ಗ್ರಾಂ ಬೆಳ್ಳಿ ವಸ್ತುಗಳು ಮತ್ತು 50 ಸಾವಿರ ಹಣ ಕಳುವಾಗಿರುವುದು ಕಂಡು ಬಂದಿದ್ದು, ತಕ್ಷಣ ಅವರು ತಿಲಕನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ವಿವಿಧ ಆಯಾಮ ಗಳಲ್ಲಿ ಖಚಿತ ಮಾಹಿತಿಗಳನ್ನು ಕಲೆಹಾಕಿ ಬಾಣಸವಾಡಿಯ ಹೋಟೇಲ್ವೊಂದರ ಬಳಿ ಅನುಮಾನಾಸ್ಪದವಾಗಿ ನಿಂತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಮನೆಗಳ್ಳತನ ಮಾಡಿರು ವುದಾಗಿ ಹೇಳಿದ್ದಾನೆ. ರಾಮಮೂರ್ತಿನಗರದ ಪಾರ್ಕ್‌ವೊಂದರ ಬಳಿ ನಿಲ್ಲಿಸಿದ್ದ ದ್ವಿಚಕ್ರ ವಾಹನದ ಡಿಕ್ಕಿಯಲ್ಲಿಟ್ಟಿದ್ದ ಆಭರಣಗಳು ಸೇರಿದಂತೆ ಒಟ್ಟು 240 ಗ್ರಾಂ ಚಿನ್ನಾಭರಣ, 89 ಗ್ರಾಂ ಬೆಳ್ಳಿ ವಸ್ತುಗಳು, ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

23.63 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ: 10 ಮಂದಿಯ ಬಂಧನ

ಬೆಂಗಳೂರು: ಡ್ರಗ್ಸ್ ವಿರುದ್ಧ ಸಮರ ಸಾರಿರುವ ನಗರ ಪೊಲೀಸರು ಇಬ್ಬರು ವಿದೇಶಿ ಮಹಿಳೆಯರು,ಓರ್ವ ವಿದೇಶಿ ಪ್ರಜೆ ಹೊರರಾಜ್ಯದ ಐವರು, ಸ್ಥಳೀಯ ಇಬ್ಬರು ಸೇರಿ 10 ಮಂದಿ ಡ್ರಗ್ ಪೆಡ್ಲರ್ ಗಳನ್ನು ಬಂಧಿಸಿ 23 ಕೋಟಿ 63 ಲಕ್ಷ 26 ಸಾವಿರ ಮೌಲ್ಯದ ಮಾದಕವಸ್ತುಗಳನ್ನು ವಶಪಡಿಸಿ ಕೊಳ್ಳುವಲ್ಲಿ ಯಶಸ್ವಿಯಾ ಗಿದ್ದಾರೆ.

ಯಲಹಂಕ ಉಪನಗರ, ದೇವರ ಜೀವನಹಳ್ಳಿ, ಬಾಣಸವಾಡಿ, ಕೋರಮಂಗಲ, ಬೊಮ್ಮನಹಳ್ಳಿ ಹಾಗೂ ಪುಲಕೇಶಿನಗರದಲ್ಲಿ ಕಾರ್ಯಾಚರಣೆ ಕೈಗೊಂಡು 23 ಕೋಟಿ 63 ಲಕ್ಷ 26 ಸಾವಿರ ಮೌಲ್ಯದ 5ಕೆ.ಜಿ 919 ಗ್ರಾಂ ಎಂಡಿಎಂಎ, 1ಕೆ.ಜಿ 151 ಗ್ರಾಂ ಕೊಕೇನ್, 21ಕೆ.ಜಿ ಗಾಂಜಾ, 19 ಗ್ರಾಂ ಎಕ್ಸ್ ಟೆನ್ಸಿ ಪಿಲ್ಸ್, ಬೈಕ್ ಅನ್ನು ಬಂಧಿತ ಡ್ರಗ್ ಪೆಡ್ಲರ್ ಗಳಿಂದ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ತಿಳಿಸಿದರು.

ಯಲಹಂಕ ಉಪನಗರ ಪೊಲೀಸರು ನೈಜೀರಿಯಾ ಮಹಿಳೆಯರಾದ ಫೀಸ್ ಗೌಡಿಯಾ(27) ಬಲೂಕಾ(29) ಳನ್ನು ಬಂಧಿಸಿ 11.72 ಕೋಟಿ ಮೌಲ್ಯದ 5 ಕೆ.ಜಿ 860 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ. ಕೆಲ ದಿನಗಳ ಹಿಂದೆ ಬಂಧಿತ ನೈಜೀರಿಯಾ ಡ್ರಗ್ ಪೆಡ್ಲರ್ ನೀಡಿದ ಮಾಹಿತಿಯನ್ನು ಆಧರಿಸಿ ಇವರಿಬ್ಬರನ್ನು ಬಂಧಿಸಲಾಗಿದೆ.

ಸಿಬ್ಬಂದಿ ಕಾರ್ಯಕ್ಕೆ ಮೆಚ್ಚುಗೆ

ಕೋರಮಂಗಲ ಪೊಲೀಸರು ತಮಿಳುನಾಡಿನ ರಾಜನ್ (33) ಸರವಣನ್(38)ನನ್ನು ಬಂಧಿಸಿ 16.30ಲಕ್ಷ ಮೌಲ್ಯದ 16 ಕೆ.ಜಿ 315 ಗ್ರಾಂ ಗಾಂಜಾ ವಶಪಡಿಸಿಕೊಂಡರೆ,ಬೊಮ್ಮನಹಳ್ಳಿ ಪೊಲೀಸರು ಚಿಂಟು ಸೈನ್ , ದೀಪಕ್ ಕುಮಾರ್ ಸಿಂಗ್, ಶಂಕರ್ ಸಾಹುನನ್ನು ಬಂಧಿಸಿ 6.60 ಲಕ್ಷ ಮೌಲ್ಯದ 3 ಕೆ.ಜಿ 906 ಗ್ರಾಂ ಗಾಂಜಾ ಜಪ್ತಿ ಮಾಡಿದ್ದಾರೆ. ಪುಲಕೇಶಿನಗರ ಪೊಲೀ ಸರು ರಾಜೇಂದ್ರ(27)ನನ್ನು ಬಂಧಿಸಿ 80 ಸಾವಿರ ಮೌಲ್ಯದ 778 ಗ್ರಾಂ ಗಾಂಜಾ ವಶಪಡಿಸಿಕೊಂಡು ಹೆಚ್ಚಿನ ವಿಚಾರಣೆ ಕೈಗೊಂಡಿದ್ದಾರೆ. ಆರೋಪಿಗಳನ್ನು ಡಿಸಿಪಿಗಳಾದ ಜಿ.ಕೆ.ಮಿಥುನ್ ಕುಮಾರ್, ಮೊಹ ಮ್ಮದ್ ಸುಜೀತಾ, ವಿಕ್ರಂ ಅಮಟೆ ನೇತೃತ್ವದ ಪೊಲೀಸ್ ಸಿಬ್ಬಂದಿ ಬಂಧಿಸುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಿದರು.

ದೇವರಜೀವನಹಳ್ಳಿ ಪೊಲೀಸರು ಸೈಯದ್ ಸಜ್ಜದ್ (50)ನನ್ನು ಬಂಧಿಸಿ 11.44ಕೋಟಿ ಮೌಲ್ಯದ , 1ಕೆಜಿ. 151 ಗ್ರಾಂ ಕೊಕೇನ್ ಬೈಕ್ ಅನ್ನು ಜಪ್ತಿ ಮಾಡಿದರೆ, ಬಾಣಸವಾಡಿ ಪೊಲೀಸರು ನೈಜೀರಿಯಾ ಪ್ರಜೆ ಓಕೇ ವಿಮ್ಮರ್(28)ನನ್ನು ಬಂಧಿಸಿ 23.56 ಲಕ್ಷ ಮೌಲ್ಯದ 46 ಗ್ರಾಂ ಎಂಡಿಎಂಎ, 19 ಗ್ರಾಂ ಎಕ್ಸ್ ಟೆನ್ಸಿ ಪಿಲ್ಸ್ 6.6 ಗ್ರಾಂ ಕೊಕೇನ್ ವಶಪಡಿಸಿಕೊಂಡಿದ್ದಾರೆ ಎಂದು ತಿಳಿಸಿದರು.

1.15 ಕೋಟಿ ಮೌಲ್ಯದ 385 ಮೊಬೈಲ್‌ಗಳು ವಶಕ್ಕೆ

ಬೆಂಗಳೂರು: ಸಿಇಐಆರ್ ತಂತ್ರಾಂಶದ ಮೂಲಕ ಹಲವಾರು ಪ್ರಕರಣಗಳಲ್ಲಿ ಕಳುವಾಗಿದ್ದ ವಿವಿಧ ಕಂಪನಿಯ 1.15 ಕೋಟಿ ಮೌಲ್ಯದ 385 ಮೊಬೈಲ್ ಗಳನ್ನು ವಶಪಡಿಸಿಕೊಳ್ಳುವಲ್ಲಿ ಪೂರ್ವ ವಿಭಾಗದ ಪೊಲೀಸರು ಯಶಸ್ವಿಯಾಗಿದ್ದಾರೆ.

ಪೂರ್ವ ವಿಭಾಗದ 14 ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಹಾಗೂ ಕಳುವಾಗಿದ್ದ ಮೊಬೈಲ್ ಗಳನ್ನು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ನಿರಂತರ ಸಿಇಐರ್ಆ ಪೋರ್ಟಲ್ನ ಸಹಾಯದಿಂದ ಮೊಬೈಲ್ ಫೋನ್‌ಗಳ ಪತ್ತೆ ಕಾರ್ಯ ಕೈಗೊಂಡಿದ್ದರು. ಕಳೆದ ಮಾರ್ಚ್ ತಿಂಗಳಲ್ಲಿ ವಿವಿಧ ಕಂಪನಿಯ 385 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಾಣಸವಾಡಿ 87,ಜೆ.ಬಿ ನಗರ 81,ಗೋವಿಂದಪುರ 35,ಕೆ.ಜಿ ಹಳ್ಳಿ 30, ಹಲಸೂರು 30,ಡಿ.ಜೆ ಹಳ್ಳಿ 29,ಹೆಣ್ಣೂರು 19,ಕಮರ್ಷಿಯಲ್ ಸ್ಟ್ರೀಟ್ 16, ಪುಲಕೇಶಿನಗರ 15, ಇಂದಿರನಗರ 12 ಸೇರಿ ಬೈಯ್ಯಪ್ಪನಹಳ್ಳಿ 8 ಸೇರಿ 385 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

ಅಕ್ಕನಿಂದಲೇ ತಂಗಿಯ ಅಪಹರಣ

ಬೆಂಗಳೂರು: ಸ್ವಂತ ಅಕ್ಕನೇ ತನ್ನ ತಂಗಿಯನ್ನು ಗ್ಯಾಂಗ್ ಜತೆಗೂಡಿ ಕಿಡ್ನಾಪ್ ಮಾಡಿ ಹಲ್ಲೆ ನಡೆಸಿದ ಘಟನೆ ಚಂದ್ರಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ತಂಗಿ ಪೃಥ್ವಿ ತನ್ನ ಅಕ್ಕ ಪ್ರಪುಲ್ಲಾ ಬಳಿ 9.5 ಲಕ್ಷ ರು. ಸಾಲ ಪಡೆದಿದ್ದಳು.

ಅಪರಾಧ ಸುದ್ದಿಗಳು

ಅದರಲ್ಲಿ ಈಗಾಗಲೇ 5 ಲಕ್ಷ ರು.ಹಿಂತಿರುಗಿಸಿದ್ದರೂ, ಇನ್ನೂ 4.5 ಲಕ್ಷ ರೂಪಾಯಿ ಬಾಕಿ ಉಳಿದಿದ್ದ ತಂಗಿಯನ್ನು ಗ್ಯಾಂಗ್ ಜತೆಗೂಡಿ ಅಪಹರಿಸಿ ಹಲ್ಲೆ ನಡೆಸಿರುವ ಆರೋಪ ಕೇಳಿಬಂದಿದೆ. ಬಾಕಿ ಹಣಕ್ಕಾಗಿ ಪ್ರಪುಲ್ಲಾ ತನ್ನ ತಂಗಿಯನ್ನೇ ಗ್ಯಾಂಗ್ ಮೂಲಕ ಕಿಡ್ನಾಪ್ ಮಾಡಿಸಿ ಹಲ್ಲೆ ನಡೆಸಿದ್ದಾಳೆ ಎನ್ನಲಾಗಿದೆ. ಎರಡು ದಿನಗಳ ಹಿಂದೆ ಹೆಬ್ಬಗೋಡಿ ಪ್ರದೇಶದಲ್ಲಿರುವ ಪೃಥ್ವಿಯ ಮನೆಗೆ ನುಗ್ಗಿದ ಆರೋಪಿಗಳು ದಂಪತಿಯನ್ನು ಬಲವಂತವಾಗಿ ಕಾರಿನಲ್ಲಿ ಕರೆದೊಯ್ದಿದ್ದಾರೆ. ಅಪಹರಣ ಮಾಡಿದ ಬಳಿಕ ದಂಪತಿಯನ್ನು ಅಜ್ಞಾತ ಸ್ಥಳಕ್ಕೆ ಕರೆದೊಯ್ದು ಹಲ್ಲೆ ನಡೆಸಿ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ ಹಣ ಕೊಡಬೇಕು ಎಂದು ಒತ್ತಾಯಿಸಿದ್ದು, ಹಣ ಕೊಡದಿದ್ದರೆ ಕೊಲೆ ಮಾಡಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ಈ ಕಿಡ್ನಾಪ್ ಘಟನೆ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸ್ಪಷ್ಟವಾಗಿ ದಾಖಲಾಗಿದೆ. ಆರೋಪಿಗಳು ಮನೆಗೆ ನುಗ್ಗಿ ದಂಪತಿಯನ್ನು ಕಾರಿನಲ್ಲಿ ಕರೆದೊಯ್ಯುತ್ತಿರುವ ದೃಶ್ಯಗಳು ಸಾಕ್ಷಿಯಾಗಿ ಪೊಲೀಸರ ಕೈಗೆ ಸಿಕ್ಕಿವೆ. ಪೃಥ್ವಿ ಕಾಣೆಯಾಗಿರುವ ಮಾಹಿತಿ ತಿಳಿದ ನಂತರ ಆಕೆಯ ಸಹೋದರ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಬೆನ್ನಲ್ಲೇ ಕಾರ್ಯಾಚರಣೆ ನಡೆಸಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಹಲ್ಲೆಗೆ ಒಳಗಾದ ಪೃಥ್ವಿ ಹಾಗೂ ಆಕೆಯ ಪತಿ ಅಭಿಜಿತ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಬಂಧ ಚಂದ್ರಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಟ್ಟಡದ ಮೇಲಿಂದ ತಳ್ಳಿ ತಾಯಿಯ ಕೊಲೆಗೈದ ಮಗ

ಬೆಂಗಳೂರು: ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ ಹೆತ್ತ ತಾಯಿಯನ್ನು ಮನೆಯ 4ನೇ ಮಹಡಿಯಿಂದ ತಳ್ಳಿ ಹತ್ಯೆಗೈದ ದುಷ್ಟ ಮಗನನ್ನು ಆರ್.ಆರ್ .ನಗರ ಪೊಲೀಸರು ಬಂಧಿಸಿದ್ದಾರೆ. ವೆಂಕಟೇಶ್ ಬಂಧಿತ ಮಗ. ಸಾವಿತ್ರಮ್ಮ (73) ಹತ್ಯೆಯಾದ ತಾಯಿ. ಬಿಇಎಂಎಲ್ ಬಡಾವಣೆಯ 3ನೇ ಹಂತದಲ್ಲಿರುವ ಮನೆಯೊಂದರಲ್ಲಿ ಮಧ್ಯಾಹ್ನ ಘಟನೆ ನಡೆದಿದೆ. ದುಷ್ಕೃತ್ಯ ಸಂಬಂಧ ಆರೋಪಿಯನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರ್.ಆರ್.ನಗರದ ಬಿಇಎಂಎಲ್ ಬಡಾವಣೆಯಲ್ಲಿ 2ನೇ ಮಹಡಿಯಲ್ಲಿ ತಾಯಿ ಹಾಗೂ ಪತ್ನಿ-ಮಕ್ಕಳೊಂದಿಗೆ ವೆಂಕಟೇಶ್ ವಾಸವಾಗಿದ್ದರು. ಆರೋಪಿ ಶೋ ರೂಮ್‌ವೊಂದರಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರೆ, ಪತ್ನಿ ಗೃಹಿಣಿ. ಸಾವಿತ್ರಮ್ಮ ಕಳೆದ ನಾಲ್ಕು ವರ್ಷಗಳಿಂದ ಪಾರ್ಶ್ವವಾಯುಪೀಡಿತರಾಗಿ ಅಂಗಾಂಗಗಳ ಸ್ವಾಧೀನ ಕಳೆದುಕೊಂಡಿದ್ದರು. ಚಿಕಿತ್ಸೆ ನೀಡಿದರೂ ಗುಣಮುಖರಾಗಿರಲಿಲ್ಲ. ಆರೈಕೆ ಮಾಡುವುದೇ ಕಷ್ಟವಾಗಿತ್ತು. ಮಲಗಿದ್ದ ತಾಯಿಯನ್ನು ನಾಲ್ಕನೇ ಮಹಡಿಗೆ ಎತ್ತುಕೊಂಡು ಹೋಗಿ ಸುತ್ತಮುತ್ತ ಯಾರೂ ಇಲ್ಲದಿರುವುದನ್ನು ಕಂಡು ಮೇಲಿನಿಂದ ಕೆಳಗೆ ತಳ್ಳಿ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಮನೆ ಮಾಲೀಕ ವಿಕ್ರಮ್ ನೀಡಿದ ದೂರು ಆಧರಿಸಿ ಬಿಎನ್‌ಎಸ್ ಸೆಕ್ಷನ್ 103 (ಕೊಲೆ) ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಲಾಗಿದೆ.

ಇ-ಸಿಗರೇಟ್ ಮಾರಾಟ: 10 ಲಕ್ಷ ಮೌಲ್ಯದ ಮಾಲು ಜಪ್ತಿ

ಬೆಂಗಳೂರು: ಅಕ್ರಮವಾಗಿ ಇ-ಸಿಗ ರೇಟ್‌ಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿರುವ ತಲಘಟ್ಟಪುರ ಠಾಣೆ ಪೊಲೀಸರು 10 ಲಕ್ಷ ರು. ವೌಲ್ಯದ ಮಾಲು ವಶ ಪಡಿಸಿಕೊಂಡಿದ್ದಾರೆ. ಠಾಣಾ ಸರಹದ್ದಿನಲ್ಲಿರುವ ಕಾಲೇಜೊಂದರ ಹಿಂಭಾಗದ ಖಾಲಿ ಜಾಗದಲ್ಲಿ ಇ-ಸಿಗರೇಟ್‌ಗಳನ್ನು ಕಾರಿನಲ್ಲಿ ತಂದು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಅನ್ವಯ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸಿದ 1ಕಾರು,4 ಸಾವಿರ ನಗದು ಇಲಬಾರ್ ಕಂಪನಿಯ 420 ಇ-ಸಿಗರೇಟ್‌ಗಳು, ಇಲವರ್ಡ್ ಕಂಪನಿಯ 20 ಇ-ಸಿಗರೇಟ್ ಗಳು, 1 ಮೋಬೆಲ್ ಇ-ಸಿಗರೇಟ್‌ನ ರೀಫಿಲ್ಲಿಂಗ್‌ನ 80 ಲಿಕ್ವಿಡ್ ಬಾಟೆಲ್‌ಗಳನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ. ಒಟ್ಟು ಇವುಗಳ ಒಟ್ಟು ಮೌಲ್ಯ ಹತ್ತು ಲಕ್ಷ ರು. ಎಂದು ತಲಘಟ್ಟಪುರ ಪೊಲೀಸರು ತಿಳಿಸಿದ್ದಾರೆ.

PUBLIC NOTICE

This is to inform the General Public that **SRI.SOMASHEKAR.M S/o late Sri.Madaiah and his wife SMT.GAYATHRI** is the owners of immovable property mentioned in the schedule hereunder and they have lost the original Sale Deed dated 12/8/2022 bearing Document No.2163 /2022-23, Book-I, Stored in CD No.1130, executed by Sri.A.Manjunathaiah in favour of Sri.Somashekar.M and his wife Smt.Gayathri registered in the office of sub registrar, Srirampura Bangalore. In case anybody having any claims or in possession of the said document, shall inform the under singed and handover the same within SEVEN DAYS from the date of publication of this notice.

SCHEDULE PROPERTY

All that piece and parcel of the owner of the residential property bearing **Site No.2652/5,** Old Property No.5, formed in Assessment old No.67/9, New No.67/13, situated at Kithanahalli Village, Dasanapura Hobli, Bangalore North taluk, measuring East to West: 30 Feet and North to South: 43 Feet in all measuring 1290 Sq.ft., and bounded on: **East by :** Site No.4, **West by :** Site No.6, **North By:** Private Property, **South by :** Road,

N.JAGADEESH KUMAR, Advocate
No.30/1, 2nd Floor, 7th Cross,
Near NR Colony Bus Stand,
Opp. Hotel Dwaraka, Bangalore-560019.

PRESIDENT

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್
CIN: L32109KA1984PLC079103
ನೋಂದಾಯಿತ ಕಚೇರಿ: 5ಸಿ/1, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು-562107, ಕರ್ನಾಟಕ ; **ದೂರವಾಣಿ:** +919240298360
ವೆಬ್‌ಸೈಟ್: www.schneiderelectricpresident.com;
ಇ-ಮೇಲ್: companysecretary@se.com

ಷೇರುದಾರರಿಗೆ ಸೂಚನೆ
ಭೌತಿಕ ಷೇರುಗಳ ವರ್ಗಾವಣೆ ಮತ್ತು ಡಿಮೆಟೀರಿಯಲೈಜೇಶನ್‌ಗಾಗಿ ವಿಶೇಷ ವಿಂಡೊ

ಸೆಬಿ (SEBI) ಸುತ್ತೋಲೆ ಸಂಖ್ಯೆ. HO/38/13/11(2)2026-MIRSD-POD/I/3750/2026, ದಿನಾಂಕ **ಜನವರಿ 30, 2026** ರ ಅನ್ವಯ, ದಿನಾಂಕ ಏಪ್ರಿಲ್ 01, 2019 ಕ್ಕಿಂತ ಮೊದಲು ಮಾರಾಟ ಮಾಡಲಾದ ಅಥವಾ ಖರೀದಿಸಲಾದ ಭೌತಿಕ ಭದ್ರತಾ ಪತ್ರಗಳ ವರ್ಗಾವಣೆ ಮತ್ತು ಡಿಮೆಟೀರಿಯಲೈಸೇಶನ್ ಅನ್ನು ಸುಲಭಗೊಳಿಸಲು, ಹಾಗೂ ದಾಖಲೆಗಳ ಕೊರತೆ, ಪ್ರಕ್ರಿಯೆಯಲ್ಲಿನ ದೋಷ ಅಥವಾ ಇನ್ನಾವುದೇ ಕಾರಣದಿಂದ ಹಿಂದೆ ತಿರಸ್ಕರಿಸಲಾದ, ಹಿಂದಿರುಗಿಸಲಾದ ಅಥವಾ ಬಾಕಿ ಉಳಿದಿರುವ ವರ್ಗಾವಣಾ ವಿನಂತಿಗಳಿಗೆ ಸಂಬಂಧಿಸಿದಂತೆ, ದಿನಾಂಕ ಫೆಬ್ರವರಿ 05, 2026 ರಿಂದ ಫೆಬ್ರವರಿ 04, 2027 ರವರೆಗೆ ಒಂದು (1) ವರ್ಷದ ಅವಧಿಗೆ ವಿಶೇಷ ವಿಂಡೋವನ್ನು ಮರು-ಪ್ರಾರಂಭಿಸಲಾಗಿದೆ.

ಅರ್ಹ ಹೂಡಿಕೆದಾರರು ಹೇಳಲಾದ ಅವಧಿಯಲ್ಲಿ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("RTA") ರವರಿಗೆ ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ಸಲ್ಲಿಸುವ ಮೂಲಕ ಅಂತಹ ವಿನಂತಿಗಳನ್ನು ನಿಯಮಿತಗೊಳಿಸಬಹುದು.

ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದೆ ಲಿಂಕ್ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ನೋಂದಾಯಿತ ಕಚೇರಿ: ಸಿ-101, ರಾಯಭಾರ ಕಚೇರಿ 247, ಎಲ್.ಬಿ.ಎಸ್. ಮಾರ್ಗ, ವಿಖ್ರೋಲಿ (ಪಶ್ಚಿಮ), ಮುಂಬೈ -400 083, ದೂರವಾಣಿ: +91 810 811 6767; ಇಮೇಲ್: investor.helpdesk@in.mpms.mufg.com ವೆಬ್‌ಸೈಟ್: https://in.mpms.mufg.com

ಈ ಸೌಲಭ್ಯದ ಪ್ರಕಾರ ವರ್ಗಾಯಿಸಲಾದ ಭದ್ರತೆಗಳನ್ನು ವರ್ಗಾವಣೆದಾರರಿಗೆ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಮಾತ್ರ ಜಮಾ ಮಾಡಲಾಗುತ್ತದೆ ಮತ್ತು ವರ್ಗಾವಣೆಯ ನೋಂದಣಿ ದಿನಾಂಕದಿಂದ ಒಂದು (1) ವರ್ಷದ ಲಾಕ್-ಇನ್ ಅವಧಿಗೆ ಒಳಪಟ್ಟಿರುತ್ತದೆ.

ಹೂಡಿಕೆದಾರರ ಅನುಕೂಲಕ್ಕಾಗಿ ಪರಿಚಯಿಸಲಾದ ಈ ವಿಶೇಷ ವಿಂಡೋದ ಲಾಭವನ್ನು ಪಡೆಯಲು ನಾವು ಎಲ್ಲಾ ಅರ್ಹ ಷೇರುದಾರರನ್ನು ಕೋರುತ್ತೇವೆ.

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ ಗಾಗಿ
ಸಹಿ/-
ಸಪ್ನ ಭಾಟಿಯಾ
ಕಂಪನಿ ಕಾರ್ಯದರ್ಶಿ
ಸ.ಸಂ.ಎ32349

ದಿನಾಂಕ: ಏಪ್ರಿಲ್ 16, 2026
ಸ್ಥಳ: ಬೆಂಗಳೂರು

Life Is On | Schneider Electric

ಕೆನರಾ ಬ್ಯಾಂಕ್ Canara Bank

(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು **ಭೌತಿಕವಾಗಿ** ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ : 07.05.2026 ರಂದು (ಬೆಳಿಗ್ಗೆ 10.30 ರಿಂದ ಬೆಳಿಗ್ಗೆ 11.30 ರವರೆಗೆ)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 6,09,70,245.46 (ರೂಪಾಯಿ ಆರು ಕೋಟಿ ಒಂಬತ್ತು ಲಕ್ಷದ ಎಪ್ಪತ್ತು ಸಾವಿರದ ಇನ್ನೂರ ನಲವತ್ತೈದು ಮತ್ತು ನಲವತ್ತಾರು ಪೈಸೆ ಮಾತ್ರ)** ಜೊತೆಗೆ **ದಿನಾಂಕ: 01.04.2026** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ ಬೆಂಗಳೂರು** ರವರಿಂದ **ಸಾಲಗಾರರಾದ:**
(1) ಶ್ರೀ ಸೆಂಥಿಲ್ ಎಲುಮಲೈ ಬಿನ್ ಎಲುಮುಲೈ ಗೋವಿಂದರಾಜ್, # 10, O 2ನೇ ಬೀದಿ, ಶ್ರೀ ಕಾಂಪ್ಲೆಕ್ಸ್ ಹತ್ತಿರ, ಶಿವನ್ ಚೆಟ್ಟಿ ಗಾರ್ಡನ್ಸ್, ಬೆಂಗಳೂರು-560042.
(2) ಮೆ॥ ಪಿಎಸ್‌ಬಿ ಡಿಸ್ಟ್ರಿಬ್ಯೂಟರ್ಸ್, 19/1, ಸದಾಶಿವ ರೆಡ್ಡಿ ಕಾಂಪೌಂಡ್, ಬಾಲ್ಡ್ವಿನ್ ಶಾಲೆಯ ಹಿಂಭಾಗ, ಆರ್ ಎಂ ನಗರ ಮುಖ್ಯ ರಸ್ತೆ, ಬಾಣಸವಾಡಿ, ಬೆಂಗಳೂರು-560043.
(3) ಶ್ರೀ ಸೆಂಥಿಲ್ ಎಲುಮಲೈ, ಬಿನ್ 401/7, 14ನೇ ಮೇನ್, ಹಳೆಯ ಮಡಿವಾಳ, ಬಿಟಿಎಂ 1ನೇ ಹಂತ, ಬೆಂಗಳೂರು-560029.
(4) ಶ್ರೀ ಭಾಸ್ಕರ್ ಎಂ, ನಂ. 1534, 39ನೇ ಕ್ರಾಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-560041. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 06.05.2026** ರ **ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಲಾಟ್	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಫ್ಲಾಟ್ ನಂ.ಎಫ್-402, 3ನೇ ಮಹಡಿ ಎಫ್ ಬ್ಲಾಕ್, ಸರ್ವೆ ನಂ.108/3, 108/2, ವಿಸ್ತೀರ್ಣ ಸೂಪರ್ ಬಿಲ್ಟ್‌ಅಪ್ ಪ್ರದೇಶ 1089 ಚದರ ಅಡಿ, ಜೊತೆಗೆ 400 ಚದರ ಅಡಿ ಅವಿಭಾಜಿತ ಭಾಗ, ಬಡ್ಡಿ ಹಿತಾಸಕ್ತಿಯನ್ನೊಳಗೊಂಡ ಭೂಮಿಯು ಗಾರ್ಡನ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬೊಮ್ಮಸಂದ್ರ, ಜಿಗಿಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು-560099ರಲ್ಲಿದೆ. ಚಕ್ಕುಬಂದಿ: ಉತ್ತರಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ದಕ್ಷಿಣಕ್ಕೆ: ಕಾಮನ್ ಕಾರಿಡಾರ್, ಪೂರ್ವಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪಶ್ಚಿಮಕ್ಕೆ: ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಆಸ್ತಿಯ ನಂ.ಎಫ್-401. **Coordinates of the property, Latitude- 12.8053267N, Longitude- 77.6770091.**	₹. 39.00	₹. 3.90	₹. 1.00
2	ಫ್ಲಾಟ್ ನಂ.ಎಫ್-403, 3ನೇ ಮಹಡಿ ಎಫ್ ಬ್ಲಾಕ್, ಸರ್ವೆ ನಂ.108/3, 108/2, ವಿಸ್ತೀರ್ಣ ಸೂಪರ್ ಬಿಲ್ಟ್‌ಅಪ್ ಪ್ರದೇಶ 1089 ಚದರ ಅಡಿ, ಜೊತೆಗೆ 400 ಚದರ ಅಡಿ ಅವಿಭಾಜಿತ ಭಾಗ, ಬಡ್ಡಿ ಹಿತಾಸಕ್ತಿಯನ್ನೊಳಗೊಂಡ ಭೂಮಿಯು ಗಾರ್ಡನ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬೊಮ್ಮಸಂದ್ರ, ಜಿಗಿಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು-560099ರಲ್ಲಿದೆ. ಚಕ್ಕುಬಂದಿ: ಉತ್ತರಕ್ಕೆ: ಕಾಮನ್ ಕಾರಿಡಾರ್, ದಕ್ಷಿಣಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪೂರ್ವಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪಶ್ಚಿಮಕ್ಕೆ: ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಆಸ್ತಿಯ ಖಾಸಗಿ ನಂ.ಎಫ್-404, **Coordinates of the property, Latitude- 12.8053267N, Longitude- 77.6770091.**	₹. 39.00	₹. 3.90	₹. 1.00
3	ಫ್ಲಾಟ್ ನಂ.ಎಫ್-404, 3ನೇ ಮಹಡಿ ಎಫ್ ಬ್ಲಾಕ್, ಸರ್ವೆ ನಂ.108/3, 108/2, ವಿಸ್ತೀರ್ಣ ಸೂಪರ್ ಬಿಲ್ಟ್‌ಅಪ್ ಪ್ರದೇಶ 1089 ಚದರ ಅಡಿ, ಜೊತೆಗೆ 400 ಚದರ ಅಡಿ ಅವಿಭಾಜಿತ ಭಾಗ, ಬಡ್ಡಿ ಹಿತಾಸಕ್ತಿಯನ್ನೊಳಗೊಂಡ ಭೂಮಿಯು ಗಾರ್ಡನ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬೊಮ್ಮಸಂದ್ರ, ಜಿಗಿಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು-560099ರಲ್ಲಿದೆ. ಚಕ್ಕುಬಂದಿ: ಉತ್ತರಕ್ಕೆ: ಕಾಮನ್ ಕಾರಿಡಾರ್, ದಕ್ಷಿಣಕ್ಕೆ: ಅಪಾರ್ಟ್‌ಮೆಂಟ್ ಕಟ್ಟಡದ ಆಕಾಶಕ್ಕೆ ತೆರೆದ ಜಾಗ, ಪೂರ್ವಕ್ಕೆ: ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಆಸ್ತಿಯ ಖಾಸಗಿ ನಂ.ಎಫ್-403, ಪಶ್ಚಿಮಕ್ಕೆ: ಲಿಫ್ಟ್ ಪ್ರದೇಶ. **Coordinates of the property: Latitude- 12.8053267N, Longitude- 77.6770091.**	₹. 39.00	₹. 3.90	₹. 1.00
4	ಹಳೆಯ ವಾಸಯೋಗ್ಯ ವಿಲ್ಲಾ: ಸರ್ವೆ ನಂ.119/2, ಪಂಚಾಯತ್ ಖಾತಾ 92/180, ಎಸ್ ಮೇಡಹಳ್ಳಿ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರಿನಲ್ಲಿದೆ. ಪ್ರಸ್ತುತ ಆಸ್ತಿಯ ವಿಲ್ಲಾ ನಂ.180/6ಎ, ಸರ್ಜಾಪುರ ಅತಿಪಲ್ಲಿ ಕ್ರಾಸ್ ರಸ್ತೆ, ಸರ್ಜಾಪುರ, ಬೆಂಗಳೂರು-562124. ವಿಸ್ತೀರ್ಣ 3841.66 ಚದರ ಅಡಿ. ಚಕ್ಕುಬಂದಿ: ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ಸರ್ವೆ ನಂ.117, ಪೂರ್ವಕ್ಕೆ: ಆಸ್ತಿ ಸರ್ವೆ ನಂ.119/1, ಪಶ್ಚಿಮಕ್ಕೆ: ಆಸ್ತಿ ಸರ್ವೆ ನಂ.119/3. **Coordinates of the property, Latitude- 12.834639, Longitude- 77.780889**	₹. 210.00	₹. 21.00	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಕೆನರಾ ಬ್ಯಾಂಕ್‌ನ ವೆಬ್‌ಸೈಟ್ **(www.canarabank.com)** ಅಥವಾ **ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್‌ನಲ್ಲಿ ಒದಗಿಸಲಾದ "ಇ-ಹರಾಜು" ಲಿಂಕ್ ಅನ್ನು ನೋಡಿ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ,** ಬೆಂಗಳೂರು **ಮೊಬೈಲ್ ಸಂಖ್ಯೆ: 9901642631 ಮತ್ತು 9483544116** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 16.04.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank

(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 06.05.2026 (ಬೆಳಿಗ್ಗೆ 10.30 ರಿಂದ ಬೆಳಿಗ್ಗೆ 11.30 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 3,91,40,706.93 ಜೊತೆಗೆ ದಿನಾಂಕ: 26.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶ್ರೀಮತಿ. ಬಿ ಕೆ ಪ್ರೇಮಾ** ಕೋಂ ಟಿ ವರದರಾಜು, **(2) ಶ್ರೀ. ವರದರಾಜ್ ಟಿ** ಬಿನ್ ತಿಮ್ಮರಾಯಪ್ಪ, **ಇವರಿಬ್ಬರ ವಿಳಾಸ:** ನಲ್ಲೂರು ಗ್ರಾಮ, ಹನುಮನಹಳ್ಳಿ ಅಂಚೆ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆ-563127. **(3) ಶ್ರೀ.ರಘು ಕೆ** ಬಿನ್ ಜಿ ಕೃಷ್ಣಪ್ಪ, ಎಪಿಎಂಸಿ ಯಾರ್ಡ್ ಎದುರು, ಸೇಂಟ್ ಆನ್ಸ್ ಸ್ಕೂಲ್ ಮುಖ್ಯರಸ್ತೆ, ಮುಳಬಾಗಲು, ಕೋಲಾರ ಜಿಲ್ಲೆ-563131, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 05.05.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. **(₹. ಲಕ್ಷಗಳಲ್ಲಿ)**

ಕ್ರ. ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಭೂಮಿ ಮತ್ತು ಕಟ್ಟಡದ ನಿವೇಶನ ನಂ.135/1, ಈ ಆಸ್ತಿಯು ದುಗಸಂದ್ರ ಹೋಬಳಿ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 1 ಎಕರೆ 37 ಗುಂಟೆಗಳು ಮತ್ತು ಪ್ಲಾಟ್‌ನ ಒಟ್ಟು ವಿಸ್ತೀರ್ಣ 1.925 ಎಕರೆ. **Coordinates of the property Latitude- 13.162750, Longitude- 78.267083**	₹. 166.00	₹. 16.60	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-। ಶಾಖೆ, ಬೆಂಗಳೂರು** (**ಮೊಬೈಲ್ ಸಂಖ್ಯೆ: 8598009010, 9966397756, 8949226557 ಮತ್ತು 9039609346**) ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 16.04.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಸುಬೆಕ್ಸ್ ಲಿಮಿಟೆಡ್

subex — New Possibilities. Now Possible.

(ಸಿಐಎನ್: L85110KA1994PLC016663)
ನೋಂದಾಯಿತ ಕಚೇರಿ: ಪ್ರಿಟೆಕ್ ಪಾರ್ಕ್ - ಎಸ್‌ಇಝೆಡ್, ಬ್ಲಾಕ್-09, 4ನೇ ಮಹಡಿ, ಬಿ ವಿಂಗ್, ಸರ್ವೆ ನಂ. 51-64/4, ಹೊರವರ್ತುಲ ರಸ್ತೆ, ಬೆಳ್ಳಂದೂರು ವಿಲೇಜ್, ವರ್ತೂರು ಹೋಬಳಿ, ಬೆಂಗಳೂರು, ಕರ್ನಾಟಕ, ಭಾರತ-560103 ದೂರವಾಣಿ: 080 3745 1377
ಇಮೇಲ್: investorrelations@subex.com ಜಾಲತಾಣ: www.subex.com

ಸದಸ್ಯರಿಗೆ ಸೂಚನೆ

ಸುಬೆಕ್ಸ್ ಲಿಮಿಟೆಡ್ ("ಕಂಪನಿ")ನ ಸದಸ್ಯರಿಗೆ ಈ ಸೂಚನೆಯ ಮೂಲಕ ತಿಳಿಸುವುದೇನಂದರೆ, ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ಸೆಕ್ಷನ್ 108 ಮತ್ತು 110ರ ನಿಬಂಧನೆಗಳ ಪ್ರಕಾರ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು")ರ ನಿಯಮಗಳು 20 ಮತ್ತು 22 ಅನ್ನು ಓದಿಕೊಂಡಂತೆ ಮತ್ತು ಕಾಯ್ದೆಯ ಇತರ ಅನ್ವಯವಾಗುವ ನಿಬಂಧನೆಗಳು ಮತ್ತು ನಿಯಮಗಳಂತೆ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ") ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ದಿನಾಂಕ ಸೆಪ್ಟೆಂಬರ್ 22, 2025ರ ನಿಬಂಧನೆಗಳ ಪ್ರಕಾರ ಜೊತೆಗೆ ಈ ಸಂಬಂಧ ಎಂಸಿಎನಿಂದ ಹೊರಡಿಸಿದ ಹಿಂದಿನ ಸುತ್ತೋಲೆಗಳ ಮುಂದುವರಿಕೆಯಾಗಿ ("ಎಂಸಿಎ ಸುತ್ತೋಲೆಗಳು") ಮತ್ತು ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ("ಪಟ್ಟಿ ಮಾಡುವ ನಿಯಮಗಳು"), ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೇಟ್ರಿಯಲ್ ಸ್ಟ್ಯಾಂಡರ್ಡ್ ("ಎಸ್‌ಎಸ್-2"), ಈ ಸೂಚನೆಯಲ್ಲಿ ನಿಗದಿಪಡಿಸಿದ ನಿರ್ಣಯಗಳಿಗೆ ಸದಸ್ಯರ ಅನುಮೋದನೆಯನ್ನು ಕೋರಿ ಅಂಚೆ ಮತದಾನ ಸೂಚನೆಯನ್ನು ಶುಕ್ರವಾರ, ಏಪ್ರಿಲ್ 10, 2026ರಂದು (ಕಟ್ ಆಫ್ ದಿನಾಂಕ) ಕಂಪನಿ / ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ("ಆರ್‌ಟಿಎ") / ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ / ಡಿಪಾಸಿಟರೀಸ್‌ನಲ್ಲಿ ಇಮೇಲ್ ಐಡಿ ನೋಂದಾಯಿಸಲ್ಪಟ್ಟ ಸದಸ್ಯರಿಗೆ ವಿದ್ಯುನ್ಮಾನ ಮೂಲಕ ರವಾನಿಸಲಾಗಿದೆ. ಕಂಪನಿಯು ಗುರುವಾರ, ಏಪ್ರಿಲ್ 16, 2026ರಂದು ಅಂಚೆ ಮತಪತ್ರದ ಸೂಚನೆಯ ವಿದ್ಯುನ್ಮಾನ ರವಾನೆಯನ್ನು ಪೂರ್ಣಗೊಳಿಸಿದೆ.

ಅಂಚೆ ಮತಪತ್ರದ ಸೂಚನೆಯು ಕಂಪನಿಯ ವೆಬ್‌ಸೈಟ್ https://www.subex.com/investors/investor-information/#postal-ballot-2027 ನಲ್ಲಿ, ಎನ್‌ಎಸ್‌ಡಿಎಲ್ ವೆಬ್‌ಸೈಟ್ https://www.evoting.nsdl.com ನಲ್ಲಿ ಮತ್ತು ಬಿಎಸ್‌ಇ ಲಿಮಿಟೆಡ್ (BSE) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (NSE) ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಕ್ರಮವಾಗಿ ಲಭ್ಯವಿದೆ.

ಕಂಪನಿಯು ಸದಸ್ಯರಿಗೆ ಇ-ಮತದಾನ ಸೌಲಭ್ಯವನ್ನು ಒದಗಿಸಲು ನ್ಯಾಷನಲ್ ಸೆಕ್ಯುರಿಟೀಸ್ ಅಂಡ್ ಡಿಪಾಸಿಟರೀಸ್ ಲಿಮಿಟೆಡ್ (NSDL) ನ ಸೇವೆಗಳನ್ನು ಏಜೆನ್ಸಿಯಾಗಿ ತೊಡಗಿಸಿಕೊಂಡಿದೆ. ಇ-ಮತದಾನ ಕುರಿತ ವಿವರಗಳನ್ನು ಅಂಚೆ ಮತಪತ್ರ ಸೂಚನೆಯಲ್ಲಿ ಒದಗಿಸಲಾಗಿದೆ. ಸದಸ್ಯರು ಶುಕ್ರವಾರ, ಏಪ್ರಿಲ್ 17, 2026ರಂದು ಬೆಳಿಗ್ಗೆ 9:00 ಗಂಟೆಗೆ (IST) ಪ್ರಾರಂಭವಾಗಿ ಶನಿವಾರ, ಮೇ 16, 2026ರಂದು ಸಂಜೆ 5:00 ಗಂಟೆಗೆ (IST) ಕೊನೆಗೊಳ್ಳುವ ಇ-ಮತದಾನದ ಮೂಲಕ ಮಾತ್ರ ಸದರಿ ನಿರ್ಣಯಗಳ ಮೇಲೆ ಮತ ಚಲಾಯಿಸಬಹುದು. ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯವನ್ನು ಮೀರಿ ಇ-ಮತದಾನವನ್ನು ಅನುಮತಿಸಲಾಗುವುದಿಲ್ಲ ಮತ್ತು ಮೇಲೆ ತಿಳಿಸಿದ ಅವಧಿಯು ಮುಗಿದ ನಂತರ ಇ-ಮತದಾನ ಮಾಡ್ಯೂಲ್ ಅನ್ನು ಎನ್‌ಎಸ್‌ಡಿಎಲ್ ತಕ್ಷಣವೇ ನಿಷ್ಕ್ರಿಯಗೊಳಿಸುತ್ತದೆ.

ಕಟ್-ಆಫ್ ದಿನಾಂಕದಂದು, ಅಂದರೆ ಶುಕ್ರವಾರ, ಏಪ್ರಿಲ್ 10, 2026ರಂದು ಸದಸ್ಯರ ನೋಂದಣಿ/ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಸದಸ್ಯರು ಮಾತ್ರ ಇ-ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ ಎಂಬುದನ್ನು ಸದಸ್ಯರು ಗಮನಿಸಬಹುದು. ಸದಸ್ಯರ ಮತದಾನದ ಹಕ್ಕುಗಳು ಕಟ್-ಆಫ್ ದಿನಾಂಕದಂದು ಕಂಪನಿಯು ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರ ಷೇರುದಾರಿಕೆಗೆ ಅನುಗುಣವಾಗಿರುತ್ತವೆ.

ಇಮೇಲ್ ವಿಳಾಸಗಳನ್ನು ನೋಂದಾಯಿಸದ ಹಾಗೂ ಈ ನೋಟೀಸನ್ನು ಇನ್ನೂ ಸ್ವೀಕರಿಸದ ಸದಸ್ಯರು ಈ ಕೆಳಗೆ ತಿಳಿಸಿರುವಂತೆ ತಮ್ಮ ವಿವರಗಳನ್ನು ನೋಂದಾಯಿಸಿಕೊಳ್ಳಬಹುದು:

i. ಭೌತಿಕ ವಿಧಾನದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಫಾರ್ಮ್ ISR-1 (ಕಂಪನಿಯ ವೆಬ್‌ಸೈಟ್ www.subex.com ನಲ್ಲಿ ಲಭ್ಯವಿದೆ) ಅನ್ನು ಸರಿಯಾಗಿ ಭರ್ತಿ ಮಾಡಿ ಸಹಿ ಮಾಡಿ ಅಗತ್ಯ ಪೋಷಕ ದಾಖಲೆಗಳೊಂದಿಗೆ ಸೆಲೆನಿಯಮ್ ಟವರ್ ಬಿ, ಪ್ಲಾಟ್ 31 & 32, ಗಚಿಬೌಲಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಹೈದರಾಬಾದ್- 500 032 ನಲ್ಲಿರುವ ಕೆಫಿನ್‌ಟೆಕ್‌ಗೆ ಅಥವಾ einward.ris@kfintech.com ಗೆ ಬರೆಯುವ ಮೂಲಕ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

ii. ವಿದ್ಯುನ್ಮಾನ ವಿಧಾನದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಎಲ್ಲಾ ಸಂವಹನಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಸ್ವೀಕರಿಸಲು ತಮ್ಮ ಇ-ಮೇಲ್ ವಿಳಾಸವನ್ನು ತಮ್ಮ ಡಿಪಾಸಿಟರಿ ಭಾಗವಹಿಸುವವರೊಂದಿಗೆ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

ನಿರ್ಣಯಗಳು ಅನುಮೋದನೆಗೊಂಡಲ್ಲಿ, ಇ-ಮತದಾನದ ಕೊನೆಯ ದಿನಾಂಕವಾದ ಶನಿವಾರ, ಮೇ 16, 2026ರಂದು ಅಂಗೀಕರಿಸಲ್ಪಟ್ಟಿವೆ ಎಂದು ಪರಿಗಣಿಸಲಾಗುತ್ತದೆ. ಇ-ಮತದಾನದ ಫಲಿತಾಂಶಗಳನ್ನು ಸೋಮವಾರ, ಮೇ 18, 2026ರಂದು ಅಥವಾ ಅದಕ್ಕೂ ಮೊದಲು ಪ್ರಕಟಿಸಲಾಗುತ್ತದೆ. ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ www.subex.com ಮತ್ತು NSDL ವೆಬ್‌ಸೈಟ್ https://www.evoting.nsdl.com ನಲ್ಲಿ ಪ್ರದರ್ಶಿಸಲಾಗುತ್ತದೆ. ಜೊತೆಗೆ ಫಲಿತಾಂಶಗಳನ್ನು ಏಕಕಾಲದಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಅಂದರೆ, ಬಿಎಸ್‌ಇ ಲಿಮಿಟೆಡ್ (BSE) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (NSE) ಗೆ ಸಲ್ಲಿಸಲಾಗುತ್ತದೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರಿಗೆ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) ಮತ್ತು ಷೇರುದಾರರಿಗೆ ಇ-ಮತದಾನ ಬಳಕೆದಾರ ಕೈಪಿಡಿಯನ್ನು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುತ್ತದೆ ಅಥವಾ 022 – 4886 7000 ಗೆ ಕರೆ ಮಾಡಿ ಅಥವಾ evoting@nsdl.com ಗೆ ವಿನಂತಿಯನ್ನು ಕಳುಹಿಸಿ. ಸದಸ್ಯರು ಕಂಪನಿಗೆ investorrelations@subex.com ನಲ್ಲಿ ಬರೆಯಬಹುದು ಅಥವಾ +91 80 3745 1377 ಗೆ ಕರೆ ಮಾಡಬಹುದು.

ಸುಬೆಕ್ಸ್ ಲಿಮಿಟೆಡ್ ಪರವಾಗಿ
ಸಹಿ/-
ರಾಮು ಅಕ್ಕಿಲಿ
ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲೈನ್ಸ್ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಏಪ್ರಿಲ್ 16, 2026

ಕೆನರಾ ಬ್ಯಾಂಕ್ Canara Bank

(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 05.05.2026 (ಬೆಳಿಗ್ಗೆ 10.00 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಹೇಗಿದೆಯೋ ಹಾಗೆ", "ಏನಿದೆಯೊ ಹಾಗೆ", ಏನೇ ಇದ್ದರೂ",** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 5,69,59,097.31 (ರೂಪಾಯಿ ಐದು ಕೋಟಿ ಅರವತ್ತೊಂಭತ್ತು ಲಕ್ಷದ ಐವತ್ತೊಂಭತ್ತು ಸಾವಿರದ ತೊಂಭತ್ತೇಳು ಮತ್ತು ಮೂವತ್ತೊಂದು ಪೈಸೆ ಮಾತ್ರ) ಜೊತೆಗೆ ದಿನಾಂಕ: 26.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಮೆ॥ ಶ್ರೀ ಉಡುಪಿ ಪಾರ್ಕ್,** ಸರ್ವೆ ನಂ.87, ಅಲೋಕ್ ಪ್ಲಾಜಾ, ಸದರಮಂಗಲ ಇಂಡಸ್ಟ್ರಿಯಲ್ ಪ್ರದೇಶದ ಎದುರು ಐಟಿಪಿಎಲ್, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು-560017, **(2) ಶ್ರೀ ಕೆರಾಡಿ ಚಂದ್ರಶೇಖರ್ ಶೆಟ್ಟಿ (ಪಾಲುದಾರರು)** ಬಿನ್ ವೀರಣ್ಣ ಶೆಟ್ಟಿ, ನಂ.26, 4ನೇ ಮಹಡಿ, ಶ್ರೀ ಎನ್‌ಕ್ಲೇವ್, ಎನ್ ಆರ್ ಕಾಲೋನಿ, ಮುರುಗೇಶಪಾಳ್ಯ, ಬೆಂಗಳೂರು-560017, **(3) ಶ್ರೀ ಸತೀಶ್ ಶೆಟ್ಟಿ (ಪಾಲುದಾರರು),** ಬಿನ್ ಮಂಜುನಾಥ ಶೆಟ್ಟಿ, ನಂ.209, ಸಿ ವಿಂಗ್, 2ನೇ ಮಹಡಿ, Trifecta Starlight ಅಪಾರ್ಟ್‌ಮೆಂಟ್, ಮಹಾದೇವಪುರ, ಬೆಂಗಳೂರು-560048, **(4) ಶ್ರೀ ರವೀಂದ್ರ ಶೀನ ಮೊಗವೀರ (ಪಾಲುದಾರರು), ಬಿನ್ ಶೀನ ಮೊಗವೀರ,** ನಂ.1409, ಸಿ ವಿಂಗ್, 4ನೇ ಮಹಡಿ, Trifecta Starlight ಅಪಾರ್ಟ್‌ಮೆಂಟ್, ಮಹಾದೇವಪುರ, ಬೆಂಗಳೂರು-560048, **(5) ಶ್ರೀಮತಿ ನಾಗರತ್ನ ಜಿ (ಪಾಲುದಾರರು)** ಕೋಂ ಜಿ ಕೃಷ್ಣಮೂರ್ತಿ, ನಂ.18/2, 10ನೇ ಅಡ್ಡರಸ್ತೆ, ಶನಿಮಹಾತ್ಮ ದೇವಸ್ಥಾನದ ಹತ್ತಿರ, ಹೆಚ್‌ಎಎಲ್ 3ನೇ ಹಂತ, ಕೋಡಿಹಳ್ಳಿ, ಬೆಂಗಳೂರು-560008. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 04.05.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. **(₹. ಲಕ್ಷಗಳಲ್ಲಿ)**

Lot | Description of the Hypothecated stock

1 — Machineries and Equipment's Owner of Sri Alok Park, Whitefield Road, Bangalore.
Coordinates of the property
Latitude- 12.9880029
Longitude- 77.733985

ಕ್ರ.ಸಂ.	ಯಂತ್ರಗಳ ವಿವರಣೆ	ವಾಸ್ತವಿಕ ಮೀಸಲು ಬೆಲೆ
	Rooms	
	26 fully furnished rooms includes	
1	Double Cot King Size, Cup board, AC, Chairs – 2 Nos, Sie Table-1 No. in each room – Total 26 Nos	6,00,000.00
	Basement	
2	Steel Table – 2 Nos	40,000.00
3	Grinder – 4 Nos	90,000.00
4	Coconut Chopper – 1 No	10,000.00
5	Ata Mixing Machine – 1 No	15,000.00
6	6 Burner Stove – 1 No	50,000.00
7	Chiller – 1 No	15,000.00
	Ground Floor	
8	Chats Counter – 1 No	40,000.00
9	Coffer Counter – 1 No	40,000.00
10	Cash Counter	30,000.00
11	Computers – 2 Nos	12,000.00
12	Printers – 2 Nos	8,000.00
13	Dining Table – 11 Nos	90,000.00
14	Steel Chairs – 44 Nos	90,000.00
15	Counters in self services, Chinese, North Indian	80,000.00
16	Ceiling Fans – 6 Nos	6,000.00
17	Burnol Stove – 8 Nos	90,000.00
18	Dosa Stand & Stove	40,000.00
19	Tava – 1 No	14,000.00
20	Chimney – 1 No	90,000.00
21	Dish wash Sink – 1 No	30,000.00
22	Rice Steamer – 15 Ltr – 1 No	32,000.00
23	Rice Boiler – 12 Ltr – 1 No	40,000.00
	2nd Floor Dining Hall	
24	Cassette Type AC- 3 Nos	1,90,000.00
25	Tables – 20 Nos	50,000.00
26	Dining Table Chairs – 38 Nos	1,04,000.00
27	Two Seater Sofa – 13 Nos	90,000.00
28	Three Seater Sofa – 13 Nos	1,00,000.00
29	Counter – 1 No	15,000.00
30	Ceiling Fan – 1 No	1,000.00
31	Side Table – Big – 2 Nos	50,000.00
32	Side Table – Small – 2 Nos	15,000.00
33	Cash Table – 1 No	15,000.00
34	Utensils & Vessels – Plates, Cup, Saucer etc.,	1,00,000.00
35	Interiors – POP, light fittings etc.,	90,000.00
	Other Equipments	
36	RO Plant – 250 KLD	50,000.00
37	Water Tank – 3000 Lts	11,000.00
38	Kaveri Water Tank – 2000 Lts	12,000.00
39	Aluminum Ladder – 1 No	2,100.00
40	Front Table Reception	12,000.00
41	Computer – 1 No	4,000.00
42	Printer – 1 No	3,000.00
43	Stool – 1 No	900.00
	TOTAL	**24,67,000.00**
	RESERVE PRICE	**22.20 LACS**

ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ : 18.04.2026, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 4.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ
ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಬಿಡ್ ಗುಣಾಂಕಗಳ ಮೊತ್ತ ರೂ.50,000.00 (ಐವತ್ತು ಸಾವಿರ ಮಾತ್ರ).
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-। ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **08025310066, 6301683293, ಮತ್ತು 9039609346, e-mail: cb2366@canarabank.com** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 16.04.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಸಮಾಚಾರ ಸಣ್ಣದಲ್ಲ

ಎಲಿವೇಟೆಡ್ ಕಾರಿಡಾರ್‌ಗೆ 13,262 ಕೋಟಿ ರು.

ಬೆಂಗಳೂರು: ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ವ್ಯಾಪ್ತಿಯ 76 ಕಿ.ಮೀಟರ್ 11 ಎಲಿವೇಡ್ ಕಾರಿಡಾರ್‌ಗೆ ಒಟ್ಟು 13262 ಕೋಟಿ ರು. ಅಂದಾಜು ಮೊತ್ತದ ಕಾಮಗಾರಿಗೆ ಸರಕಾರ ಅಸ್ತು ಎಂದಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾಹಿತಿ ನೀಡಿ, ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಈ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಇದರೊಂದಿಗೆ ಬೈಯಪ್ಪನ ಹಳ್ಳಿ ಲೆವಲ್ ಕ್ರಾಸಿಂಗ್ ಕಾಮಗಾರಿಗೆ 436 ಕೋಟಿ ರು. ಅನುಮೋದನೆ ನೀಡಲಾಗಿದೆ, ಇದಲ್ಲದೆ ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದ ನೂತನ ಕಚೇರಿಗೆ ರಸ್ತೆ 20 ಕೋಟಿ ರು.ಅನುಮೋದನೆ ನೀಡಲಾಗಿದೆ. ಸುಪ್ರೀಂ ಕೋರ್ಟ್ ಆದೇಶದಂತೆ ಸಾರಿಗೆ ಇಲಾಖೆಯ 16 ವಾಹನ ನಿರೀಕ್ಷಕರ ಹುದ್ದೆ ಭರ್ತಿಗೆ ಅನುಮೋದನೆ ನೀಡಲಾಗಿದೆ ಎಂದರು.

ಮುಸ್ಲಿಮರ ನಿರ್ಲಕ್ಷ್ಯ ಕಾಂಗ್ರೆಸ್‌ಗೆ ಸಮಸ್ಯೆ

ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡದಿರುವುದು ಮತ್ತು ಮತದಾನದ ಬೆನ್ನಲ್ಲೇ ಸಮುದಾಯದ ಇಬ್ಬರು ನಾಯಕರಿಗೆ ಕಾಂಗ್ರೆಸ್ ಕೊಕ್ ನೀಡಿರುವ ಬಗ್ಗೆ ಕರ್ನಾಟಕ ಉಲೇಮಾ ಸಂಘಟನೆ ಅಸಮಾಧಾನ ಹೊರಹಾಕಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಫ್ತಿ ಇಫ್ತಿಕಾರ್ ಖಾಸ್ಮಿ, 2023ರ ವಿಧಾನಸಭೆ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಸ್ಥಾನಕ್ಕೆ ಸಮುದಾಯದವರಿಗೆ ಟಿಕೆಟ್ ನೀಡುವಂತೆ ಕಾಂಗ್ರೆಸ್ ನಾಯಕರನ್ನು ಕೇಳಿದ್ದೆವು. ಆದರೆ ಮುಂದೆ ಪರಿಶೀಲಿಸುವುದಾಗಿ ಭರವಸೆ ನೀಡಿದ್ದರು. ಆದರೆ ಈಗ ಹಾಲಿ ಶಾಸಕರ ಮರಣದ ನಂತರ ಅವರ ಮೊಮ್ಮಗನಿಗೆ ಪಕ್ಷ ಟಿಕೆಟ್ ನೀಡಿದೆ. ಅಲ್ಪಸಂಖ್ಯಾತರಲ್ಲಿ ಅರ್ಹ ಅಭ್ಯರ್ಥಿಗಳಿದ್ದರೂ ಒಂದೇ ಕುಟುಂಬಕ್ಕೆ ಏಕೆ ಪದೇ ಪದೇ ಅವಕಾಶಗಳನ್ನು ನೀಡಲಾಗುತ್ತಿದೆ? ಎಂದು ಆಕ್ರೋಶ ಹೊರಹಾಕಿದರು. ಇದೇ ವೇಳೆ, ಜಬ್ಬಾರ್ ಮತ್ತು ನಸೀರ್ ಅಹ್ಮದ್ ಸೇರಿದಂತೆ ಕೆಲವು ನಾಯಕರ ವಿರುದ್ಧ ಕಾಂಗ್ರೆಸ್ ಶಿಸ್ತು ಕ್ರಮ ಕೈಗೊಂಡಿರುವುದನ್ನು ಖಾಸ್ಮಿ ಪ್ರಶ್ನಿಸಿ, ಯಾವುದೇ ಶೋಕಾಸ್ ನೋಟಿಸ್ ನೀಡದೆ ಕ್ರಮ ಕೈಗೊಂಡಿದ್ದಾರೆ. ಆದರೆ ಬೇರೆಯವರು ಪಕ್ಷದ ವಿರುದ್ಧ ಮಾತನಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಸುದ್ದಿಗೋಷ್ಠಿಯ ಮೂಲಕ ನಮ್ಮ ಕಳವಳ ವ್ಯಕ್ತಪಡಿಸುತ್ತಿದ್ದೇವೆಯೇ ಹೊರತು ಪಕ್ಷಕ್ಕೆ ಯಾವುದೇ ಬೆದರಿಕೆ ಹಾಕುತ್ತಿಲ್ಲ. ಮುಸ್ಲಿಮರ ಕಳವಳಗಳನ್ನು ಕಾಂಗ್ರೆಸ್ ನಿರ್ಲಕ್ಷಿಸುವುದನ್ನು ಮುಂದುವರಿಸಿದರೆ ಬೆಂಬಲ ಕಳೆದುಕೊಳ್ಳುವ ಅಪಾಯವಿದೆ. ಆಗಿರುವ ತಪ್ಪುಗಳನ್ನು ಸರಿಪಡಿಸದೇ ಇದ್ದರೆ, ಅದರಿಂದ ಪರಿಣಾಮಗಳು ಉಂಟಾಗಲಿವೆ ಎಂದು ಖಾಸ್ಮಿ ಎಚ್ಚರಿಸಿದರು.

ಅಭಿವೃದ್ಧಿಗೆ ಸಿಎಸ್‌ಆರ್ ನಿಧಿ ಬಳಸಲು ಸಲಹೆ

ಬೆಂಗಳೂರು: ಅನುಪಯುಕ್ತ ಸ್ಥಳಗಳನ್ನು ಸಾರ್ವಜನಿಕ ಸ್ನೇಹಿ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲು ಸಿಎಸ್‌ಆರ್ ನಿಧಿಯನ್ನು ಬಳಸಿಕೊಳ್ಳಿ ಎಂದು ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪೂರ್ವ ನಗರ ಪಾಲಿಕೆಯ ವತಿಯಿಂದ ಬೆಳ್ಳಂದೂರು ಮೇಲ್ಸೇತುವೆ ಕೆಳಭಾಗದ ಸ್ಥಳವನ್ನು ಇಂಟೆಲ್ ಇಂಡಿಯಾ ಕಂಪನಿ ಸಿಎಸ್‌ಆರ್ ಅನುದಾನದಡಿ ಹಾಗೂ ರೈಸಿಂಗ್ ಇಂಡಿಯಾ ಟ್ರಸ್ಟ್ ವಿನ್ಯಾಸದೊಂದಿಗೆ ಅಭಿವೃದ್ಧಿ ಪಡಿಸಿದ್ದು,ಇದನ್ನು ಬಿಇಸಿಸಿ ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಉದ್ಘಾಟಿಸಿದರು. ಸಿಎಸ್‌ಆರ್ ನಿಧಿಯಡಿ ಅಂಡರ್‌ಪಾಸ್ ಪ್ರದೇಶ ಸ್ವಚ್ಛ, ಆಕರ್ಷಕ ಹಾಗೂ ಸಾರ್ವಜನಿಕರಿಗೆ ಉಪಯುಕ್ತವಾದ ವಿಶ್ರಾಂತಿ ಸ್ಥಳವನ್ನಾಗಿ ರೂಪಿಸಲಾಗಿದೆ. ಬೆಳ್ಳಂದೂರು ಜಂಕ್ಷನ್, ಬೆಂಗಳೂರು ಐಟಿ ಕಾರಿಡಾರ್‌ನ ಹೃದಯ ಭಾಗ ಹೆಚ್ಚಿನ ಜನ ಸಾಂದ್ರತೆಯ ಕೇಂದ್ರವಾಗಿದ್ದು, ಈ ಭಾಗದಲ್ಲಿ ಪಾರ್ಕ್ ನಿರ್ಮಾಣ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಮಾಡಿಸಿ ಎಂದರು.

ಪಿಯುಸಿಯಲ್ಲಿ ಸಾಧನೆ

ಬೆಂಗಳೂರು: ಬೆಂಗಳೂರಿನ ನ್ಯಾಷನಲ್ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಪ್ರಾರ್ಥನ ಭಟ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 581 ಅಂಕಗಳಿಸಿದ್ದಾರೆ. ಮೂಲತಃ ಶಿರಸಿಯ ಉಲ್ಲಾಳ ಕೊಪ್ಪದ ಮಂಜುನಾಥ್ ಹಾಗೂ ಪ್ರೇಮಾ ಭಟ್ ಅವರ ಪುತ್ರಿ, ಪ್ರಾರ್ಥನಾ ಭಟ್ ಅವರು ವಾಣಿಜ್ಯ ವಿಭಾಗದಲ್ಲಿ 581 ಅಂಕಗಳಿಸಿದ್ದು, ಕಾಲೇಜಿಗೆ ಮೂರನೇ ರ್‍ಯಾಂಕ್ ಹಾಗೂ ರಾಜ್ಯಕ್ಕೆ 20 ರ್‍ಯಾಂಕ್ ಪಡೆದಿದ್ದಾರೆ.

ಬೈಯಪ್ಪನಹಳ್ಳಿ ವಿಭಾಗದಲ್ಲಿ ಹಿರಿಯ ಅಧಿಕಾರಿಗಳ ಕಿರುಕುಳ ಆರೋಪ | ಎಂಡಿಗೆ ದೂರು ಸಲ್ಲಿಸಿರುವ ಸಿಬ್ಬಂದಿ

ಅಧಿಕಾರಿಗಳ ಕಿತ್ತಾಟ: ನಿರೀಕ್ಷೆಯಂತೆ ನಡೆಯದ ಕೆಲಸ

ಅಪರ್ಣಾ ಎ.ಎಸ್ ಬೆಂಗಳೂರು

ರಾಜಧಾನಿ ಬೆಂಗಳೂರಿಗರ ಸಂಚಾರದಲ್ಲಿ ಪ್ರಮುಖ ಪಾತ್ರವಹಿಸುವ ನಮ್ಮ ಮೆಟ್ರೋದಲ್ಲಿ ಅಧಿಕಾರಿಗಳ ನಡುವಿನ ಕಿತ್ತಾಟದಿಂದಾಗಿ, ಸೂಕ್ತ ಸಮಯದಲ್ಲಿ ಕಾಮಗಾರಿ ನಡೆಯದೇ, ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ ಎನ್ನುವ ಆರೋಪ ಕೇಳಿಬರುತ್ತಿದೆ.

ನಮ್ಮ ಮೆಟ್ರೋದ ಪ್ರಮುಖ ತಾಣವಾಗಿರುವ ಬೈಯಪ್ಪಹಳ್ಳಿ ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಕಾಯಂ ಅಧಿಕಾರಿಗಳ ನಡುವಿನ ಕಿತ್ತಾಟದಿಂದಾಗಿ, ದೈನಂದಿನ ಚಟುವಟಿಕೆಗಳಿಗೆ ಸಮಸ್ಯೆಯಾಗುತ್ತಿದೆ ಎನ್ನುವ ಆರೋಪ ಕೇಳಿಬಂದಿದ್ದು, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕೆಲ ಸಿಬ್ಬಂದಿ ನಮ್ಮ ಮೆಟ್ರೋ ವ್ಯವಸ್ಥಾಪಕ ನಿರ್ದೇಶಕರಿಗೆ ದೂರು ನೀಡುವ ಹಂತಕ್ಕೆ ಬಂದಿದೆ.

ಗುತ್ತಿಗೆ ಆಧಾರದಲ್ಲಿ ಮ್ಯಾನೇಜರ್ ಹಾಗೂ ಉಪ ಮ್ಯಾನೇಜರ್ ಹುದ್ದೆಗೆ ನೇಮಕವಾಗಿರುವ ಕೆಲ ಅಧಿಕಾರಿಗಳು, ಇತರೆ ಅಧಿಕಾರಿ ಹಾಗೂ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸದೇ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತಿದ್ದಾರೆ. ಕೇಂದ್ರ ಸರಕಾರದಿಂದ ನೇಮಕವಾಗಿರುವ ಕಾರಣಕ್ಕೆ, ಇಲ್ಲಿನ ನಿಯಮಗಳನ್ನು ಪಾಲಿಸುವ ಅಗತ್ಯವಿಲ್ಲವೆಂದು ಮೆಟ್ರೋ ನಿಯಮಗಳನ್ನು ಮೀರಿ ಕಾರ್ಯ

ನಿರ್ವಹಿಸುತ್ತಿದ್ದಾರೆ. ಇದರಿಂದ ಒಟ್ಟಾರೆ ಕಾರ್ಯ ಚರಣೆಗೆ ಸಮಸ್ಯೆಯಾಗಿದೆ ಎಂದು ಸಿಬ್ಬಂದಿ ಆರೋಪಿಸಿದ್ದಾರೆ.

ಅರ್ಹತೆ ಇಲ್ಲದಿದ್ದರೂ ನೇಮಕ?: ಮೂಲಗಳ ಪ್ರಕಾರ ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ಕೆಲ ಅಧಿಕಾರಿಗಳಿಗೆ, ಯಾವುದೇ ತಾಂತ್ರಿಕ ಅರ್ಹತೆ ಹೊಂದಿಲ್ಲ. ಆದರೆ ಪ್ರಭಾವವನ್ನು ಬಳಸಿಕೊಂಡು, ಬೈಯಪ್ಪನಹಳ್ಳಿ ವಿಭಾಗದ ಉನ್ನತ ಹುದ್ದೆಗೆ ನೇಮಕಗೊಂಡಿದ್ದಾರೆ. ಕೆಲಸಕ್ಕೆ ಸೇರಿದ ಬಳಿಕ, ರಾಜ್ಯ ಸರಕಾರದ ಅಧೀನಕ್ಕೊಳಪಡದ ಹಿನ್ನೆಲೆ ಮೆಟ್ರೋದ ನಿಯಮಗಳು ಅನ್ವಯಿಸುವುದಿಲ್ಲ. ಕೇಂದ್ರ ಸರಕಾರದ ಅಧೀನದಲ್ಲಿ ಬರುತ್ತೇವೆ ಎಂದು ಹೇಳಿ ದೈನಂದಿನ ಚಟುವಟಿಕೆಗಳಿಗೆ ಸಮಸ್ಯೆಯಾಗುವಂತೆ ಹಾಗೂ ಕಾನೂನು ಉಲ್ಲಂಘನೆಯಾಗುವಂತೆ ಮಾಡುತ್ತಿದ್ದಾರೆ ಎನ್ನುವ ಆರೋಪಗಳು ಕೇಳಿಬಂದಿದೆ.

ಸಿಬ್ಬಂದಿ ಹೇಳುವ ಪ್ರಕಾರ, ನಮ್ಮ ಮೆಟ್ರೋ ಎಂಡಿ ನೀಡುವ ಸೂಚನೆಯನ್ನು ಪಾಲಿಸಲು ಅಡ್ಡಿಯಾಗುತ್ತಿದ್ದಾರೆ. ಇದರೊಂದಿಗೆ ಮೀಟಿಂಗ್ ನೆಪದಲ್ಲಿ ಅಧಿಕಾರಿಗಳನ್ನು ಗಂಟೆಗಟ್ಟಲೆ ತಮ್ಮ ಕೊಠಡಿಯಲ್ಲಿ ಕೂರಿಸಿಕೊಂಡಿರುತ್ತಾರೆ. ಇದರಿಂದ ಕೆಲಸ ಕಾರ್ಯಗಳಿಗೆ ಭಾರಿ ಸಮಸ್ಯೆಯಾಗುತ್ತಿದೆ. ಒಂದು ವೇಳೆ ಸಭೆಗೆ ಹೋಗದಿದ್ದರೆ ಅಶಿಸ್ತು ಮತ್ತು ಕರ್ತವ್ಯ ನಿರ್ವಹಣೆ ವಿಫಲ ಹೆಸರಿನಲ್ಲಿ ಶೋಕಾಸ್ ನೋಟಿಸ್ ನೀಡುವ ಬೆದರಿಕೆ ಹಾಕುತ್ತಾರೆ ಎನ್ನುವ ಆರೋಪ ಕೇಳಿಬಂದಿದೆ.

ಇಬ್ಬರಿಂದ ಇಡೀ ವ್ಯವಸ್ಥೆಗೆ ಸಮಸ್ಯೆ: ಬೈಯಪ್ಪನಹಳ್ಳಿ ವಿಭಾಗದಲ್ಲಿ ನಮ್ಮ ಮೆಟ್ರೋ ಕೆಲಸ ಉತ್ತಮ ರೀತಿಯಲ್ಲಿ ನಡೆಯುತ್ತಿತ್ತು. ಆದರೆ ಈ ಅಧಿಕಾರಿಗಳಿಂದ ಭಾರಿ ಸಮಸ್ಯೆಯಾಗಿದೆ. ನಾಲ್ಕೈದು ಬಾರಿ ವಿದ್ಯುತ್ ವ್ಯತ್ಯಯ ಉಂಟಾಗಿ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಈ ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತಂದರೆ, ನಾವು ಹೇಳಿದಂತೆ ಕೆಲಸ ಮಾಡಬೇಕು ಇಲ್ಲವಾದಲ್ಲಿ ಕೇಂದ್ರ ನಗರಾಭಿವೃದ್ಧಿ ಮಂತ್ರಿಗೆ ವರದಿ ನೀಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರಿನಲ್ಲಿ ಸಿಬ್ಬಂದಿಗಳು ಆರೋಪಿಸಿದ್ದಾರೆ.

ರಾತ್ರಿ ವೇಳೆ ತಪಾಸಣೆಗೂ ಅಡ್ಡಿ?

ಈ ಹಿಂದೆ ಮೆಟ್ರೋ ಸಂಚಾರ ಅಂತ್ಯವಾದ ಬಳಿಕ ರಾತ್ರಿ 12ರಿಂದ ನಿರ್ವಹಣೆ ಕಾಮಗಾರಿ ಮತ್ತು ಪರಿಶೀಲನೆ ಮಾಡುವುದು ವಾಡಿಕೆ. ಆದರೆ ಗುತ್ತಿಗೆ ಆಧಾರದಲ್ಲಿ ಬಂದಿರುವ ಈ ಅಧಿಕಾರಿಗಳು, ರಾತ್ರಿ ವೇಳೆ ಪರಿಶೀಲನೆ ಮಾಡುವಂತಿಲ್ಲ ಎನ್ನುವ ಸೂಚನೆ ನೀಡುತ್ತಿದ್ದಾರೆ. ರಾತ್ರಿ ಪರಿಶೀಲನೆ ಬಗ್ಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ತಾಂತ್ರಿಕ ನಿರ್ದೇಶಕರಿಗೂ ಇದು ಗೊತ್ತಿದೆ. ಅವರ ಸೂಚನೆಯಂತೆ ಈ ಪರಿಶೀಲನೆ, ಕಾಮಗಾರಿಗಳು ನಡೆಯುತ್ತಿವೆ ಎಂದು ಸಿಬ್ಬಂದಿ ಹೇಳಿದರೂ, ಅದಕ್ಕೆ ಅವಕಾಶ ನೀಡುತ್ತಿಲ್ಲ. ಎಂಡಿ ಮತ್ತು ತಾಂತ್ರಿಕ ನಿರ್ದೇಶಕರ ಸೂಚನೆಯಂತೆ ಕೆಲಸ ಮಾಡುವುದಾದರೆ ನಿಮಗೆ ಇಲ್ಲಿ ಕೆಲಸವಿಲ್ಲ. ಎರಡು ವರ್ಷ ನಾವು ಹೇಳಿದಂತೆ ಕೇಳಬೇಕು ಇಲ್ಲವಾದರೆ ವರ್ಗಾವಣೆ ಮಾಡಿಸಿಕೊಂಡು ಹೋಗಿ ಎಂದು ಬೆದರಿಕೆ ಹಾಕುತ್ತಿದ್ದಾರೆ ಎನ್ನುವ ಆರೋಪವನ್ನು ಪತ್ರದಲ್ಲಿ ಮಾಡಿದ್ದಾರೆ.

ಸಿಬ್ಬಂದಿ ದೂರುಗಳೇನು?

- ಪರಿಶೀಲನೆ ವೇಳೆ ಹಿರಿಯ ಅಧಿಕಾರಿಗಳ ಗೈರು
- ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚಿದ್ದು, ಜವಾಬ್ದಾರಿಗಳ ಸ್ಪಷ್ಟತೆ ನೀಡುತ್ತಿಲ್ಲ
- ನೈಜ ಸಮಸ್ಯೆ ಗಮನಕ್ಕೆ ತಂದರೆ ನಕಾರಾತ್ಮಕ ಟಿಪ್ಪಣಿ ಬರೆಯುವ ಬೆದರಿಕೆ

ಸಿಬ್ಬಂದಿಯ ಬೇಡಿಕೆಗಳೇನು?

- ಅಧಿಕಾರಿಗಳ ಬಗ್ಗೆ ಸಿಬ್ಬಂದಿಗಳಿಂದ ಗೌಪ್ಯವಾಗಿ ಅಭಿಪ್ರಾಯ ಸಂಗ್ರಹಿಸಿ ಕ್ರಮವಹಿಸಿ
- ತಾಂತ್ರಿಕ ನೈಪುಣ್ಯತೆ ಇರುವ ಅಧಿಕಾರಿಗಳನ್ನು ಇವರ ಜಾಗಕ್ಕೆ ನೇಮಿಸಬೇಕು
- ಕಾರ್ಯಕ್ಷಮತೆ, ಪಾರದರ್ಶಕತೆ ಮತ್ತು ಸಿಬ್ಬಂದಿ ವಿಶ್ವಾಸ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು



ಆದಿಚುಂಚನಗಿರಿಯಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಶ್ರೀ ಗುರು ಭೈರವೈಕ್ಯ ಮಂದಿರದ ಲೋಕಾರ್ಪಣೆಗಾಗಿ ರಾಜ್ಯಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿ ಎ.ಜಿ.ಆನಂದ್ ಗೌಡ ಸ್ವಾಗತಿಸಿದರು.

ಆನ್‌ಲೈನ್ ಖಾತಾ ತಿದ್ದುಪಡಿ ಸೌಲಭ್ಯ: ಮೌದ್ಗಿಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾಗರಿಕರಿಗೆ ಉತ್ತಮ ಸೇವೆ ಒದಗಿಸುವುದು ಹಾಗೂ ಹೆಚ್ಚಿನ ಅನುಕೂಲತೆ ಕಲ್ಪಿಸುವ ಉದ್ದೇಶದಿಂದ ಆನ್‌ಲೈನ್ ಖಾತಾ ತಿದ್ದುಪಡಿ ಸೌಲಭ್ಯವನ್ನು ಶೀಘ್ರದಲ್ಲಿ ಪರಿಚಯಿಸಲಾಗುವುದು ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಜಿಬಿಎ ಕೇಂದ್ರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಯೋಜನೆಯ ಮೂಲಕ ನಾಗರಿಕರು ತಮ್ಮ ಖಾತಾ ವಿವರಗಳಲ್ಲಿ ಇರುವ ದೋಷಗಳನ್ನು ಯಾವುದೇ ವಿಳಂಬವಿಲ್ಲದೆ ಸುಲಭವಾಗಿ ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ವ್ಯವಸ್ಥೆ ಹೆಚ್ಚು ಪರಿಣಾಮಕಾರಿ, ಪಾರದರ್ಶಕ ಮತ್ತು ಬಳಕೆದಾರ ಸ್ನೇಹಿಯಾಗಿ ರೂಪುಗೊಳ್ಳಲಿದೆ. ಮಾಲೀಕರ ಹೆಸರು ಮತ್ತು ಆಸ್ತಿಯ ಅಳತೆ ಹೊರತುಪಡಿಸಿ, ಸ್ಥಳ, ವಾರ್ಡ್ ಸಂಖ್ಯೆ ಸೇರಿದಂತೆ ಇತರ ವಿವರಗಳನ್ನು ನಾಗರಿಕರು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು ಎಂದರು.

ಡ್ರಾಫ್ಟ್ ಖಾತೆಯಿಂದ ಅಂತಿಮ ಖಾತೆಗೆ ಪ್ರಗತಿ: ಸುಮಾರು 25 ಲಕ್ಷ ಡ್ರಾಫ್ಟ್ ಖಾತಾ ಅರ್ಜಿಗಳು ಆನ್‌ಲೈನ್ ಮೂಲಕ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 10 ಲಕ್ಷಕ್ಕೂ ಹೆಚ್ಚು ನಾಗರಿಕರಿಗೆ ಅಂತಿಮ ಇ- ಖಾತಾ ನೀಡಲಾಗಿದೆ. ದಾಖಲೆಗಳು ಸರಿಯಾಗಿದ್ದಲ್ಲಿ ಐದು ದಿನಗಳೊಳಗೆ ಅಂತಿಮ ಇ-ಖಾತಾ ನೀಡಲಾಗುತ್ತಿದೆ. ಡ್ರಾಫ್ಟ್ ಖಾತೆಯಿಂದ ಅಂತಿಮ ಖಾತೆಗೆ ಪರಿವರ್ತನೆಯ ಪ್ರಕ್ರಿಯೆ ಸಮಸ್ಯೆಗಳಿಲ್ಲದೆ ಸುಗಮವಾಗಿ ನಡೆಯುತ್ತಿದೆ. ಪ್ರತಿದಿನ 1,000 ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಸರಾಸರಿ ಪ್ರತಿ 30 ಸೆಕೆಂಡಿಗೆ ಒಂದು ಇ-ಖಾತಾ ವಿತರಿಸಲಾಗುತ್ತಿದೆ, ಇದು ಡಿಜಿಟಲ್ ಪ್ರಕ್ರಿಯೆಯ ವೇಗ ಮತ್ತು ಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುತ್ತದೆ. ಖಾತಾ ತಿರಸ್ಕಾರ ಪ್ರಕ್ರಿಯೆಯಲ್ಲಿ ಕೆಲವು ಸವಾಲುಗಳು ಗಮನಕ್ಕೆ ಬಂದಿದ್ದು, ಇದನ್ನು ಸರಿಪಡಿಸಲು ರಿಜೆಕ್ಷನ್ ಆಡಿಟ್ ತಂಡವನ್ನು ರಚಿಸಲಾಗಿದೆ ಎಂದರು.

ಸ್ವಯಂಚಾಲಿತ ಮ್ಯೂಟೇಷನ್ ವ್ಯವಸ್ಥೆ ಜಾರಿಗೆ

ಮ್ಯೂಟೇಷನ್ ಪ್ರಕ್ರಿಯೆಯಲ್ಲಿ ವಿಳಂಬವನ್ನು ಕಡಿಮೆ ಮಾಡಲು ಸ್ವಯಂಚಾಲಿತ ಮ್ಯೂಟೇಷನ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಉಪ-ನೋಂದಣಾಧಿಕಾರಿಗಳ ಕಚೇರಿಯಲ್ಲಿ ನಡೆದ ವಹಿವಾಟುಗಳು ಈಗ ಸ್ವಯಂಚಾಲಿತವಾಗಿ ಮ್ಯೂಟೇಷನ್ ಆಗಲಿವೆ. ನೋಟಿಸ್ ಅವಧಿ ಪೂರ್ಣಗೊಂಡ ನಂತರ ಮ್ಯೂಟೇಷನ್ ಪೂರ್ಣಗೊಳ್ಳುತ್ತದೆ ಮತ್ತು ಏಳನೇ ದಿನದ ಬಳಿಕ ನಾಗರಿಕರಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುತ್ತದೆ. ಪೌತಿ (ವಾರಸುದಾರರ) ಪ್ರಕರಣಗಳಲ್ಲಿಯೂ ವಿಳಂಬವನ್ನು ತಪ್ಪಿಸಲು ಸ್ವಯಂ ಮ್ಯೂಟೇಷನ್ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಮಲ್ಲತ್ತಹಳ್ಳಿಯ ಎಐಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ನ್ಯಾ. ಗೋಪಾಲ್ ಎಸ್ ಶೆಟ್ಟಿ, ಟ್ರಸ್ಟಿಗಳಾದ ಬಿ. ಎನ್. ಉಮೇಶ್, ಎಸ್. ಶಿವಮಲ್ಲು, ಡಾ. ಪಟ್ನಾಯಕ್, ಡಾ.ಶಿವ ಪ್ರಕಾಶ್ . ಪ್ರಿನ್ಸಿಪಾಲ್ ಮಹಾಲಿಂಗ ಇದ್ದರು.

ಮೀಸಲಾತಿ ಕರುಣೆಯ ಕೊಡುಗೆಯಲ್ಲ

ಬೆಂಗಳೂರು: ಸಂವಿಧಾನದ ಮೂಲ ಧ್ಯೇಯೋದ್ದೇಶವಾದ ಸಮಾನತೆಯನ್ನು ಸರ್ವರಿಗೂ ಖಾತ್ರಿ ಪಡಿಸುವ ಉದ್ದೇಶದಿಂದ ಕೆಲ ದಮನಿತ ವರ್ಗಗಳಿಗೆ ಮೀಸಲಾತಿಯಡಿ ವಿಶೇಷ ಅವಕಾಶಗಳನ್ನು ಕಲ್ಪಿಸಲಾಗಿದೆ. ಮೀಸಲಾತಿ ಕರುಣೆಯ ಕೊಡುಗೆಯಲ್ಲ ಎಂದು ಜಿಲ್ಲಾ ಹಾಗೂ ಸೆಷನ್ಸ್ ವಿಶ್ರಾಂತ ನ್ಯಾಯಾಧೀಶ ಗೋಪಾಲ್ ಎಸ್.ಶೆಟ್ಟಿ ಹೇಳಿದರು

ಮಲ್ಲತ್ತಹಳ್ಳಿಯ ಎಐಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ 10ನೇ ರಾಷ್ಟ್ರೀಯ ತಾಂತ್ರಿಕ ಪ್ರದರ್ಶನದಲ್ಲಿ ಅವರು ಮಾತನಾಡಿದರು ಅವರು, ಕ್ರಾಂತಿ ಪುರುಷರ ಚಿಂತನೆ ಹಾಗೂ ಆದರ್ಶಗಳು ನಮ್ಮ ದೈನಂದಿನ ಬದುಕಿನಲ್ಲಿ ಪಾಲನೆಯಾದಾಗ ಮಾತ್ರ ಜಯಂತಿಯ ಆಚರಣೆಗಳಿಗೆ ಅರ್ಥ ಬರಲಿದೆ ಎಂದು ತಿಳಿಸಿದರು. ವಕೀಲೆ ಸಹನಾ ಗೋಪಾಲ್ ಮಾತನಾಡಿ, ಮಹಿಳೆ ಯರು ಸಂವಿಧಾನದತ್ತವಾಗಿ ಸಮಾನ ಹಕ್ಕು, ಅವಕಾಶ ಹೊಂದಿದ್ದಾರೆ. ಅವರು ಪಡೆದುಕೊಳ್ಳುತ್ತಿರುವುದು ಮೀಸಲು ಅಲ್ಲ. ಸಂವಿಧಾನ ನೀಡಿದ ಹಕ್ಕು. ಅವಕಾಶ ವಂಚಿತರಾದಾಗ ಧೈರ್ಯದಿಂದ ಪ್ರಶ್ನಿಸಿ ಹಕ್ಕು ಪಡೆದುಕೊಳ್ಳಬೇಕು. ಮಹಿಳೆಯರ ಸಾಂವಿಧಾನಿಕ ಹಕ್ಕನ್ನು ಮೀಸಲಾತಿ ಎನ್ನುವುದು ಸಮಂಜಸವಲ್ಲ ಎಂದು ಅಭಿಪ್ರಾಯ ಪಟ್ಟರು

ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಡಾ.ಎಂ.ಮಹದೇವ್ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆ ಭಿನಾರಿ ಶಕ್ತಿ ವಂದನ್ ಅಧಿನಿಯಮಭಿ ಸಮಗ್ರವಾಗಿ ಜಾರಿಯಾದರೂ ಸಾಮಾನ್ಯ ಮಹಿಳೆಯರಿಗೆ ಮೀಸಲಾತಿಯ ಲಾಭ ದೊರಕುವುದೇ ಅಥವಾ ಹಾಲಿ ಸದಸ್ಯರ ಮಕ್ಕಳ ಪಾಲಾಗುವುದೇ ಕಾದು ನೋಡ ಬೇಕಿದೆ ಎಂದು ಆತಂಕ ವ್ಯಕ್ತ ಪಡಿಸಿದರು. ಮಹಿಳೆಯರು ಅಕ್ಷರಸ್ಥರಾಗುತ್ತಿದ್ದಾರೆ. ಶಿಕ್ಷಿತರಾಗಿ ರೂಪುಗೊಳ್ಳುವ ಅಗತ್ಯತೆಯಿದೆ ಎಂದು ತಿಳಿಸಿದರು.

ಎಲ್‌ಪಿಜಿ ಬದಲು ಬಯೋಗ್ಯಾಸ್‌ಗೆ ಹೋಟೆಲ್‌ಗಳು ಒತ್ತು

ಬೆಂಗಳೂರು: ಯುದ್ಧದಿಂದಾಗಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಕೊರತೆ ಹಾಗೂ ದರ ಅನಿಶ್ಚಿತತೆಯಿಂದಾಗಿ ಬೆಂಗಳೂರು ಹೋಟೆಲ್ ಮಾಲೀಕರು ಸಮಸ್ಯೆ ಅನುಭವಿಸುತ್ತಿದ್ದು, ಪರ್ಯಾಯವಾಗಿ ಬಯೋಗ್ಯಾಸ್ ಬಳಕೆ ಮಾಡಲು ಮುಂದಾಗಿದ್ದಾರೆ. ಸಂಪೂರ್ಣವಾಗಿ ಎಲ್‌ಪಿಜಿ ಗ್ಯಾಸ್‌ನ ಅವಲಂಬನೆಯ ಬದಲಾಗಿ ಕಸದಿಂದ ರಸ ಎಂಬ ಪರಿಕಲ್ಪನೆಯಡಿ ಬಯೋಗ್ಯಾಸ್ ಬಳಕೆಗೆ ಚಿಂತನೆ ನಡೆಸಲಾಗಿದೆ. ಬೆಂಗಳೂರಿನ ಹೋಟೆಲ್‌ಗಳಿಂದ ಪ್ರತಿದಿನ ಟನ್ ಗಟ್ಟಲೆ ಹಸಿ ಕಸ ಉತ್ಪತ್ತಿಯಾಗುತ್ತದೆ. ಈ ಕಸವನ್ನು ಎಲ್ಲೆಲ್ಲೋ ಸುರಿಯುವ ಬದಲು ಅಥವಾ ಡಂಪಿಂಗ್ ಯಾರ್ಡ್‌ಗಳಿಗೆ ನೀಡುವ ಬದಲು, ಬಯೋಗ್ಯಾಸ್ ಉತ್ಪಾದನಾ ಕಂಪನಿಗಳಿಗೆ ನೀಡಲು ಹೋಟೆಲ್ ಮಾಲೀಕರ ಸಂಘ ನಿರ್ಧರಿಸಿದೆ. ತಾವು ನೀಡುವ ಕಸಕ್ಕೆ ಪ್ರತಿಯಾಗಿ ಆ ಕಂಪನಿಗಳು ಉತ್ಪಾದಿಸುವ ಬಯೋಗ್ಯಾಸ್ ಸಿಲಿಂಡರ್ ಅಥವಾ ಪಿಎನ್‌ಜಿ ಸಂಪರ್ಕವನ್ನು ಪಡೆಯುವ ಒಪ್ಪಂದಕ್ಕೆ ಹೋಟೆಲ್ ಮಾಲೀಕರು ಮುಂದಾಗಿದ್ದಾರೆ. ಈ ನಿಟ್ಟಿನಲ್ಲಿ ಬೆಂಗಳೂರು ಹೋಟೆಲ್ ಮಾಲೀಕರ ಸಂಘವು ಸಭೆ ನಡೆಸಿದ್ದು, ಬಯೋಗ್ಯಾಸ್ ತಯಾರಿಕಾ ಘಟಕಗಳ ಸ್ಥಾಪನೆ ಮತ್ತು ಕೆಲವು ಖಾಸಗಿ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಕುರಿತು ಗಂಭೀರ ಚರ್ಚೆ ನಡೆಸಿದೆ.

ಅಂಜಿನಪ್ಪ ವೀಣಾ ವಾದನಕ್ಕೆ ವಿದ್ಯಾರ್ಥಿಗಳು ಫಿದಾ

ಬೆಂಗಳೂರು: ಕೋರಮಂಗಲದಲ್ಲಿರುವ ಸಂತ ಫ್ರಾನ್ಸಿಸ್ ಪದವಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಮುಖ ವೀಣೆ ಕಲಾ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮುಖವೀಣೆ ಅಂಜಿನಪ್ಪನವರು ಆಗಮಿಸಿ ಸುಮಾರು 10 ವಿವಿಧ ಬಗೆಯ ವೀಣಾ ವಾದನಗಳನ್ನು ನುಡಿಸಿ ವಿದ್ಯಾರ್ಥಿಗಳನ್ನು ಮನರಂಜಿಸಿದರು. ಇವರು ವಿಶೇಷವಾಗಿ ನುಡಿಸಿದ ಜಲ ವೀಣಾ ವಾದನ ವಿದ್ಯಾರ್ಥಿಗಳ ಕಣ್ಮನಗಳನ್ನು ತಣಿಸಿತು. ಕಾಲೇಜಿನ ನಿರ್ದೇಶಕರಾದ ಡಾ.ರೆವರೆಂಡ್ ಬ್ರದರ್, ಟೈಟಸ್ ಆಂಟೊ ಭಾಗವಹಿಸಿದ್ದರು. ಸರಿಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಶ್ರೀ ವಿದ್ಯಾ ಅಂತಾರಾಷ್ಟ್ರೀಯ ವೇದ ವಿಜ್ಞಾನ ವಿಶ್ವವಿದ್ಯಾಲಯ ಹಾಗೂ ಶ್ರೀವಿದ್ಯಾ ವಿಶ್ವ ಸಂಶೋಧನಾ ಪ್ರತಿಷ್ಠಾನ ವತಿಯಿಂದ ಬನಶಂಕರಿಯ ಗಾನಲಿಂಗ ಶಿವಯೋಗಿ ಸಭಾಭವನದಲ್ಲಿ 2026ನೇ ಸಾಲಿನ ಘಟಿಕೋತ್ಸವ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ವಿದ್ವಾನ್ ನಾಗಭೂಷಣ್ ಅವರಿಗೆ 'ತಬಲ ವಾದ್ಯದ ಹಿನ್ನೆಲೆ ಹಾಗೂ ಕರ್ನಾಟಕದ ತಬಲಾ ಕಲಾವಿದರು' ಎಂಬ ಅಧ್ಯಯನಕ್ಕೆ ಡಾಕ್ಟರೇಟ್ (ಪಿಎಚ್‌ಡಿ) ಪ್ರದಾನ ಮಾಡಲಾಯಿತು. ಈ ವೇಳೆ ಶಂಕರ ಕ್ಯಾನ್ಸರ್ ಹಾಸ್ಪಿಟಲ್ ವೈದ್ಯ ಬಿ.ಎಸ್.ಶ್ರೀನಾಥ್, ರಾಮಕೃಷ್ಣ ಆಶ್ರಮದ ನಿರ್ಭಯಾನಂದ ಸರಸ್ವತಿ ಸ್ವಾಮಿಗಳು, ವಿದ್ಯಾಲಯದ ಡಾ.ನರಸಿಂಹಮೂರ್ತಿ, ಡಾ.ಶ್ರೀನಿವಾಸಮೂರ್ತಿ, ಡಾ.ಅರ್ಚನಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಿಕ್ಕಮಗಳೂರು-ಯಶವಂತಪುರ ರೈಲು ಪರಿಷ್ಕೃತ ಸಮಯ

ಬೆಂಗಳೂರು: ನೈಋತ್ಯ ರೈಲ್ವೆಯು ಕಾರ್ಯಾಚರಣೆಯ ಕಾರಣಗಳಿಂದಾಗಿ ಚಿಕ್ಕಮಗಳೂರು ಮತ್ತು ಯಶವಂತಪುರ ನಡುವೆ ಸಂಚರಿಸುವ ದೈನಂದಿನ ಎಕ್ಸ್‌ಪ್ರೆಸ್ ಹಾಗೂ ಶಿವಮೊಗ್ಗ-ಚಿಕ್ಕಮಗಳೂರು ಪ್ಯಾಸೆಂಜರ್ ರೈಲುಗಳ ವೇಳಾಪಟ್ಟಿಯನ್ನು ಪರಿಷ್ಕರಿಸಿದ್ದು, ಏ.24 ರಿಂದ ಹೊಸ ವೇಳಾಪಟ್ಟಿ ಜಾರಿಗೆ ಬರಲಿದೆ. ರೈಲು ಪ್ರಯಾಣಿಕರು ಈ ಬದಲಾದ ವೇಳಾಪಟ್ಟಿಯನ್ನು ಗಮನಿಸಿ ತಮ್ಮ ಪ್ರಯಾಣವನ್ನು ಯೋಜಿಸಬೇಕೆಂದು ರೈಲ್ವೆ ಇಲಾಖೆ ತಿಳಿಸಿದೆ. ರೈಲು ಸಂಖ್ಯೆ 16239 (ಚಿಕ್ಕಮಗಳೂರು – ಯಶವಂತಪುರ ಎಕ್ಸ್‌ಪ್ರೆಸ್) ಈ ರೈಲು ಇನ್ನು ಮುಂದೆ ಚಿಕ್ಕಮಗಳೂರು ನಿಲ್ದಾಣದಿಂದ ನಿಗದಿತ ಸಮಯಕ್ಕಿಂತ 15 ನಿಮಿಷ ಮುಂಚಿತವಾಗಿ ಅಂದರೆ ಬೆಳಗ್ಗೆ 08:15ರ ಬದಲಿಗೆ 8 ಗಂಟೆಗೆ ಹೊರಡಲಿದೆ. ಇದರೊಂದಿಗೆ ಮಧ್ಯಂತರ ನಿಲ್ದಾಣಗಳ ಸಮಯದಲ್ಲೂ ಬದಲಾವಣೆಯಾಗಿದೆ.

ಮೆಜೆಸ್ಟಿಕ್‌ನಲ್ಲಿ ನೂತನ ಪಾರ್ಕಿಂಗ್‌ಗೆ ಚಾಲನೆ

ಬೆಂಗಳೂರು: ಮೆಜೆಸ್ಟಿಕ್‌ನ ಕೆಂಪೇಗೌಡ ಟರ್ಮಿನಲ್-1ರಲ್ಲಿ 3.29ಕೋಟಿ ವೆಚ್ಚದಲ್ಲಿ ಪುನರ್ ಅಭಿವೃದ್ಧಿಪಡಿಸಿದ ನೂತನ ಪಾರ್ಕಿಂಗ್ ಪ್ರದೇಶಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧಿಕೃತವಾಗಿ ಚಾಲನೆ ನೀಡಿದರು.

ಮೆಜೆಸ್ಟಿಕ್‌ನ ದೀರ್ಘ ಕಾಲದ ಸಮಸ್ಯೆಯಾದ ಪಾರ್ಕಿಂಗ್ ಹಾಗೂ ಮಳೆನೀರು ನಿಲ್ಲುವ ಸಮಸ್ಯೆಗೆ ಕೊನೆಗೂ ಪರಿಹಾರ ದೊರಕಿದೆ. ವಿಶೇಷವಾಗಿ ಬಸ್ ನಿಲ್ದಾಣದ ಟರ್ಮಿನಲ್-1ರ ಬಳಿಯಿರುವ ವಿಶ್ರಾಂತಿ ಗೃಹಕ್ಕೆ ಹೊಂದಿಕೊಂಡಂತಿರುವ ಸ್ಥಳವು ಈ ಹಿಂದೆ ಸಂಪೂರ್ಣವಾಗಿ ಗುಂಡಿಗಳಿಂದ ತುಂಬಿ ಹೋಗಿತ್ತು. ಮಳೆಗಾಲದಲ್ಲಿ ಮಳೆ ನೀರು ಹೊರಹೋಗಲು ಜಾಗವಿಲ್ಲದೆ ಆವರಣವೆಲ್ಲಾ ಕೆಸರುಮಯವಾಗುತ್ತಿತ್ತು. ಇದರಿಂದಾಗಿ ಬಸ್ ನಿಲ್ದಾಣಕ್ಕೆ ಬರುವ ಸಾರ್ವಜನಿಕ ಪ್ರಯಾಣಿಕರಿಗೆ, ಬಸ್ ಚಾಲಕರಿಗೆ, ನಿರ್ವಾಹಕರಿಗೆ ಹಾಗೂ ಸ್ಥಳದಲ್ಲಿ ಕಾರ್ಯನಿರ್ವಹಿಸುವ ನಿಗಮದ ಸಿಬ್ಬಂದಿಗೆ ತೀವ್ರ ತೊಂದರೆಯಾಗುತ್ತಿತ್ತು. ವಾಹನಗಳ ಸುಗಮ ಸಂಚಾರಕ್ಕೂ ಇದು ದೊಡ್ಡ ಅಡ್ಡಿಯಾಗಿತ್ತು.

ಈ ಸಮಸ್ಯೆಯ ಗಂಭೀರತೆಯನ್ನು ಅರಿತ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಈ ಹಿಂದೆ ಬಸ್ ನಿಲ್ದಾಣಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಪ್ರಯಾಣಿಕರು ಮತ್ತು ಸಿಬ್ಬಂದಿಯ ಹಿತದೃಷ್ಟಿಯಿಂದ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ತುರ್ತಾಗಿ ಈ ಪಾರ್ಕಿಂಗ್ ಆವರಣವನ್ನು ಅಭಿವೃದ್ಧಿಪಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದರು. ಸಚಿವರ ಸೂಚನೆಯ ಮೇರೆಗೆ ತ್ವರಿತವಾಗಿ ಟೆಂಡರ್ ಪ್ರಕ್ರಿಯೆ ಮುಗಿಸಿ, ಇದೀಗ ಕಾಮಗಾರಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗಿದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ , ನಿಗಮದ ಹಿರಿಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರಿಗೆ ಇಲಾಖೆಯ ಹಲವು ಗಣ್ಯರು ಭಾಗವಹಿಸಿದ್ದರು.

2.5 ಎಕರೆ ಪ್ರದೇಶ ಅಭಿವೃದ್ಧಿ

ಒಟ್ಟು ಎರಡುವರೆ ಎಕರೆ (2.5 ಎಕರೆ) ವಿಸ್ತೀರ್ಣದ ಈ ಪ್ರದೇಶವನ್ನು ವಾಹನ ನಿಲುಗಡೆಗೆ ಅತ್ಯಂತ ಸೂಕ್ತ ಹಾಗೂ ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ನೂತನ ಪಾರ್ಕಿಂಗ್ ಜಾಗದಲ್ಲಿ ಏಕಕಾಲಕ್ಕೆ ಅಂದಾಜು 100 ಬಸ್‌ಗಳನ್ನು ನಿಲುಗಡೆ ಮಾಡಲು ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗಿದೆ. ರಾತ್ರಿ ವೇಳೆಯಲ್ಲಿ ನಿಲ್ದಾಣದಲ್ಲಿ ಭದ್ರತೆ ಮತ್ತು ಬೆಳಕಿನ ವ್ಯವಸ್ಥೆಗಾಗಿ ಪಾರ್ಕಿಂಗ್ ಸ್ಥಳದಾದ್ಯಂತ 11 ಹೈಮಾಸ್ಟ್ ಮಾದರಿಯ ವಿದ್ಯುತ್ ದೀಪದ ಕಂಬಗಳನ್ನು ಅಳವಡಿಸಲಾಗಿದೆ. ಇದರ ಜತೆಗೆ ಪ್ರತ್ಯೇಕ ವಿದ್ಯುತ್ ಪ್ಯಾನಲ್ ಕೊಠಡಿಯನ್ನು ಸಹ ನಿರ್ಮಾಣ ಮಾಡಲಾಗಿದ್ದು, ಮೂಲಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

ಮೆಜಸ್ಟಿಕ್‌ನ ನೂತನ ಪಾರ್ಕಿಂಗ್ ಪ್ರದೇಶಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

ಸಿಬಿಎಸ್‌ಇ ಪರೀಕ್ಷೆಯಲ್ಲಿ ಸೌಂದರ್ಯ ಸೆಂಟ್ರಲ್ ಶಾಲೆ ಉತ್ತಮ ಪ್ರದರ್ಶನ

ಬೆಂಗಳೂರು: ಸಿಬಿಎಸ್‌ಇ ಹತ್ತನೇ ತರಗತಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಬೆಂಗಳೂರು ಉತ್ತರ ಭಾಗದ ಸೌಂದರ್ಯ ಸೆಂಟ್ರಲ್ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ತೋರಿದ್ದಾರೆ. ಪೂರ್ವಿಕಾ 490/500 (ಶೇ.98) ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನವನ್ನು ಗಳಿಸಿರುವುದರ ಜತೆಗೆ, ಎಐ ವಿಷಯ ದಲ್ಲಿ 100/100 ಅಂಕಗಳನ್ನು ಗಳಿಸಿರುತ್ತಾಳೆ.

ಈ ಸಾಲಿನಲ್ಲಿ ಒಟ್ಟು 155 ವಿದ್ಯಾರ್ಥಿಗಳಲ್ಲಿ 20 ವಿದ್ಯಾರ್ಥಿಗಳು ಶೇ.90 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದು, 23 ವಿದ್ಯಾರ್ಥಿಗಳು ಶೇ.85ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಒಟ್ಟು 43 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದು, 90 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಯ ಒಟ್ಟು ಫಲಿತಾಂಶವು ಅತ್ಯಂತ ಶ್ಲಾಘನೀಯವಾಗಿದೆ. ಶಾಲೆಯ ವ್ಯವಸ್ಥಾಪಕ ಸೌಂದರ್ಯ ಮಂಜಪ್ಪ ಹಾಗೂ ಸಿಇಒ ಅಧಿಕಾರಿ ಕೀರ್ತನ್ ಕುಮಾರ್ ಮತ್ತು ಆಡಳಿತ ಮಂಡಳಿಯವರು ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಶುಭಾಶಯಗಳನ್ನು ಕೋರಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಕ್ರಮ ಮದ್ಯ ಮಳಿಗೆ: ಕ್ರಮಕ್ಕೆ ಶಾಸಕ ಸೂಚನೆ

ಮಂಡ್ಯ: ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲೆಯಲ್ಲಿರುವ ಅನಧಿಕೃತ ಮದ್ಯ ಮಾರಾಟ ಮಳಿಗೆಗಳ ವಿರುದ್ಧ ಅಧಿಕಾರಿಗಳು ಕಾನೂನು ಕ್ರಮ ವಹಿಸಬೇಕು ಎಂದು ಮಂಡ್ಯ ಶಾಸಕ ಗಣಿಗ ರವಿಕುಮಾರ್ ಸೂಚಿಸಿದರು. ಜಿಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಸರಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಔಷಧಿಗಳ ಕೊರತೆ ಆಗದಂತೆ ಕ್ರಮ ವಹಿಸಬೇಕು. ರಾತ್ರಿ ವೇಳೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಬಸರಾಳು ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರನ್ನು ನೇಮಿಸಬೇಕು. ಸಾರ್ವಜನಿಕರಿಗೆ ಆರೋಗ್ಯ ತಪಾಸಣೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಅಲ್ಲದೇ ಬೇಸಿಗೆ ರಜೆ ಇರುವ ಕಾರಣ, ಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜಿಸಿ ಮಕ್ಕಳನ್ನ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು ಹಾಗೂ ಸರಕಾರಿ ಶಾಲಾ ಕಾಲೇಜುಗಳಲ್ಲಿ ಮಕ್ಕಳ ದಾಖಲಾತಿಗಳನ್ನ ಹೆಚ್ಚಿಸುವಂತೆ ಕಾರ್ಯಕ್ರಮಗಳನ್ನ ಆಯೋಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ವಿದ್ಯ ವಿಕಾಸ ಯೋಜನೆಯಡಿಗೆ 2025-26ನೇ ಸಾಲಿನ ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡುವಂತೆ ಸೂಚಿಸಿದರು.

ವಿಶ್ವವಾಣಿ ಕ್ಲಬ್ ಹೌಸ್
17.04.2026
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ನಂದೀಶ್ ಪಿ.ಕೆ
ವಿಷಯ
ಅರವಿಂದರ ಸಾವಿತ್ರಿ, 20
vishwavani.news

ಮಠ ತೊರೆಯದಿದ್ದರೆ ಸಾವಿರಾರು ಜನ ಸೇರಿ ಹೊರಗೆ ಕಳುಹಿಸುತ್ತೇವೆ: ಪಂಚಮಸಾಲಿ ಮುಖಂಡ ನಾಗರಾಜ್ ಎಚ್ಚರಿಕೆ

ಪೀಠ ಬಿಡಲು ವಚನಾನಂದ ಶ್ರೀಗೆ ವಾರ ಗಡುವು

ದಾವಣಗೆರೆ: ಪಂಚಮಸಾಲಿ ಹರಪೀಠದಿಂದ ಪದಚ್ಯುತಿಗೊಂಡಿರುವ ವಚನಾನಂದ ಶ್ರೀಗಳು ವಾರದೊಳಗೆ ಮಠ ತೊರೆಯಬೇಕು. ಇಲ್ಲದಿದ್ದರೆ ಸಮಾಜದ ಸಾವಿರಾರು ಜನರೊಂದಿಗೆ ಮಠಕ್ಕೆ ಬಂದು ಹೊರಗೆ ಕಳುಹಿಸಬೇಕಾಗುತ್ತದೆ ಎಂದು ಪಂಚಮಸಾಲಿ ಸಮಾಜದ ಮುಖಂಡ ಎಚ್.ಎಸ್.ನಾಗರಾಜ್ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಂಚಮಸಾಲಿ ಸಮಾಜದ ಏಳಿಗೆಗಾಗಿ ಕಟ್ಟಿರುವ ಟ್ರಸ್ಟನ್ನು ನೀವು ನಿಮ್ಮ ಸ್ವಂತಕ್ಕೆ ಬಳಸಿಕೊಳ್ಳುವ ಮೂಲಕ ಸಮಾಜಕ್ಕೆ ದ್ರೋಹ ಎಸಗಿದ್ದೀರಿ. ಅಲ್ಲದೆ, ಲೆಕ್ಕ ಕೊಡುವ ವಿಚಾರದಲ್ಲಿ ನಿಮ್ಮ ವರ್ತನೆ ಸಹಿಸಲು ಸಾಧ್ಯಲ್ಲ. ಮುಂದಿನ ವಾರದೊಳಗೆ ಮಠ ಖಾಲಿ ಮಾಡದಿದ್ದರೆ ಪರಿಣಾಮ ನೆಟ್ಟಗಿರದು ಎಂದು ಎಚ್ಚರಿಸಿದರು.

ಸಮಾಜದ ಉದ್ಧಾರಕ್ಕಾಗಿ ಪೀಠಕ್ಕೆ ಶ್ರೀಗಳನ್ನು ನೇಮಿಸಲಾಗಿತ್ತು. ಆದರೆ, ಅವರು ತಮ್ಮ ಸ್ವಂತ ಬೆಳವಣಿಗೆಗೆ ಮಠ ಬಳಸಿಕೊಂಡರೇ ಹೊರತು ಸಮಾಜೋದ್ಧಾರಕ್ಕಾಗಿ ಏನೂ ಮಾಡಿಲ್ಲ. ಮಠಕ್ಕಾಗಿ ಮುರುಗೇಶ್ ನಿರಾಣಿ ಅವರು ನೀಡಿದ 2 ಕೋಟಿ ಹಣವನ್ನು ತಮ್ಮ ಐಷಾರಾಮಿ ಜೀವನಕ್ಕಾಗಿ ಬಳಸಿದ್ದಾರೆ ಎಂದು ಆಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಪಂಚಮಸಾಲಿ ಸಮಾಜದ ಮುಖಂಡ ಎಸ್.ಎಚ್.ನಾಗರಾಜ್ ಮಾತನಾಡಿದರು.

ಸ್ವಾಮಿಗೆ ಏಕೆ ಬೇಕು ದುಡ್ಡು?: ಟ್ರಸ್ಟ್ ಮೂಲಕವೇ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳಲಾಗುತ್ತದೆ. ಆದರೆ, ಸ್ವಾಮಿಗಳಿಗೆ ಹಣ ಏಕೆ ಬೇಕು ಎಂಬುದು ಗೊತ್ತಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಈಗ ಸ್ವಾಮೀಜಿಗಳ ಪರವಾಗಿ 'ಲೆಕ್ಕಕೊಡಿ' ಚಳವಳಿ ಆರಂಭಿಸಿರುವ ಎಲ್ಲರ ಇತಿಹಾಸಗಳು ನಮಗೆ ಗೊತ್ತಿವೆ. ಅವರೆಲ್ಲರೂ ಹತ್ತಿದ ಏಣಿಯನ್ನು ಒದೆಯುವಂತಹ ಜಾಯಮಾನದವರು. ಈ ಹಿನ್ನೆಲೆಯಲ್ಲಿ ಅವರ ಬಗ್ಗೆ ಮಾತನಾಡದೆ ಇರುವುದೇ ಸೂಕ್ತ ಎಂದು ಹೇಳಿದರು.

ತಮ್ಮ ತಪ್ಪುಗಳನ್ನು ಮರೆಮಾಚಲು ಕೆಲವರನ್ನಿಟ್ಟುಕೊಂಡು 'ಲೆಕ್ಕಕೊಡಿ' ಚಳವಳಿ ಆರಂಭಿಸುವ ಮೂಲಕ ಸಮಾಜದಲ್ಲಿ ಗೊಂದಲ ಸೃಷ್ಟಿಸಿ ಸಮಾಜ ಒಡೆಯುತ್ತಿರುವ ಸ್ವಾಮೀಜಿ, ದೊಡ್ಡ ದೊಡ್ಡ ರಾಜಕೀಯ ನಾಯಕರು ಮಾಡಿದ ದೂರವಾಣಿ ಕರೆಗಳನ್ನು ರೆಕಾರ್ಡ್ ಮಾಡಿಟ್ಟುಕೊಳ್ಳುವ ಕ್ರಿಮಿನಲ್ ಮನಸ್ಥಿತಿಯನ್ನು ಸ್ವಾಮೀಜಿ ಹೊಂದಿದ್ದಾರೆ ಎಂದರು.

ಟ್ರಸ್ಟ್‌ನ ಧರ್ಮದರ್ಶಿ ಉಮಾಪತಿಯವರು ಸಮಾಜಕ್ಕೆ ಸಾಕಷ್ಟು ತ್ಯಾಗ, ಸಹಕಾರ ಮಾಡಿದ್ದಾರೆ. ಸಮಾಜದ ಬೆಳವಣಿಗೆಗೆ ಅವರ ಕೊಡುಗೆ ಅನನ್ಯ. ಇಂಥವರನ್ನು ಲೆಕ್ಕ ಕೊಡಿ ಎಂದು ಪ್ರಶ್ನಿಸುವ ನಿಮಗೆ ನೈತಿಕತೆ ಇದೆಯೇ? ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಅಶೋಕ ಗೋಪನಾಳು, ಹಾಲೇಶ್ ,ರುದ್ರಣ್ಣ ಸೋಗಿ, ಚನ್ನಬಸಪ್ಪ, ಜಗದೀಶ್ ಸೇರಿ ಇತರರು ಹಾಜರಿದ್ದರು.

ಶೀಘ್ರ ಲೆಕ್ಕಕೊಡಿ ಚಳವಳಿ

ಪಂಚಮಸಾಲಿ ಸಮಾಜಕ್ಕೆ 2ಮೀಸಲಾತಿ ಹೋರಾಟ ಸಂದರ್ಭ ಸಾವಿರಾರೂ ಕ್ವಿಂಟಲ್ ಸಂಗ್ರಹವಾಗಿದ್ದ ಅಕ್ಕಿ, ದವಸ ಧಾನ್ಯವನ್ನು ಮಾರಾಟ ಮಾಡಿದ ಹಣ ಎಲ್ಲಿ ಹೋಯ್ತು? ಕೂಡಲಸಂಗಮ ಪೀಠಕ್ಕಾಗಿ ಈ ಭಾಗದಿಂದ ಸಂಗ್ರಹಿಸಿದ ಹಣ, ಅಕ್ಕಿ ಸೇರಿದಂತೆ ಕೋಟ್ಯಂತರ ರು. ಗಳನ್ನು ದುರುಪಯೋಗ ಪಡಿಸಿಕೊಂಡವರ ಬಗ್ಗೆ ನಾವೂ ಶೀಘ್ರದಲ್ಲಿಯೇ ಲೆಕ್ಕಕೊಡಿ ಚಳವಳಿ ಆರಂಭಿಸಲಿದ್ದೇವೆ ಎಂದು ಎಸ್.ಎಚ್.ನಾಗರಾಜ್ ತಿಳಿಸಿದರು.

ಮಠದತ್ತ ಎಂದೂ ಬಾರದ, ವಚನಾನಂದ ಶ್ರೀಗಳ ವಿರುದ್ಧವೇ ಈ ಹಿಂದೆ ಏಕವಚನದಲ್ಲಿ ವಾಗ್ದಾಳಿ ನಡೆಸಿದ್ದ ಹರಿಹರ ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಈಗ ದಿಢೀರ್ ಸ್ವಾಮಿಗಳ ಪರ, ಮಠದ ಪರ ಹೋರಾಟಕ್ಕಿಳಿದಿರುವುದು ಅವರ ಬೇಳೆ ಬೇಯಿಸಿಕೊಳ್ಳುವ ಉದ್ದೇಶವೇ ಹೊರತು ಮತ್ತೇನಲ್ಲ.

-ಎಸ್.ಎಚ್. ನಾಗರಾಜ್, ಪಂಚಮಸಾಲಿ ಮುಖಂಡ

ಕೆಎಸ್‌ಟಿಡಿಸಿಯಿಂದ ಮಂತ್ರಾಲಯ ರಾಯರ ದರ್ಶನಕ್ಕೆ ಟೂರ್ ಪ್ಯಾಕೇಜ್

ಬೆಂಗಳೂರು: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ವತಿಯಿಂದ ಬೆಂಗಳೂರಿನಿಂದ ಮಂತ್ರಾಲಯಕ್ಕೆ ಪ್ರವಾಸಿ ಪ್ಯಾಕೇಜ್ ಘೋಷಿಸಲಾಗಿದೆ. ಯಶವಂತಪುರದಿಂದ ನೇರವಾಗಿ ಎಸಿ ಡಿಲಕ್ಸ್ ಬಸ್‌ನಲ್ಲಿ ಪ್ರಯಾಣಿಸಬಹುದಾಗಿದೆ. ಮಂತ್ರಾಲಯಕ್ಕೆ ಹೋಗಿ ರಾಯರ ದರ್ಶನ ಮಾಡಬೇಕೆನ್ನುವವರಿಗಾಗಿ ಕೈಗೆಟಕುವ ದರದಲ್ಲಿ ನೇರ ಸಾರಿಗೆ ಸೇವೆಯನ್ನು ಪ್ರವಾಸೋದ್ಯಮ ಇಲಾಖೆ ಕಲ್ಪಿಸಿದ್ದು, ರಾಜ್ಯ ಪ್ರವಾಸೋದ್ಯಮ ಇಲಾಖೆ ಉತ್ತೇಜಿಸುವ ನಿಟ್ಟಿನಲ್ಲಿ ಈ ಪ್ಯಾಕೇಜ್ ಆರಂಭಿಸಲಾಗಿದೆ. ಇದು ಬಹುತೇಕ ವರ್ಷದ ಎಲ್ಲ ದಿನಗಳಲ್ಲಿ ಲಭ್ಯವಿರುವ ವಿಶೇಷ ಟೂರ್ ಪ್ಯಾಕೇಜ್ ಆಗಿದೆ. ಒಟ್ಟು 2 ದಿನದ ಟೂರ್ ಪ್ಯಾಕೇಜ್ ಇದಾಗಿದ್ದು, ಬೆಂಗಳೂರಿನ ಯಶವಂತಪುರ ಇಲಾಖೆ ಕಚೇರಿ, ಬಿಎಂಟಿಸಿ ಬಸ್ ನಿಲ್ದಾಣದಿಂದ ನೇರ ಮಂತ್ರಾಲಯಕ್ಕೆ ಭಕ್ತರನ್ನು ಕರೆದೊಯ್ಯಲಾಗುತ್ತದೆ. ಸುವ್ಯವಸ್ಥಿತವಾದ ಡಿಲೆಕ್ಸ್ ಬಸ್ ಪ್ರತಿ ಬುಧವಾರ ಮತ್ತು ಶುಕ್ರವಾರ ರಾತ್ರಿ 8 ಗಂಟೆಗೆ ಬೆಂಗಳೂರಿನಿಂದ ಹೊರಟು ಮಾರನೇ ದಿನ ಬೆಳಗ್ಗೆ ಮಂತ್ರಾಲಯವನ್ನು ತಲುಪುತ್ತದೆ.

ಒಬ್ಬರಿಗೆ 2780 ಟಿಕೆಟ್ ದರ: ಬೆಂಗಳೂರು-ಮಂತ್ರಾಲಯ ಪ್ರತಿ ಪ್ಯಾಕೇಜ್ ಬುಕ್ ಮಾಡಲು ಒಬ್ಬರಿಗೆ 2780 ರುಪಾಯಿ ದರ ನಿಗದಿಪಡಿಸಲಾಗಿದೆ. ಟಿಕೆಟ್ ಬುಕ್ ಮಾಡುವ ಭಕ್ತರು, ಪ್ರವಾಸಿಗರು ಅಧಿಕೃತ ಜಾಲತಾಣ https://kstdc.co/tour‰packages/mantralaya&tour/ ಕ್ಕೆ ಭೇಟಿ ನೀಡಿ ಮಾಹಿತಿ ತಿಳಿದು ಬುಕ್ ಮಾಡಬಹುದು. ಕರೆ ಮಾಡಿ ಟಿಕೆಟ್ ಬುಕ್ ಮಾಡಲು 080 43344334 ಇಲ್ಲವೇ ಮೊಬೈಲ್ ಸಂಖ್ಯೆ 8970650070 ಗೆ ಕರೆ ಮಾಡಬಹುದು.

ಅಂಕೋಲಾ: ಎಥನಾಲ್ ಟ್ಯಾಂಕರ್ ಸ್ಫೋಟ

ಅಂಕೋಲಾ: ತಾಲೂಕಿನ ಕಂಚಿನಬಾಗಿಲು ಸಮೀಪ ರಾಷ್ಟ್ರೀಯ ಹೆದ್ದಾರಿ-52 ರಲ್ಲಿ ಗುರುವಾರ ಎಥನಾಲ್ ತುಂಬಿದ ಟ್ಯಾಂಕರ್ ಸ್ಫೋಟಗೊಂಡು, ಬೆಂಕಿ ಅವಘಡ ಸಂಭವಿಸಿದೆ. ಸ್ಫೋಟದ ಪರಿಣಾಮ ಟ್ಯಾಂಕರ್ ಸಂಪೂರ್ಣವಾಗಿ ಹೊತ್ತಿ ಉರಿದಿದೆ. ಬೆಂಕಿಯ ತೀವ್ರತೆಯಿಂದಾಗಿ ಸ್ಥಳಕ್ಕೆ ಹತ್ತಿರ ಹೋಗಲು ಸಾಧ್ಯ ವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಕಂಚಿನಬಾಗಿಲು ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಲಾರಿ ಪಟ್ಟಿಯಾಗಿರುವ ಸಾಧ್ಯತೆ ಇದೆ. ಪಲ್ಟಿಯಾದ ತಕ್ಷಣ ಟ್ಯಾಂಕರ್ ಸ್ಫೋಟಿಸಿ ಬೆಂಕಿ ಹತ್ತಿ ಉರಿದಿದೆ. ಘಟನೆಯಲ್ಲಿ ಲಾರಿ ಚಾಲಕ ತುಮಕೂರಿನ ಮುರುಗೇಶ ಎಂಬುವವರಿಗೆ ಗಂಭೀರ ಗಾಯಗಳಾಗಿದ್ದು ಕ್ರಿಮ್ಸ್‌ಗೆ ದಾಖಲಿಸಲಾಗಿದೆ. ಅಗ್ನಿಶಾಮಕ ಸಿಬ್ಬಂದಿ ಹರಸಾಹಸ ಪಟ್ಟು ಬೆಂಕಿ ನಂದಿಸಿದ್ದಾರೆ. ಅಂಕೋಲಾ-ಯಲ್ಲಾಪುರ ಮಾರ್ಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ.

ಸಿದ್ದರಾಮಯ್ಯ, ಡಿಕೆಶಿ ಇಂದು ದೆಹಲಿಗೆ: ವರಿಷ್ಠರ ಭೇಟಿ ಡೌಟು

← ಮೊದಲಪುಟದಿಂದ

ಕೊನೆಗೂ ಸುರ್ಜೇವಾಲ ಭೇಟಿ: ಈ ನಡುವೆ ಕಳೆದ ನಾಲ್ಕು ದಿನಗಳಿಂದ ದೆಹಲಿಯಲ್ಲಿಯೇ ಬೀಡುಬಿಟ್ಟಿರುವ ಸಚಿವಾಕಾಂಕ್ಷಿ ಶಾಸಕರಿಗೆ ಗುರುವಾರ ಕೊನೆಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿದ್ದಾರೆ. ಭೇಟಿಯ ವೇಳೆ, ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆಯಾಗಬೇಕು. ಈ ವೇಳೆ ತಮಗೆ ಅವಕಾಶ ನೀಡಬೇಕು ಎಂದು ಬೇಡಿಕೆ ಸಲ್ಲಿಸಿದ್ದಾರೆ ಎನ್ನಲಾಗಿದೆ. ಸುರ್ಜೇವಾಲ ಅವರನ್ನು ಭೇಟಿಯಾದ ಶಾಸಕರಿಗೆ, ನಿಮ್ಮ ಮನವಿಯನ್ನು ಪಕ್ಷದ ನಾಯಕರ ಗಮನಕ್ಕೆ ತರಲಾಗುವುದು ಎನ್ನುವ ಭರವಸೆಯನ್ನು ಮಾತ್ರ ನೀಡಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಮಾತನಾಡಿರುವ ಹಿರಿಯ ಶಾಸಕ ಟಿ.ಬಿ. ಜಯಚಂದ್ರ, ವರಿಷ್ಠ ನಾಯಕರು ಸಂಸತ್ತಿನ ಅಧಿವೇಶನದ ಹಿನ್ನೆಲೆಯಲ್ಲಿ ಕಾರ್ಯದೊತ್ತಡದಲ್ಲಿದ್ದಾರೆ. ಆದ್ದರಿಂದ ನಮಗೆ ಸಮಯ ನೀಡುವುದು ಕಷ್ಟವಾಗುತ್ತಿದೆ. ಈಗ ಸಾಧ್ಯವಾಗದಿದ್ದರೆ ಮತ್ತೊಂದು ದಿನ ದೆಹಲಿಗೆ ಬರಲು ತಾವು ಸಿದ್ಧ ಎಂದು ಹೇಳಿದ್ದಾರೆ. ದೆಹಲಿಯಲ್ಲಿ ಬೀಡುಬಿಟ್ಟಿರುವ ಶಾಸಕರಾದ ಟಿ.ಬಿ.ಜಯಚಂದ್ರ, ಪಿ.ಎಂ.ಅಶೋಕ್ ಪಟ್ಟಣ್, ಕೆ.ಷಡಕ್ಷರಿ, ಜಿ.ಟಿ. ಪಾಟೀಲ್, ಬಿ.ಜಿ.ಶಾಂತನಗೌಡ, ಪುಟ್ಟರಂಗಶೆಟ್ಟಿ, ಹಂಪನಗೌಡ ಬಾದರ್ಲಿ, ಬಿ.ಶಿವಣ್ಣ, ಮಹಂತೇಶ್ ಕೌಜಲಗಿ, ಯಶವಂತ ರಾಯ ಪಾಟೀಲ್, ಪಿ.ಎಸ್.ನಾಡಗೌಡ ಸೇರಿದಂತೆ ಹಲವರು ಗುರುವಾರ ಬೆಳಗ್ಗೆ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ

ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್)
Reg No.IND-2/52RGN17338/1992-93
ನಂ.203/204, ಮೊದಲನೇ ಮಹಡಿ, 8ನೇ ಕ್ರಾಸ್, 4ನೇ ಮೈನ್, ಸಂಪಂಗಿರಾಮನಗರ, ಬೆಂಗಳೂರು-560 027 ದೂ:080-26602633
E-mail:cauveryhandlooms@gmail.com
ಸಂಖ್ಯೆ.ಕರಾಸಕೈನೇಮನಿ/ಹೊ.ಗು/ವ್ಯನಿ/ಟೆಂಡರ್/2026-27 ದಿನಾಂಕ:16.04.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್) ಬೆಂಗಳೂರು ಈ ಮಹಾಮಂಡಳಕ್ಕೆ **2026-27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಅವಶ್ಯವಿರುವ ಒಟ್ಟು 12 ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಸೇವೆ ಪಡೆಯಲು ಇ-ಟೆಂಡರ್** ಕರೆಯಲಾಗಿದೆ. ಆಸಕ್ತಿವುಳ್ಳ ಟೆಂಡರ್‌ದಾರರು ಇ-ಟೆಂಡರ್ ಪೋರ್ಟಲ್‌ನ Reference Number: KSCHWFL/2026-27/SE0009ನಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸಲು ತಿಳಿಸಲಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ಹ್ಯಾಂಡ್‌ಲೂಮ್ಸ್, ಬೆಂಗಳೂರು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ" ಬೆಳಗಾವಿ-590018, ಕರ್ನಾಟಕ, ಭಾರತ
Ref. VTU/BGM/SAP/CW1/19/T-717/2025-26/229 Dtd.15-04-2026

ಅಲ್ಪಾವಧಿ ಟೆಂಡರ್ ಪ್ರಕಟನೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ್ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. **ಕೆಲಸದ ಹೆಸರು:** Tender for Procurement of Desktop Computers, Laptops and Printers to Various Section / Centres of VTU Belagavi and UBDTCE, Davangere. ಟೆಂಡರಿಗಿಟ್ಟ ಮೊತ್ತ: **ರೂ.4,89,45,000/-** ಮುಂಗಡ ಠೇವಣಿ: **ರೂ.7,35,000/-**, ಟೆಂಡರ್ ಪ್ರಿ ಬಿಡ್ ಮಿಟಿಂಗ **ದಿನಾಂಕ. 22-04-2026** ರಂದು **11.00 ಗಂಟೆಗೆ** ಆನಲೈನ ಮೂಲಕ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 29-04-2026 ರ 2.30 ರ ವರೆಗೆ**. ಟೆಂಡರ್ ತೆರೆಯುವ **ದಿನಾಂಕ: 30-04-2026 ರ 4.00 ಗಂಟೆಗೆ**. ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.

ಸಹಿ/- ಕುಲಸಚಿವರು
ವಾ.ಸಾ.ಸಂ.ಇ./ಬೆಳಗಾವಿ/109/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ
ಜಿಲ್ಲೆ: ಶಿವಮೊಗ್ಗ. ತಾಲ್ಲೂಕು:ಹೊಸನಗರ ಇ.ಮೇಲ್: acfhnr@gmail.com
No: ACF/HNR/CAMPA& NBM/CR-1/2026-27/5 D: 16.04.2026

ಸವಿಸ್ತಾರ ಇ-ಟೆಂಡರ್ ಪ್ರಕಟಣೆ.
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ-ಟೆಂಡರ್ ಪ್ರಕಟಣೆ)

2026-27 ನೇ ಸಾಲಿನಲ್ಲಿ ಸಾಗರ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯ ವಿವಿಧ ಪ್ರದೇಶದಲ್ಲಿ ಮುಂದುವರೆದ ಕಾಮಗಾರಿಗಳ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಸಸಿಗಳ ನಿರ್ವಹಣೆ ಮಾಡಲು CAMPA ಯೋಜನೆಯಡಿ 1 ಇಂಡೆಂಟ್ (ಕಾಲ್-2) ಅಂದಾಜು ಒಟ್ಟು 5.96 ಲಕ್ಷ ರೂಗಳಿಗೆ ಹಾಗೂ NBM ಯೋಜನೆಯಡಿ 14 (ಕಾಲ್-2) ಕಾಮಗಾರಿಗಳ ಅಂದಾಜು 62.20 ಲಕ್ಷ ರೂಗಳಿಗೆ ಕಾಮಗಾರಿಗಳ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಯೂನಿಟ್‌ವಾರು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿ:23-04-2026 ಸಂಜೆ-5-20 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳು ಮತ್ತು ಸ್ಥಳಗಳ ಸಂಪೂರ್ಣ ವಿವರಗಳನ್ನು ಇ-ಪಕ್ಯೂರ್‌ಮೆಂಟ್‌ನಲ್ಲಿ ವಿವರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳ ಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/90/04/97

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ Karnataka One State, Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, 5ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560 009. ದೂರವಾಣಿ: 080-42775575, ಫ್ಯಾಕ್ಸ್: 080-42775589 ವೆಬ್‌ಸೈಟ್: www.kstdc.co
ಸಂಖ್ಯೆ: KSTDC/BIAL/OTH/01/2026-27/99 ದಿನಾಂಕ: 16.04.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಆಸಕ್ತ/ಅರ್ಹ ಸಂಸ್ಥೆಗಳಿಂದ ಈ ಕೆಳಕಂಡ ಟೆಂಡರ್ ಆಹ್ವಾನಿಸಿದೆ.

ಟೆಂಡರ್ ಸಂಖ್ಯೆ	ವಿವರಣೆ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ
KSTDC/2026-27/SE0025	Selection of agency for design, development, deployment, operation and maintenance of Yellow Board Taxi/vehicle management system (VMS) at Kempegowda International Airport, Bengaluru (KIAB)	02.05.2026 at 17.00 hrs.

ಆಸಕ್ತ/ಅರ್ಹ ಅಪ್ಲಿಕೇಷನ್ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುವ ಸಂಸ್ಥೆಗಳು ಟೆಂಡರ್ ದಾಖಲೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣ **https://kppp.karnataka.gov.in** ಗೆ ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: +9240214000/01, ಇ-ಮೇಲ್: **support@eprochelpdesk.com** ಅನ್ನು ಸಂಪರ್ಕಿಸುವುದು.

ಸಹಿ/- ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕರಾಪ್ರಅನಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ಲೆ.ಶೀ /ಟೆಂಡರು /2026-27/77
ದಿನಾಂಕ 13-04-2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025-26 ನೇ ಸಾಲಿನ ಸಿ.ಐ.ಎಮ್.ಡಿ.ಪಿ ಯೋಜನೆ ಒಟ್ಟು 03 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ-
1.RDPR/2026-27/RD/WORK_INDENT26014
2.RDPR/2026-27/RD/WORK_INDENT25848
3.RDPR/2025-26/RD/WORK_INDENT26016

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 13-04-2026 ರಿಂದ ದಿನಾಂಕ 22-04-2026 ರಂದು ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 22-04-2026 ರ 16.30** ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 23-04-2026 ರಂದು 17.30** ಗಂಟೆಗೆ ತೆರೆಯುಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯುನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/59

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆಪಿಪಿ ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ:19/2025-26
ದಿನಾಂಕ: 24.03.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-I & II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆಪಿಪಿ ಪೋರ್ಟ್‌ಲ್ ಏಕ & ದ್ವಿ ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟ್‌ಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **(https://kppp.karnataka.gov.in)** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) kppportal ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 24.04.2026ರ 16.30 ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 27.04.2026ರಂದು 4.35 ನಂತರ. (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 28.04.2026 ರಂದು 4.35 ಸಾಧ್ಯವಾದಲ್ಲಿ. (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಹಿಂದಿರುಗಿಸಲಾಗುವುದಿಲ್ಲ.**

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:26/ಕೆಎಸ್‌ಎಂಸಿಎ/2026-27

ಯೋಗೇಶ್ ಗೌಡ ಹತ್ಯೆ ಪ್ರಕರಣದ 17 ಮಂದಿ ದೋಷಿ | ನ್ಯಾಯಾಧೀಶರ ಮುಂದೆ ವಿನಯ್ ಕಣ್ಣೀರು

ವಿನಯ್ ಕುಲಕರ್ಣಿಗೆ ಇಂದು ಶಿಕ್ಷೆ ಪ್ರಮಾಣ ಪ್ರಕಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ಭಾರಿ ಸಂಚಲನ ಮೂಡಿಸಿದ್ದ ಬಿಜೆಪಿ ಮುಖಂಡ ಯೋಗೇಶ್ ಗೌಡ ಹತ್ಯೆ ಪ್ರಕರಣವು ಇದೀಗ ಅಂತಿಮ ಘಟ್ಟಕ್ಕೆ ತಲುಪಿದೆ. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ ಒಟ್ಟು 17 ಅಪರಾಧಿಗಳ ವಾದವನ್ನು ಆಲಿಸಿದ ಜನಪ್ರತಿನಿಧಿ ಗಳ ವಿಶೇಷ ನ್ಯಾಯಾಲಯವು ಶುಕ್ರವಾರಕ್ಕೆ ಶಿಕ್ಷೆಯ ಪ್ರಮಾಣ ಘೋಷಣೆ ಮಾಡುವುದಾಗಿ ಹೇಳಿದೆ.

ಗುರುವಾರ ಅಪರಾಧಿಗಳ ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು ಶುಕ್ರವಾರಕ್ಕೆ ತೀರ್ಪನ್ನು ಕಾಯ್ದಿರಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಎಲ್ಲಾ ಸಾಕ್ಷ್ಯಧಾರಗಳನ್ನು ಪರಿಶೀಲಿಸಿ ವಿನಯ್ ಕುಲಕರ್ಣಿ ಸೇರಿದಂತೆ 17 ಜನರನ್ನು ದೋಷಿಗಳು ಎಂದು ತೀರ್ಪು ನೀಡಿತ್ತು. ಗುರುವಾರ ಶಿಕ್ಷೆಯ ಪ್ರಮಾಣದ ಕುರಿತು ಸುದೀರ್ಘ ವಾದ-ಪ್ರತಿವಾದ ನಡೆಯಿತು. ನ್ಯಾಯಾಧೀಶರ ಮುಂದೆ ಪ್ರತಿಯೊಬ್ಬ ಅಪರಾಧಿಯೂ ತಮ್ಮ ವೈಯಕ್ತಿಕ ಸಮಸ್ಯೆಗಳು, ಆರೋಗ್ಯದ ಸ್ಥಿತಿ ಹಾಗೂ ಕುಟುಂಬದ ಜವಾಬ್ದಾರಿ ಯನ್ನು ವಿವರಿಸುತ್ತಾ ಶಿಕ್ಷೆ ಕಡಿಮೆ ಮಾಡುವಂತೆ ಮನವಿ ಮಾಡಿದರು.

ಇತರ ಅಪರಾಧಿಗಳು ಅಳಲು: ವಿನಯ್ ಕುಲಕರ್ಣಿ ಅವರಲ್ಲದೆ, ಉಳಿದ 16 ಅಪರಾಧಿಗಳು ತಮಗಿರುವ ಕೌಟುಂಬಿಕ ಮತ್ತು ಆರೋಗ್ಯದ ಸಮಸ್ಯೆಗಳನ್ನು ನ್ಯಾಯಾಧೀಶರ ಗಮನಕ್ಕೆ ತಂದರು. ಅಪರಾಧಿ-4 ಮತ್ತು 4 ಆಟೋ ಹಾಗೂ ಕಾರು ಚಾಲಕರಾಗಿದ್ದು, ತಮಗೆ ವಯಸ್ಸಾದ ತಂದೆ-ತಾಯಿಯರಿದ್ದಾರೆ, ಮನೆಯಲ್ಲಿ ತಾವೊಬ್ಬರೇ ದುಡಿಯುವವರಾಗಿದ್ದು, ಶಿಕ್ಷೆ ಕಠಿಣವಾದರೆ ಅವರ ಜೀವನ ಬೀದಿಗೆ ಬೀಳುತ್ತದೆ ಎಂದು ವಿನಂತಿಸಿದರು. ಅಪರಾಧಿ-5 ರಿಯಲ್ ಎಸ್ಟೇಟ್ ಉದ್ಯೋಗಿಯಾಗಿದ್ದು, ತಮ್ಮ ಪೋಷಕರು ದೀರ್ಘ ಕಾಲದ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರನ್ನು ನೋಡಿಕೊಳ್ಳಲು ಯಾರೂ ಇಲ್ಲ ಎಂದು ಹೇಳಿದರು.

ಅಪರಾಧಿ-9, 10, 11 ವಯಸ್ಸಾದ ತಾಯಿ ಮಾತ್ರ ಇದ್ದಾರೆ. ಸಣ್ಣ ಮಕ್ಕಳ ಭವಿಷ್ಯಕ್ಕಾಗಿ ಕರುಣೆ ತೋರುವಂತೆ ಮನವಿ ಮಾಡಿದರು. ಅಪರಾಧಿ-6, 12, 18 ವೃತ್ತಿಯಲ್ಲಿ ಟೈಲರ್, ಗುತ್ತಿಗೆದಾರರು ಮತ್ತು ಕೃಷಿಕರಾಗಿದ್ದು, ಇವರಿಗೆ 4 ರಿಂದ 7 ವರ್ಷದ ಚಿಕ್ಕ ಮಕ್ಕಳಿದ್ದಾರೆ. ಅಪರಾಧಿ-13 ಅವರಿಗೆ ಹೃದಯ ಶಸ್ತ್ರಚಿಕಿತ್ಸೆಯಾಗಿ ಸ್ಟಂಟ್ ಅಳವಡಿಸಲಾಗಿದೆ. ಅಪರಾಧಿ-16, ದಂಪತಿ ಇಬ್ಬರೂ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದು, ಇತ್ತೀಚೆಗೆ ತಮ್ಮ ಮೊಮ್ಮಗನನ್ನು ಕಳೆದುಕೊಂಡ ನೋವಿನಲ್ಲಿದ್ದಾರೆ ಎಂದು ಉಲ್ಲೇಖಿಸಿದರು.

ಬಸ್‌ನಲ್ಲಿ ಬೆಂಕಿ ಅವಘಡ: ವಿನಯ ಕುಲಕರ್ಣಿ ಅವರನ್ನು ಪರಪ್ಪನ ಅಗ್ರಹಾರ ಜೈಲಿಗೆ ಕರೆದುಕೊಂಡು ಹೋಗುತ್ತಿದ್ದ ಬಸ್‌ನಲ್ಲಿ ಬೆಂಕಿ ಕಾಣಿಸಿದೆ. ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ಬಳಿಕ ಸಿಬಿಐ ಅಧಿಕಾರಿಗಳು ಕುಲಕರ್ಣಿ ಮತ್ತು 17 ಅಪರಾಧಿಗಳನ್ನು ಬಿಎಂಟಿಸಿ ಬಸ್ಸಿನಲ್ಲಿ ಪರಪ್ಪನ ಅಗ್ರಹಾರಕ್ಕೆ ಕರೆದುಕೊಂಡು ಬರುತ್ತಿದ್ದರು. ಆಯಿಲ್ ಸೋರಿಕೆಯಿಂದ ಎಂಜಿನ್‌ನಲ್ಲಿ ಹೊಗೆ ಕಾಣಿಸಿಕೊಂಡು ಬೆಂಕಿ ಹೊತ್ತುಕೊಂಡಿತ್ತು.

ನನ್ನ ವಿರುದ್ಧ ಸಂಚು: ವಿನಯ್ ಕಣ್ಣೀರು

ಪ್ರಕರಣದ 15ನೇ ಆರೋಪಿಯಾಗಿರುವ ವಿನಯ್ ಕುಲಕರ್ಣಿ ಅವರು ನ್ಯಾಯಾಧೀಶರ ಮುಂದೆ ಅಕ್ಷರಶಃ ಕಣ್ಣೀರಿಟ್ಟರು. ತಮ್ಮ ಅಭಿಪ್ರಾಯ ತಿಳಿಸಿದ ವಿನಯ್ ಕುಲಕರ್ಣಿ, ನಾನು ಕಳೆದ 27 ವರ್ಷಗಳಿಂದ ಸಕ್ರಿಯವಾಗಿ ಸಾರ್ವಜನಿಕ ಜೀವನದಲ್ಲಿದ್ದೇನೆ. ರಾಜಕೀಯದಲ್ಲಿ ಜನಸೇವೆಯನ್ನು ಮಾಡುತ್ತಾ ಬಂದಿದ್ದೇನೆ ಹೊರತು, ಈವರೆಗೆ ಯಾರಿಗೂ ನೋವು ನೀಡಿಲ್ಲ. ನನಗೆ ಮದುವೆ ವಯಸ್ಸಿಗೆ ಬಂದಿರುವ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅವರ ಭವಿಷ್ಯದ ಜವಾಬ್ದಾರಿ ನನ್ನ ಮೇಲಿದೆ. ನಾನೊಬ್ಬ ಕೃಷಿಕನಾಗಿದ್ದು, ಸುಮಾರು ಮೂರೂವರೆ ಸಾವಿರ ಹಸುಗಳನ್ನು ಸಾಕುತ್ತಿದ್ದೇನೆ. ಹೈನುಗಾರಿಕೆ ಮತ್ತು ಕೃಷಿಯನ್ನು ನೆಚ್ಚಿಕೊಂಡಿರುವ ನನ್ನನ್ನು ನಂಬಿ ನೂರಾರು ಕುಟುಂಬಗಳು ಬದುಕುತ್ತಿವೆ. ಇದು ರಾಜಕೀಯ ಪ್ರೇರಿತ ಸಂಚು. ರಾಜಕೀಯ ದ್ವೇಷದ ಕಾರಣದಿಂದಲೇ ನನ್ನ ಮೇಲೆ ಇಂತಹ ಗಂಭೀರ ಆರೋಪಗಳನ್ನು ಹೊರಿಸಲಾಗಿದೆ ಎಂದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ಎಸ್.ಬಿ.ಸಿ ಪಾ&ಪೋ ವಿಭಾಗ, ಭಿಮರಾಯನಗುಡಿ-585287 ತಾ: ಶಹಾಪೂರಜಿ: ಯದಗಿರಿ. email:kbjnleesbc@gmail.com
ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎನ್.ಡಿ/ಯೋಶಾ/2026-27/21 ದಿನಾಂಕ:10.04.2026

ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಿವಿಲ್ ಒಂದನೇದರ್ಜೆ ಹಾಗೂ ಮೇಲ್ಪಟ್ಟಗುತ್ತಿಗೆದಾರರಿಂದ "Survey, Investigation, Design, Supply, Erection, Testing and Commissioning of required Number of Vertical Turbine Pumps coupled to HT Motor for providing Irrigation facility to Suffering atchkat 2847 Ha. of Lateral No.27 to 32 of Dy.No.6 of Shahapur Branch Canal from Karnal Nala under Karnal LIS in Shorapur Taluk Yadagir District Viz., Construction of Diversion Weir, Intake Fore-bay, Jackwell Cum Pump House, Manifold along With Electrical Panel, Soft Starter, Capacitor, 11 KV Power Transformers, HT Bus Bar / Cabling, 11/6.6 KV Sub-Station, Power Line and 11 KV Terminal Bay, MS Rising Main, Valves and Construction of Delivery Chamber, ERM to Lateral 27 & 31 of Dy.No.6 (selected reach) Supply of Spare, Accessories and Tools Including Operation & Maintenance of the entire System for five years from the date of successful Commissioning of Karnal Lift Irrigation Scheme on Turnkey Basis".(Work indent no:KBJNL/2025-26/ LI/ WORK_INDENT2778)"ಎಂಬ ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ತಿಳಿಸಿರುವಂತೆ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪೋರ್ಟಲ್‌ಮೂಲಕ ಅಹ್ವಾನಿಸಲಾಗಿದೆ.

1) **ಲಕೋಟೆ ಪದ್ಧತಿ:** ದ್ವಿ-ಲಕೋಟೆ 2) **ಕಾಮಗಾರಿ ಅಂದಾಜು ಪತ್ರಿಕೆಯ ಸಂಖ್ಯೆ:** KBJNL/2025-26/LI/WORK_INDENT2775)" 3)**ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ:** 14.04.2026 ರಿಂದ 12.05.2026 ಸಂಜೆ 5.00 ಗಂಟೆಯವರೆಗೆ 4) **ಟೆಂಡರ್ ಕುರಿತು ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 22.04.2026 ರಂದು ಸಂಜೆ 5.30 ಗಂಟೆಯವರೆಗೆ 5) **ಪ್ರೀ-ಬಿಡ್ ಸಭೆ ಜರುಗುವ ದಿನಾಂಕ:** 23.04.2026 ರಂದು ಬೆಳಗ್ಗೆ 11.30 ಗಂಟೆಗೆ 6) **ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:** 12.05.2026 ರಂದು ಸಂಜೆ 5.00 ಗಂಟೆಯವರೆಗೆ 7) **ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:** 14.05.2026ರಂದು ಬೆಳಗ್ಗೆ 11.00ಗಂಟೆಗೆ 8) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 18.05.2026 ರಂದು ಬೆಳಗ್ಗೆ 11.30ಗಂಟೆಗೆ (ತಾತ್ಕಾಲಿಕ)

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ&ಪೋ,ವಿಭಾಗ
ಭಿಮರಾಯನಗಯಡಿ
ವಾ.ಸಾ.ಸಂ.ಇ/ಯಾದಗಿರ/28/ಕೆ.ಎಸ್.ಎಂ.ಸಿ.&ಎ/2026-27

ಮಹಿಳಾ ಮೀಸಲಿಗೆ ಅಪಸ್ವರ: ಕಾಂಗ್ರೆಸ್ ಭವಿಷ್ಯ ಗಂಭೀರ

ಬೆಂಗಳೂರು: ಮಹಿಳಾ ಮೀಸಲು ಮಸೂದೆಗಾಗಿ ಸಂಸತ್ತಿನ ವಿಶೇಷ ಅಧಿವೇಶನ ನಡೆಯುತ್ತಿದ್ದು, ಮಹಿಳೆಯರಿಗೂ ಕಾನೂನು ರಚನೆಗೆ ಸಮಾನ ಅವಕಾಶ ಸಿಗಲಿದೆ. ಇದಕ್ಕೆ ವಿರೋಧಪಕ್ಷ ಕಾಂಗ್ರೆಸ್ ಬೆಂಬಲ ನೀಡಲಿದೆ ಎಂಬ ವಿಶ್ವಾಸವಿದೆ ಎಂದು ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಹೇಳಿದರು.

ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ಡಾ.ಅಂಬೇಡ್ಕರ್ ದೇಶದಲ್ಲಿ ಸರ್ವರಿಗೂ ಸಮಾನ ಹಕ್ಕು ಇರಬೇಕು ಎಂದು ಬಯಸಿದ್ದರು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದೂ ಹೇಳಿದ್ದರು.ಪ್ರಧಾನಿ ಮೋದಿ ಅವರು ಬಾಬಾ ಸಾಹೇಬರ ಚಿಂತನೆಗೆ ಶಕ್ತಿ ಕೊಟ್ಟಿದ್ದಾರೆ. ಈ ಹಿಂದೆ ಮಹಿಳೆಯರಿಗೆ ಅವ ಕಾಶ, ಅಧಿಕಾರ ಮತ್ತು ಸಮಾನ ಹಕ್ಕು ಕೊಡುವಲ್ಲಿ ಬಾಯಿ ಮಾತಿನ ಭಾಷಣ ಇತ್ತೇ ಹೊರತು ಹೃದಯವಂತಿಕೆ ಇರ ಲಿಲ್ಲ. ಆದರೆ ಇಂದು ನಾರಿ ಶಕ್ತಿ ಹೆಸರಿ ನಲ್ಲಿ ಪ್ರಧಾನಿಯವರು ಸಂಸತ್ತಿನ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸುತ್ತಿದ್ದಾರೆ. ಇನ್ನು ಮುಂದೆ ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯ ಅವಕಾಶಗಳ ದೊರೆಯಲಿವೆ. ಹಿಂದೂ ಕೋಡ್ ಬಿಲ್ ತರುವ ಮೊದಲು ಹೆಣ್ಣು ಮಕ್ಕಳಿಗೆ ಮತದಾನದ ಅವಕಾಶವೂ ಇರಲಿಲ್ಲ. ಬಾಬಾ ಸಾಹೇಬರು ಅವರ ಶಕ್ತಿ, ಯೋಚನೆ ಹಾಗೂ ಚಿಂತನೆ ಹೆಣ್ಣು ಮಕ್ಕಳಿಗೆ ಮತದಾನದ ಅವಕಾಶ ಸಿಕ್ಕಿತು ಎಂದರು.

ಸಮಾಚಾರ ಸಣ್ಣದಲ್ಲ

ಡ್ರಗ್ಸ್ ಮಾತ್ರೆಗಳ ಮಾರಾಟ: ಬಂಧನ

ತುಮಕೂರು: ನಗರದಲ್ಲಿ ವಿವಿಧ ಕಾಲೇಜು ವಿದ್ಯಾರ್ಥಿಗಳ ವಿದ್ಯಾರ್ಥಿಗಳಿಗೆ ಅಮಲು ಬರಿಸುವ ಮಾತ್ರೆ ಮಾರಾಟ ಮಾಡುತ್ತಿದ್ದ 6 ಮಂದಿಯನ್ನು ತಿಲಕ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿ, 100 ಮಾತ್ರೆಗಳನ್ನು ವಶಪಡಿಸಿಕೊಂಡಿದ್ದಾರೆ. ಬೆಂಗಳೂರಿನ ಉಮರ್, ನಜೀರ್, ನವೀದ್, ನಗರದ ಮರಳೂರು ದಿಣ್ಣೆಯ ಶಹಬಾಜ್, ಮಹ್ಮದ್ ಗೌಸ್, ಮಹ್ಮದ್ ಇಕ್ಬಾಲ್ ಬಂಧಿತರು. 6 ಜನರು ಎರಡು ತಂಡ ಮಾಡಿಕೊಂಡು ಸದಾಶಿವ ನಗರದ ಖಾಸಗಿ ಕಾಲೇಜು ಬಳಿ ಅಮಲು ಬರಿಸುವ ಮಾತ್ರೆ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ತಿಲಕ್ ಪಾರ್ಕ್ ಠಾಣೆಯ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದು, ಪ್ರಕರಣ ದಾಖಲಾಗಿದೆ. ನಗರದ ಗುಬ್ಬಿ ಗೇಟ್ ಸಮೀಪದಲ್ಲಿ ಎಂಡಿಎಂಎ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಮರಳೂರು ದಿಣ್ಣೆಯ ನಿವಾಸಿ ಅಜೀ ಎಂಬುವವನನ್ನು ತಿಲಕ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿ, 5 ಗ್ರಾಂ ಎಂಡಿಎಂಎ ಡ್ರಗ್ಸ್ ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ನ್ಯಾಯಾಧೀಶೆ ಕಾಂತಮ್ಮ ನಿಧನ

ಮಧುಗಿರಿ: ಮಧುಗಿರಿಯ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶೆ ಎ.ಎನ್. ಕಾಂತಮ್ಮ (43) ಅವರು ಗುರುವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಮಳವಳ್ಳಿ ತಾಲೂಕಿನ ಅಂಚೆ ದೊಡ್ಡಿ ಗ್ರಾಮದವರಾದ ಕಾಂತಮ್ಮ ಅವರು, ಮಧುಗಿರಿಯಲ್ಲಿ 2025 ರ ಜೂನ್‌ನಿಂದ ನ್ಯಾಯಾಧೀಶರಾಗಿ ಕೆಲಸನಿರ್ವಹಿಸುತ್ತಿದ್ದರು. ಮಧುಗಿರಿ ಪಟ್ಟಣದ ಲೋಕೋಪಯೋಗಿ ಇಲಾಖೆ ವಸತಿ ಗೃಹದಲ್ಲಿ ವಾಸವಾಗಿದ್ದ ಅವರಿಗೆ ಗುರುವಾರ ಹೃದಯಾಘಾತವಾಗಿದೆ. ಮಧುಗಿರಿ ತಾಲೂಕಿನ ವಕೀಲರು ಹಾಗೂ ನ್ಯಾಯಾಲಯದ ಸಿಬ್ಬಂದಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಹಾವು ಕಚ್ಚಿ ಎರಡೂವರೆ ವರ್ಷದ ಮಗು ಸಾವು

ಶಿವಮೊಗ್ಗ: ಮನೆಯ ಮುಂದೆ ಆಟವಾಡುತ್ತಿದ್ದ ವೇಳೆ ಹಾವು ಕಚ್ಚಿ ಎರಡೂವರೆ ವರ್ಷದ ಮಗು ಮೃತಪಟ್ಟಿರುವ ಘಟನೆ ಸಾಗರದ ಎಸ್.ಎನ್. ನಗರದಲ್ಲಿ ನಡೆದಿದೆ. ಗಣೇಶ್ ಎಂಬುವವರ ಪುತ್ರ ಭವಿನ್ ಮೃತ ಬಾಲಕ. ಮನೆಯ ಅಂಗಳದಲ್ಲಿ ಆಟವಾಡುತ್ತಿದ್ದ ಬಾಲಕನ ಕೈಗೆ ನಾಗರಹಾವು ಕಚ್ಚಿದೆ. ತಕ್ಷಣವೇ ಮಗುವನ್ನು ಸಾಗರದ ಉಪವಿಭಾಗೀಯ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಮಗು ಕೊನೆಯುಸಿರೆಳೆದಿದೆ.

ಡಿಸಿ ಖಾತೆಗಳಲ್ಲಿರುವ 419.50 ಕೋಟಿ ರು.ಗಳನ್ನು ಕುಡಿಯುವ ನೀರಿಗಾಗಿ ಬಳಸಲು ಸಿಎಂ ಸಿದ್ದರಾಮಯ್ಯ ಸೂಚನೆ

ಕುಡಿವ ನೀರಿಗೆ ತೊಂದರೆಯಾದರೆ ಡಿಸಿಗಳೇ ಹೊಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ಬಾರಿ ರಾಜ್ಯದಲ್ಲಿ ಬಿಸಿಲಿನ ಬೇಗೆ ಹೆಚ್ಚಾಗುವುದರೊಂದಿಗೆ, ಐದು ಜಿಲ್ಲೆಗಳನ್ನು ಹೊರತುಪಡಿಸಿ ಇನ್ನುಳಿದೆಡೆ ಮಳೆ ಕೊರತೆಯಾಗಲಿದೆ ಎನ್ನುವ ಆತಂಕವನ್ನು ಹವಾಮಾನ ಇಲಾಖೆ ವ್ಯಕ್ತಪಡಿಸಿದೆ. ಈ ಹಿನ್ನೆಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಧಾನಸೌಧ ಸಭಾಂಗಣದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತಾಗಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ಜರುಗಿತು.

ಸಭೆಯಲ್ಲಿ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ ಸಿಎಂ ಸಿದ್ದರಾಮಯ್ಯ ಅವರು, ರಾಜ್ಯದ ಐದು ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗರೂಕತಾ ಕ್ರಮ ಕೈಗೊಳ್ಳಬೇಕು ಎಂದರು.

ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಜಿಲ್ಲಾಧಿಕಾರಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು. ಈ ಬಾರಿ ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡು ಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು. ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಸೂಚನೆಗಳನ್ನು ನೀಡಬೇಕು ಎಂದರು.

ಕುಡಿಯುವ ನೀರಿನ ವಿಚಾರ ಸಂಬಂಧ ಸಿಎಂ ಸಿದ್ದರಾಮಯ್ಯ ಅವರು ವಿಧಾನಸೌಧದಲ್ಲಿ ಗುರುವಾರ ಎಲ್ಲ ಜಿಲ್ಲೆಯ ಜಿಲ್ಲಾಧಿಕಾರಿಗಳ ಜತೆ ಸಭೆ ನಡೆಸಿದರು.

ಕುಡಿಯುವ ನೀರಿಗೆ ಅನುದಾನದ ಕೊರತೆಯಿಲ್ಲ: ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ, ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಟ್ಯಾಂಕರ್‌ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಇದರ ಮೂಲಕ 515ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು.

ಕಲಬುರಗಿ ಜಿಲ್ಲೆಯ 147 ಗ್ರಾಮ ಪಂಚಾಯತ್, ಬಾಗಲಕೋಟೆ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯ 130, ತುಮಕೂರಿನ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

22 ಕೊಳವೆ ಬಾವಿಗಳು ಬಾಡಿಗೆಗೆ: ಪ್ರಸ್ತುತ 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಒಟ್ಟು 145 ವಾರ್ಡ್‌ಗಳಿಗೆ 57 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದ್ದು, ಬಾಡಿಗೆಗೆ 22 ಕೊಳವೆ ಬಾವಿಗಳನ್ನು ಪಡೆಯಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಟ್ಯಾಂಕರ್ ನೀರು ಪೂರೈಕೆ ಮಾಡಬೇಕು. ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯುವುದಕ್ಕೆ ಆದ್ಯತೆ ನೀಡಬೇಕು. ಅಗತ್ಯ ಸಂದರ್ಭದಲ್ಲಿ ಕೊಳವೆ ಬಾವಿ ಕೊರೆಯಬಹುದಾಗಿದೆ ಎಂದು ಸೂಚಿಸಿದ್ದಾರೆ.

ರಸಗೊಬ್ಬರ ಲಭ್ಯತೆ ಖಾತ್ರಿಪಡಿಸಿ: ಮಧ್ಯಪ್ರಾಚ್ಯದಲ್ಲಿನ ಯುದ್ಧದ ಪರಿಸ್ಥಿತಿಯಿಂದಾಗಿ ಈ ಬಾರಿ ರಸಗೊಬ್ಬರ ಪೂರೈಕೆಯಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ವ್ಯಾಪಾರಿಗಳು ರಸಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ದಾಸ್ತಾನು ಇರಿಸುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ರೈತರಿಗೆ ಸೂಕ್ತ ಸಮಯದಲ್ಲಿ ರಸಗೊಬ್ಬರ ಲಭ್ಯತೆಯನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಬೇಕು. ಯೂರಿಯಾ, ಡಿಎಪಿ ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಬೇರೆ ರಾಜ್ಯಗಳಿಗೆ ರಸ ಗೊಬ್ಬರ ಸಾಗಾಟ ಮಾಡುವುದನ್ನು ನಿಯಂತ್ರಿಸಬೇಕು. ಇದಕ್ಕಾಗಿ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಯನ್ನು ಬಿಗಿಗೊಳಿಸಬೇಕು. ಕಳೆದ ಎರಡು ವರ್ಷಗಳಲ್ಲಿ ಉತ್ತಮ ಮಳೆಯಾಗಿರುವುದರಿಂದ ಮೇವಿನ ಕೊರತೆ ಸದ್ಯಕ್ಕೆ ಇರುವುದಿಲ್ಲ. ಆದರೆ ಈ ಕುರಿತು ನಿರ್ಲಕ್ಷ್ಯ ವಹಿಸದೆ ಮೇವಿನ ಲಭ್ಯತೆಯನ್ನು ಖಾತ್ರಿಪಡಿಸಬೇಕು ಎಂದರು.

ಸಿಎಂ ನಿರ್ದೇಶನಗಳೇನು?

- ರಾಜ್ಯದ ಐದು ಜಿಲ್ಲೆ ಬಿಟ್ಟು ಇನ್ನುಳಿದೆಡೆ ಮುಂಗಾರು ಕೊರತೆ
- ಗ್ರಾಮೀಣ, ನಗರದ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆ ಆಗದಂತೆ ಕ್ರಮ
- ಕುಡಿಯುವ ನೀರಿನ ಸಮಸ್ಯೆಯಾದರೆ ಅಧಿಕಾರಿಗಳೇ ನೇರ ಹೊಣೆ
- ಬಿಸಿಗಾಳಿ ಬೀಸುವ ಜಿಲ್ಲೆಗಳಲ್ಲಿ ಅಗತ್ಯ ಮುಂಜಾಗ್ರತ ಕ್ರಮಕ್ಕೆ ಸೂಚನೆ

321.93 ಟಿಎಂಸಿ ನೀರು ಲಭ್ಯ

ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ 321.93 ಟಿ.ಎಂ.ಸಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ.36ರಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿ.ಎಂ.ಸಿ ನೀರು ಲಭ್ಯವಿತ್ತು. ಪ್ರಸುತ ಕುಡಿಯುವ ನೀರಿಗೆ ಸಾಕಷ್ಟು ನೀರು ಜಲಾಶಯಗಳಲ್ಲಿ ಲಭ್ಯವಿದೆ. ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆಯನ್ನು ಖಾತ್ರಿಪಡಿಸಿ ಮಳೆಗಾಲ ವಿಳಂಬವಾಗಿ ಆರಂಭವಾಗುವ ಸಾಧ್ಯತೆಯಿರುವುದರಿಂದ ಜುಲೈ ಮಧ್ಯದವರೆಗೂ ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆಯನ್ನು ಖಾತ್ರಿಪಡಿಸಬೇಕು. ನೀರಾವರಿಗಿಂತ ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಜಲಾಶಯಗಳಲ್ಲಿ ನೀರಿನ ಸೋರಿಕೆಯನ್ನು ಗುರುತಿಸಿ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರು ಸೂಚನೆ ನೀಡಿದರು.

ಡಿಸಿಎಂ ಆಗಲಿ, ಜಮೀರ್ ಅಥವಾ ನಾನಾಗಲಿ ಎಲ್ಲರಿಗೂ ಒಂದೇ ನ್ಯಾಯ

ಪಕ್ಷ ವಿರೋಧಿಗಳ ವಿರುದ್ಧ ಕ್ರಮ ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಕ್ಷದ ವಿರುದ್ಧ ಯಾರೇ ಕೆಲಸ ಮಾಡಿದರೂ ಅವರ ವಿರುದ್ಧ ಕ್ರಮಗಳು ಅನಿವಾರ್ಯ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಪ್ರತಿಪಾದಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ಮುಖ್ಯಮಂತ್ರಿಯಾಗಿರಲಿ, ಉಪಮುಖ್ಯಮಂತ್ರಿಯಾಗಿರಲಿ, ಜಮೀರ್ ಆಗಿರಲಿ ಅಥವಾ ನಾನೇ ಆಗಿರಲಿ ಪಕ್ಷಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಕ್ರಮಗಳು ಅನಿವಾರ್ಯ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ತಾವು ಕೂಡ ಕೆಲಸ ಮಾಡಿದ್ದು, ಅಲ್ಪಸಂಖ್ಯಾತರ ಪ್ರದೇಶಗಳಲ್ಲಿ ಕೆಲಸ ಮಾಡಿಲ್ಲ. ನನಗೆ ವಹಿಸಿದ್ದ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲಸ ಮಾಡಿದ್ದೇನೆ. ಇಲ್ಲಿ ಅಲ್ಪಸಂಖ್ಯಾತರ ನಾಯಕರ ನಡುವೆ ಗೊಂದಲ ಬಂದಿದೆ. ಅದನ್ನು ಬಗೆಹರಿಸಬೇಕೆ ಹೊರತು, ಬೇರೆ ರೀತಿಯ ವ್ಯಾಖ್ಯಾನ ಬೇಕಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರನ್ನೇ ಗುರಿ ಮಾಡಲಾಗಿದೆ ಎಂಬುದು ಸರಿಯಲ್ಲ. ಪಕ್ಷಕ್ಕೆ ತೊಂದರೆಯಾಗುವಂತಹ ಕೆಲಸವನ್ನು ಯಾರೇ ಕೆಲಸ ಮಾಡಿದರೂ ಕ್ರಮಗಳು ಅನಿವಾರ್ಯ. ಡಿ.ಕೆ.ಶಿವಕುಮಾರ್ ಅವರು ಸದ್ಗುರು ಜತೆ ಧಾರ್ಮಿಕ ಕಾರ್ಯಕ್ರದಲ್ಲಿ ವೇದಿಕೆ ಹಂಚಿಕೊಂಡಿದ್ದರು. ಸದ್ಗುರು ಈ ಮೊದಲು ರಾಹುಲ್ ಗಾಂಧಿ ಯಾರು ಎಂದು ಗೊತ್ತಿಲ್ಲ ಎಂದು ಹೇಳಿಕೆ ನೀಡಿರಬಹುದು. ಡಿ.ಕೆ.ಶಿವಕುಮಾರ್ ಅವರು ಕಾರ್ಯಕ್ರಮಕ್ಕೆ ಹೋಗಿ ನಾನು ರಾಹುಲ್‌ಗಾಂಧಿ ಪಕ್ಷದವನು. ರಾಹುಲ್ ಅವರಿಂದಾಗಿ ನಾವು ಬೆಳೆದಿದ್ದೇವೆ. ನೀವು ನಮ್ಮಂಥವರನ್ನು ಕಾರ್ಯಕ್ರಮಕ್ಕೆ ಕರೆಯಬೇಕಾದರೆ, ರಾಹುಲ್ ಗಾಂಧಿಯವರ ಸಾಮರ್ಥ್ಯವೂ ಮುಖ್ಯ ಎಂದು ಪಾಠ ಮಾಡಿ ಬಂದಿದ್ದಾರೆ ಎಂದು ತಿಳಿಸಿದರು. ನಾಯಕತ್ವ ಬದಲಾವಣೆ ನಮ್ಮಂಥವರ ಹಂತದಲ್ಲಿ ಚರ್ಚೆಯಾದರೆ ಪ್ರಯೋಜನವಿಲ್ಲ. ಹೆಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿರುತ್ತೇವೆ ಎಂದರು.

ಹಿರಿಯ ಶಾಸಕರು ದೆಹಲಿಗೆ ತೆರಳಿ ಸಂಪುಟ ಪುನಾರಚನೆಗೆ ಒತ್ತಡ ಹೇರಲು ಹೋಗಿದ್ದಾರೆ, ಇದು ತಪ್ಪಲ್ಲ. ನಾನು 5 ಬಾರಿ ಶಾಸಕನಾಗಿದ್ದೇನೆ. ಸಚಿವರಾಗಲು ಎಲ್ಲ ಅರ್ಹತೆಗಳಿವೆ. ನನಗೂ ಅವಕಾಶ ಸಿಗಬೇಕು.
- ಮಾಗಡಿ ಬಾಲಕೃಷ್ಣ, ಶಾಸಕ

ಹಾರುಬೂದಿ ಕ್ಯಾಂಟರ್‌ಗೆ ಬೊಲೆರೊ ಡಿಕ್ಕಿ | ಹಾಸನ ಜಿಲ್ಲೆಯ 8 ಮಂದಿ ಸಾವು

ಮಂತ್ರಾಲಯಕ್ಕೆ ತೆರಳುತ್ತಿದ್ದವರು ಮಸಣಕ್ಕೆ

ರಾಯಚೂರು: ಮಂತ್ರಾಲಯ ರಾಘವೇಂದ್ರರ ದರ್ಶನಕ್ಕೆ ತೆರಳುತ್ತಿದ್ದ ವೇಳೆ ಆಂಧ್ರದ ಎಮ್ಮಿಗನೂರು ಬಳಿಯ ಚಿಕಲಕಡೋಣ ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಹಾಸನ ಜಿಲ್ಲೆಯ ಶೆಟ್ಟಿಗೆರೆ ಗ್ರಾಮದ ಒಂದೇ ಕುಟುಂಬ ಆರು ಮಂದಿ ದಾರುಣವಾಗಿ ಸಾವನ್ನಪ್ಪಿದ್ದಾರೆ.

ಗ್ರಾಮದ ಲೋಲಾಕ್ಷಿ, ಯಶೋಧ, (60), ಕುಮಾರ್(50), ದೀಪಿಕಾ ವೀಣಾ (42), ಪುಟ್ಟಮ್ಮ(55), ಸುನೀಲ್(40), ಬಾಲಕಿ ಬೆಳ್ಳಿ(3) ಸಾವನ್ನಪ್ಪಿದ ದುರ್ದೈವಿಗಳು. ಇವರಲ್ಲದೆ ಇನ್ನೂ ಇಬ್ಬರು ಮೃತಪಟ್ಟಿದ್ದು, ಮೃತರ ಸಂಖ್ಯೆಗೆ 8ಕ್ಕೆ ಏರಿದೆ. ದುರಂತರದಲ್ಲಿ 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ನಿನ್ನೆ ಮಧ್ಯಾಹ್ನ ಶೆಟ್ಟಿಗೆರೆ ಗ್ರಾಮದಿಂದ ಅಶೋಕ ಲೈಲಾಂಡ್ ಗೂಡ್ಸ್ ವಾಹನದಲ್ಲಿ ಮನೆಗೆ ಬೀಗ ಹಾಕಿಕೊಂಡು ಮೂರು ಕುಟುಂಬಗಳ ಸದಸ್ಯರು ದೇವಾಲಯಕ್ಕೆ ತೆರಳಿದ್ದರು. ಆದರೆ ದೇವರ ದರ್ಶನಕ್ಕೂ ಮುನ್ನವೇ ಸಂಭವಿಸಿದ ಭೀಕರ ಅಪಘಾತದಲ್ಲಿ ಅಷ್ಟೂ ಮಂದಿ ಜೀವ ಕಳೆದು ಕೊಂಡಿರುವುದರಿಂದ ಗ್ರಾಮದಲ್ಲಿ ನೀರವ ಮೌನ ಮನೆ ಮಾಡಿದೆ. ಮಂತ್ರಾಲ ಯಕ್ಕೆ ಹೋಗುತ್ತಿದ್ದ ಬುಲೆರೋ ವಾಹನಕ್ಕೆ ಬೀದರ್‌ನಿಂದ ತುಮಕೂರಿಗೆ ಹೋಗುತ್ತಿದ್ದ ಹಾರುಬೂದಿ ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ 8 ಜನ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕ್ಯಾಂಟರ್ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ಹಾಸನ ಜಿಲ್ಲೆಯಿಂದ ವಾಹನದಲ್ಲಿ ಸುಮಾರು 20 ಮಂದಿ ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ. ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿ ಗಾಯಾಳುಗಳ ಸ್ಥಿತಿಯ ಬಗ್ಗೆ ವಿಚಾರಿಸಿದರು.

ಎನ್‌ಎಚ್ 167ರಲ್ಲಿ ಬೆಳಗಿನ ಜಾವ 3-4 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದ್ದು, ಚಾಲಕ ನಿದ್ರೆಯಲ್ಲಿದ್ದಾಗ ತಪ್ಪು ದಿಕ್ಕಿನಲ್ಲಿ ಚಾಲನೆ ಮಾಡಿದ್ದರಿಂದ ಅಪಘಾತ ಸಂಭವಿಸಿದೆ. ಎಂಟು ಭಕ್ತರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಗೊಂಡವರನ್ನು ಕರ್ನೂಲ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.
-ಎನ್.ಭಾರ್ಗವಿ, ಯಮ್ಮಿಗನೂರು ಉಪ ಪೊಲೀಸ್ ವರಿಷ್ಠಾಧಿಕಾರಿ

ದಿನ ವಿಶೇಷ

17 ಏಪ್ರಿಲ್ 2026 ಶುಕ್ರವಾರ

» ಸೂರ್ಯೋದಯ	: 6-08
» ಸೂರ್ಯಾಸ್ತ	: 6-46
» ತಿಥಿ	: ಅಮವಾಸ್ಯೆ
» ನಕ್ಷತ್ರ	: ರೇವತಿ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಕೃಷ್ಣಪಕ್ಷ

ಧರ್ಮಶ್ರೀ 65 ವಿಶಿಷ್ಟ ಕಾರ್ಯಕ್ರಮ ನಾಳೆ

ಬೆಂಗಳೂರು: ಸರಸ್ವತಿಸಮ್ಮಾನ್ ಪುರಸ್ಕೃತ ಸಾಹಿತಿ ದಿ.ಡಾ.ಎಸ್.ಎಲ್ ಭೈರಪ್ಪನವರ ಧರ್ಮಶ್ರೀ ಕಾದಂಬರಿಗೆ 65 ವರ್ಷ ತುಂಬುತ್ತಿರುವ ಹಿನ್ನಲೆಯಲ್ಲಿ ಬೆಂಗಳೂರಿನಲ್ಲಿ 'ಧರ್ಮಶ್ರೀ 65' ಎಸ್.ಎಲ್. ಭೈರಪ್ಪ ಸಾಹಿತ್ಯ ಸಂಸ್ಮರಣೆ ಕಾರ್ಯಕ್ರಮವನ್ನು ಎಸ್.ಎಲ್.ಭೈರಪ್ಪ ಪ್ರತಿಷ್ಠಾನದ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ವೇಳೆ ಧರ್ಮಶ್ರೀ ಕಾದಂಬರಿ ಹಾಗೂ ಭೈರಪ್ಪನವರ ಸಾಹಿತ್ಯ ಸಂಸ್ಮರಣೆ ಮಾಡಲಾಗುತ್ತಿದೆ. ಶನಿವಾರ ಸಂಜೆ 5 ಗಂಟೆಗೆ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಧರ್ಮಶ್ರೀ ಕಾದಂಬರಿಯ ಕುರಿತಾಗಿ ಜಿ.ಬಿ.ಹರೀಶ್ ಮಾತನಾಡಲಿದ್ದು, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಪ್ರಸ್ತಾವನೆ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭೈರಪ್ಪನವರ ಕಾದಂಬರಿಗಳನ್ನು ಮರಾಠಿಯಲ್ಲಿ ಅನುವಾದಿಸಿರುವ ಉಮಾ ಕುಲಕರ್ಣಿ ವಹಿಸಲಿದ್ದಾರೆ. ಈ ವೇಳೆ ಭೈರಪ್ಪ ಪ್ರತಿಷ್ಠಾನದ ಟ್ರಸ್ಟಿಗಳಾದ ತೇಜಸ್ವಿನಿ ಅನಂತಕುಮಾರ್, ಕೃಷ್ಣಪ್ರಸಾದ್, ಅರುಣ ಹಾಗೂ ಸಹನಾ ವಿಜಯಕುಮಾರ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿನಯ್ ಕುಲಕರ್ಣಿ ಕೇಸ್ ತೀರ್ಪು ನೀಡಿದ್ದ ಜಡ್ಜ್ ಸೇರಿ 114 ನ್ಯಾಯಾಧೀಶರ ವರ್ಗಾವಣೆ

ಬೆಂಗಳೂರು: ರಾಜ್ಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹತ್ವದ ಬೆಳವಣಿಗೆಯಾಗಿದ್ದು, ಸಾರ್ವಜನಿಕ ಹಿತದೃಷ್ಟಿ ಹಾಗೂ ಆಡಳಿತಾತ್ಮಕ ಕಾರಣಗಳಿಗಾಗಿ ಕರ್ನಾಟಕ ಹೈಕೋರ್ಟ್ ಒಟ್ಟು 368 ನ್ಯಾಯಾಧೀಶರನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ವಿನಯ್ ಕುಲಕರ್ಣಿ, ಪ್ರಜ್ವಲ್ ರೇವಣ್ಣ ಸೇರಿ ಹಲವು ಹೈಪ್ರೊಫೈಲ್ ಪ್ರಕರಣಗಳಲ್ಲಿ ದಿಟ್ಟ ತೀರ್ಪು ನೀಡಿದ್ದ ಸಂತೋಷ್ ಗಜಾನನ ಭಟ್ ಅವರ ವರ್ಗಾವಣೆ ರಾಜ್ಯಾದ್ಯಂತ ಚರ್ಚೆಗೆ ಕಾರಣವಾಗಿದೆ. 114 ಜಿಲ್ಲಾ ನ್ಯಾಯಾಧೀಶರು, 115 ಹಿರಿಯ ಸಿವಿಲ್ ನ್ಯಾಯಾಧೀಶರು, 139 ಸಿವಿಲ್ ನ್ಯಾಯಾಧೀಶರು ಸೇರಿದಂತೆ ಒಟ್ಟು 368 ನ್ಯಾಯಾಧೀಶರನ್ನು ವರ್ಗಾವಣೆ ಮಾಡಲಾಗಿದೆ. ಇನ್ನೂ ಈ ಎಲ್ಲಾ ವರ್ಗಾವಣೆಗಳು ಜೂನ್ 1 ರಿಂದ ಜಾರಿಗೆ ಬರಲಿವೆ. ಸಂತೋಷ್ ಗಜಾನನ ಭಟ್ ಅವರು 81ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರಾಗಿದ್ದು, ಅವರನ್ನು ಬೆಂಗಳೂರು ಮಧ್ಯಸ್ಥಿಕೆ ಕೇಂದ್ರದ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ. ಸಂತೋಷ್ ಗಜಾನನ ಭಟ್ ಅವರು ಅತ್ಯಾಚಾರ ದೌರ್ಜನ್ಯ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ಅಷ್ಟೇ ಅಲ್ಲದೆ ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ದೋಷಿ ಎಂದು ಸಂತೋಷ್ ಗಜಾನನ ಭಟ್ ಅವರು ತೀರ್ಪು ನೀಡಿದ್ದಾರೆ. ಇದೀಗ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ ಬೆಂಗಳೂರಿನ ನಿರ್ದೇಶಕರಾಗಿ ನೇಮಿಸಲಾಗಿದೆ.

ಇನ್ನು ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಆಗಿದ್ದ ಕೆ.ಎಸ್. ಭರತ್ ಕುಮಾರ್ ಅವರನ್ನು ಬೆಂಗಳೂರಿನ ಪ್ರಧಾನ ಸಿಟಿ ಸಿವಿಲ್ ನ್ಯಾಯಾಧೀಶರಾಗಿ ವರ್ಗಾಯಿಸಲಾಗಿದ್ದು, ಅವರ ಜಾಗಕ್ಕೆ ಎಂ. ಚಂದ್ರಶೇಖರ್ ರೆಡ್ಡಿ ಅವರನ್ನು ನೂತನ ರಿಜಿಸ್ಟ್ರಾರ್ ಜನರಲ್ ಆಗಿ ನೇಮಿಸಲು ಪ್ರಸ್ತಾಪಿಸಲಾಗಿದೆ. ಇದರೊಂದಿಗೆ ಹೈಕೋರ್ಟ್‌ನ ವಿಜಿಲೆನ್ಸ್, ಜ್ಯುಡಿಷಿಯಲ್ ಮುಂತಾದ ವಿಭಾಗಗಳ ರಿಜಿಸ್ಟ್ರಾರ್‌ಗಳನ್ನು ಸಹ ಬದಲಾಯಿಸಲಾಗಿದೆ.

ಸಾಕಾನೆ ಸುಗ್ರೀವನ ತುಳಿತಕ್ಕೆ ಕಾವಾಡಿಗನ ಸ್ಥಿತಿ ಗಂಭೀರ

ಹಾಸನ: ಕಾಡಾನೆ ಸೆರೆ ಕಾರ್ಯಾಚರಣೆಗೆ ದುಬಾರೆ ಸಾಕಾನೆ ಶಿಬಿರದಿಂದ ಬಂದಿದ್ದ ಸುಗ್ರೀವ ಸಾಕಾನೆ ಗುರುವಾರ ಬೆಳಗ್ಗೆ ಆಹಾರ ನೀಡುತ್ತಿದ್ದ ಕಾವಾಡಿಗನ ಮೇಲೆ ದಾಳಿ ಮಾಡಿ ದಂತದಿಂದ ತಿವಿದು ಗಂಭೀರವಾಗಿ ಗಾಯಗೊಳಿಸಿರುವ ಘಟನೆ ಹಾಸನದ ಬೇಲೂರು ತಾಲೂಕಿನ ಬಿಕ್ಕೋಡು ಗ್ರಾಮದ ಸಾಕಾನೆ ಕ್ಯಾಂಪ್‌ನಲ್ಲಿ ನಡೆದಿದೆ. ರಾಜು ಗಂಭೀರವಾಗಿ ಗಾಯಗೊಂಡ ಕಾವಾಡಿಗ. ಬುಧವಾರ ಆರು ಸಾಕಾನೆಗಳು ಕಾಡಾನೆ ಸೆರೆ ಕಾರ್ಯಾಚರಣೆಗೆ ಆಗಮಿಸಿತ್ತು. ಸಂಜೆಯವರೆಗೂ ಕಾರ್ಯಾಚರಣೆ ನಡೆಸಿ ನರಹಂತಕ ಒಂಟಿಕೋರೆ ಕಾಡಾನೆಯನ್ನು ಸೆರೆ ಹಿಡಿದಿದ್ದು, ಸುಗ್ರೀವ ಮುಂದಾಳತ್ವ ವಹಿಸಿತ್ತು. ಆದರೆ ಸಂಜೆ ವೇಳೆಗೆ ಕಾಡಾನೆ ತಪ್ಪಿಸಿಕೊಂಡು ಹೋಗಿದ್ದು, ಅದೇ ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲು ಸಿದ್ಧತೆ ನಡೆಸುತ್ತಿದ್ದ ವೇಳೆ ಕಾವಾಡಿಗ ರಾಜು ಮೇಲೆ ಅಟ್ಯಾಕ್ ಮಾಡಿದೆ. ಸದ್ಯ ಹಿಮ್ಸ್ ಆಸ್ಪತ್ರೆಯ ಐಸಿಯುನಲ್ಲಿ ರಾಜು ಚಿಕಿತ್ಸೆ ಪಡೆಯುತ್ತಿದ್ದಾರೆ. ಆಸ್ಪತ್ರೆಗೆ ಡಿಸಿಎಫ್ ಸೌರಭ್‌ಕುಮಾರ್ ಭೇಟಿ ನೀಡಿ ಗಾಯಾಳು ಆರೋಗ್ಯ ವಿಚಾರಿಸಿದ್ದಾರೆ.

ಅನಗತ್ಯವಾಗಿ ಉತ್ತರ ದಕ್ಷಿಣವನ್ನು ವಿಭಜಿಸುವ ಮೂಲಕ ರಾಜಕೀಯ ಮಾಡುತ್ತಿವೆ: ಬೊಮ್ಮಾಯಿ

ಮಹಿಳಾ ಮೀಸಲು: ಪ್ರತಿಪಕ್ಷಗಳಿಂದ ರಾಜಕೀಯ

ಬೆಂಗಳೂರು: ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಮರುವಿಂಗಡಣೆ ವಿಚಾರದಲ್ಲಿ ಪ್ರತಿಪಕ್ಷಗಳು ಅನಗತ್ಯವಾಗಿ ಉತ್ತರ ದಕ್ಷಿಣವನ್ನು ವಿಭಜಿಸುವ ಮೂಲಕ ರಾಜಕೀಯ ಮಾಡುತ್ತಿವೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.



ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಹಿಳಾ ಮೀಸಲಾತಿ ಹಾಗೂ ಡಿಲಿಮಿಟೇಷನ್ ಬಿಲ್ ಅನ್ನು ಸರ್ವಾನುಮತದಿಂದ ಪಾಸ್ ಆಗಬೇಕೆನ್ನುವ ಬಯಕೆ ಹೊಂದಿದ್ದಾರೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಅವಿಸ್ಮರಣೀಯ ಗಳಿಗೆ. ಸಂವಿಧಾನದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ಕೊಟ್ಟಿದ್ದರೂ ಅವರ ಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ನೀಡಿಲ್ಲ. ಹೀಗಾಗಿ ಮಹಿಳಾ ಮೀಸಲಾತಿ ಬಿಲ್ ಮಂಡನೆಯಾಗಿದೆ. ಈ ಬಿಲ್ ಜಾರಿಗೆ ಕಳೆದ ಮೂವತ್ತು ವರ್ಷಗಳಿಂದ ಪ್ರಯತ್ನ ನಡೆಯುತ್ತಲೇ ಇದೆ. ಈಗ ಅಂತಿಮ ಸ್ವರೂಪ ಪಡೆದುಕೊಂಡಿದೆ. ಹೀಗಾಗಿ ಇದು ನಮಗೆ ಸ್ಮರಣೀಯ ಸಮಯ. ಇದು ಸರ್ವಾನುಮತದಿಂದ ಜಾರಿಗೆ ಬರಬೇಕೆನ್ನುವುದು ನಮ್ಮ ಬಯಕೆ ಆದರೆ, ಪ್ರತಿಪಕ್ಷಗಳು ಇದರಲ್ಲಿ ರಾಜಕೀಯ ಮಾಡುತ್ತಿವೆ. ಅನಗತ್ಯವಾಗಿ ಉತ್ತರ ದಕ್ಷಿಣವನ್ನು ವಿಭಜಿಸುವ ಕೆಲಸ ಮಾಡುತ್ತಿವೆ ಎಂದು ಆರೋಪಿಸಿದರು.

ವಿಧೇಯಕದಲ್ಲಿ ಬಹಳ ಸ್ಪಷ್ಟವಾಗಿದೆ ಈಗಿರುವ ಲೋಕಸಭಾ ಕ್ಷೇತ್ರಗಳ ಶೇ.50 ರಷ್ಟು ಅನುಪಾದಲ್ಲಿ ಹೆಚ್ಚಳ ಆಗುತ್ತದೆ. ಈಗ ಆಯಾ ರಾಜ್ಯಗಳಲ್ಲಿ ಇರುವ ಕ್ಷೇತ್ರಗಳ ಶೇ.50 ಸ್ಥಾನಗಳು ಹೆಚ್ಚಾಗಲಿವೆ. ಆದ್ದರಿಂದ ಲೋಕಸಭಾ ಸ್ಥಾನಗಳಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. 2011 ರ ಜನಗಣತಿ ಪರಿಗಣಿಸುತ್ತಿರುವುದು ಪ್ರತಿಯೊಂದು ರಾಜ್ಯವೂ ಅವರದೇ ಆದ ಜನಸಂಖ್ಯೆ ಹೊಂದಿವೆ. ಪ್ರತಿ ಲೋಕಸಭಾ ಕ್ಷೇತ್ರದಲ್ಲಿ ಎಷ್ಟು ಜನಸಂಖ್ಯೆಗೆ ಒಂದು ಕ್ಷೇತ್ರ ಇರಬೇಕು ಎನ್ನುವುದು ಪ್ರತಿಯೊಂದು ರಾಜ್ಯದ ಮೇಲೆ ನಿರ್ಧಾರವಾಗುತ್ತದೆ. ಅದಕ್ಕೆ 2011 ರ ಜನಗಣತಿ ಪರಿಗಣಿಸಲಾಗುತ್ತಿದೆ. ಇದು ಬಹಳ ಸ್ಪಷ್ಟವಾಗಿದೆ. ಇದು ಬಿಲ್ ನಲ್ಲಿ ಮುದ್ರಿತವಾಗಿಲ್ಲ ಎನ್ನುವುದು ಪ್ರತಿಪಕ್ಷಗಳ ವಾದ, ಅದನ್ನು ಬಿಲ್ ನಲ್ಲಿ ಮುದ್ರಿಸುವುದಿಲ್ಲ, ಡಿಲಿಮಿಟೇಷನ್ ಕಮಿಷನ್ ರಚನೆ ಮಾಡಿದ ಮೇಲೆ ಅದೆಲ್ಲವನ್ನು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನಿರ್ಧರಿಸಲಾಗುತ್ತದೆ. 2008ರಲ್ಲಿ ಡಿಲಿಮಿಟೇಷನ್ ಮಾಡಿದಾಗ 543 ಸೀಟುಗಳಿಗೆ ಸೀಮಿತವಾಗಿಟ್ಟುಕೊಂಡು ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಿದ್ದಾರೆ. ಅದು ಡಿಲಿಮಿಟೇಷನ್ ಸಮಿತಿಯಲ್ಲಿ ನಿರ್ಧರಿಸಲಾಗಿತ್ತು. ಮಸೂದೆಯಲ್ಲಿ ಅಲ್ಲ. ಪ್ರತಿಪಕ್ಷಗಳು ಅನಗತ್ಯವಾಗಿ ಸುಳ್ಳು ಹೇಳುವ ಮೂಲಕ ರಾಜಕಾರಣ ಮಾಡುತ್ತಿವೆ ಎಂದರು.

ಬದಲಾವಣೆ ನಿರಂತರ: ವಿಧೇಯಕ ಮಂಡನೆಗೂ ಮುನ್ನ ಎಲ್ಲರೊಂದಿಗೆ ಚರ್ಚೆ ಮಾಡಲಾಗಿದೆ. ಮುಂದಿನ ಜನಗಣತಿ ನಂತರ ಆಗುವ ಅಪಾಯಗಳನ್ನು ಅರಿತು ಈಗ ಈ ಬಿಲ್ ಮಂಡನೆ ಮಾಡಲಾಗಿದೆ. ಇಡೀ ದೇಶದಲ್ಲಿ 543 ಸ್ಥಾನಗಳಲ್ಲಿ ಒಬಿಸಿ ಮೀಸಲಾತಿ ಇಲ್ಲ. ವಿಧಾನಸಭೆಗಳಲ್ಲಿಯೂ ಇಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ಮೊದಲು ಮಹಿಳಾ ಮೀಸಲಾತಿ ದೊರೆಯಲಿ ಆ ಮೇಲೆ ಯಾರಿಗೆ ಎಷ್ಟು ಸ್ಥಾನ ಕೊಡಬೇಕು ಎಂದು ತೀರ್ಮಾನ ಮಾಡಲಿ, ಬದಲಾವಣೆ ನಿರಂತರವಾಗಿ ನಡೆಯುತ್ತದೆ. ಆ ನೆಪದಲ್ಲೇ 30 ವರ್ಷದಿಂದ ಮುಂದೂಡಲಾಗಿದೆ. ಈಗ ಮತ್ತೆ ಮೂವತ್ತು ವರ್ಷ ಮುಂದೂಡುವುದು ಬೇಡ ಎಂದು ಪ್ರಧಾನಮಂತ್ರಿ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಯಾವ ಪ್ರಮಾಣದಲ್ಲಿ ಕ್ಷೇತ್ರಗಳು ಹೆಚ್ಚಳ ಆಗಬೇಕು ಎನ್ನುವುದು ಬಿಲ್ ನಲ್ಲಿ ನಮೂದಿಸಿರುವುದಿಲ್ಲ. ಡಿಲಿಮಿಟೇಷನ್ ಸಮಿತಿ ಅದನ್ನು ನಿರ್ಧರಿಸುತ್ತದೆ ಎಂದರು.

ತಮಿಳುನಾಡು ಸಿಎಂ ಕೆಟ್ಟ ರಾಜಕಾರಣ

ತಮಿಳುನಾಡು ಮುಖ್ಯಮಂತ್ರಿ ಒಂದು ಹೆಜ್ಜೆ ಮುಂದೆ ಹೋಗಿ ಕಪ್ಪು ಬಟ್ಟೆ ತೋರಿಸುವ ಮೂಲಕ ಕೆಟ್ಟ ರಾಜಕಾರಣಕ್ಕೆ ಮುನ್ನುಡಿ ಇಟ್ಟಿದ್ದಾರೆ. ಡಿಎಂಕೆಯವರು ಚುನಾವಣೆ ದೃಷ್ಟಿಯಿಂದ ಪ್ರಾದೇಶಿಕ ಭಾವನೆಗಳನ್ನು ಕೆರಳಿಸುವ ಕೆಲಸ ಮಾಡುವುದು ಸರಿಯಲ್ಲ. ಜನಗಣತಿ ಮುಗಿದ ಮೇಲೆ ಡಿಲಿಮಿಟೇಷನ್ ಮಾಡಿದರೆ ದಕ್ಷಿಣಕ್ಕೆ ಅನ್ಯಾಯವಾಗುತ್ತದೆ. ಅದಕ್ಕೆ ಪ್ರತಿಪಕ್ಷಗಳೇ ಕಾರಣವಾಗಲಿವೆ. ಮುಂದಾಗುವ ಪರಿಣಾಮ ಅರಿತು ಈಗ ತೀರ್ಮಾನ ಮಾಡಬೇಕು ಎಂದು ಹೇಳಿದರು. ಮಹಿಳಾ ಮೀಸಲಾತಿ ವಿಧೇಯಕ ಈಗಾಗಲೇ ಎರಡೂ ಸದನಗಳಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ಅದನ್ನು 2034 ರಿಂದ ಜಾರಿಗೊಳಿಸಲು ತೀರ್ಮಾನಿಸಲಾಗಿತ್ತು. ಈಗ ಅದನ್ನು 2029 ರಿಂದ ಜಾರಿಗೆ ತರಲು ಬಿಲ್ ಮಂಡನೆ ಮಾಡಲಾಗಿದೆ. ಕ್ಷೇತ್ರ ಮರುವಿಂಗಡಣೆ ಜನಸಂಖ್ಯೆ ಆಧಾರದ ಮೇಲೆ ಆಗುತ್ತಿಲ್ಲ. ಪ್ರತಿ ರಾಜ್ಯದ ಈಗಿರುವ ಸ್ಥಾನಗಳ ಶೇ 50% ರಷ್ಟು ಹೆಚ್ಚಳವಾಗುತ್ತವೆ. ಹೀಗಾಗಿ ಜನಸಂಖ್ಯೆ ಆಧಾರದಲ್ಲಿ ಡಿಲಿಮಿಟೇಷನ್ ಆಗುತ್ತಿದೆ ಎನ್ನುವುದರಲ್ಲಿ ಅರ್ಥವಿಲ್ಲ. ಉದಾಹರಣೆಗೆ ಕರ್ನಾಟಕದಲ್ಲಿ 2011 ರಲ್ಲಿ 5 ಕೋಟಿ ಜನಸಂಖ್ಯೆ ಇತ್ತು. ಆ 5 ಕೋಟಿ ಜನರನ್ನು 42 ಸ್ಥಾನಗಳಿಗೆ ಹಂಚಿಕೆ ಮಾಡಲು ಡಿಲಿಮಿಟೇಷನ್ ಮಾಡಲಾಗುತ್ತದೆ ಎಂದು ಹೇಳಿದರು.

ವಿರೋಧ ಪಕ್ಷಗಳ ನಡೆಯನ್ನು ದಾಖಲೆಗಳ ಸಮೇತ ಬಿಚ್ಚಿಟ್ಟ ಸಂಸದ

ಕ್ಷೇತ್ರ ಮರುವಿಂಗಡಣೆ ದಕ್ಷಿಣಕ್ಕೆ ಅನುಕೂಲ

ದೆಹಲಿ: ಕ್ಷೇತ್ರ ಮರು ವಿಂಗಡಣೆಯು ದಕ್ಷಿಣ ಭಾರತಕ್ಕೆ ಇದಕ್ಕಿಂತ ಉತ್ತಮ ಒಪ್ಪಂದ ಸಿಗಲು ಸಾಧ್ಯವಿಲ್ಲ ಎಂದು ಸಂಸದ ತೇಜಸ್ವಿ ಸೂರ್ಯ ಕೇಂದ್ರದ ನಡೆಯನ್ನು ಸಮರ್ಥಿಸಿಕೊಂಡಿದ್ದು, ಪ್ರತಿಪಕ್ಷಗಳು ಪ್ರತಿಭಟನೆಗಳ ಮೂಲಕ ತಪ್ಪು ಮಾಹಿತಿ ಹರಡುತ್ತಿವೆ ಎಂದು ಟೀಕಿಸಿದ್ದಾರೆ.

ಲೋಕಸಭೆಯಲ್ಲಿ ಮಹಿಳಾ ಮೀಸಲು ಮತ್ತು ಕ್ಷೇತ್ರ ಮರುವಿಂಗಡಣೆ ಬಗ್ಗೆ ಮಾತನಾಡಿದ ಅವರು, ತಮ್ಮ ಹಕ್ಕಿಗಾಗಿ ಮಹಿಳೆಯರು 40 ವರ್ಷದಿಂದ ಕಾಯುತ್ತಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರು ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ನಾರಿ ಶಕ್ತಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುತ್ತಿದೆ ಎಂದು ಶ್ಲಾಘಿಸಿದರು.

ಈ ಹಿಂದೆ ಸಮಾಜವಾದಿ ಪಕ್ಷ ಮತ್ತು ಆರ್‌ಜೆಡಿಯಂತಹ ಪಕ್ಷಗಳು ಈ ಮಸೂದೆಯನ್ನು ವಿರೋಧಿಸಿ ಹರಿದು ಹಾಕಿದ್ದವು. ಈಗಿನ ವಿರೋಧ ಪಕ್ಷಗಳು ಕ್ಷೇತ್ರ ಮರುವಿಂಗಡಣೆಯ ನೆಪವೊಡ್ಡಿ ಮಸೂದೆಯನ್ನು ವಿಳಂಬ ಮಾಡುತ್ತಿವೆ. 1971ರಿಂದ ಲೋಕಸಭಾ ಸೀಟುಗಳ ಸಂಖ್ಯೆಯನ್ನು 543ಕ್ಕೆ ಸೀಮಿತಗೊಳಿಸಲಾಗಿದ್ದ ಸಮಯದಲ್ಲಿ ದೇಶದ ಜನಸಂಖ್ಯೆ 55 ಕೋಟಿ ಇತ್ತು. ಈಗ 140 ಕೋಟಿ ದಾಟಿದೆ. ಉತ್ತಮ ಆಡಳಿತಕ್ಕಾಗಿ ಸೀಟುಗಳ ಹೆಚ್ಚಳ ಅತ್ಯಗತ್ಯ ಎಂದು ಪ್ರತಿಪಾದಿಸಿದರು. ಇದಲ್ಲದೆ, ಈ ಮಸೂದೆಗೆ ದಕ್ಷಿಣ ಭಾರತದ ರಾಜ್ಯಗಳು ವಿರೋಧಿಸುತ್ತಿವೆ. ನಾನೊಬ್ಬ ಹೆಮ್ಮೆಯ ಕನ್ನಡಿಗನಾಗಿ ಹೇಳುತ್ತಿದ್ದೇನೆ. ದಕ್ಷಿಣ ಭಾರತಕ್ಕೆ ಒಂದು ಅಂಶದಷ್ಟು ಅನ್ಯಾಯವಾಗಿದ್ದರೂ ನಾನು ಮೊದಲು ಇದನ್ನು ವಿರೋಧಿಸುತ್ತಿದ್ದೆ. ಕೇರಳ, ಕರ್ನಾಟಕಕ್ಕೆ ಇದು ಲಾಭವಾಗಲಿದೆ ಎಂದರು.

ಲೋಕಸಭಾ ಕ್ಷೇತ್ರ ಮರು ವಿಂಗಡಣೆ ಸಂಬಂಧಿಸಿದಂತೆ ದಕ್ಷಿಣ ಭಾರತದ ಜನರಲ್ಲಿ ಹೆಚ್ಚಿನ ಗೊಂದಲ ಹರಡಲಾಗುತ್ತಿದೆ. ದಕ್ಷಿಣ ಭಾರತದಲ್ಲಿ ವಿರೋಧ ಪಕ್ಷಗಳು ಪ್ರತಿಭಟನೆಗಳ ಮೂಲಕ ತಪ್ಪು ಮಾಹಿತಿ ಹರಡುತ್ತಿವೆ. ಕ್ಷೇತ್ರ ಪುನರ್‌ವಿಂಗಡಣೆ ಹಿಂಬಾಗಿಲಿನ ಪ್ರಕ್ರಿಯೆಯಲ್ಲ. ಸಂವಿಧಾನದಲ್ಲಿ ನಿಗದಿಪಡಿಸಿದ ನಿಯಮಗಳ ಆಧಾರದ ಮೇಲೆ ಇದನ್ನು ನಡೆಸಲಾಗುತ್ತಿದೆ ಎಂದರು.

ಸ್ಟಾಲಿನ್ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ: ಕ್ಷೇತ್ರ ಪುನರ್‌ವಿಂಗಡಣೆಯ ನಂತರ ಪ್ರತಿ ರಾಜ್ಯವು ಹೆಚ್ಚಾಗುವ ಸ್ಥಾನಗಳ ಸಂಖ್ಯೆಯನ್ನು ವಿವರಿಸುವ ಮೂಲಕ ತೇಜಸ್ವಿ ಸೂರ್ಯ ಸದನದಲ್ಲಿ ಎಲ್ಲಾ ರಾಜ್ಯಗಳ ಡೇಟಾ ಪ್ರಸ್ತುತಪಡಿಸಿದರು. 2011ರ ಜನಗಣತಿಯ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆಯನ್ನು ಜಾರಿಗೆ ತರಲಾಗುವುದಿಲ್ಲ. ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್ ತಪ್ಪು ಮಾಹಿತಿ ಹರಡುತ್ತಿದ್ದಾರೆ. ಕ್ಷೇತ್ರ ಪುನರ್‌ವಿಂಗಡಣೆಯ ಮೂಲಕ, ತಮಿಳುನಾಡಿನ ಸಂಸದರ ಸಂಖ್ಯೆ 39 ರಿಂದ 59ಕ್ಕೆ ಹೆಚ್ಚಾಗಬಹುದು. ಇದು ತಮಿಳುನಾಡಿನ ಪ್ರಾತಿನಿಧ್ಯ ಸಹ ಹೆಚ್ಚಿಸುತ್ತದೆ. ಇದರಿಂದ ದಕ್ಷಿಣದ ರಾಜ್ಯಗಳಿಗೆ ಯಾವುದೇ ರೀತಿಯ ಹಿನ್ನಡೆಯಾಗುವುದಿಲ್ಲ. ದಕ್ಷಿಣ ಭಾರತಕ್ಕೆ ಇದಕ್ಕಿಂತ ಉತ್ತಮ ಒಪ್ಪಂದ ಸಿಗಲು ಸಾಧ್ಯವಿಲ್ಲ. ಆದರೆ, ಜನಸಂಖ್ಯೆ ಆಧಾರಿತ ಮರು ಹಂಚಿಕೆಯು ಉತ್ತರ ಭಾರತದ ರಾಜ್ಯಗಳತ್ತ ವಾಲುವುದರಿಂದ ಒಕ್ಕೂಟ ವ್ಯವಸ್ಥೆಯ ಸಮತೋಲನ ತಪ್ಪುತ್ತದೆ ಎಂಬುದು ವಿರೋಧ ಪಕ್ಷಗಳು ವಾದಿಸುತ್ತಿರುವುದು ಸರಿಯಲ್ಲ ಎಂದರು.

ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆ ಯಾವ ಆಧಾರದ ಮೇಲೆ ನಡೆಸಬೇಕೆಂದು ನೀವು ಬಯಸುತ್ತೀರಿ? ಶ್ರೀಮಂತರಿಗೆ ಹೆಚ್ಚಿನ ಮತಗಳು ಇರುತ್ತವೆ, ಬಡವರಿಗೆ ಮತಗಳೇ ಇರುವುದಿಲ್ಲವೇ? ನಿಮ್ಮ ಈ ವಾದ ಮುಕೇಶ್ ಅಂಬಾನಿಗೆ 1 ಲಕ್ಷ ಮತಗಳಿರುತ್ತೆ, ನಮ್ಮಂಥವರಿಗೆ ಒಂದೇ ಮತ ಇರುತ್ತವೇ ಅಂತಲೇ? ಕಾಂಗ್ರೆಸ್‌ನ ತರ್ಕ ಇದೇನಾ? ಪ್ರತಿಪಕ್ಷಗಳ ಈ ಅರ್ಥಹೀನ ಚರ್ಚೆ ಸಂಪೂರ್ಣ ರಾಜಕೀಯ ಪ್ರೇರಿತ ಮತ್ತು ದೋಷಪೂರಿತ.
- ತೇಜಸ್ವಿ ಸೂರ್ಯ, ಸಂಸದ

ವಿಶ್ವವಾಣಿ

ಸಂಪಾದಕೀಯ

ಮಹಿಳಾ ಮೀಸಲು: ಮಹತ್ವದ ಹೆಜ್ಜೆ

ಭಾರತದಲ್ಲಿ ಮಹಿಳಾ ರಾಜಕೀಯ ಪ್ರತಿನಿಧಿತ್ವವನ್ನು ಹೆಚ್ಚಿಸಲು ಶಾಸನಸಭೆಗಳಲ್ಲಿ ಮೀಸಲು ಕಲ್ಪಿಸಲು ಕಾನೂನು ತಿದ್ದುಪಡಿಗೆ ಕೇಂದ್ರ ಸರಕಾರ ಮುಂದಾಗಿರುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ. ದೀರ್ಘಕಾಲದಿಂದ ಚರ್ಚೆಯಲ್ಲಿರುವ ಈ ವಿಷಯವು ಈಗ ಕಾರ್ಯರೂಪಕ್ಕೆ ಬರಲು ಸನ್ನದ್ಧವಾಗಿರುವುದು ಸ್ವಾಗತಾರ್ಹ ಬೆಳವಣಿಗೆ. ಪ್ರಸ್ತುತ ಲೋಕಸಭೆಯಲ್ಲಿ 543 ಸಂಸದರ ಪೈಕಿ ಕೇವಲ 74 ಮಹಿಳಾ ಸಂಸದರು ಇದ್ದಾರೆ. ಒಟ್ಟು ಸದಸ್ಯರಲ್ಲಿ ಇದು ಸುಮಾರು ಶೇ.13.6 ಮಾತ್ರ. ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದರೂ, ಸಂಸತ್ತಿನಲ್ಲಿ ಅವರ ಪಾಲು ಶೇ.15 ದಾಟಿಲ್ಲ. ಇನ್ನು ದೇಶದ ಎಲ್ಲ ವಿಧಾನಸಭೆಗಳ ಸರಾಸರಿ ಮಹಿಳಾ ಪ್ರತಿನಿಧಿತ್ವ ಸುಮಾರು ಶೇ.9 ಮಾತ್ರ ಇದೆ. ಕೆಲವು ರಾಜ್ಯಗಳಲ್ಲಿ ಇದು ಶೇ.10ಕ್ಕಿಂತ ಕಡಿಮೆ, ಕೆಲವೆಡೆ ಶೇ.20ರಷ್ಟು ತಲುಪಿಲ್ಲ. ದೇಶದ ಎಲ್ಲ ಸಂಸದರು ಮತ್ತು ಶಾಸಕರಲ್ಲಿ ಮಹಿಳೆಯರ ಪ್ರಮಾಣ ಸುಮಾರು ಶೇ.10 ಮಾತ್ರ ಇದೆ. ದೇಶದ ಜನಸಂಖ್ಯೆಯ ಅರ್ಧ ಭಾಗವಾದ ಮಹಿಳೆಯರಿಗೆ ಸಮಾನ ಅವಕಾಶ ದೊರೆಯುತ್ತಿಲ್ಲ ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ನೀಡುವ ಮೂಲಕ ರಾಜಕೀಯದಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿರುವ ಈ ಮಹಿಳಾ ಮೀಸಲಾತಿ ಕಾನೂನು ತಿದ್ದುಪಡಿ ಮಹತ್ವಪೂರ್ಣವಾಗಿದೆ. ಇದು ಮಹಿಳೆಯರಿಗೆ ಮಾತ್ರವಲ್ಲದೆ ಸಮಗ್ರ ಸಮಾಜದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಮಹಿಳೆಯರು ರಾಜಕೀಯ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸಿದರೆ, ಶಿಕ್ಷಣ, ಆರೋಗ್ಯ, ಮಹಿಳಾ ಭದ್ರತೆ ಮತ್ತು ಕುಟುಂಬ ಕಲ್ಯಾಣದಂತಹ ಪ್ರಮುಖ ವಿಷಯಗಳಿಗೆ ಹೆಚ್ಚಿನ ಆದ್ಯತೆ ಸಿಗುತ್ತದೆ ಎಂಬುದು ಅನೇಕ ಅಧ್ಯಯನಗಳಿಂದ ದೃಢಪಟ್ಟಿದೆ. ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳಾ ಮೀಸಲಾತಿ ಯಶಸ್ವಿಯಾಗಿ ಜಾರಿಯಾಗಿರುವುದು ಇದರ ಜೀವಂತ ಉದಾಹರಣೆಯಾಗಿದೆ. ಆದಾಗ್ಯೂ, ಕೇವಲ ಮೀಸಲಾತಿ ನೀಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಮಹಿಳೆಯರಿಗೆ ರಾಜಕೀಯ ತರಬೇತಿ, ಆರ್ಥಿಕ ಬೆಂಬಲ ಮತ್ತು ಸಾಮಾಜಿಕ ಮನೋಭಾವದಲ್ಲಿ ಬದಲಾವಣೆ ಅಗತ್ಯವಿದೆ. ಮಹಿಳಾ ಮೀಸಲು ವಿಧೇಯಕಕ್ಕೆ ಬೆಂಬಲ ಘೋಷಿಸಿರುವ ಪ್ರತಿಪಕ್ಷ ಇದರ ಜತೆಗೆ ಮಂಡನೆಯಾಗುತ್ತಿರುವ ಕ್ಷೇತ್ರ ಮರುವಿಂಗಡಣೆ ಮಸೂದೆಗೆ ಬೆಂಬಲ ನಿರಾಕರಿಸಿವೆ. ಹೆಚ್ಚುವರಿ ಕ್ಷೇತ್ರಗಳು ಲಭ್ಯವಾಗದ ಹೊರತು ಮೀಸಲು ಕಾನೂನು ಜಾರಿಯಾಗುವುದು ಕಷ್ಟ. ಈ ನಿಟ್ಟಿನಲ್ಲಿ ಆಡಳಿತ ಪಕ್ಷ ಮತ್ತು ಪ್ರತಿಪಕ್ಷ ಸಹಮತದ ನಿರ್ಧಾರಕ್ಕೆ ಬರಬೇಕಿದೆ. ಮಹಿಳಾ ಮೀಸಲು ಐತಿಹಾಸಿಕ ಅಗತ್ಯವೂ ಹೌದು.

ಸೊಂಪಾದಕೀಯ

ಆಡದ ನಾಯಕ ಅಣ್ಣಾಮಲೈ

ಹಿಂದೊಮ್ಮೆ ಭಾರತದ ಡೇವಿಸ್ ಕಪ್ ತಂಡವನ್ನು ಪ್ರಕಟಿಸುವಾಗ ಭಾರತದ ತಂಡದ ಆಡದ ನಾಯಕ ಎಂದು ಹಿರಿಯ ಆಟಗಾರರೊಬ್ಬರ ಹೆಸರನ್ನು ಪ್ರಕಟಿಸಲಾಗುತ್ತಿತ್ತು. ರಾಜಕೀಯದಲ್ಲೂ ಆಡದ ನಾಯಕರಿದ್ದಾರೆ. 'ನಾನು ಚುನಾವಣೆ ಕಣಕ್ಕಿಳಿಯಲ್ಲ' ಎಂದರೆ ಆ ನಾಯಕ ಆಟಕ್ಕಿಲ್ಲ ಎಂದೇ ಅರ್ಥ. ಮಾಜಿ ಐಪಿಎಸ್ ಅಧಿಕಾರಿ, ಅಭಿಮಾನಿಗಳ ಪಾಲಿನ ಸಿಂಗಂ ಅಣ್ಣಾಮಲೈ ಈ ಬಾರಿಯ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ. ಎಐಎಡಿಎಂಕೆ ಜತೆಗಿನ ಮೈತ್ರಿಯನ್ನು ವಿರೋಧಿಸಿರುವ ಅವರಿಗೆ ಈ ಬಾರಿ ಪಕ್ಷವೇ ಟಿಕೆಟ್ ಕೊಟ್ಟಿಲ್ಲ ಎಂಬ ಮಾತುಗಳಿವೆ. ಆದರೆ ಅಣ್ಣಾಮಲೈ, 'ನಾನೇ ಟಿಕೆಟ್ ಬೇಡ' ಎಂದಿರುವುದಾಗಿ ಸ್ಪಷ್ಟನೆ ನೀಡಿದ್ದಾರೆ. ಈ ಸ್ಪಷ್ಟನೆ ಏನೇ ಇದ್ದರೂ ತಮಿಳುನಾಡಿನಲ್ಲಿ ಬಿಜೆಪಿ ಪಾಲಿಗೆ ಅಣ್ಣಾಮಲೈ ಆಡದ ನಾಯಕ. ಪಕ್ಷದ ಅಧ್ಯಕ್ಷತೆಯನ್ನು ಬೇರೆಯವರಿಗೆ ಕೊಟ್ಟಿದ್ದರೂ ಬಿಜೆಪಿ ಕಾರ್ಯಕರ್ತರು ಈಗಲೂ ಅಣ್ಣಾಮಲೈ ಕಡೆ ನೋಡುತ್ತಿದ್ದಾರೆ. ತಮಿಳುನಾಡಿನಲ್ಲಿ ಅಸ್ತಿತ್ವವೇ ಇಲ್ಲದ ಪಕ್ಷಕ್ಕೆ ನೆಲೆ ಕಲ್ಪಿಸಿಕೊಡುವಲ್ಲಿ ಅಣ್ಣಾಮಲೈ ಪಾತ್ರ ದೊಡ್ಡದು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಮಲ ಪಕ್ಷ ಒಂದೇ ಒಂದು ಸೀಟು ಗೆಲ್ಲದಿದ್ದರೂ ಶೇ.15ಕ್ಕಿಂತ ಹೆಚ್ಚು ಮತಗಳನ್ನು ಪಡೆದು ಎಐಎಡಿಎಂಕೆಗೆ ಸರಿಸಾಟಿಯಾಗಿ ಸ್ಪರ್ಧೆ ನೀಡಿತ್ತು. ರಾಜಕೀಯದಲ್ಲಿ ಕೃತಜ್ಞತೆ ಎಂಬ ಪದಕ್ಕೆ ಹೆಚ್ಚೇನೂ ಅರ್ಥವಿಲ್ಲ. ಕರ್ನಾಟಕದಲ್ಲೂ ಪಕ್ಷವನ್ನು ಕಟ್ಟಿ ಬೆಳೆಸಿದ ಅನೇಕ ನಾಯಕರಿಗೆ ಅಧಿಕಾರ ಭಾಗ್ಯ ಸಿಗಲಿಲ್ಲ. ತನ್ನ ಖಾಕಿ ಧಿರಿಸನ್ನು ಬಿಚ್ಚಿ ಖಾದಿ ತೊಟ್ಟ ಅಣ್ಣಾಮಲೈ ಅಧಿಕಾರಕ್ಕೇರುವ ನಾಯಕನಾಗುತ್ತಾರೋ ಅಥವಾ ಪಕ್ಷಕ್ಕಾಗಿ ಶ್ರಮಿಸಿ ಮೂಲೆ ಸೇರುವ ದುರಂತ ನಾಯಕನಾಗುತ್ತಾರೋ ತಮಿಳುನಾಡಿನ ಮತದಾರ ಪ್ರಭುಗಳು ನಿರ್ಧರಿಸಬೇಕು.

ಸಂಪಾದಕರ ಸದ್ಯಶೋಧನೆ

ಬ್ರೀಫ್ ಫೀ ಎಂದರೇನು ?

ಇತ್ತೀಚೆಗೆ ಪತ್ರಿಕೆಯಲ್ಲಿ ಒಂದು ವರದಿ ಪ್ರಕಟವಾಗಿತ್ತು. ವಕೀಲರೊಬ್ಬರ ಮುಂದೆ ನನ್ನ ಸಮಸ್ಯೆಯನ್ನು ಹೇಳಿಕೊಂಡಿದ್ದಕ್ಕೆ ಅವರು ಅದಕ್ಕೆ ನನ್ನಿಂದ ಹಣ ಕಿತ್ತರು' ಎಂದು ಆರೋಪಿಸಿ ವ್ಯಕ್ತಿಯೊಬ್ಬ ವಕೀಲರ ವಿರುದ್ಧ ಪೊಲೀಸರಿಗೆ ದೂರು ನೀಡಿದ ಸುದ್ದಿಯದು. ಈ ಸುದ್ದಿಯನ್ನು ಓದಿದಾಗ ಒಮ್ಮೆ ಕನ್ನಡದ ಖ್ಯಾತ ಸಾಹಿತಿಯೊಬ್ಬರು ತಮ್ಮ ಸಮಸ್ಯೆಯನ್ನು ಖ್ಯಾತ ನ್ಯಾಯವಾದಿಯೊಬ್ಬರ ಮುಂದೆ ಹೇಳಿಕೊಂಡಾಗ, ಆ ಸಮಸ್ಯೆಯನ್ನು ಕೇಳಿ ಅದಕ್ಕೆ ಪರಿಹಾರ ಸೂಚಿಸಿದ ನ್ಯಾಯವಾದಿ, ಮರುದಿನ ಸಾಹಿತಿಗೆ ಬಿಲ್ ಕಳಿಸಿದ ಪ್ರಸಂಗ ನೆನಪಾಯಿತು. ಕಾನೂನಿನಲ್ಲಿ ಈ ರೀತಿ ಫೀ ಪಡೆಯುವುದಕ್ಕೆ ಅವಕಾಶವಿದೆ. ಅದಕ್ಕೆ ಬ್ರೀಫ್ ಫೀ' (Brief Fee) ಅಂತಾರೆ. ಸರಳವಾಗಿ ಹೇಳುವುದಾದರೆ, ಒಬ್ಬ ವಕೀಲ ಒಂದು ನಿರ್ದಿಷ್ಟ ಪ್ರಕರಣದಲ್ಲಿ ತನ್ನ ಕಕ್ಷಿದಾರನ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಲು ಮತ್ತು ವಾದ ಮಂಡಿಸುವ ಮುನ್ನ ಪಡೆಯುವ ಸಂಭಾವನೆಯೇ ಬ್ರೀಫ್ ಫೀ'. ಕಾನೂನು ಪ್ರಕ್ರಿಯೆಯಲ್ಲಿ 'ಬ್ರೀಫ್' ಎಂದರೆ ಕಕ್ಷಿದಾರನು ತನ್ನ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು, ಸಾಕ್ಷ್ಯಾಧಾರಗಳು ಮತ್ತು ಘಟನೆಗಳ ವಿವರವನ್ನು ಒಳಗೊಂಡಿರುವ ಒಂದು ಕಡತ (ಫೈಲ್). ವಕೀಲರು ಈ ಕಡತವನ್ನು ಓದಿ, ಅಧ್ಯಯನ ಮಾಡಿ ನ್ಯಾಯಾಲಯದಲ್ಲಿ ವಾದಿಸಲು ಸಿದ್ಧರಾಗುತ್ತಾರೆ. ಈ 'ಬ್ರೀಫ್' ಅನ್ನು ಸ್ವೀಕರಿಸಿ, ಆ ಪ್ರಕರಣವನ್ನು ಕೈಗೆತ್ತಿಕೊಳ್ಳಲು ವಿಧಿಸುವ ಶುಲ್ಕವೇ ಬ್ರೀಫ್ ಫೀ. ಹಾಗಾದರೆ ಬ್ರೀಫ್ ಫೀ ಯಾವಾಗ ಪಾವತಿಸಲಾಗುತ್ತದೆ? ಸಾಮಾನ್ಯವಾಗಿ, ಒಬ್ಬ ವಕೀಲರು ಪ್ರಕರಣದ ಕಡತವನ್ನು ಕೈಗೆತ್ತಿಕೊಂಡಾಗ ಅಥವಾ ನ್ಯಾಯಾಲಯದಲ್ಲಿ ಮೊದಲ ಬಾರಿಗೆ ಹಾಜರಾಗುವ ಸಂದರ್ಭದಲ್ಲಿ ಈ ಶುಲ್ಕವನ್ನು ನೀಡಲಾಗುತ್ತದೆ. ಇದು ವಕೀಲರ ವೃತ್ತಿಪರ ಪರಿಣತಿ, ಸಮಯ ಮತ್ತು ಶ್ರಮಕ್ಕೆ ನೀಡುವ ಗೌರವಧನವಾಗಿದೆ. ಎಲ್ಲ ಪ್ರಕರಣಗಳಿಗೂ ಒಂದೇ ರೀತಿಯ ಶುಲ್ಕವಿರುವುದಿಲ್ಲ. ಹಿರಿಯ ವಕೀಲರು ತಮ್ಮ ದಶಕಗಳ ಅನುಭವ ಮತ್ತು ಪಾಂಡಿತ್ಯದ ಆಧಾರದ ಮೇಲೆ ಹೆಚ್ಚಿನ ಬ್ರೀಫ್ ಫೀ ಪಡೆಯುತ್ತಾರೆ. ಕೊಲೆ ಕೇಸುಗಳು, ದೊಡ್ಡ ಮೊತ್ತದ ಆಸ್ತಿ ವಿವಾದಗಳು ಅಥವಾ ಸಾಂವಿಧಾನಿಕ ವಿಚಾರಗಳು ಹೆಚ್ಚಿನ ಸಂಶೋಧನೆಯನ್ನು ಬಯಸುವುದರಿಂದ ಇಲ್ಲಿ ಶುಲ್ಕ ಹೆಚ್ಚಿರುತ್ತದೆ. ಪ್ರಕರಣದ ಸಿದ್ಧತೆಗಾಗಿ ವಕೀಲರು ಎಷ್ಟು ಸಮಯ ವ್ಯಯಿಸಬೇಕು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ವಾದಿಸುವ ವಕೀಲರ ಶುಲ್ಕವು ಕೆಳಹಂತದ ನ್ಯಾಯಾಲಯಗಳಿಗಿಂತ ಭಿನ್ನವಾಗಿರುತ್ತದೆ. ಇದು ಇತರ ಶುಲ್ಕಗಳಿಗಿಂತ ಹೇಗೆ ಭಿನ್ನ? ಜನರು ಸಾಮಾನ್ಯವಾಗಿ ವಕೀಲರ ಶುಲ್ಕ ಎಂದರೆ ಎಲ್ಲವನ್ನೂ ಒಂದೇ ಎಂದು ಭಾವಿಸುತ್ತಾರೆ, ಆದರೆ ಅದರಲ್ಲಿ ವಿಧಗಳಿವೆ. ಕೇವಲ ಸಲಹೆ ಪಡೆಯಲು ನೀಡುವ ಶುಲ್ಕ (Consultation Fee), ಪ್ರಕರಣವನ್ನು ಒಪ್ಪಿಕೊಂಡು ವಾದಿಸಲು ಸಿದ್ಧರಾಗಲು ಪಡೆಯುವ ಶುಲ್ಕ (ಬ್ರೀಫ್ ಫೀ), ನ್ಯಾಯಾಲಯದಲ್ಲಿ ಪ್ರತಿ ಬಾರಿ ಹಾಜರಾದಾಗ ಪಡೆಯುವ ಶುಲ್ಕ (ಅಪಿಯರೆನ್ಸ್ ಫೀ) ಇತ್ಯಾದಿ. ವಕೀಲರ ಗುಮಾಸ್ತರಿಗೆ ನೀಡುವ ಅಲ್ಪ ಮೊತ್ತದ ಸೇವಾ ಶುಲ್ಕವನ್ನೂ ವಿಧಿಸಬಹುದು. ಒಬ್ಬ ವಕೀಲರು ನಿಮ್ಮ ಬ್ರೀಫ್ ಅನ್ನು ಒಪ್ಪಿಕೊಂಡರೆ, ಅವರು ಆ ಪ್ರಕರಣದ ಸಂಪೂರ್ಣ ಜವಾಬ್ದಾರಿಯನ್ನು ಹೊರುತ್ತಾರೆ ಎಂದರ್ಥ. ಬ್ರೀಫ್ ಫೀ ಪಾವತಿಸಿದ ನಂತರ, ವಕೀಲರು ಅದೇ ಪ್ರಕರಣದಲ್ಲಿ ಎದುರಾಳಿ ಪರವಾಗಿ ವಾದ ಮಾಡುವಂತಿಲ್ಲ. ಇದು ವಕೀಲ ಮತ್ತು ಕಕ್ಷಿದಾರನ ನಡುವಿನ ವೃತ್ತಿಪರ ಬಾಂಧವ್ಯದ ಮೊದಲ ಹೆಜ್ಜೆ. ಭಾರತದಲ್ಲಿ 'ಬಾರ್ ಕೌನ್ಸಿಲ್ ಆಫ್ ಇಂಡಿಯಾ' ವಕೀಲರ ನಡೆವಳಿಕೆಯ ಬಗ್ಗೆ ನಿಯಮಗಳನ್ನು ರೂಪಿಸಿದೆ. ಆದರೂ, ಬ್ರೀಫ್ ಫೀ ಇಷ್ಟೇ ಇರಬೇಕೆಂದು ಯಾವುದೇ ಕಟ್ಟುನಿಟ್ಟಿನ ಕಾನೂನಿಲ್ಲ. ಇದು ಸಂಪೂರ್ಣವಾಗಿ ಕಕ್ಷಿದಾರ ಮತ್ತು ವಕೀಲರ ನಡುವಿನ ಒಪ್ಪಂದಕ್ಕೆ ಬಿಟ್ಟ ವಿಚಾರ. ಆದರೆ, ಅತಿಯಾದ ಶುಲ್ಕ ಕೇಳುವುದು ವೃತ್ತಿಪರ ನೈತಿಕತೆಗೆ ವಿರುದ್ಧವೆಂದು ಪರಿಗಣಿಸಲಾಗುತ್ತದೆ. ಬ್ರೀಫ್ ಫೀ ಎಂಬುದು ನ್ಯಾಯದಾನದ ಪ್ರಕ್ರಿಯೆಯಲ್ಲಿ ವಕೀಲರ ಬೌದ್ಧಿಕ ಶ್ರಮಕ್ಕೆ ನೀಡುವ ಬೆಲೆಯಾಗಿದೆ. ಒಬ್ಬ ಸಮರ್ಥ ವಕೀಲರು ಪ್ರಕರಣದ ಸೂಕ್ಷ್ಮತೆಗಳನ್ನು ಅರಿತು ಸರಿಯಾದ ಬ್ರೀಫ್ ಸಿದ್ಧಪಡಿಸುವುದು ಜಯದ ಹಾದಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ, ಬ್ರೀಫ್ ಫೀ ಕೇವಲ ಹಣವಲ್ಲ, ಅದು ನಿಮ್ಮ ಪರವಾಗಿ ನ್ಯಾಯಾಲಯದಲ್ಲಿ ಧ್ವನಿಯೆತ್ತಲು ವಕೀಲರಿಗೆ ನೀಡುವ ವೃತ್ತಿಪರ ಅಧಿಕಾರವಾಗಿದೆ.

ಇದೆಲ್ಲ ಸವತಿ ಮಕ್ಕಳ ನಾಲ್ಕು ಸಾವಿರ ವರ್ಷದ ವ್ಯಾಜ್ಯವೇ?

ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಅಮೆರಿಕನ್ನರಿಗೆ ಬಿಡಿ, ಖುದ್ದು ಟ್ರಂಪ್ ಮಹಾಶಯ, ದೊಡ್ಡಣ್ಣ ಮತ್ತು ಅಣ್ಣತಮ್ಮಂದಿರಲ್ಲಿ ಈ ಯುದ್ಧ ಏಕೆ? ಎಂಬ ಬಗ್ಗೆಯೇ ಸ್ಪಷ್ಟತೆ, ಏಕತೆ ಇಂದಿಗೂ ಇಲ್ಲ. ಯುದ್ಧ ಶುರುಮಾಡಿದ್ದೇಕೆ? ಇರಾನ್‌ನಿಂದ ಇದ್ದ ಅಪಾಯವೇನು? ಹೋಗಿ ಅಲ್ಲಿನ ದೇಶದ ಮುಖ್ಯಸ್ಥನನ್ನೇ ಕೊಂದದ್ದರ ಉದ್ದೇಶವೇನು? ಮುಗಿಯುವುದು ಯಾವಾಗ, ಹೇಗೆ? ಇಂತಹ ಯಾವುದೇ ಪ್ರಶ್ನೆಗಳಿಗೆ ರಾಜಕೀಯ ಪಂಡಿತರುಗಳು ಏನೇ ಹೇಳಿದರೂ, ಬಹುತೇಕ ಕಥೆಗಳ ತಾಳಮೇಳ ಸರಿಹೊಂದುವುದಿಲ್ಲ.

ಒಟ್ಟಾರೆ ಒಂದಂತೂ ಸತ್ಯ – ಇಸ್ರೇಲ್ ದೇಶ ಅಮೆರಿಕದ ಆಡಳಿತದೊಳಗಿರುವ ಯುದ್ಧದ ಯಂತ್ರವನ್ನು ಮತ್ತೆ ಜಾಗೃತವಾಗಿಸಿದೆ. ಹಾಗಾದರೆ ಈ ಯುದ್ಧ ಸಂಪೂರ್ಣ ಅಮೆರಿಕ ಅಥವಾ ಟ್ರಂಪ್ ಕೈಯಲ್ಲಿದೆಯೇ? ಟ್ರಂಪ್ ಹೇಳಿದಂತೆ ಎಲ್ಲವೂ ನಡೆಯುತ್ತಿದೆಯೇ? ಉತ್ತರಿಸುವುದು ಕಷ್ಟ. ಇಸ್ರೇಲ್ ಮತ್ತು ಅಮೆರಿಕ ಒಂದು ಕಡೆ, ಇನ್ನೊಂದು ಕಡೆ ಇರಾನ್. ಉಳಿದೆಲ್ಲ ನ್ಯಾಟೋ (NATO) ದೇಶಗಳು ಬಹುತೇಕ ತಟಸ್ಥ. ಇಸ್ರೇಲ್ ಅಮೆರಿಕ ನಡುವೆಯೂ ಎಮ್ಮೆ ಏರಿಗೆ, ಕೋಣ ನೀರಿಗೆ ಎಂಬಂತೆ. ಅಮೆರಿಕ ಒಂದು ಮಾಡಲು ಹೊರಟರೆ ಇಸ್ರೇಲ್ ಇನ್ನೋನೋ ಒಂದನ್ನು ಮಾಡಿ ಧೈರ್ಯದಿಂದ ಕೂತು ಗುಟುರು ಹಾಕುತ್ತದೆ. ಇದೆಲ್ಲದರ ನಡುವೆ ಟ್ರಂಪ್ ಈ ಯುದ್ಧದಲ್ಲಿ ಎಲ್ಲರನ್ನೂ ಎದುರುಹಾಕಿಕೊಳ್ಳುತ್ತಿದ್ದಾನೆ. ಜೀವನದಲ್ಲಿ ಅವನಿಗೇನೂ ಆಗಬೇಕಾದದ್ದಿಲ್ಲ. ಅಮೆರಿಕ ಅಧ್ಯಕ್ಷನ ಸ್ಥಾನಕ್ಕಿಂತ ಮಿಗಿಲಾದದ್ದೇನಿದೆ? ಅವನದು ಇದು ಎರಡನೇ ಅವಧಿ. ಅಮೆರಿಕ ಕಾನೂನಿನ ಪ್ರಕಾರ ಮೂರನೇ ಬಾರಿ ಅಧ್ಯಕ್ಷನಾಗುವಂತಿಲ್ಲ. ಈಗ ಕಾನೂನು ಬದಲಿಸಿ ಅವನೇ ಮೂರನೇ ಬಾರಿಗೆ ಅಧ್ಯಕ್ಷನಾಗಲು ಮುಂದಾದರೂ – ಅವನಿಗೆ ಇನ್ನೆರಡು ತಿಂಗಳಲ್ಲಿ ವಯಸ್ಸು ಎಂಬತ್ತು ತುಂಬುತ್ತದೆ. ಇಂತಹ ತಿಕ್ಕಲು ವ್ಯಕ್ತಿ, ಯಾರಿಗೆ ಏನನ್ನು ಬೇಕಾದರೂ ಹೇಳಬಲ್ಲ ಟ್ರಂಪ್ – ಇಸ್ರೇಲ್ ಮತ್ತು ನೆತನ್ಯಾಹು ಬಗ್ಗೆ ಒಂದೇ ಒಂದು ಬಾರಿ, ಅವರು ಮಾಡಿದ ಈ ಕೆಲಸ ಸರಿಯಲ್ಲ, ಹಾಗೆ ಮಾಡಬಾರದಿತ್ತು ಎಂದೆಲ್ಲ ತಮಾಷೆಗೂ ಹೇಳುವುದಿಲ್ಲ. ಏಕೆಂದು ಯೋಚಿಸಿದ್ದೀರಾ? ಇಸ್ರೇಲ್ ಹೇಗೆಂದರೆ, ಮೊನ್ನೆ ಅಮೆರಿಕದ ಉಪಾಧ್ಯಕ್ಷ ವ್ಯಾನ್ಸ್ ಪಾಕಿಸ್ತಾನದಲ್ಲಿ ಇರಾನಿನ ಜತೆ ಮಾತುಕತೆಗೆ ಮುಂದಾದರೆ, ಯುದ್ಧ ವಿರಾಮ ಅಂದರೆ – ಅದೇ ದಿನ ಇಸ್ರೇಲ್ ಲೆಬನಾನ್ ಮೇಲೆ ದಾಳಿ ಮಾಡಿ ಆ ಮಾತುಕತೆಯನ್ನು ಸಂಪೂರ್ಣ ಹಳ್ಳ ಹಿಡಿಸಿತು. ಆದರೆ ಟ್ರಂಪ್, ಮತ್ತು ಅಮೆರಿಕ ವ್ಯವಸ್ಥೆಯ ಒಬ್ಬನೇ ಒಬ್ಬ ಇಸ್ರೇಲಿನ ವಿರುದ್ಧ ಸೊಲ್ಲೆತ್ತುವುದಿಲ್ಲ – ಪಕ್ಷಾತೀತವಾಗಿ. ಏಕದು? ಟ್ರಂಪ್ ಮತ್ತವನ ನಾಲಿಗೆ ಬಗ್ಗೆ ಪ್ರತ್ಯೇಕ ವಿವರಿಸಿ ಹೇಳಬೇಕಿಲ್ಲ, ಅವನು ಬಿಟ್ಟರೂ ಅವನ ನಾಲಿಗೆ ಯಾರನ್ನೂ ಬಿಡುವುದಿಲ್ಲ. ಆದರೆ ಇಸ್ರೇಲ್ ವಿಷಯದಲ್ಲಿ – ಊಹು, ಬಿಲ್ಕುಲ್ ಮಾತೇ ಇಲ್ಲ. ಇದೇಕೆ ಹೀಗೆ? ಒಂದು ಮಜವೆಂದರೆ ಎಲ್ಲರೂ ಅಮೆರಿಕದ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಾರೆ, ಬರೆಯುತ್ತಾರೆ, ಕೊರೆಯುತ್ತಾರೆ. ಆದರೆ ಯಾರೂ ಈ ಅವಸ್ಥೆಯ ಬಗ್ಗೆ ಮಾತನಾಡುವುದಿಲ್ಲ. ಏಕೆ? ಆನೆಯಂತಹ ಅಮೆರಿಕವನ್ನು ಆಡಿಸುವ ಇಸ್ರೇಲಿನ ಅಂಕುಶ ಯಾವುದು? ಏನಿದೆಲ್ಲದರ ಹಕೀಕತ್?

ಈ ಕಥೆ ಶುರುವಾಗುವುದು ಅಜಮಾಸು ನಾಲ್ಕು ಸಾವಿರ ವರ್ಷದ ಹಿಂದೆ. ಒಬ್ಬ ವ್ಯಕ್ತಿಯಿಂದ. ಆಗ ಮನುಷ್ಯರೆಲ್ಲ ಪೂಜೆ ಮಾಡುತ್ತಿದ್ದುದು ಸೂರ್ಯ, ಪ್ರಕೃತಿ ಇತ್ಯಾದಿ. ಈಜಿಪ್ಟ್, ಚೀನಾದ ಹ್ವಾಂಗೆ ನದಿತಟ ಪ್ರದೇಶ, ರೋಮನ್, ಇಂಕಾ ಇತ್ಯಾದಿ ನಾಗರಿಕತೆಗಳು ಪ್ರತ್ಯೇಕವಾಗಿಯೇ ಬೆಳೆಯುತ್ತಿದ್ದವು. ಭಾರತ, ಇರಾನ್, ಪಾಕಿಸ್ತಾನ, ಅಫ್ಘಾನಿಸ್ತಾನ ಪ್ರಾಂತ್ಯದಲ್ಲಿ ಇದೆಲ್ಲ ಆಚರಣೆ ಇನ್ನಷ್ಟು ರೂಪಗಳನ್ನು ಪಡೆದುಕೊಂಡಿದ್ದವು. ಇಲ್ಲಿ ಆಗ ವೇದಕಾಲ. ಆದರೆ ಎಲ್ಲಿಯೂ ಯಾವುದೇ ಮತ (ಇಂದಿನ ರಿಲಿಜಿಯನ್) ಎಂದು ಇರಲಿಲ್ಲ. ಎಲ್ಲರದೂ ಸನಾತನ – ಪ್ರಕೃತಿ ಆಧಾರಿತ ಬದುಕುವ ರೀತಿ, ಅದುವೇ ಧರ್ಮ. ಆ ಬದುಕುವ ರೀತಿಯಲ್ಲಿ ಭಿನ್ನತೆ ಇತ್ತೇ ವಿನಃ ಮತವನ್ನಾಧರಿಸಿದ ವೈಷಮ್ಯವಿರಲಿಲ್ಲ. ಒಂದು ಕಡೆ ನದಿ, ಮಳೆ, ಸೂರ್ಯನನ್ನು ಪೂಜಿಸಿದರೆ ಇನ್ನೊಂದು ಕಡೆ ಬೆಂಕಿ, ಗಿಡಮರ, ಕಲ್ಲು ಇತ್ಯಾದಿ. ಹೇಗೆ ನಮ್ಮಲ್ಲಿ ಪ್ರಕೃತಿ ಆಧಾರಿತ ದೇವದೇವತೆಗಳ ಕಲ್ಪನೆಗಳಿದ್ದವೋ ಅದೇ ರೀತಿ ಎಲ್ಲ ರೋಮನ್, ಮತ್ತುಳಿದ ನಾಗರೀಕತೆಯಲ್ಲೂ ಪ್ರತ್ಯೇಕ ಆದರೆ ಹೋಲುವ ನಂಬಿಕೆಗಳಿದ್ದವು.

ಅತಿ ಸಂಕೀರ್ಣ ಭೂಮಿಯ ವ್ಯವಸ್ಥೆ ಮತ್ತು ಮೇಲೆ ಆಕಾಶದಾಚೆ ಅಂತರಿಕ್ಷ ಇವೆಲ್ಲ ದೈವಪ್ರಜ್ಞೆಯಿಲ್ಲದೆ ಸಾಧ್ಯವೇ ಇಲ್ಲ ಎನ್ನುವ ಭಾವನೆ ಎಲ್ಲೆಡೆಯೂ ಬಹಳ ಕಾಲದಿಂದ ಇತ್ತು. ಇಂತಹ ದೈವಪ್ರಜ್ಞೆ, ಅತಿಮಾನುಷ ಶಕ್ತಿಯ ಪ್ರಜ್ಞೆಗೆ ಅದೆಷ್ಟೋ ಬಹಳ ಹಳೆಯದು. ಸುಮಾರು ಒಂದು ಲಕ್ಷ ವರ್ಷದಿಂದ ಮನುಷ್ಯ ಆಚರಣೆಗಳಲ್ಲಿ ತೊಡಗಿಕೊಂಡಿದ್ದಾನೆ ಎನ್ನುವುದು ಕುರುಹುಗಳಾಧಾರಿತ ಅಂದಾಜು. ಆದರೆ ಅವು ಯಾವುದೂ ನಾವು ಇಂದು ಸಂಬೋಧಿಸುವ ರೀತಿಯ ರಿಲಿಜಿಯನ್ ಆಗಿರಲಿಲ್ಲ.

ಅವನ ಹೆಸರು ಅಬ್ರಹಾಂ. ಅವನು ಹುಟ್ಟಿದ್ದು ಇಂದಿನ ದಕ್ಷಿಣ ಇರಾಕ್ ಭಾಗದಲ್ಲಿ, ಒಬ್ಬ ಸಾಮಾನ್ಯ ಜನ. ಅವನ ಹೆಂಡತಿ ಸಾರಾ. ಅವರಿಬ್ಬರಿಗೆ ಮಕ್ಕಳಾಗುವುದಿಲ್ಲ. ಆಗ ಅಬ್ರಹಾಂ ಮತ್ತು ಮನೆ ಕೆಲಸದವಳು ಹಗರ್‌ಗೆ ಹುಟ್ಟಿದವನು ಇಸ್ಮಾಯಿಲ್. ಕೆಲವು ವರ್ಷಗಳ ನಂತರ ಸಾರಾಗೂ ಒಬ್ಬ ಮಗ ಹುಟ್ಟುತ್ತಾನೆ.

ಮುಂದಿನ ಕಥೆ ಬಿಬ್ಲಿಕಲ್ ಕಥೆಯ ಪ್ರಕಾರ – ಅಬ್ರಹಾಂಗೆ ಇಸ್ಮಾಯಿಲ್ ಹುಟ್ಟುವಾಗ 86 ವರ್ಷ. ಅವನಿಗಿಂತ ಸಾರಾಗೆ ಹುಟ್ಟಿದ ಐಸಾಕ್ 14 ವರ್ಷ ಚಿಕ್ಕವನು. ಅದರರ್ಥ ಅಬ್ರಹಾಂಗೆ 100 ವರ್ಷ ತುಂಬಿದಾಗ ಐಸಾಕ್ ಹುಟ್ಟಿದ್ದು. ಒಟ್ಟಾರೆ ಯಾವ ಕಾರಣಕ್ಕೋ, ಅಬ್ರಹಾಂ ದೇವರು ಆಯ್ಕೆ ಮಾಡಿದ ಮನುಷ್ಯ ಎಂದೇ ಪ್ರಸಿದ್ಧಿ ಪಡೆದ. ಆಮೇಲೆ ಅವನು ಬೇರೆ ಬೇರೆ ಸ್ಥಳಗಳಲ್ಲಿ ನೆಲೆಸಿದ್ದ, ದೇವರು ಎಲ್ಲಿಗೋ ಕರೆದನೋ, ಅವನು ಅಲ್ಲಲ್ಲಿಗೆ ಹೋದ ಎಂದೆಲ್ಲ ಕಥೆ. ಈ ಕಥೆಯ ಹಲವಾರು ರೂಪಾಂತರಗಳಿವೆ.

ಒಟ್ಟಾರೆ ಅಬ್ರಹಾಂನ ಮಕ್ಕಳು ದೊಡ್ಡವರಾಗುತ್ತಿದ್ದಂತೆ ಅವರ ನಡುವೆ ವೈಷಮ್ಯ ಬಂದು ದಾಸಿ ಹಗರ್ ಮತ್ತು ಅವಳಿಗೆ ಹುಟ್ಟಿದ ಇಸ್ಮಾಯಿಲ್‌ರನ್ನು ಪರಾನ್ ಮರಳುಗಾಡಿಗೆ, ಇಂದಿನ ಅರಬ್ ಮರಳುಗಾಡಿಗೆ (ಉತ್ತರ ಅರೇಬಿಯಾ – ಈಜಿಪ್ಟ್ ಕಡೆ) ಅಟ್ಟಲಾಯಿತು. ಈ ಮೂಲಕ ಇತ್ತ ಐಸಾಕ್ ಮತ್ತವನ ವಂಶ ಕಾನನ್ ಪ್ರದೇಶದಲ್ಲಿ (ಇಂದಿನ ಇಸ್ರೇಲ್)ಮತ್ತು ಅತ್ತ ಇಸ್ಮಾಯಿಲ್ ವಂಶದವರು ಅರೇಬಿಯಾ ಮರಳುಗಾಡಿನಲ್ಲಿ. ಈ ಎರಡು ವಂಶಾವಳಿಗಳೇ ಮುಂದೆ ಯಹೂದಿ ಮತ್ತು ಇಸ್ಲಾಂ ಆದದ್ದು.

ಇಲ್ಲಿ – ಇಸ್ರೇಲಿಗಳ ಪ್ರಕಾರ ನೆಲದ ಹಕ್ಕು ಮತ್ತು ಅಬ್ರಹಾಂನ ವಂಶಾವಳಿಯ ಹಕ್ಕು ಐಸಾಕ್‌ನದು, ಅವನ ಮಗ ಜೇಕಬ್ ಮತ್ತು ಮುಂದಿನ ವಂಶಾವಳಿಯದ್ದು. ಈಗ ಇಸ್ರೇಲ್ ಇರುವ ಜಾಗ ಅಬ್ರಹಾಂ ಬಳುವಳಿಕೊಟ್ಟ ಜಾಗ (Promised Land) ಇದು ಯಹೂದಿಗಳ ನಂಬಿಕೆ. ಇಸ್ಲಾಮಿಕ್ ನಂಬಿಕೆಯ ಪ್ರಕಾರ ಇಬ್ರಾಹಿಂ(ಅಬ್ರಹಾಂ) ಮತ್ತು ಇಷ್ಮಾಯಿಲ್ (ಇಸ್ಮಾಯಿಲ್) ಪ್ರವಾದಿಗಳು. ಅವರೇ ಪವಿತ್ರ ಜಾಗ ಕಾಬಾವನ್ನು ಕಟ್ಟಿದ್ದು. ಹಾಗಾಗಿ ಎಲ್ಲ ಹಕ್ಕೂ, ನೆಲ, ವಂಶಾವಳಿ ಎಲ್ಲ ಹಕ್ಕೂ ಇಸ್ಮಾಯಿಲ್ ಮತ್ತವನ ಸಂತತಿಗೆ ಎಂದು ಅವರು. ಇದುವೇ ಇಲ್ಲಿನ ಮೂಲ – ಕುಟುಂಬ ವ್ಯಾಜ್ಯ.

ಐಸಾಕ್ ವಂಶಸ್ತರಿದ್ದ ಇಸ್ರೇಲ್ ಪ್ರಾಂತ್ಯದ ರಾಜ ಸೊಲೊಮನ್ ಕ್ರಿಸ್ತ ಪೂರ್ವ ಹತ್ತನೇ ಶತಮಾನದಲ್ಲಿ ಜರುಸಲೇಂನಲ್ಲಿ ಯಹೂದಿಗಳ ದೇವಸ್ಥಾನ (ಸೂಕ್ತ – ಟೆಂಪಲ್ ಎಂದೇ ಕರೆಯುವುದು) ಕಟ್ಟಿದ. ಯಹೂದಿಗಳಿಗೆ ಅದು ಪವಿತ್ರ. ಇಸ್ಲಾಮಿಕ್ ನಂಬಿಕೆಗಳ ಪ್ರಕಾರ ಇಸ್ಲಾಂ ಆರಂಭದಲ್ಲಿ ಎಲ್ಲರೂ ಮೆಕ್ಕಾ ಬದಲಿಗೆ ಜರುಸಲೇಂ ನತ್ತ ಮುಖ ಮಾಡಿ ನಮಾಜ್ ಮಾಡುತ್ತಿದ್ದರಂತೆ. ಏಕೆ? ಅವರ ಪ್ರಕಾರ ಅಬ್ರಹಾಂ ಮೆಕ್ಕಾದಲ್ಲಿದ್ದದಲ್ಲವೇ? ಇಸ್ರಾ ಮಿರಾಜ್ ಪ್ರಕಾರ ಪ್ರಾಫೆಟ್ ಮೊಹಮ್ಮದ್ ಮೆಕ್ಕಾದಿಂದ ಜರುಸಲೇಂಗೆ ಮಾಯಾರೂಪದಲ್ಲಿ ಸಂಚರಿಸಿ ಅಲ್ಲಿಂದ ಸ್ವರ್ಗಕ್ಕೇರಿದರು ಎಂದು. ಮೋಸೆಸ್ – ಮೂಸಾ, ಡೇವಿಡ್ – ದಾವೂದ್, ಸೊಲೊಮನ್ – ಸುಲೈಮಾನ್, ಜೀಸಸ್ – ಇಸಾ ಇವರೆಲ್ಲರೂ ಪ್ರೊಫೆಟ್‌ಗಳು. ಆದರೆ ನಜರೆತ್‌ನ ಜೀಸಸ್ ಯಹೂದಿ! ಅವರಿಂದ ಮುಂದಿನದು ಕ್ರಿಶ್ಚಿಯಾನಿಟಿ.

ಅಲ್ಲಿಂದ ಮುಂದೆ ಇಸ್ರೇಲ್ ನೆಲದ ಮೇಲೆ ಅಸ್ಸೆರನ್, ಬೆಬಿಲೋನಿಯನ್, ಪರ್ಷಿಯನ್, ಗ್ರೀಕ್, ರೋಮನ್ ಇತ್ಯಾದಿ ದಾಳಿಗಳಾದವು. ಇಲ್ಲಿಯವರೆಗೂ ನಿರಂತರ ದಾಳಿಯನ್ನು ಯಹೂದಿಗಳು ಎದುರಿಸುತ್ತಾ ಬಂದಿದ್ದಾರೆ. ಅವರದು ಗಟ್ಟಿತನವೇ, ಅನುಮಾನವೇ ಬೇಡ. ವಿಶ್ವಯುದ್ಧ ವಾಯ್ತು, ಹಿಟ್ಲರ್ ನಿಂದ ಹೋಲೋಕಾಸ್ಟ್ – ಸಾಮೂಹಿಕ ನರಮೇಧವಾಯಿತು. ಯಹೂದಿಗಳು ಪ್ರಪಂಚದಾದ್ಯಂತ ದಿಕ್ಪಾಲದರು ಇತ್ಯಾದಿ. ಆಮೇಲೆ 1947ರಲ್ಲಿ ಯಹೂದಿಗಳಿಗೊಂದು ಜಾಗ, ಅರಬ್ಬರಿಗೆ ಇನ್ನೊಂದು ಜಾಗ ಎಂದು ಬ್ರಿಟಿಷರು, ವಿಶ್ವಸಂಸ್ಥೆ ಭಾಗಾಯತ ಮಾಡಲು ಮುಂದಾಯಿತು. ಆಮೇಲೊಂದು ಯುದ್ಧ – ಅದರಲ್ಲಿ ಯಹೂದಿಗಳು ಹೋರಾಡಿ ಗೆದ್ದರು. ಇದೆಲ್ಲದರ ನಡುವೆ ಪಲಸ್ತೀನ್‌ನಲ್ಲಿ, ಆಮೇಲೆ ಗಾಜಾದಲ್ಲಿ ಮುಸ್ಲಿಮರು ಹಾಗೆಯೇ ಉಳಿದುಕೊಂಡರು. ಒಟ್ಟಾರೆ ಬ್ರಿಟಿಷರು ಭಾರತದಲ್ಲಿ – ಪಾಕಿಸ್ತಾನ ವಿಭಜನೆ ಹೇಗೆ ಅರ್ಧಂಬರ್ಧ ಮಾಡಿ ಕೈಬಿಟ್ಟರೋ ಹಾಗೆಯೇ ಇಲ್ಲೂ ಆಯಿತು.

ಈ ಎಲ್ಲ ಹಿನ್ನೆಲೆ, ಕಥೆ ಕೇಳಿದ ನಂತರ ಇಸ್ರೇಲಿಗೆ ಮತ್ತು ಅಕ್ಕಪಕ್ಕದ ಇಸ್ಲಾಮಿಕ್ ದೇಶಗಳಿಗೆ ಏಕೆ ಆಗಿಬರುವುದಿಲ್ಲ ಎನ್ನುವುದೇನೋ ಸ್ಪಷ್ಟವಾಯ್ತು. ಆದರೆ ಅಮೆರಿಕ ಇವರ ಬೆನ್ನಿಗೆ ನಿಲ್ಲುವುದೇಕೆ? ಇಸ್ರೇಲ್ 1948ರಲ್ಲಿ ತಾನೊಂದು ಸ್ವತಂತ್ರ ದೇಶ ಎಂದು ಘೋಷಿಸಿಕೊಂಡಾಗ ಅದನ್ನು ಮೊದಲು ಗುರುತಿಸಿ ಹೌದೆಂದದ್ದು ಅಮೆರಿಕದ ಅಧ್ಯಕ್ಷ ಹೆನ್ರಿ ಟ್ರೂಮನ್. ಎರಡನೇ ದೇಶ ಸೋವಿಯತ್ ಯೂನಿಯನ್. ಏಕಿರಬಹುದು ಹೇಳಿ?

ಎರಡು ಕಾರಣ. ಬಹಳ ಮಜಾ ಇದೆ ಕಥೆ. ಅಮೆರಿಕಗೆ ಅರಬ್ ದೇಶಗಳ ಪೆಟ್ರೋಲ್ ಬೇಕು. ಹಾಗಾಗಿ ಅವರ ಜತೆ ಸಂಬಂಧ, ಒಪ್ಪಂದ ಇತ್ಯಾದಿ ಹಾಳಾಗಬಾರದು. ಆದರೆ ಅವುಗಳಿಗೆ ಇಸ್ರೇಲ್ ಕಂಡರಾಗದು. ಅಮೆರಿಕ ಸರಕಾರೀ ವ್ಯವಸ್ಥೆಗೆ ಇಸ್ರೇಲ್‌ಅನ್ನು ಬಿಡುವಂತಿಲ್ಲ. ಇದಕ್ಕೆ ಕಾರಣ, ಮೊದಲನೆಯದು ಅಮೆರಿಕನ್ ಯಹೂದಿಗಳ ಮತ್ತು ಇಸ್ರೇಲ್ ಸರಕಾರದ ಅಮೆರಿಕಾದ ವ್ಯವಸ್ಥೆಯ ಮೇಲಿರುವ ರಾಜಕೀಯ ಮತ್ತು ವಶೀಲಿ ಪ್ರಾಬಲ್ಯ. ಅದೆಲ್ಲದಕ್ಕಿಂತ ಮುಖ್ಯವಾಗಿ ಮತ (ವೋಟ್) ಮತ್ತು ಮತ (ರಿಲಿಜಿಯನ್).

ಯಾರ ಮತ? ಯಾವ ಮತ? ಅಮೆರಿಕದ ಅಧ್ಯಕ್ಷರಿಗೆ ಇಸ್ರೇಲಿಗಳು ವೋಟ್ ಮಾಡುವುದಿಲ್ಲವಲ್ಲ. ಅಮೆರಿಕದಲ್ಲಿರುವ ಯಹೂದಿಗಳ ಸಂಖ್ಯೆ ಕೇವಲ 2–2.5%. ಲೆಕ್ಕಕ್ಕೇ ಇಲ್ಲದ ಪ್ರಮಾಣ ಅಲ್ಲವೇ? ಹಾಗಾದರೆ ಅಮೆರಿಕನ್ ವ್ಯವಸ್ಥೆಯನ್ನು ಇಸ್ರೇಲಿಗರು ವಶೀಕರಣ ಮಾಡಿದ್ದಾರೆಯೇ? ಒಂದು ಚಿಕ್ಕ ಲೆಕ್ಕ ಕೊಡುತ್ತೇನೆ. ಅಮೆರಿಕದಲ್ಲಿ 65% ಕ್ರಿಶ್ಚನ್ ಮತದಾರರು. ಉಳಿದ ಸುಮಾರು 30% ಯಾವುದೇ ಮತದ ಜತೆ ಗುರುತಿಸಿಕೊಳ್ಳದವರು. ಉಳಿದವರು ಆಟಕ್ಕುಂಟು, ಲೆಕ್ಕಕ್ಕಿಲ್ಲ. 65% ಕ್ರೈಸ್ತ ಸಮುದಾಯದಲ್ಲಿ ಇಂದಿಗೂ ತಮ್ಮ ಕರುಳಬಳ್ಳಿಯ, ವಂಶದ ಮೂಲ ಅದೇ ಇಸ್ರೇಲ್ ಎಂಬ ಭಾವನೆ ಇದೆ. ಅದರಲ್ಲಿ ಕೆಲವು ಉಪಸಮುದಾಯಗಳಂತೂ ಹಿಬ್ರೂ ಬೈಬಲ್ ಅನ್ನು ನೇರವಾಗಿ ಅನುಮೋದಿಸುತ್ತವೆ, ನಂಬುತ್ತವೆ, ಪಾಲಿಸುತ್ತವೆ. ಹೀಗಾಗಿ ಇಸ್ರೇಲಿನ ವಿರುದ್ಧ ಹೋಗುವುದೆಂದರೆ ಅದು ಈ ಎಲ್ಲ ರಾಜಕೀಯ ದೊಂಬರಾಟದಾಚೆಯ ವಿಷಯ, ಇದು ಜನರ, ಕ್ರಿಶ್ಚನ್ ಮತದಾರರ ನಂಬಿಕೆಯ ವಿಷಯ. ಅಲ್ಲಿ, ಇಸ್ಲಾಂ ಮತದ ನಂಬಿಕೆ. ಜೀಸಸ್ ಕೂಡ ಒಬ್ಬ ಯಹೂದಿ! ಇಸ್ಲಾಮಿನಲ್ಲಿ ಇಸಾ ಒಬ್ಬ ಪ್ರವಾದಿ.

ಹಾಗಾಗಿಯೇ ಇಸ್ರೇಲಿನ ವಿರುದ್ಧ ಅಮೆರಿಕ, ಅದರ ಅಧ್ಯಕ್ಷ, ವ್ಯವಸ್ಥೆ ಎಂದೂ ತುಟಿ ಬಿಡುವುದಿಲ್ಲ, ಇಸ್ರೇಲ್ ಎಲ್ಲರೂ ಹೇಳುವಂತೆ ಕೇವಲ ಅಲ್ಲಿನ ಜನರ ಶ್ರದ್ಧೆ, ಬುದ್ಧಿವಂತಿಕೆ ಮತ್ತು ದೇಶಪ್ರೇಮದಿಂದಷ್ಟೇ ಇಷ್ಟು ಗಟ್ಟಿಯಾಗಿ ನಿಂತಿರುವುದಲ್ಲ, ಅದರಾಚೆ ಇಲ್ಲೊಂದು ಪ್ರಬಲವಾದ ಧಾರ್ಮಿಕ ಸೆಂಟಿಮೆಂಟ್ ಅವರ ರಕ್ಷಣೆಗೆ ಇದೆ. ಇಲ್ಲದಿದ್ದರೆ, ಅದೊಂದು ಬೇರೆ ಮತದ, ಹಿನ್ನೆಲೆಯಿಲ್ಲದ ದೇಶವಾಗಿದ್ದರೆ– ಅರಬ್ ರಾಷ್ಟ್ರಗಳ ಜತೆ ಸೇರಿ, ತೈಲದಾಸೆಗೆ ಅಮೆರಿಕವೇ ಇದಕ್ಕೊಂದು ಗತಿ ಕಾಣಿಸುತ್ತಿತ್ತೇನೋ? ಅಬ್ರಹಾಂನಿಂದ ವಾಷಿಂಗ್ಟನ್ ವರೆಗೆ – ಸವತಿ ಮಕ್ಕಳ ವೈಷಮ್ಯ, ಅದೆಲ್ಲಿಂದ ಅದೆಲ್ಲಿಗೆ ಬಂದು ನಿಂತಿತು ನೋಡಿ? ಅಷ್ಟಕ್ಕೂ ಮಹಾಭಾರತ, ರಾಮಾಯಣ ಹೀಗೆ ಎಲ್ಲದರ ಮೂಲವೂ ಸವತಿ ಮಕ್ಕಳ ಸಮಸ್ಯೆಯೇ ಅಲ್ಲವೇ? ಸುಮ್ಮನೆ ಹಾಗೊಂದು ದೃಷ್ಟಿಕೋನಕ್ಕೆ ಹೋಲಿಕೆ.

ಕಳೆದ ವಾರ ಅಮೆರಿಕದ ಮೂವರು ಮತ್ತು ಒಬ್ಬ ಕೆನಡಾದವನು ಗಗನನೌಕೆ ಆರ್ಟೆಮಸ್2ರಲ್ಲಿ ಕೂತು ಚಂದ್ರನ ಸುತ್ತ ಹಾಕಿಬಂದರಲ್ಲ, ಅದು ಗುಡ್ ಫ್ರೈಡೇ ದಿನ. ಕ್ರೈಸ್ತರ ಪ್ರಕಾರ ಜೀಸಸ್ ಶಿಲುಬೇರಿಸಿದ ದಿನ. ಇಡೀ ಕ್ರಿಶ್ಚಿಯಾನಿಟಿಯ ಮೂಲ ಆ ಘಟನೆ. ಇಸ್ಲಾಂ ನಂಬಿಕೆಯಂತೆ ಇಸಾನನ್ನು ಶಿಲೇಬೆಗೆ ಏರಿಸಲಾಗಿಲ್ಲ (ಸುರಾ 4:157). ಈ ವಿಶೇಷ ದಿನದಂದು ಗಗನಯಾನಿಗಳು ಅಂತರಿಕ್ಷದಿಂದಲೇ ಟಿವಿ ಸಂದರ್ಶನವೊಂದನ್ನು ಕೊಟ್ಟಿದ್ದರು. ಆಗ ಗಗನಯಾನಿ ವಿಕ್ಟರ್ ಗ್ಲೋವರ್‌ನಿಗೆ ಗುಡ್ ಫ್ರೈಡೇ ದಿನ ನಮಗೆ ನಿಮ್ಮ ಹಾರೈಕೆ ಏನು? ಇಂದು ಕೇಳಿದರು. ಅದಕ್ಕೆ ಅವನು ಕೊಟ್ಟ ಮಾತಿನ ಭಾವಾರ್ಥ ಹೀಗಿದೆ, ಇದೆಲ್ಲ ಹಿನ್ನೆಲೆಯನ್ನು ಪಕ್ಕಕ್ಕಿಟ್ಟು ಒಮ್ಮೆ ಓದಿಕೊಳ್ಳಿ. ವಿಕ್ಟರ್ ಗ್ಲೋವರ್: ನಾನು ಈ ಪ್ರಶ್ನೆಯ ಬಗ್ಗೆ ಯೋಚಿಸಿರಲಿಲ್ಲ, ಆದರೆ ಈ ಸಂದರ್ಭದಲ್ಲಿ ಇದನ್ನು ಹೇಳಬಹುದು. ನಮ್ಮ ನೌಕೆ ಭೂಮಿಯಿಂದ ದೂರವಾಗುತ್ತಿದ್ದಂತೆ, ಭೂಮಿಯತ್ತ ನಾನು ನೋಡಿದಾಗ ಕರ್ತೃವಿನ ಸೃಷ್ಟಿ ಅದೆಷ್ಟು ಅದ್ಭುತವೆನಿಸುತ್ತದೆ. ಬ್ರಹ್ಮಾಂಡದ ವಿಶಾಲತೆಯಲ್ಲಿ ಅದೆಲ್ಲಿಯೋ ತೇಲಿ ಹೊರಟ ಇಡೀ ಭೂಮಿ ಒಂದೇ ಎಂದೆನಿಸುತ್ತಿದೆ. ನಾನು ಸ್ಪೇಸ್ ಶಿಪ್‌ನಲ್ಲಿ ಕೂತು ಈಗ ನಿಮ್ಮೊಡನೆ ಮಾತನಾಡುತ್ತಿದ್ದೇನೆ. ಆದರೆ ನಾನು ಭೂಮಿಯನ್ನು ಇಷ್ಟು ದೂರದಿಂದ ನೋಡಿದರೆ ಇಲ್ಲಿಂದ ಭೂಮಿ ಕೂಡ ಇನ್ನೊಂದು ಚಿಕ್ಕ ಸ್ಪೇಸ್ ಶಿಪ್‌ನಂತೆಯೇ ಕಾಣಿಸುತ್ತದೆ. ನಾನಿರುವುದು ಮನುಷ್ಯ ನಿರ್ಮಿಸಿದ ಅತ್ಯಂತ ಅತ್ಯಾಧುನಿಕ ಸ್ಪೇಸ್ ಶಿಪ್. ಇಲ್ಲಿಂದ ನನಗೆ ಕಾಣಿಸುತ್ತಿರುವುದು ದೇವರು ಮಾಡಿದ, ಕಾಸ್ಮೋಸ್‌ನಲ್ಲಿ ಚಲಿಸುತ್ತಿರುವ ಅತ್ಯಂತ ಸಂಕೀರ್ಣ ಸ್ಪೇಸ್ ಶಿಪ್, ನಮಗೆ ಬದುಕಲು ದೇವರು ಒಂದು ಪರಮಾದ್ಭುತ ಗಗನ ನೌಕೆಯನ್ನೇ ನಿರ್ಮಿಸಿಕೊಟ್ಟಿದ್ದಾನೆ. ಇದು ಸಂಪೂರ್ಣ ಮನುಕುಲ, ಜೀವಸಂಕುಲವನ್ನು ಉಳಿಸಿ ಬೆಳೆಸುತ್ತ ಕಾಸ್ಮೋಸ್‌ನಲ್ಲಿ ಎಲ್ಲಿಗೋ ಸಾಗುತ್ತಿದೆ. ಈ ಸ್ವಸಮರ್ಥ ಗಗನ ನೌಕೆ. ನಿಮಗೆ ನಾವು ದೂರದಲ್ಲಿದ್ದೇವೆ ಎಂದೆನಿಸಬಹುದು, ಆದರೆ ನೀವು ಕೂಡ ನನ್ನಿಂದ ಅಷ್ಟೇ ದೂರದಲ್ಲಿದ್ದೀರಿ. ತಮಾಷೆಗಲ್ಲ, ಹೇಗೆ ನಾವಿಲ್ಲಿ ನೌಕೆಯಲ್ಲಿ ಇರುವುದು ವಿಶೇಷವೆನಿಸುತ್ತದೆಯೋ, ನಾವು ಇಲ್ಲಿಂದ ನೋಡಿದಾಗ ನಮಗೆ ನೀವು ಅಲ್ಲಿ ಭೂಮಿಯ ಮೇಲಿರುವುದು ಅದಕ್ಕಿಂತ ಜಾಸ್ತಿ ವಿಶೇಷವೆನಿಸುತ್ತದೆ. ನಮ್ಮ ನಡುವೆ ಇರುವುದು 'nothing' – ವಿಶ್ವವೆಂಬ ಮತಿಯ ಮಿತಿಗೆ ಸಿಗದಷ್ಟು ಖಾಲಿ ಜಾಗ, ನಿರ್ವಾತ. ನಿಮಗೆ (ಭೂಮಿಯಲ್ಲಿರುವವರಿಗೆ) ಒಟ್ಟಾಗಿ ಬದುಕಲು ಈ ವಿಶೇಷ, ಸುಂದರ ಜಾಗವಿದೆ. ಈ ದಿನ, ನೀವು ಯಾವುದೇ ಮತದವರಾಗಿರಲಿ, ನಾವೆಲ್ಲ ಯಾವತ್ತೂ ಯೋಚಿಸಬೇಕಾದದ್ದು, ಪ್ರಶ್ನಿಸಿಕೊಳ್ಳಬೇಕಾದದ್ದೇನೆಂದರೆ – ನಾವು ಮನುಷ್ಯರು ನಿಜವಾಗಿಯೂ ಯಾರು? ಮತ್ತು ಎಲ್ಲಿ ಹೊರಟಿದ್ದೇವೆ? ಎಂದು.

ಸಮಯ ನಿಲ್ಲದೆ ಓಡುತ್ತಿದೆ, ಆದರೆ ಹಣ ಬೆಳೆಯುತ್ತಿದೆಯೇ?!

ಹಣ ಹೇಗೆ ಕೆಲಸ ಮಾಡುತ್ತದೆ? ಯಾವ ರೀತಿ ಹಣವನ್ನು ಉಳಿಸಬೇಕು, ಎಷ್ಟು ಸಾಲ ಮಾಡಬೇಕು? ಮ್ಯೂಚುವಲ್ ಫಂಡ್ ಎಂದರೇನು? ಬಂಗಾರದಲ್ಲಿ ಹೂಡಿಕೆಯ ಲಾಭ-ನಷ್ಟಗಳು, ಇಟಿಎಫ್, ಬಾಂಡ್ ಇತ್ಯಾದಿಗಳ ಬಗ್ಗೆ ತಿಳಿಸುವುದಿಲ್ಲ. ಕೇವಲ ಶೇ.27ರಷ್ಟು ಭಾರತೀಯರು ಮಾತ್ರ ಹಣಕಾಸು ಸಾಕ್ಷರರಾಗಿದ್ದಾರೆ ಎನ್ನುತ್ತದೆ ಒಂದು ಸಮೀಕ್ಷೆ.

ಮನಿಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಮಾರುಕಟ್ಟೆ ಬಂಡವಾಳ ಮೌಲ್ಯದ ದೃಷ್ಟಿಯಿಂದ ಅಮೆರಿಕ, ಚೀನಾ, ಜಪಾನ್ ನಂತರ ಭಾರತದ ಸ್ಟಾಕ್ ಮಾರ್ಕೆಟ್ ಪ್ರಪಂಚದಲ್ಲಿಯೇ 4ನೇ ಅತಿ ದೊಡ್ಡದು! ಬಾಂಬೆ ಸ್ಟಾಕ್ ಎಕ್ಸ್ಚೇಂಜ್ (ಬಿಎಸ್ಇ) ಏಷ್ಯಾದಲ್ಲಿಯೇ ಅತ್ಯಂತ ಹಳೆಯದು. 1875ರಲ್ಲಿಯೇ ಇದರ ಸ್ಥಾಪನೆಯಾಗಿತ್ತು. 1986ರಲ್ಲಿ ಬಿಎಸ್ಇ ಬೆಂಚ್ ಮಾರ್ಕ್ ಇಂಡೆಕ್ಸ್ ಸೆನ್ಸೆಕ್ಸ್‌ಗೆ ಚಾಲನೆ ನೀಡಲಾಗಿತ್ತು. ಇದರ ಬಂಡವಾಳ ಮಾರುಕಟ್ಟೆ ಮೌಲ್ಯ 416 ಲಕ್ಷ ಕೋಟಿ ರುಪಾಯಿ. 5,647 ಷೇರುಗಳು ನೋಂದಣಿಯಾಗಿವೆ. ನ್ಯಾಶನಲ್ ಸ್ಟಾಕ್ ಎಕ್ಸ್ಚೇಂಜ್ (ಎನ್‌ಎಸ್ಇ) ವಿಶ್ವದಲ್ಲಿಯೇ 5ನೇ ದೊಡ್ಡ ಷೇರು ವಿನಿಮಯ ಕೇಂದ್ರ. ಇದು1992ರಲ್ಲಿ ಆರಂಭವಾಗಿದ್ದು, 2,671 ಷೇರುಗಳು ಲಿಸ್ಟ್ ಆಗಿವೆ. ಎನ್‌ಎಸ್ಇಯ ಮಾರುಕಟ್ಟೆ ಬಂಡವಾಳ ಮೌಲ್ಯ 447 ಲಕ್ಷ ಕೋಟಿ ರುಪಾಯಿ.

ಮ್ಯೂಚುವಲ್ ಫಂಡ್ ಸಿಪ್ ಮೂಲಕವೂ ದೊಡ್ಡ ಮೊತ್ತದ ಹೂಡಿಕೆ ಪ್ರತಿ ತಿಂಗಳೂ ಸ್ಟಾಕ್ ಮಾರ್ಕೆಟ್‌ಗೆ ಹರಿದು ಬರುತ್ತಿದೆ. 2026ರ ಮಾರ್ಚ್‌ನಲ್ಲಿ 32,087 ಕೋಟಿ ರುಪಾಯಿ ಹೂಡಿಕೆಯನ್ನು ಜನ ಮಾಡಿದ್ದರು. ದೇಶದ ಅತ್ಯಂತ ಹಳೆಯ ಮ್ಯೂಚುವಲ್ ಫಂಡ್ ಆಗಿರುವ ಯುನಿಟ್ ಟ್ರಸ್ಟ್ ಆಫ್ ಇಂಡಿಯಾ (ಯುಟಿಐ) 1964ರಲ್ಲೇ ಸ್ಥಾಪನೆಯಾಗಿತ್ತು. ಇಷ್ಟೆಲ್ಲ ಇದ್ದರೂ, ಈಗಲೂ ನಮ್ಮ ಜನಸಂಖ್ಯೆಯನ್ನು ಪರಿಗಣಿಸಿದರೆ ಸ್ಟಾಕ್ಸ್ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರು ಕಡಿಮೆಯೇ. 2025ರಲ್ಲಿ ಶೇ.9.5ರಷ್ಟು ಭಾರತೀಯರು ಮಾತ್ರ ಸ್ಟಾಕ್ಸ್ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಇನ್ವೆಸ್ಟ್ ಮಾಡುತ್ತಿದ್ದಾರೆ. ಇದರ ಅರ್ಥ ಇವೆರಡೂ ಹೂಡಿಕೆಗಳು ವ್ಯಾಪಕವಾಗಿ ಬೆಳೆಯಲು ಅವಕಾಶ ಇದೆ. ಹೀಗಿದ್ದರೂ, ಭಾರತೀಯರ ವೈಯಕ್ತಿಕ ಹಣಕಾಸು ವಿಚಾರಗಳಿಗೆ ಸಂಬಂಧಿಸಿ 25 ಆಶ್ಚರ್ಯಕರ ಸಂಗತಿಗಳನ್ನು ಪಟ್ಟಿ ಮಾಡಬಹುದು.

ಸಮೀಕ್ಷೆಯೊಂದರ ಪ್ರಕಾರ ನಗರಗಳಲ್ಲಿ ಶೇ.42ರಷ್ಟು ಕುಟುಂಬಗಳು ತಮ್ಮ ಮನೆಯ ಖರ್ಚು ವೆಚ್ಚಗಳ ಲೆಕ್ಕಗಳನ್ನು ಇಟ್ಟುಕೊಳ್ಳುವುದಿಲ್ಲ, ಲಿಖಿತ ಬಜೆಟ್ ಅನ್ನು ಮಾಡುವುದಿಲ್ಲ. ನಾವು ದುಡಿಯುತ್ತೇವೆ, ಸಂಪಾದಿಸಿದ್ದನ್ನು ನಾವೇ ಖರ್ಚು ಮಾಡುತ್ತೇವೆ. ಹೀಗಿರುವಾಗ ಬರೆದಿಡುವುದು, ಖರ್ಚನ್ನು ಪರಿಶೀಲಿಸುವುದು ಏಕೆ ಎಂಬ ಚಿಂತನೆ. ಆದರೂ, ದುಡಿದ ಹಣ ಎಲ್ಲಿಗೆ ಹೋಗುತ್ತಿದೆ ಎಂಬುದೇ ಗೊತ್ತಾಗುವುದಿಲ್ಲ ಎಂಬ ಮಾತನ್ನೂ ಅವರಿಂದ ಕೇಳಬಹುದು. ಎಲ್ಲರೂ ಹೀಗೆಯೇ? ಖಂಡಿತ ಅಲ್ಲ. ಭಾರತೀಯರು ಮೊದಲೇ ಉಳಿತಾಯ ಪ್ರಿಯರು. ಒಂದೊಂದು ರುಪಾಯಿಯನ್ನೂ ಲೆಕ್ಕವಿಟ್ಟು ಜೋಪಾನದಿಂದ ಕಾಪಿಟ್ಟು, ಹೂಡಿಕೆ ಮಾಡಿ ಆರ್ಥಿಕ ಪರಿಸ್ಥಿತಿಯನ್ನು ಕಾಲಾಂತರದಲ್ಲಿ ಸುಧಾರಿಸಿಕೊಂಡವರು ಅನೇಕ ಮಂದಿ.

ಭಾರತೀಯ ಕುಟುಂಬಗಳಲ್ಲಿ ನೇರವಾಗಿ ಈಕ್ವಿಟಿಗಳಲ್ಲಿ ಹೂಡಿಕೆ ಮಾಡುವವರು ಕೇವಲ ಶೇ.4ರಷ್ಟು ಮಂದಿ ಮಾತ್ರ. ಉಳಿದವರು ಎಫ್‌ಡಿ, ಚಿನ್ನ ಅಥವಾ ಸೇವಿಂಗ್ಸ್ ಅಕೌಂಟ್‌ಗಳ ಕಂಫರ್ಟ್ ಝೋನ್‌ನಲ್ಲಿ ಹಣವನ್ನು ಹೂಡಿಕೆ ಮಾಡುತ್ತಾರೆ. ಆದರೆ ಹಣದುಬ್ಬರ ಅವರ ಹೂಡಿಕೆಯ ಮೌಲ್ಯವನ್ನು ಕಳೆಯುತ್ತಿರುತ್ತದೆ.

ಸಮೀಕ್ಷೆಗಳ ಪ್ರಕಾರ ಕೌಟುಂಬಿಕ ಉಳಿತಾಯದಲ್ಲಿ ಶೇ.35ರಷ್ಟು ಬ್ಯಾಂಕ್ ಠೇವಣಿಗಳಲ್ಲಿದ್ದರೆ, ಶೇ.13ಕ್ಕಿಂತ ಕಡಿಮೆ ಮ್ಯೂಚುವಲ್ ಫಂಡ್‌ನಲ್ಲಿರುತ್ತದೆ. ಫಿಕ್ಸೆಡ್ ಡೆಪಾಸಿಟ್ ಎನ್ನುವುದೇ ಸುರಕ್ಷಿತ ಎಂಬ ಭಾವನೆ ನೀಡುತ್ತದೆ. ಹೀಗಾಗಿ ಜನಪ್ರಿಯವಾಗಿದೆ. ಆದರೆ ಸತ್ಯವೇನೆಂದರೆ ಅದು ನಿಧಾನವಾಗಿ ಸಂಪತ್ತನ್ನು ಕಳೆಯುತ್ತದೆ. ಶೇ.90ರಷ್ಟು ಪೋರ್ಟ್ ಫೋಲಿಯೊಗಳಲ್ಲಿ ಚಿನ್ನ, ಎಫ್‌ಡಿ ಮತ್ತು ರಿಯಲ್ ಎಸ್ಟೇಟ್ ಇರುತ್ತದೆ. ಇವೆಲ್ಲವೂ ಬಜೆಟ್ ಮತ್ತು ಪ್ರವೃತ್ತಿಗೆ ಸಂಬಂಧಿಸಿದ್ದು.

ಸಾಲ ಮತ್ತು ಇಎಂಐ ವಿಚಾರದಲ್ಲಿ ನೋಡಿ– ಹಲವರ ಶೇ.60ರಷ್ಟು ಆದಾಯ ಮನೆಯ ಸಾಲದ ಇಎಂಐಗೆ ಹೋಗುತ್ತದೆ. ಇಎಂಐ ಈಗ ಮಾಸಿಕ ವೆಚ್ಚ ಎಂಬುದಾಗಿ ಪರಿಗಣನೆಯಾಗಿದೆ. ಕಾರು ಸಾಲ, ಕ್ರೆಡಿಟ್ ಕಾರ್ಡ್ ಸಾಲವೂ ಹೆಚ್ಚುತ್ತಿದೆ. ಹಲವಾರು ಮಂದಿ ತೆರಿಗೆ ಉಳಿಸಲು ಮಾತ್ರ ಉಳಿತಾಯ ಮಾಡುತ್ತಾರೆ. ಶೇ.66ರಷ್ಟು ಜನರ ಬಳಿ ಟರ್ಮ್ ಇನ್ಶೂರೆನ್ಸ್ ಇರುವುದಿಲ್ಲ. ಶೇ.58ರಷ್ಟು ಮಂದಿ ನಿವೃತ್ತಿಯ ಪ್ಲಾನಿಂಗ್ ಅನ್ನು ಮುಂದೂಡುತ್ತಾರೆ. ಶೇ.60ರಷ್ಟು ಜನ ಒಂದೇ ಆದಾಯದ ಮೂಲವನ್ನುಹೊಂದಿದ್ದಾರೆ. ಶೇ.91ರಷ್ಟು ಜನ ತೀರಾ ವಿಳಂಬಿಸಿ ಹೂಡಿಕೆ ಮಾಡುತ್ತಾರೆ. ಶೇ.75 ಮಂದಿಯ ಬಳಿ ಎಮರ್ಜೆನ್ಸಿ ಫಂಡ್ ಇರುವುದಿಲ್ಲ. ಬಹುಪಾಲು ಕುಟುಂಬಗಳಲ್ಲಿ ಹಣದ ಬಗ್ಗೆ ಚರ್ಚೆಯಾಗುವುದಿಲ್ಲ. ನೂರಕ್ಕೆ ಹತ್ತು ಕುಟುಂಬಗಳು ಮಾತ್ರ ನಿಯಮಿತವಾಗಿ ಹೂಡಿಕೆ ಮಾಡುತ್ತವೆ. ಬ್ಯಾಂಕ್ ಖಾತೆಯಲ್ಲೋ, ಎಫ್‌ಡಿಯಲ್ಲೋ ಹಣ ಇರುತ್ತದೆ. ಸಾಲವೀಗ ಲೈಫ್ ಸ್ಟೈಲ್‌ನ ಸಾಮಾನ್ಯ ಭಾಗವಾಗಿದೆ. ಆದಾಯದಲ್ಲಿ ಶೇ.37–50ರಷ್ಟು ಮೊತ್ತವು ಇಎಂಐಗೆ ಹೋಗುವುದು ಸರ್ವೇಸಾಮಾನ್ಯವಾಗಿದೆ. ಆದಾಯದಲ್ಲಿ ಶೇ.60ರಷ್ಟು ಪಾಲನ್ನೂ ಸಾಲದ ಕಂತುಗಳಿಗೆ ಕಟ್ಟುವವರು ಇದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕಾರನ್ನು ಖರೀದಿಸುವುದು ಪ್ರತಿಷ್ಠೆ–ಅಂತಸ್ತಿನ ವಿಚಾರವೂ ಆಗಿರುವುದು ದುರ್ದೈವ. ಬ್ಯಾಂಕ್ ಬಜಾರ್ ಪ್ರಕಾರ ಮೊದಲ ಸಲ ಕಾರು ಖರೀದಿಸುವ ಶೇ.68ರಷ್ಟು ಮಂದಿ 5–7 ವರ್ಷಗಳಿಗೆ ಸಾಲ ಪಡೆದು ಕಾರನ್ನು ಕೊಳ್ಳುತ್ತಾರೆ. ಒಂದು ಸಲ ಕಾರು ಖರೀದಿಸಿದ ಬಳಿಕ ಅದರ ಮೌಲ್ಯ ಇಳಿಯುತ್ತದೆ. ಪ್ರತಿ ತಿಂಗಳೂ ಅದರ ನಿರ್ವಹಣೆಯ ಖರ್ಚು ಜತೆಯಲ್ಲಿರುತ್ತದೆ. ಅನುಕೂಲಕ್ಕಿಂತಲೂ ಪ್ರತಿಷ್ಠೆ, ಅಂತಸ್ತು, ಕೀಳರಿಮೆ ನಿವಾರಣೆಯ ಸಲುವಾಗಿ ಕಾರನ್ನು ಖರೀದಿಸುವ ಪ್ರವೃತ್ತಿ ಆರ್ಥಿಕವಾಗಿ ದುಬಾರಿಯಾಗುತ್ತದೆ. ಅನೇಕ ಮಂದಿ ಶ್ರೀಮಂತಿಕೆ ಬರಬೇಕಿದ್ದರೆ ಭ್ರಷ್ಟಾಚಾರ ಅಥವಾ ತಾತ–ಮುತ್ತಾತನ ಕಾಲದಿಂದ ಬಂದಿರುವ ಆಸ್ತಿಪಾಸ್ತಿಗಳು ಇರಬೇಕು ಎಂದು ನಂಬುತ್ತಾರೆ. ಸಂಪತ್ತಿನ ಗಳಿಕೆಗೆ ಅದೃಷ್ಟ ಬೇಕು ಎಂದು ಭಾವಿಸುವವರೇ ಹೆಚ್ಚು. ಪ್ರಾಮಾಣಿಕರಾಗಿದ್ದೂ ಸಂಪತ್ತು ಗಳಿಸಬಹುದು ಎಂಬುದನ್ನು ನಂಬಲೂ ಕಷ್ಟಪಡುತ್ತಾರೆ.

ದೊಡ್ಡ ಸಂಬಳವಿದ್ದರೆ ಬೇಗ ಸಿರಿವಂತರಾಗಬಹುದು ಎನ್ನುವುದು ಅರ್ಧ ಸತ್ಯ. ಸಣ್ಣ ಸಂಬಳ ಪಡೆಯುವವರೂ ಸರಿಯಾದ ರೀತಿಯಲ್ಲಿ ಹೂಡಿಕೆ ಮಾಡುವ ಮೂಲಕ ಶ್ರೀಮಂತರಾಗಬಹುದು. ಮ್ಯೂಚುವಲ್ ಫಂಡ್ ಸಿಪ್ ಮೂಲಕ ಪ್ರತಿ ತಿಂಗಳೂ ಹೂಡಿಕೆ ಮಾಡುವ ಮೂಲಕ ಗುರಿಗಳನ್ನು ಸಾಧಿಸಬಹುದು. ಆದರೆ ಮನಸ್ಸು ಮಾಡಬೇಕು.

ಎಷ್ಟೋ ಜನ ವಯಸ್ಸು 45 ಆಗಿದ್ದರೂ ನಿವೃತ್ತಿಯ ಬದುಕಿಗೆ ಪ್ಲಾನ್ ಮಾಡಿರುವುದಿಲ್ಲ. ಇದು ಇಳಿಗಾಲದಲ್ಲಿ ಬದುಕನ್ನು ದುಸ್ತರಗೊಳಿಸಬಲ್ಲುದು. ಪರಾವಲಂಬನೆಗೆ ಕಾರಣವಾಗುತ್ತದೆ. ಇಂಡಿಯಾ ಸ್ಕಿಲ್ ವರದಿಯ ಪ್ರಕಾರ ಶೇ.42.6ರಷ್ಟು ಮಂದಿ ಪದವೀಧರರು ಮಾತ್ರ ಉದ್ಯೋಗಕ್ಕೆ ಅರ್ಹರು. ಕುಟುಂಬಗಳು ಮಕ್ಕಳ ಪದವಿ ಮುಗಿಯುವ ವೇಳೆಗೆ ಲಕ್ಷಾಂತರ ರುಪಾಯಿಗಳನ್ನು ಖರ್ಚು ಮಾಡುತ್ತಿರುತ್ತವೆ. ಆದರೆ, ಜಾಬ್ ಮಾರ್ಕೆಟ್‌ನಲ್ಲಿ ನಿರ್ದಿಷ್ಟ ಕೌಶಲಗಳು ಅಗತ್ಯ ಇರುತ್ತವೆ. ಕೇವಲ ಸರ್ಟಿಫಿಕೇಟ್ ಮಾತ್ರ ಸಾಕಾಗುವುದಿಲ್ಲ.

ಮಧ್ಯಮ ವರ್ಗದ ಜನ ಬ್ಯಾಂಕ್ ಫಿಕ್ಸೆಡ್ ಡೆಪಾಸಿಟ್‌ಗಳಲ್ಲಿ ಹೆಚ್ಚು ಹೂಡಿಕೆ ಮಾಡುತ್ತಾರೆ. ಅದರಿಂದ ಶೇ.5.5–6.5ರಷ್ಟು ಆದಾಯ ಸಿಗಬಹುದು. ಎಲ್‌ಐಸಿಯಲ್ಲಿ ಇನ್ವೆಸ್ಟ್ ಮಾಡುತ್ತಾರೆ. ಹೂಡಿಕೆಯ ದೃಷ್ಟಿಯಿಂದ ವಿಮೆ ಅಷ್ಟೊಂದು ಒಳ್ಳೆಯದಲ್ಲ, ಇದರಲ್ಲಿ ಶೇ.4–5ರಷ್ಟು ಆದಾಯ ಸಿಗಬಹುದು. ಪ್ರಾವಿಡೆಂಟ್ ಮತ್ತು ಪೆನ್ಷನ್ ಫಂಡ್‌ಗಳಲ್ಲಿ ಶೇ.7–8ರಷ್ಟು ದೊರೆಯಬಹುದು. ಆದರೆ ಐತಿಹಾಸಿಕ ಅಂಕಿ ಅಂಶಗಳ ಪ್ರಕಾರ, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಗೆ ಅಂದಾಜು ಶೇ.12–15ರಷ್ಟು ಆದಾಯ ಪಡೆಯಬಹುದು. ನೇರವಾಗಿ ಸ್ಟಾಕ್‌ಗಳಲ್ಲಿ ಹೂಡಿಕೆಯಿಂದ ದೀರ್ಘಾವಧಿಗೆ ಶೇ.14–18ರಷ್ಟು ಗಳಿಸಬಹುದು ಎನ್ನುತ್ತಿವೆ ವರದಿಗಳು.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ 2023ರ ವರದಿಯ ಪ್ರಕಾರ ಶೇ.80ರಷ್ಟು ಹಣವನ್ನು ಅಲ್ಪ ಬಡ್ಡಿ ಆದಾಯದ ಸಾಧನಗಳಲ್ಲಿ ಜನ ಹೂಡುತ್ತಾರೆ. ಉದಾಹರಣೆಗೆ ಶೇ.7ರಷ್ಟು ಬಡ್ಡಿ ಸಿಗುತ್ತದೆ ಎಂದು ಇಟ್ಟುಕೊಳ್ಳಿ. ಹಣದುಬ್ಬರ ಶೇ.6.50 ರಷ್ಟಿದ್ದರೆ ಉಳಿಯುವುದೆಷ್ಟು? ಕೇವಲ ಶೇ.0.5ರಷ್ಟು ಮಾತ್ರ!

ಬ್ಯಾಂಕ್ ಎಫ್‌ಡಿ, ವಿಮೆ, ಪಿಎಫ್, ಚಿನ್ನದಲ್ಲಿ ಬಹುಪಾಲು ಹೂಡಿಕೆ ನಡೆಯುತ್ತದೆಯಾದರೂ, ಅದರಲ್ಲಿ ಹಣ ಬೆಳೆಯುವುದು ನಿಧಾನ ಎನ್ನುವುದನ್ನು ಚಾರಿತ್ರಿಕ ಅಂಕಿ ಅಂಶಗಳು ಬಿಂಬಿಸುತ್ತವೆ. ಆದರೆ ಮ್ಯೂಚುವಲ್ ಫಂಡ್, ನೇರ ಈಕ್ವಿಟಿಗಳಲ್ಲಿ ಹೂಡಿಕೆಯಲ್ಲಿ ಹಣ ಬೆಳೆಯುತ್ತದೆ ಎಂಬುದನ್ನು ಇದುವರೆಗೆ ಅಂಕಿ ಅಂಶಗಳು ತೋರಿಸಿವೆ. ಆದರೆ, ಅದರಲ್ಲಿ ಹೂಡಿಕೆ ಮಾಡುತ್ತಿರುವ ಭಾರತೀಯರ ಸಂಖ್ಯೆ ಅತ್ಯಲ್ಪ.

ಈಕ್ವಿಟಿ ಅರ್ಥವಾಗಲ್ಲ ಎಂಬ ಕಾರಣಕ್ಕೆ ಹಲವಾರು ಮಂದಿ ಅದರಲ್ಲಿ ಹೂಡಿಕೆ ಮಾಡಲು ಭಯಪಡುತ್ತಾರೆ. ಎಫ್‌ಡಿ ಮತ್ತು ಎಲ್‌ಐಸಿ ಸುಲಭ ಮತ್ತು ಸೇಫ್ ಎಂಬ ಭಾವನೆ ಅವರಲ್ಲಿರುತ್ತದೆ. ಆದರೆ ಅದೇ ಭ್ರಮೆ ಎಂಬ ಅರಿವು ಮೂಡಬೇಕು. ಇಲ್ಲದಿದ್ದರೆ ಸಮಯ ಓಡುತ್ತಿರುತ್ತದೆ, ಆದರೆ ಹಣ ಬೆಳೆಯುವುದಿಲ್ಲ. ಉದಾಹರಣೆಗೆ 10 ಲಕ್ಷ ರುಪಾಯಿಗಳ ಎಫ್‌ಡಿನಲ್ಲಿ ಶೇ.6ರಷ್ಟು ಬಡ್ಡಿಯಂತೆ 20 ವರ್ಷಗಳಲ್ಲಿ 32 ಲಕ್ಷ ರುಪಾಯಿಗಳಾಗುತ್ತದೆ ಎಂದು ಇಟ್ಟುಕೊಳ್ಳಿ. ಆದರೆ, ಶೇ.6ರಷ್ಟು ಹಣದುಬ್ಬರದಿಂದ 20 ವರ್ಷದ ಬಳಿಕ 10 ಲಕ್ಷದ ಮೌಲ್ಯ ಗಣನೀಯವಾಗಿ ಸವಕಳಿಯಾಗಿರುತ್ತದೆ. ಆಗ ಅದು ಬೆಳವಣಿಗೆಯಾಗುವುದಿಲ್ಲ. ಶೇ.6ರಷ್ಟು ಬಡ್ಡಿಯಲ್ಲಿ 1 ಲಕ್ಷ ರುಪಾಯಿಗಳನ್ನು 20 ವರ್ಷಕ್ಕೆ ಹೂಡಿದರೆ 3.2 ಲಕ್ಷ ರುಪಾಯಿ ಸಿಗಬಹುದು. ಆದರೆ ಶೇ.6ರಷ್ಟು ಹಣದುಬ್ಬರದ ಪರಿಣಾಮ 1 ಲಕ್ಷ ರುಪಾಯಿಯ ನಿಜವಾದ ಮೌಲ್ಯ 1.8 ಲಕ್ಷ ರುಪಾಯಿಗೆ ಇಳಿದಿರುತ್ತದೆ.

ಹಾಗಾದರೆ ಇಂಥ ವಿಷಯಗಳು ಎಳೆಯ ವಯಸ್ಸು ಬಿಡಿ, ಹಿರಿಯರಿಗೂ ಏಕೆ ಗೊತ್ತಾಗುವುದಿಲ್ಲ?! ನಮ್ಮ ಶಾಲಾ ಕಾಲೇಜುಗಳಲ್ಲಿ ಬೀಜ ಗಣಿತವನ್ನು ಕಲಿಸುತ್ತಾರೆ. ಭೂಮಿಯ ಪದರಗಳ ಬಗ್ಗೆ ವಿವರಿಸುತ್ತಾರೆ. ಆದರೆ ಹಣ ಹೇಗೆ ಕೆಲಸ ಮಾಡುತ್ತದೆ? ಯಾವ ರೀತಿ ಹಣವನ್ನು ಉಳಿಸಬೇಕು, ಎಷ್ಟು ಸಾಲ ಮಾಡಬೇಕು? ಮ್ಯೂಚುವಲ್ ಫಂಡ್ ಎಂದರೇನು? ಬಂಗಾರದಲ್ಲಿ ಹೂಡಿಕೆಯ ಲಾಭ-ನಷ್ಟಗಳು, ಇಟಿಎಫ್, ಬಾಂಡ್ ಇತ್ಯಾದಿಗಳ ಬಗ್ಗೆ ತಿಳಿಸುವುದಿಲ್ಲ. ಕೇವಲ ಶೇ.27ರಷ್ಟು ಭಾರತೀಯರು ಮಾತ್ರ ಹಣಕಾಸು ಸಾಕ್ಷರರಾಗಿದ್ದಾರೆ ಎನ್ನುತ್ತದೆ ಒಂದು ಸಮೀಕ್ಷೆ. ಆದ್ದರಿಂದ ಸಿಪ್ ಎಂದರೆ ಅನೇಕ ಮಂದಿಗೆ ತಿಳಿದಿರುವುದಿಲ್ಲ. ಈಕ್ವಿಟಿ ಎಂದರೇನು ಎಂಬುದು ಗೊತ್ತಿರುವುದಿಲ್ಲ. ಸಿಎಜಿಆರ್, ಎನ್‌ಎವಿ, ಪಿಇ ರೇಶಿಯೊ, ಎಯುಎಂ, ಇಎಲ್‌ಎಸ್‌ಎಸ್ ಎಂದರೇನು ಎಂಬುದು ನಿಲುಕದ ವಿಚಾರವಾಗುತ್ತದೆ. ಇವೆಲ್ಲದರ ಜತೆಗೆ ಮಿಸ್ ಸೆಲ್ಲಿಂಗ್ ಕೂಡ ನಡೆಯುತ್ತದೆ. ಯುಲಿಪ್‌ಗಳನ್ನು ಮ್ಯೂಚುವಲ್ ಫಂಡ್‌ಗಳೆಂಬಂತೆ, ವಿಮೆ ಪ್ಲಾನ್‌ಗಳನ್ನು ಹೂಡಿಕೆಯ ಪ್ಲಾನ್‌ಗಳೆಂಬಂತೆ ಮಾರಾಟ ಮಾಡುವುದು ಮಿಸ್ ಸೆಲ್ಲಿಂಗ್ ಎನ್ನಿಸುತ್ತದೆ. ಆದರಿಂದ ಇಂಥ ವೈಯಕ್ತಿಕ ಹಣಕಾಸು ವಿಷಯಗಳ ಬಗ್ಗೆ ಚಿಕ್ಕಂದಿನಿಂದಲೇ ತಿಳಿವಳಿಕೆ ಪಡೆಯುವುದು ಅತ್ಯಂತ ಮುಖ್ಯ.

ಭಟ್ಟರ್ ಸ್ಕಾಚ್

- **ಶ್ಯಾಮ ಭಟ್ಟ, ಸಕ್ರೆಬೈಲು**
  ಭಟ್ರೇ, ಮನೆಯಲ್ಲಿ ಹೆಂಡತಿಯೊಂದಿಗೆ ವಾಗ್ವಾದದಲ್ಲಿ ಏಗಿ ಯಶಸ್ವಿಯಾಗಿರುವ ನಾನು ನ್ಯಾಯವಾದಿ ಆದರೆ ಯಶಸ್ವಿ ಆಗ್ತೀನಾ?
  – **ನಿಮಗೆ ಕುಟುಂಬ ನ್ಯಾಯಾಲಯವೇ ಲಾಯಕ್ಕು!**

- **ಶೀಲಾ, ಒಂಟಿಕೊಪ್ಪಲು, ಮೈಸೂರು**
  ಭಟ್ರೇ, ದೂರದ ತೀರಗಳನ್ನು ಒಂದು ಗೂಡಿಸುವ ಸೇತುವೆ ಅನಾವರಣಕ್ಕೆ 'ವಿಶ್ವವಾಣಿ' ಭಟ್ಟರು ಸಾಕ್ಷಿ ಆಗಿದ್ದು ಏಕೆ?
  – **ನನ್ನದು ಜನರನ್ನು ಸೇರಿಸುವ ಸೇತುವೆ ಕೆಲಸ ಅಲ್ಲವೇ?!**

- **ಸಂಡೂರು ಭೋಗಶೆಟ್ಟಿ, ಮೈಸೂರು**
  ಕಾಂಗ್ರೆಸ್ಸಿನಲ್ಲಿ ಕ್ಷೋಭೆ ಉಂಟಾದರೆ ಅದು ಸಾಬರ ಗದ್ದಲ. ಜೆಡಿಎಸ್‌ನಲ್ಲಿ ಆದರೆ ಅದು?
  – **ಗೌಡರ ಗದ್ದಲ!**

- **ವೆಂಕಣ್ಣ ಬೀಗಮುದ್ರೆ, ಬೆಂಗಳೂರು**
  ಭಟ್ರೇ, ಮದುವೆ ಮನೆಯಲ್ಲಿ ಆರಂಭದಿಂದ ಅಂತ್ಯದವರೆಗೆ ಹರ್ಷಾತಿರೇಕಕ್ಕೆ ಹೋಗದೇ ಸಮಚಿತ್ತ ಕಾಯ್ದುಕೊಳ್ಳುವವರು ಯಾರು?
  – **ಮಂತ್ರ ಪಠಿಸುವ ಪುರೋಹಿತರು, ವಾಲಗದವರು, ಅಡುಗೆ ಬಡಿಸಿ ಹೊಟ್ಟೆ ತುಂಬಿಸುವ ಭಟ್ಟರು!**

- **ಸುಭದ್ರಾ ಪಾಟೀಲ, ಡಾಲರ್ಸ್ ಕಾಲೋನಿ**
  ಭಟ್ರೇ, ಅಕ್ಷಯ ತೃತೀಯವನ್ನು ಸಾಯಿ ಗೋಲ್ಡ್ ಪ್ಯಾಲೇಸ್ ನಲ್ಲಿ ಆಚರಿಸಲಾಗದ ಗಂಡಸರು ತಮ್ಮ ಹೆಂಡಂದಿರಿಗೆ ಸಮಾಧಾನ ಹೇಳುವ ಒಣ ಮಾತು?
  – **'ಚಿನ್ನಾ ನಿನ್ನ ಮುದ್ದಾಡುವೆ'!**

- **ಕಿಟ್ಟಿ, ಸಂಜಯನಗರ**
  ಭಟ್ರೇ, ಕೃತಕ ಬುದ್ಧಿಮತ್ತೆ ಬಳಸಿ ಕೃತಿರಚನೆ ಮಾಡಲು ಮೊಯಿಲಿಯವರು ಯಾಕೆ ಇನ್ನೂ ಕೈ ಹಾಕಿಲ್ಲ?
  – **ಏನೇ ಬಳಸಿದರೂ ಜನ ತಮ್ಮ ಕೃತಿಯನ್ನು ಓದುವುದಿಲ್ಲ ಎಂಬುದು ಅವರಿಗೆ ಗೊತ್ತಿದೆ ಕಿಟ್ಟಿ!**

- **ಭರತ್ ರಾವ್, ಚನ್ನಪಟ್ಟಣ**
  ಭಟ್ರೇ, ಮದುವೆ ನಂತರ ಪುರುಷರು ಏಕಪತ್ನಿ ವ್ರತ ಪಾಲಿಸುವುದು ಅನಿವಾರ್ಯವೇಕೆ?
  – **ಯಾಕೆಂದರೆ, ಒಬ್ಬಳನ್ನೇ ನಿಭಾಯಿಸಲು ಸಾಧ್ಯವಾಗದವನು ಇನ್ನೊಬ್ಬಳನ್ನು ಆಹ್ವಾನಿಸುವುದು 'ಆತ್ಮಹತ್ಯೆ'ಗೆ ಸಮಾನ ಎಂಬುದು ಬೇಗ ಅರ್ಥವಾಗಿಬಿಡುತ್ತದೆ!**

- **ರಾಜಶ್ರೀ ಹೊಸಮನೆ, ಬೆಂಗಳೂರು**
  ಭಟ್ರೇ, ನಿಮ್ಮ ಪ್ರಕಾರ ಮೊಬೈಲ್ ಅಂದ್ರೆ ಏನು?
  – **ಹತ್ತಿರದ ಸಂಬಂಧಿ !**

ಬೇಸಗೆಯ ಬಿಸಿಲಿನಲ್ಲಿ ಮಕ್ಕಳೇಕೆ ಕಾಡಲ್ಲಿ ಸುತ್ತುತ್ತಿದ್ದರು?

ಹಾಡಿ ಹಕ್ಕಲುಗಳ ಕಾಡು ಮರಗಿಡಗಳ ನಡುವೆಯೇ, ಬೃಹದಾಕಾರವಾಗಿ ಬೆಳೆದು ನಿಂತಿರುವ ಕಾಟುಮಾವಿನ ಮರಗಳ ಮಜಲೇ ಭಿನ್ನ. ಒಂದೊಂದು ಮರದಲ್ಲೂ ಸಾವಿರಾರು ಪುಟ್ಟ ಪುಟ್ಟ ಹಣ್ಣುಗಳು; ಒಂದೊಂದು ಮರದ ಹಣ್ಣಿನ ರುಚಿಯೂ ವಿಭಿನ್ನ. ಮಕ್ಕಳಿಗೆ ಹೆಬ್ಬಲಸಿನ ಹಣ್ಣಿನ ರುಚಿ ಹತ್ತಿದರೆ, ಮತ್ತೊಮ್ಮೆ ಅದನ್ನು ತಿನ್ನಲು ಕಾಯುತ್ತಾ ಕುಳಿತಿರುತ್ತಾರೆ. ಬಲಿತ ಹಣ್ಣನ್ನು ತಂದು, ಮನೆ ಎದುರಿನ ಹುಲ್ಲುಕುತ್ರಿಯ ಬುಡದಲ್ಲಿಟ್ಟು, ಒಂದೆರಡು ದಿನಗಳಲ್ಲಿ ಅದು ಹಣ್ಣಾದಾಗ ತಿನ್ನುವುದು, ಬೇಸಗೆಯಲ್ಲಿ ಶಾಲಾ ಮಕ್ಕಳ ನೆಚ್ಚಿನ ಹವ್ಯಾಸ.

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಮೊದಲೆಲ್ಲಾ ಇದನ್ನು ಯೋಚಿಸಿದಾಗ ಬಹಳ ಆಶ್ಚರ್ಯವೂ ಆಗುತ್ತಿತ್ತು, ವಿಸ್ಮಯವೂ ಎನಿಸುತ್ತಿತ್ತು. ಈಗ ಅದಕ್ಕೆ ಉತ್ತರ ಸುಮಾರಾಗಿ ಹೊಳೆದಿದೆ ಎಂದುಕೊಂಡಿದ್ದೇವೆ. ಇವೆಲ್ಲಾ ಪ್ರಕೃತಿಯ ನಿಯಮಗಳು ಎಂಬುದೇ ಆ ಸರಳ ಉತ್ತರ. ಪ್ರಶ್ನೆ ಏನೆಂದರೆ, ಬೇಸಗೆಯ ತಿಂಗಳುಗಳಲ್ಲೇ ಏಕೆ ನಾನಾ ರೀತಿಯ ಹಣ್ಣುಗಳು ಮಾಗುತ್ತವೆ?

ಈ ವಿದ್ಯಮಾನವನ್ನು ಸ್ಪಷ್ಟವಾಗಿ ಗುರುತಿಸಲು, ಫ್ರಿಜ್ ಸಾರ್ವತ್ರಿಕವಾಗುವ ಕಾಲಕ್ಕಿಂತ ತುಸು ಹಿಂದೆ ಹೋಗಬೇಕು; ಕೃತಕವಾಗಿ ಹಣ್ಣು ಮಾಡುವ ತಂತ್ರವು ಸಾರ್ವತ್ರಿಕವಾಗುವ ಕಾಲಕ್ಕಿಂತ ಮುಂಚೆ ಹೋಗಬೇಕು; ತ್ವರಿತವಾಗಿ ಒಂದೂರಿನಿಂದ ಇನ್ನೊಂದೂರಿಗೆ ಹಣ್ಣುಗಳನ್ನು ಸಾಗಿಸುವ ಸಂವಹನ ವ್ಯವಸ್ಥೆ ದೃಢಗೊಳ್ಳುವದಕ್ಕಿಂತ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳಬೇಕು; ನಗರದ ಯಾಂತ್ರಿಕ ಬದುಕಿನಿಂದ ಬಿಡುಗಡೆಗೊಂಡು ಹಳ್ಳಿಯ ಸರಳ ದಿನಚರಿಯನ್ನು ನೆನಪಿಸಿಕೊಳ್ಳಬೇಕು.

ಸರಕಾರಿ ಶಾಲೆಯಲ್ಲಿ ಓದುತ್ತಿದ್ದ ನಮಗೆ, ಮಾರ್ಚ್ ಕೊನೆಯ ವಾರಕ್ಕಾಗಲೇ ಪರೀಕ್ಷೆಗಳು ಮುಗಿದು ರಜೆಗಳು ಶುರು; ನಂತರ ಜೂನ್ 1ರಂದೇ ಶಾಲೆಯತ್ತ, ಪಾಠಗಳತ್ತ ಮುಖ ಮಾಡುತ್ತಿದ್ದ ದಿನಗಳು. ನಮ್ಮೂರಲ್ಲಿ ಮಾರ್ಚ್‌ನಿಂದ ಮೇ ಕೊನೆಯ ವಾರದ ತನಕ ಬಿರುಸಾದ ಬೇಸಗೆ, ಬೆವರು ಸುರಿವ ಬೇಗೆ! ಸುಮಾರು ಎರಡು ತಿಂಗಳು ಪೂರ್ತಿ ರಜಾ ಇರುತ್ತಿತ್ತು; ಅಷ್ಟೂ ದಿನಗಳಲ್ಲಿ, ಪಾಠಗಳ, ಟ್ಯೂಷನ್ ಕ್ಲಾಸಿನ, ಮುಂದಿನ ಅದ್ಯಾವುದೋ ಎಂಟ್ರೆನ್ಸ್ ಪರೀಕ್ಷೆಯ ಅಥವಾ ಬೇಸಗೆ ಶಿಬಿರದ ಗೊಡವೆ ಇಲ್ಲದೇ, ನಮ್ಮಷ್ಟಕ್ಕೆ ನಾವು ಸುತ್ತಾಡುವ ಸ್ವಾತಂತ್ರ್ಯ. ಅದೇ ಸಮಯದಲ್ಲಿ ನಮ್ಮ ಬಾಯಿ ರುಚಿ ತಣಿಸುತ್ತಾ, ಬಿಸಿಲಿನ ಬೇಗೆ ತುಸು ತಂಪು ನೀಡುತ್ತಾ, ಬಣ್ಣ ಬಣ್ಣಗಳಿಂದ ಕಾಣಿಸಿಕೊಳ್ಳುತ್ತಿದ್ದವು ಆ ಹಣ್ಣುಗಳು!

ನಮ್ಮ ಹಳ್ಳಿ ಮನೆ ಇದ್ದದ್ದು, ಒಂದು ಗದ್ದೆ ಬೈಲಿನ ತುದಿಯಲ್ಲಿ; ಆ ಗದ್ದೆ ಬೈಲಿನ ಇಕ್ಕೆಲಗಳಲ್ಲೂ, ಬೇರೆಲ್ಲಾ ಜಾಗದಲ್ಲೂ ಇದ್ದದ್ದು ಹಾಡಿ ಅಥವಾ ಹಕ್ಕಲು, ಅಂದರೆ, ತೀರಾ ದಟ್ಟವಾಗಿಲ್ಲದ ಕಾಡು. ಇಂತಹ, ಹದವಾಗಿ ಬೆಳೆದ ಮರಗಿಡಗಳಿಂದ, ಪೊದೆಗಳಿಂದ ತುಂಬಿದ ಹಾಡಿ ಅಥವಾ ಹಕ್ಕಲಿನಲ್ಲಿ ನಾವು ಮಕ್ಕಳು ಓಡಾಡುವುದು ಸುಲಭ; ದಟ್ಟ ಕಾಡಿನ ನಿಗೂಢತೆ, ಅಪಾಯಸಂಭಾವ್ಯತೆಗಳು ಇಲ್ಲಿ ತೀರಾ ಕಡಿಮೆ. ಆದ್ದರಿಂದಲೇ, ಬೇಸಗೆಯ ರಜಾ ದಿನಗಳಲ್ಲಿ ಪ್ರತಿ ದಿನ ಎಂಬಂತೆ ಹಾಡಿ ಹಕ್ಕಲುಗಳಲ್ಲಿ ಓಡಾಡುತ್ತಿದ್ದೆವು; ಸುತ್ತಾಡುತ್ತಿದ್ದೆವು. ಆಗ ನಮ್ಮ ಕಣ್ಣಿಗೆ ಬೀಳುವ ಹಣ್ಣುಗಳು, ಮೈಮನಗಳನ್ನು ತಣಿಸುತ್ತಿದ್ದ ಪರಿ ಬೆರಗುಹುಟ್ಟಿಸುವಂತಹದ್ದು. ಆ ಹಣ್ಣುಗಳಲ್ಲೂ ಅದೆಷ್ಟು ವೈವಿಧ್ಯ! ಬೇಸಗೆಯಲ್ಲಿ ನಮ್ಮ ಹಳ್ಳಿ ಮನೆಯ ಸುತ್ತಲೂ ನಾನು ರುಚಿಕಂಡ ಹಣ್ಣುಗಳ ಕುರಿತು ಬರೆಯುವಾಗ, ಯಾವುದಕ್ಕೆ ಮೊದಲ ಸ್ಥಾನ ನೀಡಬೇಕು ಎಂದು ನಿರ್ಧರಿಸಲು ಕಷ್ಟಸಾಧ್ಯವಾಗಿಸುವಂತಿತ್ತು, ಆ ವೈವಿಧ್ಯ.

ನಮ್ಮ ಮನೆಯ ಹಿಂಭಾಗದಲ್ಲಿ ಸಣ್ಣ ಗುಡ್ಡದಂತೆ ಮೇಲೇರಿ ಹೋಗಿದ್ದ ದರೆಯ ನಡುವಿನ ಅಂಕುಡೊಂಕು ದಾರಿಯನ್ನೇರಿ ಹೋದರೆ, ಸಾಲಾಗಿ ಹಕ್ಕಲುಗಳು ಸಿಗುತ್ತಿದ್ದವು. ಕೆಳಭಾಗದಲ್ಲಿದ್ದ ಗದ್ದೆ ಬೈಲಿಗೆ ಅನುಗುಣವಾಗಿದ್ದ ಆ ಹಕ್ಕಲುಗಳು, ಬೇರೆ ಬೇರೆ ಕೃಷಿಕರ ಒಡೆತನದಲ್ಲಿದ್ದವು. ಆದರೆ, ಅಲ್ಲಿ ಸಿಗುವ ಕಾಡು ಹಣ್ಣುಗಳನ್ನು ಮಕ್ಕಳು ಆರಿಸಿ, ಕೊಯ್ದು ತಿನ್ನಲು ಯಾವುದೇ ನಿರ್ಬಂಧಗಳಿರಲಿಲ್ಲ; ಹಳ್ಳಿಯ ಮಕ್ಕಳು ಯಾರ ಹಾಡಿಯಲ್ಲಾದರೂ, ಹಕ್ಕಲಲ್ಲಾದರೂ ಓಡಾಡಬಹುದಿತ್ತು, ಅಲ್ಲಿನ ಹಣ್ಣುಗಳನ್ನು ತಿನ್ನಬಹುದಿತ್ತು. ಅಂತಹ ಹಕ್ಕಲಿನ ಮರಗಳ ಪೈಕಿ ತುಸು ಅನನ್ಯ, ವಿಶಿಷ್ಟ ಎಂದರೆ ಮುರಿನ ಹಣ್ಣಿನ ಮರ. ಅಲ್ಲಿ ಆರೆಂಟು ಮುರಿನ ಹಣ್ಣಿನ ಮರಗಳಿದ್ದವು; ಕೆಲವು ಮರಗಳಲ್ಲಿ ಹೇರಳ ಕಾಯಿ, ಹಣ್ಣುಗಳು. ಅದೇಕೋ, ಒಂದೊಂದು ಮರಗಳಲ್ಲಿ ಕಾಯಿಗಳೂ ಕಡಿಮೆ. ಇದು ಸಹ ಪ್ರಕೃತಿಯ ನಿಯಮ ತಾನೆ. ಜಾಸ್ತಿ ಹಣ್ಣುಗಳಿರುವ ಮುರಿನ ಮರ ಏರಿ, ಕೆಲವು ಕೊಂಬೆಗಳನ್ನು ಅಲುಗಾಡಿಸಿದಾಗ, ಉದುರಿ ಬೀಳುತ್ತಿದ್ದವು ಕೆಂಪನೆಯ ಮುರಿನ ಹಣ್ಣು; ಲಿಂಬೆ ಹಣ್ಣಿನ ಗಾತ್ರ, ದಟ್ಟ ಕೆಂಪನೆಯ ತಿರುಳು, ಅದಕ್ಕೂ ಹೆಚ್ಚು ಕೆಂಪಗಾಗಿದ್ದ ಸಿಪ್ಪೆ; ಒಳಗಿನ ಮೆದುವಾದ ತಿರುಳನ್ನು ತಿಂದಾಗ, ಬೇಸಗೆಯ ದಾಹ ಮಾಯ; ಆ ಮರಗಳಲ್ಲಿ ಕಾಯಿಗಳು ಪೂರ್ತಿ ಹಣ್ಣಾಗಲು ಮೂರ್‍ನಾಲ್ಕು ವಾರಗಳೇ ಬೇಕಾಗುತ್ತಿತ್ತು; ಪ್ರತಿದಿನವೆಂಬಂತೆ ನಾಲ್ಕಾರು ಮುರಿನ ಹಣ್ಣನ್ನು ತಿನ್ನುತ್ತಿದ್ದ ನಮ್ಮನ್ನು ಕಂಡು ಮನೆಯ ಹಿರಿಯರು ಹೇಳುತ್ತಿದ್ದರು: 'ಮಕ್ಕಳೇ, ಪ್ರತಿ ದಿನ ತಿನ್ನಬೇಡಿ, ಆ ಹಣ್ಣಿನಲ್ಲಿ ಅದೆಂತಹದೋ ಗುಣ ಉಂಟು. ಸ್ವಲ್ಪ ಮಾತ್ರ ತಿನ್ನಬೇಕು'. ಮುರಿನ ಹಣ್ಣಿನಲ್ಲಿ ಔಷಧೀಯ ಗುಣಗಳಿವೆ ಎಂದು ನಮಗೆ ಆಗ ತಿಳಿದಿರಲಿಲ್ಲ; ಪಟ್ಟಣದ ಸಂಪರ್ಕ ಬಂದ ನಂತರ ಗೊತ್ತಾಯಿತು, ಮುರಿನ ಹಣ್ಣಿಗೆ ಇನ್ನೊಂದು ಹೆಸರೇ 'ಕೋಕಂ'! ಆ ಹಣ್ಣಿನ ಸಿಪ್ಪೆಯನ್ನು ಒಣಗಿಸಿಟ್ಟುಕೊಂಡರೆ, ಮುಂದಿನ ನಾಲ್ಕಾರು ತಿಂಗಳುಗಳ ಕಾಲ ಅದರಿಂದ ತಿಳಿಸಾರು ಮಾಡಬಹುದು ಮತ್ತು ಪಿತ್ತ ಜಾಸ್ತಿಯಾದವರಿಗೆ ಅದೊಂದು ಉತ್ತಮ ಔಷಧ ಎಂಬ ನಂಬಿಕೆ ಚಾಲ್ತಿಯಲ್ಲಿದೆ. ಕೋಕಂ ಜ್ಯೂಸ್ ಮಾಡಿ ಕೊಡುವ ಪದ್ಧತಿಯೂ ಇದೆ.

ಹಾಡಿ ಹಕ್ಕಲುಗಳ ಕಾಡು ಮರಗಿಡಗಳ ನಡುವೆಯೇ, ಬೃಹದಾಕಾರವಾಗಿ ಬೆಳೆದು ನಿಂತಿರುವ ಕಾಟುಮಾವಿನ ಮರಗಳ ಮಜಲೇ ಇನ್ನೊಂದು ಮಟ್ಟ. ಒಂದೊಂದು ಮರದಲ್ಲೂ ಸಾವಿರಾರು ಪುಟ್ಟ ಪುಟ್ಟ ಹಣ್ಣುಗಳು; ಒಂದೊಂದು ಮರದ ಹಣ್ಣಿನ ರುಚಿಯೂ ವಿಭಿನ್ನ. ಈ ಕಾಟು ಮಾವಿನ ಹಣ್ಣುಗಳು ಮಾಗಲು, ಮಾಗಿ ಮರದಿಂದ ನೆಲಕ್ಕೆ ಬೀಳಲು, ಹಾಗೆ ಬಿದ್ದ ಹಣ್ಣುಗಳನ್ನು ಆರಿಸಿ ತಿನ್ನಲು ಏಪ್ರಿಲ್ ತಿಂಗಳೇ ಬರಬೇಕು! ಶಾಲೆ ಮಕ್ಕಳಿಗೆ ರಜಾ ಕಾಲ, ಅವರ ಬಾಯಿಗೆ ಮಾವಿನ ಹಣ್ಣುಗಳ ಸಮಾರಾಧನೆ! ನಮ್ಮ ಹಳ್ಳಿಯನ್ನೇ ಆವರಿಸಿರುವ ಕಾಡು ಪ್ರದೇಶದಲ್ಲಿ ಹಲವಾರು ಕಾಟು ಮಾವಿನ ಮರಗಳಿದ್ದವು; ಆ ಮರಗಳ ಕಡೆಗೆ ಪ್ರತಿ ದಿನ ಒಂದು ಬೀಟ್ ಹಾಕುವುದು ಮಕ್ಕಳ ಕೆಲಸ; ಕೆಳಗೆ ಬಿದ್ದಿದ್ದ ನಾಲ್ಕಾರು ಹಣ್ಣುಗಳನ್ನು, ಅಲ್ಲೇ ಕಚ್ಚಿ ತಿಂದು ಓಟೆಯನ್ನು ಎಸೆದು 'ಗೊರಟಿನ ಬೆನ್ನರೆ ಓಡು!' ಎಂದು ಸಂಗಾತಿ ಮಕ್ಕಳಿಗೆ ಹಾಸ್ಯ ಮಾಡಿ, ಕೈಯನ್ನು ಚಡ್ಡಿಗೆ ಒರೆಸಿಕೊಂಡು ಮನೆಗೆ ಬರುವುದು ಬೇಸಗೆಯ ದಿನಚರಿಯ ಅವಿಭಾಜ್ಯ ಅಂಗ. ಈ ಹಣ್ಣುಗಳ ರುಚಿಯೂ ವಿಭಿನ್ನ, ಅನನ್ಯ; ಒಂದು ಮರದ ಹಣ್ಣಿನ ರುಚಿ ಇನ್ನೊಂದಕ್ಕಿಲ್ಲ. ಲಿಂಬೆ ಹಣ್ಣಿನ ಗಾತ್ರವಿರುವ ಈ ಹಣ್ಣುಗಳಲ್ಲಿ, ಥೇಟ್ ರಸಪೂರಿ ಹಣ್ಣಿನ ರುಚಿ ಇರುವ ತಳಿಗಳೂ ಇವೆ! ಕೆಲವು ಮರಗಳ ಹಣ್ಣುಗಳು ಹುಳಿ; ಅದೆಷ್ಟು ಹುಳಿ ಎಂದರೆ, ಮಕ್ಕಳು ಬಿಡಿ, ಮಂಗಗಳೂ ಅದನ್ನು ತಿನ್ನಲಾರವು! ಅಂತಹ ಹಣ್ಣುಗಳು ನೆಲದ ಮೇಲೆ ಬಿದ್ದು ಕೊಳೆತುಹೋಗುವುದು ಮಾಮೂಲು; ಬಲು ಉತ್ಸಾಹಿಗಳಲ್ಲಿ ಕೆಲವರು ಅವುಗಳನ್ನು ಆಯ್ದು, ರಸ ಮಾಡಿ, ಒಣಗಿಸಿ 'ಹಣ್‌ಚೆಟ್' ಮಾಡುತ್ತಿದ್ದುದುಂಟು. ಈಚಿನ ಒಂದೆರಡು ದಶಕಗಳಲ್ಲಿ, ಅಂತಹ ಹಳೆಯ ಮಾವಿನ ಮರಗಳು ನಾನಾ ಕಾರಣಗಳಿಂದ ನಾಶವಾಗಿರುವುದರಿಂದ, ಇಂದಿನ ನಮ್ಮೂರಿನ ಮಕ್ಕಳಿಗೆ ಪ್ರತಿ ದಿನ ಕಾಟು ಮಾವಿನ ಹಣ್ಣುಗಳ ರುಚಿ ನೋಡುವ ಭಾಗ್ಯವಿಲ್ಲವೆಂದೇ ಹೇಳಬಹುದು.

ನಮ್ಮ ಹಳ್ಳಿಮನೆಗೆ ತೀರಾ ಹತ್ತಿರದಲ್ಲೇ, ಹಕ್ಕಲಿನ ಅಂಚಿನಲ್ಲಿದ್ದ ಇನ್ನೊಂದು ಬೇಸಗೆ ಹಣ್ಣೆಂದರೆ, ಹೆಬ್ಬಲಸು. ನಾಡಿಗೆಲ್ಲ ಬಿರುಬೇಸಗೆ ಬೀಳಬೇಕು, ಹೆಬ್ಬಲಸು ಹಣ್ಣು ಮರದಿಂದ ಕೆಳಗೆ ಬೀಳಬೇಕು! ಹೆಬ್ಬಲಸಿನ ಮರಗಳು ಸಾಮಾನ್ಯವಾಗಿ, ಬಹು ಎತ್ತರವಾಗಿ, ಬೃಹದಾಕಾರವಾಗಿ ಬೆಳೆಯುತ್ತಿದ್ದವು. ನಮ್ಮ ಮನೆಸುತ್ತಲೂ ಆರೆಂಟು ಹೆಬ್ಬಲಸಿನ ಮರಗಳಿದ್ದವು. ಅವುಗಳಲ್ಲಿ ಎರಡು ಮರಗಳು ಭಾರೀ ಗಾತ್ರದವು; ಅವುಗಳ ಹಣ್ಣಿನ ರುಚಿ ಸಹ ಅಷ್ಟೇ ಅಪ್ರತಿಮ. ಆ ಎತ್ತರವಾದ ಮರದಿಂದ ಹೆಬ್ಬಲಸಿನ ಕಾಯಿಗಳನ್ನು ಕೊಯ್ಯುವ ಮಹಾ ಸಾಹಸಿಗಳೂ ನಮ್ಮ ಹಳ್ಳಿಯಲ್ಲಿದ್ದರು! ಕಾಡಿನಲ್ಲಿ ಸಿಗುವ ಸಪೂರವಾದ ಬಿಳಲನ್ನು ಒಂದಕ್ಕೊಂದು ಜೋಡಿಸಿ, ನಲವತ್ತು ಅಡಿ ಉದ್ದ ಮಾಡಿಕೊಂಡು, ಅದನ್ನು ಹಿಡಿದು ಆ ಎತ್ತರದ ಮರವೇರಿ, ಒಂದೊಂದೇ ಹಣ್ಣನ್ನು ಬಿಳಲಿನ ತುದಿಗೆ ಕಟ್ಟಿ, ಕೆಳಗೆ ನಿಂತದ್ದವರಿಗೆ ಕಳುಹಿಸುತ್ತಿದ್ದ, ಆ ಮಹಾ ಸಾಹಸಿ! ಬಲಿತ, ಬಣ್ಣಕ್ಕೆ ತಿರುಗಿದ ಆ ಕಾಯಿಯನ್ನು ಅದೇ ದಿನ ಅಥವಾ ಮರುದಿನ ತಿಂದರೆ ಬಲು ರುಚಿ. ಆ ಹಣ್ಣುಗಳು ನೆಲಕ್ಕೆ ಬಿದ್ದರೆ, ಪೂರ್ತಿ ಅಪ್ಪಚ್ಚಿಯಾಗಿ ಬಿಡುತ್ತವೆ. ಹೆಬ್ಬಲಸು ಹಣ್ಣಿನ, ಬಂಗಾರದ ವರ್ಣದ ತೊಳೆಗಳ ಗಾತ್ರ ಮಾತ್ರ ಚಿಕ್ಕದು; ಒಂದು ಹಣ್ಣಿನಲ್ಲಿ ಇಪ್ಪತ್ತರಿಂದ ಐವತ್ತು ತೊಳೆಗಳಿರುತ್ತವೆ. ಒಂದೊಂದೇ ತೊಳೆಯನ್ನು ಬಾಯಿಗೆ ಹಾಕಿ ಕೊಂಡು, ತಿಂದು, ಅದರೊಳಗಿನ ಬೀಜವನ್ನು ಉಗಿ ಯುವ ಕ್ರಮ. ಮಕ್ಕಳಿಗೆ ಹೆಬ್ಬಲಸಿನ ಹಣ್ಣಿನ ರುಚಿ ಹತ್ತಿದರೆ, ಮತ್ತೊಮ್ಮೆ ಅದನ್ನು ತಿನ್ನಲು ಕಾಯುತ್ತಾ ಕುಳಿತಿರುತ್ತಾರೆ. ಬಲಿತ ಹಣ್ಣನ್ನು ತಂದು, ಮನೆ ಎದುರಿನ ಹುಲ್ಲುಕುತ್ರಿಯ ಬುಡದಲ್ಲಿಟ್ಟು, ಒಂದೆರಡು ದಿನಗಳಲ್ಲಿ ಅದು ಹಣ್ಣಾದಾಗ ತಿನ್ನು ವುದು, ಬೇಸಗೆಯಲ್ಲಿ ಶಾಲಾ ಮಕ್ಕಳ ನೆಚ್ಚಿನ ಹವ್ಯಾಸ. ಹಲಸಿನ ಮರಕ್ಕೂ ಹೆಬ್ಬಲಿಸಿಗೂ ಹತ್ತಿರದ ಸಂಬಂಧ; ಹಲಸಿನ ರೀತಿಯೇ, ಹೆಬ್ಬಲಸಿನ ಮರದ ಕಾಂಡಗಳು ಬಲು ಗಟ್ಟಿ, ಪೀಠೋಪಕರಣಗಳನ್ನು ತಯಾರಿಸಲು ಪ್ರಶಸ್ತ; ಆದ್ದರಿಂದಲೇ ಇರಬೇಕು, ಬೃಹದಾಕಾರದ ಹೆಬ್ಬಲಸಿನ ಮರಗಳು ಒಂದೊಂ ದಾಗಿ ಗರಗಸಕ್ಕೆ ಬಲಿಯಾಗಿ, ಮೇಜು, ಕುರ್ಚಿ, ಹಲಗೆಗಳಾಗಿ ಬಹುಬೇಗನೆ ಪರಿವರ್ತನೆಗೊಂಡವು; ಈಗ ನಮ್ಮ ಹಳ್ಳಿಯಲ್ಲಿ ರುಚಿಕರ ಹಣ್ಣು ಬಿಡುವ ಬೃಹದಾಕಾರದ ಹೆಬ್ಬಲಸಿನ ಮರಗಳಿಲ್ಲ, ಸಣ್ಣ ಗಾತ್ರದ ಮರಗಳ ಹಣ್ಣು ಅಷ್ಟೊಂದು ರುಚಿಯಲ್ಲ ಎನ್ನುತ್ತಾರೆ.

ಬೇಸಗೆಯಲ್ಲಿ ನಮ್ಮ ಹಳ್ಳಿಯ ಕಾಡುಗಳಲ್ಲಿ ಹಣ್ಣು ನೀಡುವ ಹಲವು ಸಸ್ಯಗಳಿವೆ; ಬನ್ನೇರಳೆ, ಬುಕ್ಕಿ, ಕಿಸ್ಕಾರ, ಚೇಂಪಿ, ಬೆಳಮಾರು, ಕಾರಿ, ಕಾಕಿ, ದಾರುಹುಳಿ, ಗರ್ಚನ ಹಣ್ಣು, ಬೇಸಗೆ ಮುಗಿಯುವ ಹೊತ್ತಿಗೆ ಹಣ್ಣಾಗುವ ಕಾಡು ನೇರಳೆ, ಸಳ್ಳೆ (ಚಳ್ಳೆ).. ಹೀಗೆ. ಇವುಗಳಲ್ಲಿ ಕಿಸ್ಕಾರ (ಇಕ್ಸೋರಾ) ಗಿಡಗಳು ಬೇಸಗೆ ಮಾತ್ರವಲ್ಲ, ಇತರ ಕಾಲದಲ್ಲೂ ಕೆಂಪನೆಯ ಹಣ್ಣುಗಳನ್ನು ಬಿಡುತ್ತವೆ; ಆದರೆ ಗಾತ್ರದಲ್ಲಿ ಬಹು ಚಿಕ್ಕವು; ಶೇಂಗಾ ಬೀಜದಷ್ಟು ಚಿಕ್ಕದಿರುವ ಕಿಸ್ಕಾರ ಹಣ್ಣುಗಳನ್ನು ಕೊಯ್ದು ತಿನ್ನುವುದು ಮಕ್ಕಳ ಹವ್ಯಾಸವಾದರೂ, ಅದರಿಂದ ದಾಹವೂ ನೀಗದು, ಹೊಟ್ಟೆಯೂ ತುಂಬದು. ಅದರ ರೀತಿಯೇ, ಬೆಳಮಾರು, ಬುಕ್ಕಿ, ಗರ್ಚ, ಚೇಂಪಿ ಇತ್ಯಾದಿ. ಗರ್ಚನ ಹಣ್ಣು ಮತ್ತು ಚೇಂಪಿ ಹಣ್ಣುಗಳನ್ನು ಪೇಟೆಯ ದ್ರಾಕ್ಷಿಗೆ ಹೋಲಿಸಬಹುದು, ರುಚಿಯಲ್ಲಿ ಮತ್ತು ಗಾತ್ರದಲ್ಲಿ.

ಕಾಡಿನ ಅಂಚಿನಲ್ಲಿ ಬೆಳೆಯುವ, ಆದರೆ ಕಾಡುಮರವಲ್ಲದ, ಆದರೆ ಉತ್ತಮ ಹಣ್ಣು ನೀಡುವ ನಮ್ಮೂರಿನ ಒಂದು ಮರವನ್ನು ನೆನಪಿಸಿಕೊಳ್ಳಲೇಬೇಕು; ಇದೊಂದು ವಾಣಿಜ್ಯಕ ಮೌಲ್ಯದ ಮರವಾಗಿದ್ದರಿಂದ, ಇದು ಕಾಡು ಪ್ರಭೇದದ ಮರವಲ್ಲ; ಜತೆಗೆ, ನಮ್ಮೂರಲ್ಲಿ ಇಂದು ಕಾಣುವ ಇಂತಹ ಮರಗಳ ಮೂಲ ಆಫ್ರಿಕಾ! ಇದರ ಹಣ್ಣನ್ನು ಮಕ್ಕಳು ತಿನ್ನುವುದುಂಟು; ಅದರ ಬೀಜಕ್ಕೆ ವಾಣಿಜ್ಯಕ ಮೌಲ್ಯವಿದೆ. ಇದೇ ಗೋಡಂಬಿ. ನಮ್ಮೂರಲ್ಲಿ ಇದನ್ನು 'ಗೇರು ಮರ' ಅಥವಾ 'ಗ್ವಾಯ್ ಮರ' ಎನ್ನುವುದುಂಟು. ನಮ್ಮಲ್ಲಿನ ಕಾಡುಗಳಲ್ಲಿರುವ ಗುಡ್ಡೆಗೇರು ಎಂಬ ಪ್ರಭೇದದ ಮರಕ್ಕೆ ಹೋಲಿಸಿಕೊಂಡು ಗೇರು ಮರ ಎಂದು ಇದನ್ನು ಕರೆದರು; ಗೋವಾ ಪ್ರದೇಶದಿಂದ ವಲಸೆ ಬಂದ ಸಸ್ಯವಾಗಿದ್ದರಿಂದಾಗಿ, ಗ್ವಾಯ್ ಮರ ಎಂದೂ ಕರೆದರು. ಇದರ ಹಣ್ಣುಗಳು ಸಾಕಷ್ಟು ವರ್ಣಮಯ; ಕೆಂಪು ಮತ್ತು ಹಳದಿ ಬಣ್ಣದ ಹಣ್ಣುಗಳಲ್ಲಿ ಸಾಕಷ್ಟು ರಸವಿದೆ; ದೊಡ್ಡ ಗಾತ್ರದ ಗೋಡಂಬಿ ಹಣ್ಣಿನಿಂದ ಒಂದು ಲೋಟ ರಸ ತೆಗೆಯಬಹುದು! ಆದರೆ, ಗೋಡಂಬಿ ಹಣ್ಣನ್ನು ತಿಂದರೆ, ಗಂಟಲು ತುಸು ಕೆರೆಯುತ್ತದೆ; ತುಸು ಸಿಹಿ, ತುಸು ಒಗರು ಮತ್ತು ಗಂಟಲು ಕೆರೆತಮಾಡುವ ರುಚಿ ಹೊಂದಿದ ಈ ಹಣ್ಣನ್ನು ಅಂದಿನ ಮಕ್ಕಳು ಖುಷಿಯಿಂದ ತಿನ್ನುತ್ತಿದ್ದರು; ಆದರೆ, ಈಗಿನ ತಲೆಮಾರಿನ ಮಕ್ಕಳು ಗೋಡಂಬಿ ಹಣ್ಣನ್ನು ತಿನ್ನುವುದು ಕಡಿಮೆ. ಗೋಡಂಬಿ ಬೀಜವನ್ನಾದರೆ, ಹುರಿದು ಕೊಟ್ಟರೆ ತಿಂದಾರು! ನಮ್ಮ ಮನೆಯ ಹಿಂಭಾಗದಲ್ಲಿ, ಮುರಿನ ಹಣ್ಣು ಇದ್ದ ಹಕ್ಕಲಿನಲ್ಲೇ ಹತ್ತಾರು ಗ್ವಾಯ್ ಮರಗಳಿದ್ದವು. ಅವುಗಳಲ್ಲಿ, ಒಂದು ಮರದಲ್ಲಿ ಪ್ರತಿದಿನ ನೂರಾರು ಹಣ್ಣುಗಳು ಬಿಡುತ್ತಿದ್ದವು; ಏಪ್ರಿಲ್, ಮೇ ತಿಂಗಳುಗಳಲ್ಲಿ ಪ್ರತಿ ದಿನ ಅಥವಾ ಎರಡು ದಿನಕ್ಕೊಮ್ಮೆ, ಬಿದಿರಿನ ಕೊಕ್ಕೆ ಬಳಸಿ ಅದರ ಹಣ್ಣುಗಳನ್ನು ಕಿತ್ತು, ಬುಟ್ಟಿಯಲ್ಲಿ ತುಂಬಿ ಮನೆಗೆ ತಂದು, ಹಣ್ಣನ್ನು ಬೀಜದಿಂದ ಬೇರ್ಪಡಿಸಿ, ಬೀಜವನ್ನು ಬಿಸಿಲಿಗೆ ಒಣಗಿಸುವುದು ಶಾಲಾ ಮಕ್ಕಳ ಕೆಲಸ. ಒಂದೆರಡು ಹಣ್ಣನ್ನು ಬಾಯಲ್ಲಿ ಕಚ್ಚಿ, ರಸ ಹೀರಿ, ಉಳಿದ ಭಾಗವನ್ನು ಬಿಸಾಡುತ್ತಿದ್ದವು. ಜಾಸ್ತಿ ಹಣ್ಣಿದ್ದರೆ, ಜಾನುವಾರುಗಳಿಗೆ ಹಾಕುತ್ತಿದ್ದೆವು. ಇದೇ ಹಣ್ಣುಗಳನ್ನು ಬಳಸಿ ಗೋವಾದಲ್ಲಿ ಫೆನ್ನಿ ತಯಾರಿಸುವರಂತೆ. ನಮ್ಮೂರಲ್ಲಿ ಹಿಂದೆ ಇದ್ದ, ಅಂತಹ ಮೌಲ್ಯವರ್ಧನೆಯ ಪದ್ಧತಿ ಈಗ ಮರೆತುಹೋಗಿದೆ.

ಇಷ್ಟೊಂದು ಬಗೆಯ ಹಣ್ಣುಗಳು ಮನೆಯ ಸುತ್ತಲಿನ ಕಾಡು ಪ್ರದೇಶದಲ್ಲಿ ಬೇಸಗೆಯಲ್ಲಿ ದೊರಕುತ್ತಿದ್ದುದರಿಂದ, ಶಾಲೆಯ ರಜಾ ದಿನಗಳಲ್ಲಿ, ಸಮಯ ಕಳೆಯಲು ಅಷ್ಟೊಂದು ಕಷ್ಟವಾಗುತ್ತಿರಲಿಲ್ಲ ಎಂದು, ಹೇಳಿದರೆ, ಇಂದಿನ ಮಕ್ಕಳು ನಂಬಲು ತಯಾರಿಲ್ಲ, ಏಕೆಂದರೆ, ಇಂತಹ ವೈವಿಧ್ಯಮಯ ಹಣ್ಣುಗಳನ್ನು ಹುಡುಕಿಕೊಂಡು ಹೋಗಿ, ಕಿತ್ತು ತಿನ್ನಲು ಸರಕಾರಿ ಶಾಲೆಯ ಮಕ್ಕಳಿಂದ ಮಾತ್ರ ಸಾಧ್ಯ, ಎರಡು ತಿಂಗಳು ರಜಾ ಪಡೆಯುವ ಶಾಲಾ ವಿದ್ಯಾರ್ಥಿಗಳಿಂದ ಮಾತ್ರ ಸಾಧ್ಯ!

ಭೈರಪ್ಪನವರ ಚಿಂತನೆ ಮತ್ತು ವಿಚಾರಧಾರೆಗಳು: ಯಥಾರ್ಥವಾದಿಗಳಿಗೆ ಸುಗ್ಗಿ

ಭೈರಪ್ಪ ನೆನಪು
ಗ.ನಾ. ಭಟ್ಟ
vveditoped@gmail.com

ಸಹಜಶೂರರೂ, ಮಹಾವಿಕ್ರಮಿಗಳೂ, ನೀತಿವಂತರೂ, ಸತ್ಯವಂತರೂ, ಧರ್ಮವಂತರೂ ಆದ ಪಾಂಡವರ ಅಭ್ಯುದಯ, ಉತ್ಕರ್ಷವನ್ನು ಸಹಿಸಲಾಗದ ದುರ್ಯೋಧನ ಸದಾ ಹೊಟ್ಟೆ ಉರಿಯಿಂದ ನಲುಗಿಹೋದ. ಅವರನ್ನು ಮುಖಾಮುಖಿಯಾಗಿ ಎದುರಿಸಲಾಗದೆ ಅಡ್ಡಹಾದಿಯಿಂದ ಅವರನ್ನು ಮುಗಿಸಲು ಯತ್ನಿಸಿದ. ಆದರೆ, ಅವು ಒಂದೂ ಯಶಸ್ವಿಯಾಗದೆ ಕೊನೆಗೆ ತಾನೇ ಮಣ್ಣುಮುಕ್ಕಿ, ಸರ್ವನಾಶವನ್ನು ಹೊಂದಿದ. ಅವನ ಸರ್ವನಾಶಕ್ಕೆ ಮೂಲ ಕಾರಣ ಹೊಟ್ಟೆ ಉರಿ. ಈ ಹೊಟ್ಟೆ ಉರಿ ಜಠರಾಗ್ನಿಯೂ ಹೌದು. ಅಸೂಯೆಯೂ ಹೌದು. ಜಠರಾಗ್ನಿ ಹಸಿವೆಗೆ ಸಂಬಂಧಿಸಿದ್ದು. ಅದನ್ನು ಹೇಗೋ ನೀಗಿಸಿಬಿಡಬಹುದು. ಆದರೆ, ಅಸೂಯೆಯನ್ನು ಅಳಿಸುವುದು ಕಷ್ಟ. ಅದು ಹೃದಯಸಮುದ್ರವನ್ನು ಶೋಷಿಸಿಬಿಡುವ ಬಡಬಾನಲ. ಬಾಹ್ಯದಾರಿದ್ರ್ಯಕ್ಕಿಂತ ಭಯಂಕರವಾದುದು ಈ ಹೃದಯದಾರಿದ್ರ್ಯ.

ಇಂತಹ ಹೃದಯದಾರಿದ್ರ್ಯವಿದ್ದ ಒಂದು ಸಾಹಿತ್ಯಕ ಗುಂಪು ಸುಮಾರು ಐವತ್ತು ವರ್ಷಗಳ ಹಿಂದೆ ಮಹಾ ಕಾದಂಬರಿಕಾರ, ಪ್ರಖರ ಚಿಂತಕ, ತೀಕ್ಷ್ಣ ವಿಮರ್ಶಕ ಡಾ.ಎಸ್.ಎಲ್. ಭೈರಪ್ಪನವರ ಜನಪ್ರಿಯತೆಯನ್ನೂ, ಅವರ ಕಾದಂಬರಿಯ ವೈವಿಧ್ಯತೆ ಮತ್ತು ಸೊಗಸನ್ನೂ, ಆನೆ ನಡೆದದ್ದೇ ದಾರಿ ಎಂಬಂತೆ ನಡೆದುಕೊಂಡ ಅವರ ಧೀಮಂತಿಕೆಯನ್ನೂ, ಕ್ಷುಲ್ಲಕರಿಗೆ ಸೊಪ್ಪುಹಾಕದ ದಿಟ್ಟತನವನ್ನೂ ನೋಡಿ ಸಹಿಸಲಾಗದೆ ಹೊಟ್ಟೆ ಉರಿಯಿಂದ ಅವರ ಬಗ್ಗೆ ಇಲ್ಲ-ಸಲ್ಲದ ಮಾತುಗಳನ್ನಾಡುತ್ತಾ, ಅವರ ಧೃತಿಗೆಡಿಸುವ ಕೆಲಸವನ್ನು ಒಂದಿಷ್ಟು ವರ್ಷಗಳ ಕಾಲ ಅವ್ಯಾಹತವಾಗಿ ಮಾಡಿಕೊಂಡು ಬಂದರು. ಆದರೆ, ಅದು ನಡೆಯಲೇ ಇಲ್ಲ. ಭೈರಪ್ಪನವರು ತಮ್ಮ ಅಧ್ಯಯನಶೀಲತೆಯಿಂದಲೇ ಉತ್ತರ ಕೊಡುತ್ತಾ, ನೆಗ್ಗಸು ಉಕ್ಕಿ ಹರಿಯುವಂತೆ ಒಂದರ ಮೇಲೊಂದು ಕಾದಂಬರಿ ಬರೆಯುತ್ತಾ, ತಮ್ಮ ವೈಚಾರಿಕ ವೈಮರ್ಶಿಕ ಬರಹಗಳ ಮೂಲಕ (ನಾನೇಕೆ ಬರೆಯುತ್ತೇನೆ, ಭಿತ್ತಿ, ಸಂದರ್ಭ-ಸಂವಾದ, ಚಿಂತನ-ಮಂಥನ) ಅವರ ಜನ್ಮ ಜಾಲಾಡುತ್ತಾ, ಅವರ ಬಣ್ಣವನ್ನು ಬಯಲಿಗೆಳೆಯುತ್ತಾ ಕೀರ್ತಿಶಿಖರವನ್ನು ಏರಿ ನಿಂತರು. ಭೈರಪ್ಪನವರು ತಮ್ಮ ಪಾಡಿಗೆ ತಾವು ಕಾದಂಬರಿ ಬರೆಯುತ್ತಾ ಅದೇ ಪ್ರಪಂಚದಲ್ಲಿ ಮುಳುಗಿಹೋಗಲಿಲ್ಲ. ಬದಲಿಗೆ ದೈನಂದಿನ ಜೀವನಕ್ಕೆ, ಲೋಕವ್ಯವಹಾರಕ್ಕೆ, ಪ್ರಸ್ತುತ ರಾಜಕಾರಣಕ್ಕೆ, ಸಾಹಿತ್ಯಕ ಗುಂಪುಗಾರಿಕೆಗಳಿಗೆ, ಅವರ ಪಂಥಗಳಿಗೆ ಸ್ಪಂದಿಸುತ್ತಾ, ಕೆಲವೊಮ್ಮೆ ತೀವ್ರವಾಗಿ ಸ್ಪಂದಿಸುತ್ತಾ ತಮ್ಮ ಖಡ್ಗವನ್ನು ಝಳಪಿಸಿದರು. ಅಲ್ಲಲ್ಲಿ ಅವರಿಗೆ ಉತ್ತರ ಕೊಡುತ್ತಲೇ ತಾನೇನು ಎನ್ನುವುದನ್ನು ಸಾಬೀತುಪಡಿಸುತ್ತಾ ಹೋದರು. ಹಾಗೆ ತೆರೆದುಕೊಂಡ ಅವರ ಚಿಂತನ-ಮಂಥನಗಳಲ್ಲಿ ಕೆಲವನ್ನು ತಮ್ಮ ಮುಂದೆ ಸಾದರಪಡಿಸುತ್ತಿದ್ದೇನೆ.

ಭೈರಪ್ಪನವರು ದೇಶದ ಅಭ್ಯುದಯ, ಉತ್ಕರ್ಷದ ಬಗ್ಗೆ ಅಪಾರ ಕಾಳಜಿಯುಳ್ಳವರಾಗಿದ್ದರು. ಮೌಲ್ಯಗಳ ಬಗ್ಗೆ ಸದಾ ತುಡಿಯುವ ಮನಸ್ಸು ಅವರದಾಗಿತ್ತು. ದೇಶದ ಅಭಿವೃದ್ಧಿಗಾಗಿ ದುಡಿದ ವಿಶ್ವೇಶ್ವರಯ್ಯನವರ ಧ್ಯೇಯವನ್ನು ಅವರು ಕೊಂಡಾಡುತ್ತಾರೆ. ಹಾಗೆಯೇ ಡಿವಿಜಿಯವರ ನೈತಿಕ ನೈಷ್ಠುರ್ಯವನ್ನೂ ಕೊಂಡಾಡುತ್ತಾರೆ.

ವಿಶ್ವೇಶ್ವರಯ್ಯನವರಿಗೆ ನಮ್ಮ ದೇಶದ ಬಡತನದ ಅರಿವಿತ್ತು. ಅದಕ್ಕಾಗಿ ಅವರು ಬರೀ ಕೃಷಿಯೊಂದನ್ನೇ ನೆಚ್ಚಿಕೊಂಡರೆ ಸಾಲದೆಂದು ಆಲೋಚಿಸಿ ಕನ್ನಂಬಾಡಿಕಟ್ಟೆಯನ್ನು ಕಟ್ಟಿಸಿದರು. ಹಲವಾರು ಕೆರೆಕಟ್ಟೆಗಳನ್ನು ಕಟ್ಟಿಸಿದರು. ಗಂಧದೆಣ್ಣೆ-ಕಬ್ಬಿಣದ ಕಾರ್ಖಾನೆಗಳನ್ನು ಸ್ಥಾಪಿಸಿದರು. ಗೃಹಕೈಗಾರಿಕೆ, ಮಾದರಿ ಹೋಟೆಲ್ಲು, ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್ ಮೊದಲಾದವನ್ನು ಸ್ಥಾಪಿಸಿದರು. ಅಂದರೆ ದುಡಿಮೆಯನ್ನು ಸೃಷ್ಟಿಸಿದರು. ಕಷ್ಟಪಟ್ಟು ದುಡಿಯಿರಿ ಎಂಬ ಸಂದೇಶವನ್ನು ಸಾರಿದರು. ರಾಜ್ಯವಾಳುವವರಿಗೆ ಸಮಗ್ರವಾದ ಮೌಲ್ಯದೃಷ್ಟಿಯಿದ್ದರೆ ಬಡತನವನ್ನು ಸುಲಭವಾಗಿ ನಿವಾರಿಸಬಹುದು ಎನ್ನುತ್ತಾರೆ.

ಇಂದು ರಾಜ್ಯವಾಳುವವರಿಗೆ ದಿಟವಾದ ಧ್ಯೇಯವೇ ಇಲ್ಲ. ಅನ್ನ-ವಸ್ತ್ರ-ಗೃಹಗಳನ್ನು ಪೂರೈಸಿದ ಮಾತ್ರಕ್ಕೆ ಬಡತನ ನೀಗುವುದಿಲ್ಲ. ಅದು ಅವರ ಆದಿಮ ಕರ್ತವ್ಯ. ಅದಕ್ಕಿಂತ ಮಿಗಿಲಾಗಿ ಸರಕಾರ ಬಡವರು ದುಡಿದು ತಿನ್ನುವುದನ್ನು ಕಲಿಸಬೇಕು. ಅವರ ಸಾಲ ಮನ್ನಾ ಮಾಡಬಾರದು. ಅದು ನಿಜಕ್ಕೂ ಮೌಲ್ಯಪತನ, ನೀತಿಯ ಪತನ, Ethical Degradation ಎಂದು ಹೇಳುತ್ತಾರೆ. ಕೊಟ್ಟವನ ಗಂಟನ್ನು ಮುಳುಗಿಸಬಾರದು. ಅದನ್ನು ಹಿಂತಿರುಗಿಸಬೇಕು ಎಂಬ ಮನೋಭಾವವನ್ನು ಸರಕಾರ ಹುಟ್ಟಿಸಬೇಕು. ಸಾಲವನ್ನು ಹಿಂತಿರುಗಿಸಬೇಕಿಲ್ಲ ಎಂಬ ಮನೋಭಾವವೇ ವಿಶ್ವಾಸಘಾತಕತನ. ಸಾಲವನ್ನು ತೀರಿಸುವುದೆಂದರೆ ಪ್ರಾಮಾಣಿಕನಾಗಿರುವುದು ಎಂದರ್ಥ. ಪ್ರಾಮಾಣಿಕತೆಯೇ ಒಂದು ಮೌಲ್ಯ ಎಂದು ಭೈರಪ್ಪ ಸಾರುತ್ತಾರೆ. ಇಂದು ಸಾಹಿತಿಗಳಲ್ಲಿ ಎಷ್ಟು ಮಂದಿಗೆ ಇಂತಹ ಕಾಳಜಿ ಇದೆ ಎಂದು ಕೇಳಿದರೆ ಡಿವಿಜಿ, ವಿಶ್ವೇಶ್ವರಯ್ಯ ಮೊದಲಾದ ಕೆಲವೇ ಮಂದಿಗೆ ಎಂದು ಹೇಳಬೇಕಾಗುತ್ತದೆ. ಅಂತಹವರಲ್ಲಿ ಭೈರಪ್ಪ ಒಬ್ಬರು.

ಇಂದು ಅದೆಷ್ಟೋ ರಾಜ್ಯಗಳು ಸಾರ್ವಜನಿಕರಿಗೆ ಪುಕ್ಕಟೆ ಭಾಗ್ಯಗಳನ್ನು ಸೃಷ್ಟಿಸಿ, ಅವರನ್ನು ವೋಟ್ ಬ್ಯಾಂಕಾಗಿ ಪರಿವರ್ತಿಸಿ ಹಾದಿ ತಪ್ಪಿಸುತ್ತಿರುವುದನ್ನು ನಾವು ಎಲ್ಲೆಡೆ ಕಾಣುತ್ತಿದ್ದೇವೆ. ಇದನ್ನು ಕಂಡಾಗ ಭೈರಪ್ಪನವರ ಮಾತು ಅದೆಷ್ಟು ಮೌಲ್ಯಯುತವಾದುದು, ದೇಶಾಭಿವೃದ್ಧಿಪರವಾದುದು ಎಂಬ ಅರಿವು ಬರದೆ ಇರುವುದಿಲ್ಲ. ಭೈರಪ್ಪ ಇಂತಹ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ. ದೇಶದ ಜನ ಸುಧಾರಿಸದೆ ದೇಶ ಸುಧಾರಿಸುವುದಿಲ್ಲ ಎಂದು ಭೈರಪ್ಪ ಒಂದು ಉದಾಹರಣೆ ಮೂಲಕ ಸ್ಪಷ್ಟಪಡಿಸುತ್ತಾರೆ. ಸ್ವಚ್ಛಭಾರತ ಎಂಬ ಕಾರ್ಯಕ್ರಮವನ್ನು ಮೋದಿ ಆರಂಭಿಸಿದ್ದಾರೆ. ಪಾಶ್ಚಾತ್ಯದೇಶಗಳಲ್ಲಿ ರೈಲುನಿಲ್ದಾಣ, ಬಸ್‌ನಿಲ್ದಾಣ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ಒಂದು ಚಿಕ್ಕ ಮಗುವೂ ಕೂಡಾ ಪುಟ್ಟಪುಟ್ಟ ಹೆಜ್ಜೆಯಿಟ್ಟುಕೊಂಡು ಚಾಕೋಲೇಟ್ ಕಾಗದವನ್ನು ಕಸದ ಬುಟ್ಟಿಯೊಳಕ್ಕೆ ಹಾಕುತ್ತದೆ. ಹಾಗೆ ಮಾಡು ಎಂದು ತಂದೆ-ತಾಯಿಯರು ಹೇಳಬೇಕಾದ್ದೇ ಇಲ್ಲ. ಮಗು ಹುಟ್ಟಿದಾರಭ್ಯ ಕಾಣುವುದು ಆ ಓರಣವನ್ನೇ. ಇದನ್ನು ಕಲಿಸದೆಲೆ, ಬರಿದೆ ಗಣ್ಯವ್ಯಕ್ತಿಗಳು ಕಸಗುಡಿಸುವುದನ್ನು ಟಿವಿಯಲ್ಲಿ ತೋರಿಸಿಬಿಟ್ಟರಾಯಿತೆ? ಎಂದು ಕೇಳುತ್ತಾರೆ.

ನಮ್ಮ ದೇಶದಲ್ಲಿ ಎಲ್ಲೆಂದರಲ್ಲಿ ಕಸ ಹಾಕುವುದನ್ನು, ಕ್ಯಾಕರಿಸಿ ಉಗಿಯುವುದನ್ನು, ಮೂತ್ರ ವಿಸರ್ಜಿಸುವುದನ್ನು, ನದಿಗಳಲ್ಲಿ ಮಲಿನ ಪದಾರ್ಥ ಎಸೆಯುವುದನ್ನು ಕಾಣುತ್ತಿರುತ್ತೇವೆ. ದೇಶದ ಸ್ವಚ್ಛತೆಯ ಬಗ್ಗೆ ನಮಗೆ ಅರಿವೇ ಇಲ್ಲದಂತೆ ವರ್ತಿಸುತ್ತೇವೆ. ಬೇರೆಯವರಿಗೊಂದು ನೀತಿ, ನಮಗೊಂದು ನೀತಿ ಎಂಬುದನ್ನು ಅತ್ಯಂತ ಶ್ರದ್ಧೆಯಿಂದ ಪಾಲಿಸುತ್ತೇವೆ. ನಮ್ಮ ಮನೆ, ನಮ್ಮ ಮನೆಯ ಬೀದಿ ಮಾತ್ರ ಸ್ವಚ್ಛವಿದ್ದರೆ ಸಾಕು ಉಳಿದವರು ಹೇಗಾದರೂ ಇದ್ದುಕೊಳ್ಳಲಿ ಎಂಬುದು ನಮ್ಮ ಜೀವನಪದ್ಧತಿಯೇ ಆಗಿಹೋಗಿದೆ. ಅದನ್ನೇ ನೈತಿಕತೆ ಎಂದು ಭಾವಿಸುತ್ತೇವೆ. ಇನ್ನು ದೇಶದ ಬಗ್ಗೆ ಕೇಳುವುದೇ ಬೇಡ. ಅದು ಹೇಗಾದರೂ ಇದ್ದುಕೊಳ್ಳಲಿ. ನಮಗೆ ಪುಕ್ಕಟೆ ಸೌಲಭ್ಯ, ಸೌಕರ್ಯ, ಭಾಗ್ಯಗಳು ಸಿಕ್ಕಿದರೆ ಸಾಕು ಎಂಬ ಮನೋಭಾವದವರು ನಾವು. ಇದನ್ನು ಬರೆಯುವಾಗ ಡಿವಿಜಿ ಹೇಳಿದ ಒಂದು ಮಾತು ನೆನಪಿಗೆ ಬರುತ್ತದೆ.

''ನಮ್ಮ ದೇಶದಲ್ಲಿ ಯಾರನ್ನು ಕೇಳಿದರೂ ಅವರ ಬಾಯಿಯಿಂದ ದೇವರು, ಧರ್ಮ, ಭಕ್ತಿ, ಕರ್ಮ, ಪರಮಾತ್ಮ, ಸತ್ಯ, ಅಹಿಂಸೆ-ಇಂಥಾ ಮಾತುಗಳು ಘಳಿಗೆಗೆ ಹತ್ತು ಸಲ ನುಗ್ಗಿ ಬರುತ್ತವೆ. ಎಲ್ಲರೂ ಭಗವದ್ಗೀತೆಯನ್ನು ಹೇಳುವವರೇ. ನಮ್ಮ ಬಾಳನ್ನು ನೋಡಿದರೆ ಮಾತ್ರ ಈ ಭಾರೀ ಮಾತುಗಳ ಅರ್ಥವೇನೂ ರುಜುವಾತಿಗೆ ಬರುತ್ತಿಲ್ಲ'' ಎಂದು ತಮ್ಮ 'ಬಾಳಿಗೊಂದು ನಂಬಿಕೆ' ಕೃತಿಯಲ್ಲಿ (ಪುಟ-25)ಬರೆದಿದ್ದಾರೆ. ಇದನ್ನು ಭೈರಪ್ಪನವರು ಪಾಶ್ಚಾತ್ಯ ಮಕ್ಕಳ ಬಗ್ಗೆ ಹೇಳಿದ್ದಕ್ಕೆ ಹೋಲಿಸಿ ನೋಡಿದರೆ ಅದರ ಯಾಥಾರ್ಥ್ಯವು ಗೋಚರಕ್ಕೆ ಬರುತ್ತದೆ. ಭೈರಪ್ಪನವರ ಅನುಭವ ಭಂಡಾರದಲ್ಲಿ ಇಂಥಹವು ಎಷ್ಟೋ ಇವೆ.

ನಮ್ಮ ದೇಶದ ರಾಜಕಾರಣಿಗಳು ನಮ್ಮ ದೇಶವನ್ನು ಎಂತಹ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ ಎಂದರೆ-ಒಮ್ಮೆ ಅವರು ಇಂಗ್ಲೆಂಡಿನ ಸಮುದ್ರ ತೀರವೊಂದರಲ್ಲಿ ಕೂತು ಅದರ ಅಲೆಗಳನ್ನು ವೀಕ್ಷಿಸುತ್ತಿದ್ದಾಗ ಒಬ್ಬ ವೃದ್ಧೆ ಅವರ ಬಳಿ ಬಂದು ''ನೀವು ಯಾರು?'' ಎಂದು ಕೇಳುತ್ತಾಳೆ. ತಾನು ಭಾರತದಲ್ಲಿ, ಯೂನಿವರ್ಸಿಟಿಯೊಂದರಲ್ಲಿ ಪ್ರೊಫೆಸರ್ ಎಂದು ಹೇಳುತ್ತಾರೆ. ಅದಕ್ಕೆ ಅವಳು ''ನಿಮ್ಮ ಯೂನಿವರ್ಸಿಟಿಯಲ್ಲಿ ಒಬ್ಬ ಗಣಿತ ಅಧ್ಯಾಪಕ ರೋಗದಿಂದಲೋ ಅಥವಾ ಹಠಾತ್ತಾಗಿಯೋ ಮೃತನಾದರೆ ಅವರ ಹೆಂಡತಿಗೆ ಅನಾಮತ್ತಾಗಿ ಆ ಹುದ್ದೆಯನ್ನು ಕೊಡುತ್ತಾರೆಯೇ?'' ಎಂದು ಕೇಳುತ್ತಾಳೆ. ಅದಕ್ಕೆ ಭೈರಪ್ಪ ''ಅದು ಹೇಗೆ ಸಾಧ್ಯ?'' ಎಂದು ಮರುಪ್ರಶ್ನೆ ಹಾಕುತ್ತಾರೆ.



''ಹಾಗಾದರೆ ಮಂತ್ರಿಯೊಬ್ಬನು ಸತ್ತಾಗ ಅವನ ಹೆಂಡತಿಯನ್ನು ಅನಾಮತ್ತಾಗಿ ಮಂತ್ರಿ ಮಾಡಿಬಿಡುತ್ತೀರಲ್ಲ! ಸಂಸದನೊಬ್ಬ ಸತ್ತರೆ ಅವನ ಹೆಂಡತಿಯನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿಬಿಡುತ್ತೀರಲ್ಲ! ಇದು ಹೇಗೆ ಸಾಧ್ಯ?'' ಎಂದು ಕೇಳುತ್ತಾಳೆ. ಇಂತಹ ವಿರೋಧಾಭಾಸದ ದೇಶ ನಮ್ಮದು. ನಮ್ಮ ಇಂತಹ ವ್ಯವಸ್ಥೆಯನ್ನು ನೋಡಿ ಇತರ ದೇಶದವರು ಕುಹಕವಾಡಿ ನಗುತ್ತಾರೆ. ನಮಗೆ ಇದರ ಅರಿವೇ ಇಲ್ಲ'' ಎಂದು ಭೈರಪ್ಪ ವಿಷಾದ ವ್ಯಕ್ತಪಡಿಸುತ್ತಾರೆ.

ಮುಂದುವರಿದು ಅವರು ''ನಮ್ಮ ಪ್ರಜಾಪ್ರಭುತ್ವವು ಇನ್ನೂ ಅಪಕ್ವವಾಗಿಯೇ ಇದೆ. ಪಾಶ್ಚಾತ್ಯದೇಶಗಳ ಪ್ರಜಾಪ್ರಭುತ್ವದಲ್ಲಿನ ಪಕ್ವತೆ ನಮ್ಮ ದೇಶದಲ್ಲಿ ಸ್ವಲ್ಪವೂ ಇಲ್ಲ. ಇದರ ಪರಿಣಾಮವೆಂದರೆ- ನೀತಿ-ಸದಾಚಾರಗಳಿಗೆ (Ethics and Morality) ಸಲ್ಲಬೇಕಾದ ಪ್ರಾಶಸ್ತ್ಯವು ಜಾತಿ, ವಂಶ ಇತ್ಯಾದಿ ಅನ್ಯವಿಚಾರಗಳಿಗೆ ಸಲ್ಲುತ್ತಿದೆ. ಅಪ್ಪ ಸತ್ತಮೇಲೆ ಅಪ್ಪನ ಆಸ್ತಿಯ ಹಕ್ಕು ಮಗನಿಗಲ್ಲವೇ? ಗಂಡ ಸತ್ತಮೇಲೆ ಗಂಡನ ಆಸ್ತಿಯ ಹಕ್ಕು ಹೆಂಡತಿಗಲ್ಲವೇ? ಹಾಗೆಯೇ ಆ ಸ್ಥಾನಕ್ಕೆ (ಸಂಸದ ಅಥವಾ ಶಾಸಕನ ಸ್ಥಾನಕ್ಕೆ) ಅವಳು ಬಂದಿದ್ದಾಳೆ. ತಪ್ಪೇನು? ಎಂಬ ಭಾವವು ಜನದ ಮನಸ್ಸಿನಲ್ಲಿ ಮೂಡಿದೆ. ರಾಜಕಾರಣವೂ ಒಂದು ಆಸ್ತಿ, ಕುಟುಂಬದ ಆಸ್ತಿ ಎಂದು ಮತ ಕೊಡುವ ಜನಗಳೇ ಮನ್ನಿಸಿರುವಾಗ ಏನು ಮಾಡುವುದಕ್ಕಾಗುತ್ತೆ? ಹಾಗಾಗಿ ಇದಕ್ಕೆ ಕಾನೂನು ರೀತ್ಯಾ ಪರಿಹಾರ ಆಗಬೇಕಿದೆ. ಆದರೆ ಬಹಿಷ್ಕೃತರಾಗಬೇಕಾದವರೇ ಸಂಸತ್ತು-ವಿಧಾನಸಭೆಗಳಲ್ಲಿ ತುಂಬಿರುವುದು ನಮ್ಮ ದೇಶದ ದುರಂತ ಎಂದು ಅಸಹಾಯಕರಾಗಿ ಕೈಚೆಲ್ಲುತ್ತಾರೆ. ಇದು ಭೈರಪ್ಪನವರಿಗೆ ದೇಶದ ಬಗ್ಗೆ ಇದ್ದ ಕಾಳಜಿ ಮತ್ತು ಪ್ರೇಮ. ಅವರ ಚಿಂತನಪೂರ್ಣ ವೈಚಾರಿಕ ಸಾಹಿತ್ಯ ಕೃತಿಗಳಲ್ಲಿ ನಮ್ಮನ್ನು ಎಚ್ಚರಿಸುವ ಇಂತಹ ಅನೇಕ ಸಂಗತಿಗಳು ಬರುತ್ತವೆ. ಕಾದಂಬರಿಗಳಲ್ಲೂ ಅಲ್ಲಲ್ಲಿ ಬರುತ್ತವೆ.

ಭಾರತೀಯ ಪುರಾಣ ಸಾಹಿತ್ಯಗಳಲ್ಲಿ ಅಪಾರ ಪ್ರೇಮವಿರುವ ಭೈರಪ್ಪನವರು ಅಲ್ಲಿಯೂ ಕೂಡಾ ಚಿಂತನೆಗೆ ಹಚ್ಚುವ ಮಾತುಗಳನ್ನು ಆಡುತ್ತಾರೆ. ತಥಾಕಥಿತ ಹೇಳಿಕೆಗಳಿಗೆ ಅವರು ಮರುಳಾಗುವುದಿಲ್ಲ. ಅಲ್ಲಿಯೂ ಕೂಡಾ ತಮ್ಮದೇ ಚಿಂತನೆಯ ಮುದ್ರೆಯೊತ್ತುತ್ತಾರೆ. ಉದಾಹರಣೆಗೆ,''ಧರ್ಮರಾಜ ಯಮಧರ್ಮರಾಯನ ಮಗ ಎಂಬ ಕಾರಣಕ್ಕೆ ಅವನು ಮಾಡಿದ್ದೆಲ್ಲವೂ ಧರ್ಮ ಎಂದು ಭಾವಿಸಿಬಿಡುವ ಭೋಳೆತನ ನಮ್ಮಲ್ಲಿ ಇದೆ. ಅವನ ಅವ್ಯಾವಹಾರಿಕತೆ, ಮೂರ್ಖತನ, ಎಡಬಿಡಂಗಿತನ, ಅವನ ಚರ್ಯೆ ಯಾವುದನ್ನೂ ವಿಮರ್ಶಿಸುವ ಗೋಜಿಗೇ ಹೋಗುವುದಿಲ್ಲ ನಾವು.''

''ಪಾಂಡವರು ವನವಾಸದಲ್ಲಿದ್ದಾಗ ಜಯದ್ರಥ ದ್ರೌಪದಿಯನ್ನು ಅಪಹರಿಸಿಕೊಂಡು ಹೋಗುತ್ತಿದ್ದಾಗ ಭೀಮಸೇನ ಅವನನ್ನು ಹಿಡಿದೆಳೆದು ತಂದು ಧರ್ಮರಾಜನ ಕಾಲಿಗೆ ಕೆಡಹುತ್ತಾನೆ. ಅದಕ್ಕೆ ಮರುಗಿದ ಧರ್ಮರಾಜ, ''ಭೀಮ, ನೀನು ಎಂತಹ ತಪ್ಪು ಕೆಲಸ ಮಾಡಿಬಿಟ್ಟೆ, ಇವನು ನಮ್ಮ ಭಾವನಲ್ಲವೆ? ಇವನನ್ನು ಹೀಗೆ ಕಟ್ಟಿ ತಂದರೆ ತಂಗಿ ದುಃಶಲೆಗೆ ಬೇಸರವಾಗುವುದಿಲ್ಲವೇ? ದೊಡ್ಡಮ್ಮ ಗಾಂಧಾರಿ ದುಃಖಿಸುವುದಿಲ್ಲವೇ? ಅವನ ಕಟ್ಟನ್ನು ಬಿಚ್ಚು'' ಎನ್ನುತ್ತಾನೆ. ಇದರಿಂದ ದ್ರೌಪದಿಯ ಮನಸ್ಸಿನಲ್ಲಿ ಎಂತಹ ಭಾವ ಹುಟ್ಟಬಹುದು ಎಂದು ಧರ್ಮರಾಜ ಯೋಚಿಸುವುದೇ ಇಲ್ಲ. ನಮ್ಮ ದೇಶದಲ್ಲಿನ Extremity of Ideals ಅಂದರೆ ಇದೇನೇ. ಆದರ್ಶಗಳನ್ನು ಅತಿರೇಕಕ್ಕೆ ಒಯ್ಯಬಾರದು. ವ್ಯಾವಹಾರಿಕ ಪರಿಹಾರವೊಂದಿರುತ್ತದೆ. (Practical Solution or common sence) ಅದನ್ನು ಮೀರಿ ಅತಿರೇಕಕ್ಕೆ ಒಯ್ಯಬಾರದು. ನಮ್ಮ ದೇಶದಲ್ಲಿ ಎಲ್ಲವೂ ಅತಿರೇಕವೇ. ಯಾರು ಯಾರನ್ನು ಹೀರೋಗಳು ಎಂದು ಪರಿಗಣಿಸಿರುವವೋ ಅವರೆಲ್ಲರೂ ಅತಿರೇಕದವರೇ. ಧರ್ಮರಾಜ, ರಾಮ, ಹರಿಶ್ಚಂದ್ರ, ಗಾಂಧಿ!. ಹೀಗೆ ಇವರೆಲ್ಲರನ್ನೂ ಒಂದೇ ತಕ್ಕೆಗೆ ತೆಗೆದುಕೊಂಡು ಅವರನ್ನು ಪರಾಮರ್ಶಿಸುತ್ತಾರೆ. ತಥಾಕಥಿತ ಯೋಚನಾಲಹರಿಯಿಂದ ಬಿಡಿಸಿಕೊಂಡು ಒಂದು ಕ್ಷಣ ಯೋಚಿಸಿದರೆ ಭೈರಪ್ಪ ಹೇಳಿದ್ದರಲ್ಲಿ ಸತ್ಯಾಂಶ ಕಾಣದೇ ಇರುವುದಿಲ್ಲ.

ಭೈರಪ್ಪನವರು ಒಂದು ತತ್ತ್ವ, ಸಿದ್ಧಾಂತಕ್ಕೊಳಪಟ್ಟು ಬದುಕಿದವರು. ನುಡಿದಂತೆ ನಡೆದವರು ಮತ್ತು ನಡೆದಂತೆ ನುಡಿದವರು. ಇಂತಹವರು ಸಮಾಜದಲ್ಲಿ ತುಂಬಾ ವಿರಳ. ಧರ್ಮ, ನೀತಿ, ಪ್ರಾಮಾಣಿಕತೆ, ಸತ್ಯಸಂಧತೆ ಅವರಲ್ಲಿ ಎರಕಗೊಂಡಿದ್ದವು. ಧರ್ಮದ ಬಗ್ಗೆ ಅವರು ಅವರದ್ದೇ ಆದ ನಿಲುವನ್ನು ಹೊಂದಿದ್ದರು. ಒಬ್ಬ ಉದ್ಯಮಿ ಅಪಾರ ಹಣ ಸಂಪಾದಿಸಿರುತ್ತಾನೆ. ಅದಕ್ಕೆ ಸಂಬಂಧಿಸಿದ ಕರವನ್ನು ಕಟ್ಟಿ, ಆಮೇಲೆ ಉಳಿದ ಹಣದಲ್ಲಿ ಆತ ದಾನ-ಧರ್ಮ ಮಾಡಬೇಕೆಂದು ಭೈರಪ್ಪ ಬಯಸುತ್ತಿದ್ದರು. ತಂದೆಯ ಹೆಸರಲ್ಲೋ, ತಾಯಿಯ ಹೆಸರಲ್ಲೋ ಒಂದು ಆಸ್ಪತ್ರೆಯನ್ನೋ, ಶಾಲೆಯನ್ನೋ ಕಟ್ಟಿಸಬೇಕೆಂದು ಅವರು ಹೇಳುತ್ತಿದ್ದರು. ಹಾಗೆ ನಡೆದುಕೊಂಡವರ ಬಗ್ಗೆ ಅವರಿಗೆ ಅಪರಿಮಿತ ಗೌರವವಿತ್ತು. ಅದಕ್ಕೆ ಮಾದರಿ ಅವರಿಗೆ ಬಿಲ್ ಗೇಟ್ಸ್ ಆಗಿದ್ದ. ಡಿ.ವಿ. ಗುಂಡಪ್ಪನವರಾಗಿದ್ದರು. ಬಿಲ್ ಗೇಟ್ಸ್ ತನ್ನ ಅಪರಿಮಿತ ಗಳಿಕೆಯಲ್ಲಿ ಒಂದಂಶವನ್ನು ಮಕ್ಕಳಿಗೆ ನೀಡಿ ಉಳಿದದ್ದನ್ನು ದಾನ-ಧರ್ಮ ಮಾಡಿಬಿಟ್ಟ. ಅದೇ ಧರ್ಮಬುದ್ಧಿ ಎಂದು ಭೈರಪ್ಪ ಹೇಳುತ್ತಾರೆ. ಡಿವಿಜಿ ಬಡತನದಲ್ಲೇ ಇದ್ದರೂ ಹಂಗಿನ ಹಣಕ್ಕೆ ಸ್ವಲ್ಪವೂ ಆಸೆ ಪಡುತ್ತಿರಲಿಲ್ಲ. ಆಲೋಚನಾ ಸ್ವಾತಂತ್ರ್ಯವಿಲ್ಲದೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅರ್ಥವೇ ಇಲ್ಲ. ಅದನ್ನು ಉಳಿಸಿಕೊಂಡವರು ಡಿವಿಜಿಯವರು. ಅಂತಹವರ ವ್ಯಕ್ತಿತ್ವ ಸದಾ ಮಾದರಿಯೆಂದು ಭೈರಪ್ಪ ಸ್ಮರಿಸಿಕೊಳ್ಳುತ್ತಾರೆ.

ಅಂದಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಗಳು ಪಾಕಿಸ್ತಾನದೊಂದಿಗೆ ಯುದ್ಧವುಂಟಾದಾಗ ''ದೇಶದಲ್ಲಿ ಅನ್ನಕ್ಕೆ ಸ್ವಲ್ಪ ಅಭಾವ ಉಂಟಾಗಿದೆ. ವಾರಕ್ಕೆ ಒಂದು ಒಪ್ಪತ್ತಿನ ಊಟ, ಸೋಮವಾರ ಸಾಯಂಕಾಲ ನಾನು ಉಪವಾಸವಿರುತ್ತೇನೆ. ನೀವೂ ವಾರಕ್ಕೆ ಒಪ್ಪೊತ್ತು ಆಹಾರವನ್ನು ಬಿಡಿ'' ಎಂದು ದೇಶಕ್ಕೆ ಕರೆ ಕೊಟ್ಟರು. ಇಡೀ ದೇಶವೇ ಒಪ್ಪೊತ್ತಿನ ಊಟ ಬಿಟ್ಟಿತು. ಅವರ ಮಾತಿಗೇಕೆ ಅಷ್ಟು ಬೆಲೆ ಸಂದಿತು? ಅವರು ಆಚರಿಸಿ ತೋರಿಸಿದ್ದರಿಂದ. 'ರಾಜಾ ಕಾಲಸ್ಯ ಕಾರಣಮ್'- ದೇಶದ ಒಳಿತಿಗೆ ಅಥವಾ ಕೆಡುಕಿಗೆ ರಾಜನೇ ಕಾರಣ ಎಂದು ಇದರ ಅರ್ಥ. ಲಾಲ್ ಬಹದ್ದೂರ್ ಶಾಸ್ತ್ರಿಗಳು ಇದನ್ನು ಮಾಡಿ ತೋರಿಸಿದರು. ಒಳಿತನ್ನು ಹೇಗೆ ಮಾಡಬೇಕೆಂದು ಜಗತ್ತಿಗೆ ತೋರಿಸಿ ಕೊಟ್ಟರು. ಇಂಥಾದ್ದು ಆಳುಗರಿಗೆ ಮೇಲ್ಪಂಕ್ತಿಯಾಗಬೇಕು ಎಂದು ಹೇಳುತ್ತಾ ಭೈರಪ್ಪ ಶಾಸ್ತ್ರಿಗಳ ಆದರ್ಶವನ್ನು ಎತ್ತಿಹಿಡಿ ಯುತ್ತಾರೆ.

ಮಾತ್ರವಲ್ಲ, ಅಂತಹ ಆದರ್ಶವನ್ನು ತಮ್ಮ ಜೀವನದಲ್ಲೂ ಅಳವಡಿಸಿಕೊಂಡು ಕೋಟ್ಯಂತರ ರುಪಾಯಿಗಳನ್ನು ದಾನ-ಧರ್ಮ ಮಾಡಿದರು. ಬಡಬಗ್ಗರಿಗೆ, ಅನಾಥ ಅರ್ಹ ವಿದ್ಯಾರ್ಥಿಗಳಿಗೆ, ಅನೇಕ ಸಂಘ-ಸಂಸ್ಥೆಗಳಿಗೆ, ಅರ್ಹ ಸಾಹಿತಿಗಳಿಗೆ, ರೋಗಿಗಳಿಗೆ ಆರ್ಥಿಕ ನೆರವು ನೀಡಿದರು. ಆದರೆ ಅದನ್ನು ಎಲ್ಲಿಯೂ ಹೇಳಿಕೊಳ್ಳಲಿಲ್ಲ, ಅವರ ಆಪ್ತವಲಯದಲ್ಲಿರುವ ಕೆಲವರಿಗೆ ಮಾತ್ರ ಅದು ಗೊತ್ತು. ಇಂಥಾದ್ದು ಡಾ. ಎಸ್.ಎಲ್. ಭೈರಪ್ಪನವರ ಜೀವನಾದರ್ಶ.

ಇಂತಹ ಉದಾರ ಹೃದಯದ ಖ್ಯಾತ ಕಾದಂಬರಿಕಾರ ಮತ್ತು ಪ್ರಖರ ಚಿಂತಕ ಡಾ. ಎಸ್.ಎಲ್. ಭೈರಪ್ಪನವರ ಧರ್ಮಶ್ರೀ ಕಾದಂಬರಿಗೆ 65 ವರ್ಷ ತುಂಬುತ್ತಿರುವ ಈ ಶುಭಾವಸರದಲ್ಲಿ ಅದನ್ನು ಸ್ಮರಿಸಿಕೊಳ್ಳುವ ಕಾರ್ಯಕ್ರಮವೊಂದನ್ನು ಡಾ.ಎಸ್. ಎಲ್. ಭೈರಪ್ಪ ಪ್ರತಿಷ್ಠಾನ, ಬೆಂಗಳೂರು ಇದೇ ಬರುವ 18-04-2026, ಶನಿವಾರ ಸಂಜೆ 05 ಗಂಟೆಗೆ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಏರ್ಪಡಿಸಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 91

ಸಮಾಚಾರ ಸಣ್ಣದಲ್ಲ

ಉಪ ಸಭಾಪತಿ ಸಮಿತಿ ಪುನಾರಚನೆ

ದೆಹಲಿ: ರಾಜ್ಯಸಭೆಯಲ್ಲಿ ಸಭಾಪತಿ, ಉಪ ಸಭಾಪತಿ ಸದನದಲ್ಲಿಲ್ಲದ ಸಮಯದಲ್ಲಿ ಕಲಾಪವನ್ನು ಮುನ್ನಡೆಸಲು ಆರು ಸದಸ್ಯರ ಉಪ ಸಭಾಪತಿ ಸಮಿತಿಯನ್ನು ಗುರುವಾರ ಪುನರ್ ರಚಿಸಲಾಗಿದೆ. ಈಗಿನ ಸಮಿತಿಗೆ ಬಿಜೆಪಿ ಸಂಸದರಾದ ದಿನೇಶ್ ಶರ್ಮಾ, ಘನಶ್ಯಾಮ್ ತಿವಾರಿ ಮತ್ತು ಎಸ್. ಫಾಂಗ್ನಾನ್ ಕೊನ್ಯಾಕ್, ಕಾಂಗ್ರೆಸ್ ಪಕ್ಷದ ಸಂಸದರಾದ ಫುಲೋದೇವಿ ನೇತಮ್, ಎಐಎಡಿಎಂಕೆ ಪಕ್ಷದ ಎಂ.ತಂಬಿದುರೈ, ಬಿಜು ಜನತಾ ದಳ ಪಕ್ಷದ ಸಸ್ಮಿತ್ ಪಾತ್ರಾ, ನೇಮಕವಾಗಿದ್ದಾರೆ. ಸಭಾಪತಿ, ಉಪ ಸಭಾಪತಿ ಸದನದಲ್ಲಿಲ್ಲದ ವೇಳೆ ಪೀಠದಲ್ಲಿದ್ದು, ಕಲಾಪ ಸುಗಮವಾಗಿ ಸಾಗುವಂತೆ ನೋಡಿಕೊಳ್ಳುವುದು, ಚರ್ಚೆಗಳನ್ನು ನಡೆಸಲು ಅವಕಾಶ ಮಾಡಿಕೊಡುವುದು, ಶಿಸ್ತು ಕಾಪಾಡುವುದು ಈ ಉಪ ಸಭಾಪತಿ ಸಮಿತಿ ಸದಸ್ಯರ ಜವಾಬ್ದಾರಿ ಆಗಿರುತ್ತದೆ. ಸರದಿ ಪ್ರಕಾರ ಇವರು ಕಲಾಪದ ಅಧ್ಯಕ್ಷತೆ ವಹಿಸಿಕೊಳ್ಳಲು ಅವಕಾಶವಿರುತ್ತದೆ ಎಂದು ರಾಜ್ಯಸಭೆ ಕಲಾಪ ಸಮಿತಿಯ ಪ್ರಕಟಣೆ ತಿಳಿಸಿದೆ.

ಕಾರ್ಪೊರೇಟ್ ಜಿಹಾದ್: ಇನ್ಫಿ ವಿರುದ್ಧವೂ ದೂರು

ಮುಂಬೈ: ಮಹಾರಾಷ್ಟ್ರದ ನಾಸಿಕ್‌ನಲ್ಲಿನ 'ಟಿಸಿಎಸ್' ಘಟಕದಲ್ಲಿ ಕಾರ್ಪೊರೇಟ್ ಜಿಹಾದ್ ಕೇಳಿಬಂದು 7 ಮಂದಿ ಬಂಧನವಾದ ಬೆನ್ನಲ್ಲೇ ಅದೇ ರಾಜ್ಯದ ಮತ್ತೊಂದು ನಗರ ಪುಣೆಯಲ್ಲಿ ಇರುವ 'ಇನ್ಫೋಸಿಸ್'ನ ಬಿಪಿಎಂ ಘಟಕದಲ್ಲೂ 'ಕಾರ್ಪೊರೇಟ್ ಜಿಹಾದ್' ನಡೆಯುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಪುಣೆಯ ಇನ್ಫೋಸಿಸ್ ಬಿಪಿಎಂ ಘಟಕದಲ್ಲಿ ಮಹಿಳಾ ಉದ್ಯೋಗಿಗಳಿಗೆ ಧಾರ್ಮಿಕ ಮೂಲಭೂತವಾದಿಗಳು ಸೇರಿಕೊಂಡು ಮತಾಂತರಕ್ಕೆ ಒತ್ತಡ, ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂದು 'ಎಕ್ಸ್' ಖಾತೆ ಬಳಕೆದಾರರೊಬ್ಬರು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಸಚಿವ ನಿತೀಶ್ ರಾಣೆ ಅವರಿಗೆ ದೂರು ನೀಡಿದ್ದಾರೆ. ದೂರನ್ನು ಗಮನಿಸಲಾಗಿದೆ ಎಂದು ಸಚಿವ ರಾಣೆ ಪ್ರತಿಕ್ರಿಯಿಸಿದ್ದಾರೆ. ಈ ಆರೋಪ ಸಂಬಂಧ ಇನ್ಫೋಸಿಸ್ ಕಂಪನಿ, ಉದ್ಯೋಗಿಗಳಿಗೆ ಯಾವುದೇ ರೀತಿ ತಾರತಮ್ಯ ಮಾಡುವುದನ್ನಾಗಲೀ, ಕಿರುಕುಳ ನೀಡುವುದನ್ನಾಗಲೀ ಕಂಪನಿ ಸಹಿಸಿಕೊಳ್ಳುವುದಿಲ್ಲ. ಉದ್ಯೋಗಿಗಳಿಗೆ ಸುರಕ್ಷಿತ ಮತ್ತು ಗೌರವಯುತ ಕೆಲಸದ ವಾತಾವರಣ ಒದಗಿಸಲು ಬದ್ಧ ಎಂದು ಹೇಳಿದೆ.

ಪಾಕ್‌ಗೆ ಒಟಿಪಿ ಮಾರಿದ 7 ಜನಕ್ಕೆ 3 ವರ್ಷ ಜೈಲು

ಭುವನೇಶ್ವರ: ಪಾಕಿಸ್ತಾನದ ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್(ಐಎಸ್ಐ) ಸಂಪರ್ಕವಿದ್ದ, 'ಒಟಿಪಿ' ಹಂಚಿಕೆ ಜಾಲದಲ್ಲಿ ಭಾಗಿಯಾಗಿ ಬಂಧಿತರಾಗಿದ್ದ 7 ಆರೋಪಿಗಳನ್ನು 'ದೋಷಿಗಳು' ಎಂದು ಭುವನೇಶ್ವರ ನಗರದ ಉಪ-ವಿಭಾಗೀಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ತೀರ್ಪು ನೀಡಿದೆ. ಅವರಲ್ಲಿ ಐವರು ಒಡಿಶಾದವರು, ಅಸ್ಸಾಂನ ಒಬ್ಬ, ಮಹಾರಾಷ್ಟ್ರದ ಪುಣೆಯ ಒಬ್ಬ ಸೇರಿದ್ದಾರೆ. 11 ಸಾಕ್ಷಿಗಳ ಹೇಳಿಕೆ, ಪೂರಕ ದಾಖಲೆಗಳ ಆಧಾರ ಏಳೂ ಆರೋಪಿಗಳಿಗೂ ತಲಾ 3 ವರ್ಷಗಳ ಕಠಿಣ ಸೆರೆವಾಸ ಮತ್ತು ತಲಾ 32,000 ರು. ದಂಡ ವಿಧಿಸಲಾಗಿದೆ. ಅಪರಾಧಿಗಳು ತಮ್ಮ ಮೊಬೈಲ್ ಫೋನ್‌ಗೆ ಬರುತ್ತಿದ್ದ ಒಟಿಪಿಗಳನ್ನು ಪಾಕ್‌ನ ಐಎಸ್ಐ ಹ್ಯಾಂಡ್ಲರ್‌ಗಳ ಜತೆ ಹಂಚಿಕೊಳ್ಳುತ್ತಿದ್ದರು. ಪಾಕ್‌ನವರು ಅದನ್ನು ಸೈಬರ್ ವಂಚನೆ ಮತ್ತು ಬೇಹುಗಾರಿಕೆಗೆ ಬಳಸುತ್ತಿದ್ದರು. ಒಟಿಪಿ ಕೊಟ್ಟಿದ್ದಕ್ಕೆ ಏಳು ಜನಕ್ಕೂ ದೊಡ್ಡ ಮೊತ್ತವೇ ಸಿಗುತ್ತಿತ್ತು. ಈ ಪ್ರಕರಣ ಭಾರತದ ಆಂತರಿಕ ಭದ್ರತೆಗೆ ತೀವ್ರ ಬೆದರಿಕೆ ಒಡ್ಡಿದೆ ಎಂದೇ ಪ್ರಾಸಿಕ್ಯೂಷನ್ ವಾದಿಸಿತ್ತು.

ಆಂಧ್ರ ಮನೆಯಲ್ಲಿಟ್ಟಿದ್ದ ಸ್ಫೋಟಕ ಸಿಡಿದು 5 ಬಲಿ

ಪುಟ್ಟಪರ್ತಿ: ಆಂಧ್ರ ಪ್ರದೇಶದ ಶ್ರೀ ಸತ್ಯಸಾಯಿ ಜಿಲ್ಲೆಯ ಕದಿರಿ ಮಂಡಲದ ಕುಮ್ಮರವಂದ್ಲಪಲ್ಲಿ ಗ್ರಾಮದಲ್ಲಿ ಬಾಡಿಗೆ ಮನೆಯೊಂದರಲ್ಲಿ ಸಂಗ್ರಹಿಸಿಟ್ಟಿದ್ದ ಸ್ಫೋಟಕಗಳು ಬುಧವಾರ ರಾತ್ರಿ ಹಠಾತ್ ಸಿಡಿದಿದ್ದರಿಂದ ಐವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. 20ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಅವರಲ್ಲಿ 12 ಮಂದಿಯ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಭೀತಿ ಎದುರಾಗಿದೆ. ಬಾಡಿಗೆ ಮನೆಯಲ್ಲಿ ವಾಸವಿದ್ದವರು, ಕೋಣೆಯೊಂದರಲ್ಲಿ ಗ್ಯಾಸ್ ಸಿಲಿಂಡರ್‌ಗಳು ಮತ್ತು ಡಿಟೋನೇಟರ್‌ಗಳನ್ನು ಸಂಗ್ರಹಿಸಿಟ್ಟಿದ್ದರು. ಸ್ಫೋಟಕಗಳಿದ್ದ ಸ್ಥಳದಲ್ಲಿ ಬುಧವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿದೆ. ಆ ಬಳಿಕ ನೆರೆಹೊರೆಯವರೆಲ್ಲರೂ ಬೆಂಕಿ ನಂದಿಸುವ ಪ್ರಯತ್ನದಲ್ಲಿದ್ದಾಗಲೇ ಸರಣಿಯೋಪಾದಿಯಲ್ಲಿ ಸ್ಫೋಟಗಳಾಗಿವೆ. ಪರಿಣಾಮ, ದಿನಗೂಲಿ ಕಾರ್ಮಿಕ ಮಧುಸೂಧನ್, ಕೆಲಸದ ನಿಮಿತ್ತ ಪತ್ನಿ ಜತೆ ಗ್ರಾಮಕ್ಕೆ ಭೇಟಿ ನೀಡಿದ್ದ ಸೈಯದ್ ಅಸ್ಲಂ ಬಾಷಾ, ಪಕ್ಕದ ಮನೆಯ ನಿವಾಸಿ ಮಾಬುನ್ನಿಸಾ, ಆರ್‌ಟಿಸಿ ಬಸ್ ಚಾಲಕ ವಿಶ್ವನಾಥ ರೆಡ್ಡಿ ಮೃತರಾಗಿದ್ದಾರೆ. ಕೊಠಡಿಯಲ್ಲಿ ಗ್ಯಾಸ್ ಸಿಲಿಂಡರ್ ಜತೆಗೇ ಡಿಟೊನೇಟರ್‌ಗಳು ಮತ್ತಿತರ ಸ್ಫೋಟಗಳನ್ನು ಸಂಗ್ರಹಿಸಿಟ್ಟಿದ್ದರಿಂದ ಸರಣಿ ಸ್ಫೋಟವಾಗಿದೆ. ಸ್ಫೋಟದ ತೀವ್ರತೆಗೆ ಮನೆಯ ಎರಡು ಬದಿಯ ಗೋಡೆಗಳೇ ನೆಲಕಚ್ಚಿವೆ. ಹಾಗಾಗಿಯೇ ಸಾವು-ನೋವಿನ ಪ್ರಮಾಣ ದೊಡ್ಡದಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಗೃಹ ಸಚಿವೆ ವಿ.ಅನಿತಾ ಸುದ್ದಿ ತಿಳಿದು ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಜಿಲ್ಲಾಧಿಕಾರಿ, ಎಸ್ಪಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕದಿರಿ ಜಿಲ್ಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಭಾರತದ ವಾಣಿಜ್ಯ ನಿಯೋಗ 20ರಿಂದ ಅಮೆರಿಕ ಪ್ರವಾಸ

ವಾಣಿಜ್ಯ ಸಚಿವಾಲಯ ಜಂಟಿ ಕಾರ್ಯದರ್ಶಿ ದರ್ಪಣ್ ಜೈನ್‌ಗೆ ನಿಯೋಗದ ನೇತೃತ್ವ

ಹಲವು ತಿಂಗಳಿಂದ ನನೆಗುದಿಗೆ ಬಿದ್ದಿರುವ ಅಮೆರಿಕ-ಭಾರತ ಮಧ್ಯದ ವ್ಯಾಪಾರ ಒಪ್ಪಂದ

ದೆಹಲಿ: ಅಮೆರಿಕ-ಭಾರತದ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದದ ಮಾತುಕತೆ ಮುಂದುವರಿಸುವ ಸಲುವಾಗಿ ಭಾರತದ ಉನ್ನತ ಮಟ್ಟದ ಪ್ರತಿನಿಧಿಗಳ ತಂಡ ಕೇಂದ್ರ ವಾಣಿಜ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ದರ್ಪಣ್ ಜೈನ್ ನೇತೃತ್ವದಲ್ಲಿ ಏ.20 ರಿಂದ ಮೂರು ದಿನಗಳ ಕಾಲ ಅಮೆರಿಕಕ್ಕೆ ಭೇಟಿ ನೀಡಲಿದೆ.

ಈ ಕುರಿತು ಸುದ್ದಿಗಾರರಿಗೆ ಬುಧವಾರ ಮಾಹಿತಿ ನೀಡಿದ ಕೇಂದ್ರ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್, ಪ್ರಮುಖ ವ್ಯಾಪಾರ, ಸುಂಕ ಮತ್ತು ಆಮದು-ರಫ್ತು ನೀತಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಎರಡೂ ದೇಶಗಳ ಅಧಿಕಾರಿಗಳು ಚರ್ಚೆ ನಡೆಸಲಿದ್ದಾರೆ ಎಂದು ತಿಳಿಸಿದ್ದಾರೆ.

ಎರಡೂ ದೇಶಗಳ ವಾಣಿಜ್ಯ ಸಚಿವಾಲಯದ ಪ್ರತಿನಿಧಿಗಳ ತಂಡ 4 ತಿಂಗಳ ಬಳಿಕ ಮುಖಾಮುಖಿಯಾಗುತ್ತಿದೆ. ಈ ಬಾರಿಯ ನೇರ ಸಂವಾದ ವಾಣಿಜ್ಯ ಒಪ್ಪಂದದ ಅಂತಿಮ ಹಂತದ ನಿರ್ಧಾರಗಳನ್ನು ಕೈಗೊಳ್ಳುವುದನ್ನು ವೇಗಗೊಳಿಸಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಫೆ.7ರಂದು ಪ್ರಕಟವಾಗಿರುವ ಜಂಟಿ ಹೇಳಿಕೆಯ ನಂತರದಲ್ಲಿ ಎರಡೂ ದೇಶಗಳ ಕೈಗೊಳ್ಳಬೇಕಾಗಿರುವ ಕಾನೂನುಬದ್ಧ ಕ್ರಮಗಳನ್ನು ಪೂರ್ಣಗೊಳಿಸುವುದೂ ಕೂಡ ಈ ಬಾರಿಯ ಅಮೆರಿಕ ಭೇಟಿಯ ಪ್ರಮುಖ ಉದ್ದೇಶವಾಗಿದೆ ಎಂದರು.

ತೀರ್ಪು ಪರಿಣಾಮ: ಅಧ್ಯಕ್ಷ ಟ್ರಂಪ್ ಈ ಹಿಂದೆ ವಿವಿಧ ದೇಶಗಳ ಮೇಲೆ ಮನಸೋಇಚ್ಛೆ ವಿಧಿಸಿದ್ದ ಪ್ರತಿಸುಂಕ ಕ್ರಮವನ್ನು ಅಕ್ರಮ ಎಂದು ಇತ್ತೀಚೆಗೆ ಅಮೆರಿಕದ ಸುಪ್ರೀಂಕೋರ್ಟ್ ತೀರ್ಪು ನೀಡಿರು ವುದು ಅಮೆರಿಕ ಜತೆಗಿನ ವ್ಯಾಪಾರ ಸಂಬಂಧಕ್ಕೆ ಸಂಬಂಧಿಸಿ ಭಾರತ ಸೇರಿ ಹಲವು ದೇಶಗಳ ಪಾಲಿಗೆ ಮಹತ್ವದ ತಿರುವಾಗಿದೆ. ಈ ತೀರ್ಪಿನ ಪರಿಣಾಮವಾಗಿ ಅಮೆರಿಕ ತನ್ನ ವಾಣಿಜ್ಯ ನೀತಿಯಲ್ಲಿ ಬದಲಾವಣೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಅಮೆರಿಕದ ಕಲಂ 301: ಭಾರತದ ಹಿತಾಸಕ್ತಿ

ಇದೇ ವೇಳೆ, ಸೆಕ್ಷನ್ 301ರ ಕ್ರಮಗಳ ಕುರಿತು ಅಮೆರಿಕದ ವ್ಯಾಪಾರ ಪ್ರತಿನಿಧಿ ಕಚೇರಿಗೆ ಭಾರತ ಪ್ರತಿಕ್ರಿಯೆ ಸಲ್ಲಿಸಿರುವುದು ಕೂಡಾ ಪ್ರಮುಖ ಅಂಶವಾಗಿದೆ. ಸೆಕ್ಷನ್ 301ರಡಿ ಅಮೆರಿಕ ಹಲವು ದೇಶಗಳ ಕೈಗಾರಿಕಾ ನೀತಿ ಮತ್ತು ವ್ಯಾಪಾರ ಪ್ರಕ್ರಿಯೆಗಳ ಬಗ್ಗೆ ತನಿಖೆ ನಡೆಸುತ್ತಿದೆ. ಈ ವಿಚಾರದಲ್ಲಿ ಭಾರತ ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಮುಂದಾಗಿದೆ. ಈಗಿನ ಅಮೆರಿಕ ಭೇಟಿ ವೇಳೆ ಗಂಭೀರ ಚರ್ಚೆ ನಡೆಯುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ. ತೀರ್ಪು ನಂತರದ ಈ ಬದಲಾವಣೆ ಜಾಗತಿಕ ವ್ಯಾಪಾರ ಪರಿಸ್ಥಿತಿ ಮೇಲೆ ಪ್ರಭಾವ ಬೀರಿದೆ. ಎಲ್ಲಾ ದೇಶಗಳು ವ್ಯಾಪಾರ ತಂತ್ರಗಳನ್ನು ಮರುಹೊಂದಿಸಿಕೊಳ್ಳಬೇಕಿದೆ.

ಭಾರತದ ನಿಯೋಗಕ್ಕೆ ಎದುರಾಗಿರುವ ಸವಾಲು

ಭಾರತದ ಕೃಷಿ ಉತ್ಪನ್ನಗಳ ರಫ್ತಿನ ಮೇಲೆ ಅಮೆರಿಕದ ಡೊನಾಲ್ಡ್ ಟ್ರಂಪ್ ಸರಕಾರ ಹೆಚ್ಚಿನ ಪ್ರಮಾಣದ ಸುಂಕ ವಿಧಿಸುತ್ತಿರುವುದು ಒಂದೆಡೆಯಾದರೆ, ತಳಿ ಬದಲಿಸಿದ ಮುಸುಕಿನ ಜೋಳ ಸೇರಿದಂತೆ ಅಮೆರಿಕದ ಹಲವರು ಕೃಷಿ ಮತ್ತು ಕ್ಷೀರೋತ್ಪನ್ನಗಳನ್ನು ಹೇಗಾದರೂ ಮಾಡಿ ಭಾರತದ ಮಾರುಕಟ್ಟೆಗೆ ನುಗ್ಗಿಸಬೇಕು ಎಂಬುದು ಟ್ರಂಪ್ ಸರಕಾರದ ಒತ್ತಡವಾಗಿದೆ. ಈ ವಿಚಾರದಲ್ಲಿಯೂ ಕೃಷಿ ಪ್ರಧಾನ ದೇಶವಾದ ಭಾರತದ ದೃಢ ನಿಲುವನ್ನು ಅಮೆರಿಕಕ್ಕೆ ಮನದಟ್ಟು ಮಾಡಿಸಿ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಬೇಕಾದ ಹೊಣೆಗಾರಿಕೆಯೂ ದರ್ಪಣ್ ಜೈನ್ ನೇತೃತ್ವದ ನಿಯೋಗದ ಪ್ರಮುಖ ಕಾರ್ಯವಾಗಿದೆ. ಅಲ್ಲದೆ, ಭಾರತದ ತಯಾರಿಕಾ ಕ್ಷೇತ್ರದ ಉತ್ಪನ್ನಗಳ ಮೇಲೆಯೂ ಟ್ರಂಪ್ ಸರಕಾರ ವಿಧಿಸಿರುವ ಹೆಚ್ಚುವರಿ ಪ್ರತಿಸುಂಕವನ್ನು ನಿವಾರಿಸಬೇಕಾದ ಸವಾಲೂ ಇದೆ. ಭಾರತದ ನಿಯೋಗ ಬರುತ್ತಿರುವುದರಿಂದ ಮುಂಚಿತವಾಗಿಯೇ ಅಮೆರಿಕದ ವ್ಯಾಪಾರ ಪ್ರತಿನಿಧಿಗಳ ತಂಡದ ಮುಖ್ಯಸ್ಥ ಜೆಮೈಸನ್ ಗ್ರೀರ್ ಅವರನ್ನು ಅಮೆರಿಕದಲ್ಲಿರುವ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಇತ್ತೀಚೆಗಷ್ಟೇ ಬೇಟಿಯಾಗಿ ಒಂದು ಸುತ್ತಿನ ಮಾತುಕತೆ ನಡೆಸಿದ್ದಾರೆ. ಅಮೆರಿಕ-ಭಾರತ ನಡುವಿನ ವ್ಯಾಪಾರ ಒಪ್ಪಂದ ಕುರಿತ ಮಾತುಕತೆ ನನೆಗುದಿಗೆ ಬಿದ್ದು ಹಲವಾರು ತಿಂಗಳುಗಳೇ ಕಳೆದಿವೆ. ಈ ಬಾರಿಯ ಭಾರತ ನಿಯೋಗದ ಅಮೆರಿಕ ಭೇಟಿ ವೇಳೆಯಲ್ಲಾದರೂ ಒಪ್ಪಂದ ಮತ್ತು ಷರತ್ತುಗಳ ವಿಚಾರದಲ್ಲಿ ಸಹಮತಕ್ಕೆ ಬರಲಿವೆಯೇ ಎಂಬುದನ್ನು ಕಾದು ನೋಡಬೇಕಿದೆ.

ದರ್ಪಣ್ ಜೈನ್ ಕರ್ನಾಟಕ ಅಧಿಕಾರಿ

ದರ್ಪಣ್ ಜೈನ್ ಕರ್ನಾಟಕ ಕೇಡರ್‌ನ 2001ರ ಬ್ಯಾಚ್‌ನ ಹಿರಿಯ ಐಎಎಸ್ ಅಧಿಕಾರಿ ಎಂಬುದು ಉಲ್ಲೇಖಾರ್ಹ. ಸುಮಾರು ಒಂದೂವರೆ ದಶಕಕ್ಕೂ ಅಧಿಕ ಕಾಲ ಕರ್ನಾಟಕದಲ್ಲಿ ಸೇವೆ ಸಲ್ಲಿಸಿದ ಬಳಿಕ ಅವರ ಕಾರ್ಯಶೈಲಿ ಗಮನಿಸಿದ ಕೇಂದ್ರ ಸರಕಾರ ಅವರನ್ನು ಕೇಂದ್ರ ವಾಣಿಜ್ಯ ಸಚಿವಾಲಯಕ್ಕೆ ವರ್ಗಾಯಿಸಿ ಕೊಂಡಿತು. ಸದ್ಯ ವಾಣಿಜ್ಯ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿರುವ ದರ್ಪಣ್ ಜೈನ್, ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದ ವಿಷಯದಲ್ಲಿ ಪ್ರವೀಣರು, ಉತ್ತಮ ಸಂವಹನಕಾರರು ಎಂಬ ಕಾರಣಕ್ಕೇ ಅವರನ್ನು ಅಮೆರಿಕ ಜತೆಗಿನ ವ್ಯಾಪಾರ ಒಪ್ಪಂದದ ಮಾತುಕತೆಗಳ ತಂಡದ ನೇತೃತ್ವ ವಹಿಸಿ ಅಮೆರಿಕಕ್ಕೆ ಕಳುಹಿಸಿಕೊಡಲಾಗುತ್ತಿದೆ. ದರ್ಪಣ್ ಜೈನ್ ಅವರ ಪತ್ನಿ ಅಮೃತಾ(ಐಆರ್‌ಎ ಎಸ್-2001) ಪ್ರಸ್ತುತ ದೆಹಲಿ ಅಭಿವೃದ್ಧಿ ಪ್ರಾಧಿಕಾರದ(ಡಿಡಿಎ) ಚೀಫ್ ವಿಜಿಲೆನ್ಸ್ ಆಫೀಸರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ರಫ್ತು ಆಮದು ಇಳಿಕೆ

ಇರಾನ್ ಯುದ್ಧದ ಪರಿಣಾಮವಾಗಿ ಉಂಟಾಗಿರುವ ಜಾಗತಿಕ ಮಟ್ಟದಲ್ಲಿನ ಅಸ್ಥಿರತೆಯು ಭಾರತದ ವಾಣಿಜ್ಯ ಚಟುವಟಿಕೆಗಳ ಮೇಲೆಯೂ ಪರಿಣಾಮ ಬೀರಿದೆ. ಮಾರ್ಚ್‌ನಲ್ಲಿ ಭಾರತದ ರಫ್ತು ಪ್ರಮಾಣ ಶೇ.7.44ರಷ್ಟು ಇಳಿಕೆಯಾಗಿದ್ದು, 3892 ಕೋಟಿ ಡಾಲರ್‌ಗೆ ತಗ್ಗಿದೆ. ಇದು ಕಳೆದ ಐದು ತಿಂಗಳುಗಳಲ್ಲೇ ಗರಿಷ್ಠ ಮಟ್ಟದ ರಫ್ತು ವಹಿವಾಟಾಗಿದೆ. ಆಮದು ವಹಿವಾಟಿನಲ್ಲಿಯೂ ಶೇ.6ರಷ್ಟು ಇಳಿಕೆಯಾಗಿದೆ. ಇದು ಜಾಗತಿಕ ಮಟ್ಟದಲ್ಲಿನ ಬೇಡಿಕೆ ಕುಸಿತದ ಸೂಚಕವಾಗಿದೆ.

ಐಐಎಸ್ಸಿ ದಾಳಿ ಸಂಚುಕೋರ ಹಮ್ಜಾ ಮೇಲೆ ಗುಂಡಿನ ದಾಳಿ

ವರ್ಷದಲ್ಲಿ ಎರಡನೇ ಬಾರಿ ಹತ್ಯೆಯ ಯತ್ನ | ಲಾಹೋರ್ ಆಸ್ಪತ್ರೆ ಐಸಿಯುನಲ್ಲಿ ಚಿಕಿತ್ಸೆ

ಲಾಹೋರ್: ಪಾಕಿಸ್ತಾನದ ಲಾಹೋರ್‌ನಲ್ಲಿ ಲಷ್ಕರ್-ಎ-ತಯ್ಯಬಾ (ಎಲ್‌ಇಟಿ) ಭಯೋತ್ಪಾದಕ ಸಂಘಟನೆಯ ಸಹ-ಸಂಸ್ಥಾಪಕ ಅಮೀರ್ ಹಮ್ಜಾ ಮೇಲೆ ಗುಂಡಿನ ದಾಳಿಯಾಗಿದೆ. ಗಂಭೀರವಾಗಿ ಗಾಯಗೊಂಡಿರುವ ಹಮ್ಜಾನನ್ನು ಲಾಹೋರ್ ಆಸ್ಪತ್ರೆಗೆ ದಾಖಲಿಸಿ ಐಸಿಯುನಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ.



ಹಮ್ಜಾ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್(ಐಐ ಎಸ್‌ಸಿ) ಮೇಲೆ ನಡೆಸಿದ್ದ ದಾಳಿಯ ಸೂತ್ರಧಾರ ಎಂದೇ ಗುರುತಿಸಲಾಗಿದ್ದು, ಆತ ಭಾರತದ ಪೊಲೀಸರಿಗೆ ಬೇಕಾದ ಪ್ರಮುಖ ಆರೋಪಿಯಾಗಿದ್ದಾನೆ.

ಲಾಹೋರ್‌ನ ಸ್ಥಳೀಯ ಸುದ್ದಿವಾಹಿನಿಯ ಕಚೇರಿ ಯಾಚೆ ರಸ್ತೆ ಬದಿ ಕಾರು ನಿಲ್ಲಿಸಿಕೊಂಡು ಮಾತನಾಡುತ್ತಿದ್ದ ಹಮ್ಜಾ ಮೇಲೆ ಗುಂಡಿನ ದಾಳಿಯಾಗಿದೆ. ಗುಂಡಿನ ದಾಳಿಗೆ ಹಮ್ಜಾ ಕಾರಿನ ಗಾಜುಗಳು ಪುಡಿಯಾಗಿವೆ. ಹಮ್ಜಾನ ತೋಳು ಮತ್ತು ಭುಜಕ್ಕೆ ಗುಂಡು ತಗುಲಿದೆ. ಹಮ್ಜಾ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ದಾಳಿ ನಡೆದಾಗ ಕಾರಿನಲ್ಲಿ ಹಮ್ಜಾ ಜತೆ ಪಾಕ್‌ನ ನಿವೃತ್ತ ನ್ಯಾಯಾಧೀಶ ನಜೀರ್ ಅಹ್ಮದ್ ಘಾಜಿ ಕೂಡಾ ಇದ್ದರು. ಅವರು ಯಾವುದೇ ಅಪಾಯವಿಲ್ಲದೇ ಪಾರಾಗಿದ್ದಾರೆ. ಹಮ್ಜಾ ಇನ್ನೇನು ಮನೆಗೆ ಕಾರಿನಲ್ಲಿ ಹೊರಡಬೇಕು ಎಂದುಕೊಂಡಿರುವಾಗಲೇ ಮೋಟಾರ್ ಬೈಕನ್ನು ಕಾರಿಗಡ್ಡ ನಿಲ್ಲಿಸಿದ ಅಪರಿಚಿತ ಬಂದೂಕುಧಾರಿಗಳಿಬ್ಬರು ಹಲವು ಬಾರಿ ಗುಂಡು ಹಾರಿಸಿ, ಬಳಿಕ ಮೋಟಾರ್ ಬೈಕ್‌ನಲ್ಲಿ ಪರಾರಿಯಾಗಿದ್ದಾರೆ. ಪೊಲೀಸರು ಪ್ರದೇಶವನ್ನು ಸುತ್ತುವರಿದು ದಾಳಿಕೋರರಿಗಾಗಿ ಶೋಧ ನಡೆಸಿದ್ದಾರೆ.

ಭಾರತದ ಪಟ್ಟಿಯಲ್ಲಿ ಮೋಸ್ಟ್ ವಾಂಟೆಡ್ ಉಗ್ರ

ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ 17 ಸ್ಥಾಪಕ ಸದಸ್ಯರಲ್ಲಿ ಹಮ್ಜಾ ಕೂಡಾ ಒಬ್ಬ. ಸಂಘಟನೆ ಮುಖ್ಯಸ್ಥ ಹಫೀಜ್ ಸಯೀದ್ ನಂತರದ 2ನೇ ಅತ್ಯಂತ ಪ್ರಭಾವಿ ನಾಯಕ. ಹಮ್ಜಾ ಭಾರತದ ಪಟ್ಟಿಯಲ್ಲಿ ಮೋಸ್ಟ್ ವಾಂಟೆಡ್ ಉಗ್ರನಾಗಿದ್ದಾನೆ. ಭಾರತದಲ್ಲಿ ನಡೆದ ಹಲವು ಭಯೋತ್ಪಾದಕ ಕೃತ್ಯಗಳ ಹಿಂದೆ ಈತನ ಕೈವಾಡವಿದೆ. 2005ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ) ಮೇಲಿನ ಭಯೋತ್ಪಾದಕ ದಾಳಿ ಸಂಚುಕೋರ. 2018ರಲ್ಲಿ ಜಮ್ಮು-ಕಾಶ್ಮೀರದ ಸುಂಜ್ವಾನ್ ಸೇನಾ ಶಿಬಿರದ ಮೇಲಿನ ದಾಳಿಯಲ್ಲೂ ಈತನ ಪಾತ್ರವಿದೆ. ಪ್ರಭಾವಿ ವಾಗ್ಮಿ ಮತ್ತು ಬರಹಗಾರ. 2018ರಲ್ಲಿ ಲಷ್ಕರೆ ಸಂಘಟನೆ ಮೇಲೆ ಅಂತಾರಾಷ್ಟ್ರೀಯ ಒತ್ತಡ ಹೆಚ್ಚಿದ್ದರಿಂದ ಹಮ್ಜಾ ಲಷ್ಕರೆಯಿಂದ ದೂರ ಸರಿದು 'ಜೈಶ್ ಎ ಮಂಕಾಫ್' ಎಂಬ ಹೊಸ ಉಗ್ರ ಸಂಘಟನೆ ಆರಂಭಿಸಿ ಭಯೋತ್ಪಾದಕ ಚಟುವಟಿಕೆಗಳನ್ನು ಮುಂದುವರಿಸಿದ್ದ. ಹಾಗಾಗಿ ಅಮೆರಿಕ 'ಹಮ್ಜಾ ಜಾಗತಿಕ ಭಯೋತ್ಪಾದಕ' ಎಂದು 2012ರಲ್ಲಿ ಘೋಷಿಸಿದೆ.

2ನೇ ದಾಳಿ: ಕಳೆದೊಂದು ವರ್ಷದಲ್ಲಿ ಹಮ್ಜಾ ಮೇಲೆ ನಡೆದ 2ನೇ ಕೊಲೆ ಯತ್ನ ಇದಾಗಿದೆ. 2025ರ ಮೇನಲ್ಲೂ ಗುಂಡಿನ ದಾಳಿ ನಡೆದು ಹಮ್ಜಾ ಗಂಭೀರವಾಗಿ ಗಾಯಗೊಂಡಿದ್ದ.

ಕ್ಷೇತ್ರ ಮರುವಿಂಗಡಣೆ ಗೊಂದಲ ನಿವಾರಿಸಿದ ಅಮಿತ್ ಶಾ | ಅಂಕಿಅಂಶ ಸಹಿತ ವಿವರಣೆ

ಲೋಕಸಭೆ ಸ್ಥಾನ ಹೆಚ್ಚಳ: ಪ್ರಾತಿನಿಧ್ಯಕ್ಕೆ ಧಕ್ಕೆಯಿಲ್ಲ

ದೆಹಲಿ: ಲೋಕಸಭಾ ಸ್ಥಾನಗಳನ್ನು 543ರಿಂದ 816ಕ್ಕೆ ಹೆಚ್ಚಿಸಿದರೆ ಯಾವುದೇ ರಾಜ್ಯಗಳ, ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತ ರಾಜ್ಯಗಳ ಪ್ರಾತಿನಿಧ್ಯಕ್ಕೇನೂ ಚ್ಯುತಿಯಾಗುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಪಷ್ಟಪಡಿಸಿದ್ದಾರೆ. ಕ್ಷೇತ್ರ ಮರುವಿಂಗಡಣಾ ಮಸೂದೆಯನ್ನು ಲೋಕಸಭೆಯಲ್ಲಿ ಕೇಂದ್ರ ಸರಕಾರ ಮಂಡಿಸಿದ್ದು ಆ ಬಗ್ಗೆ ಕಳವಳ ವ್ಯಕ್ತಪಡಿಸಿರುವ ದಕ್ಷಿಣ ಭಾರತದ ವಿಪಕ್ಷಗಳ ಸಂಸದರು, ಈ ಮಸೂದೆಯಿಂದ ದಕ್ಷಿಣ ಭಾರತದ ಲೋಕಸಭಾ ಕ್ಷೇತ್ರಗಳು ಕಡಿಮೆಯಾಗುತ್ತವೆ. ಜೊತೆಗೆ, ಲೋಕಸಭೆಯಲ್ಲಿ ಈಗಿರುವ ಆಯಾ ರಾಜ್ಯಗಳ ಪ್ರಾತಿನಿಧ್ಯದಲ್ಲೂ ಇಂತಿಷ್ಟು ಶೇಕಡ ಕಡಿಮೆಯಾಗುತ್ತದೆ ಎಂದು ಹೇಳಿದ್ದರು.

ಇದಕ್ಕೆ ಅಂಕಿ-ಅಂಶಗಳ ಸಮೇತ ಸ್ಪಷ್ಟನೆ ನೀಡಿರುವ ಅಮಿತ್ ಶಾ, ಲೋಕಸಭೆಯ ಒಟ್ಟು ಸೀಟುಗಳನ್ನು 543ರಿಂದ 816ಕ್ಕೆ ಹೆಚ್ಚಿಸಿದರೂ ಲೋಕಸಭೆಯಲ್ಲಿ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಅಷ್ಟೇ ಇರುತ್ತದೆ. ಅದಕ್ಕೆ ಉದಾಹರಣೆಯಾಗಿ ಕರ್ನಾಟಕ, ಆಂಧ್ರ, ತೆಲಂಗಾಣ, ತಮಿಳು ನಾಡು, ಕೇರಳದ ವಿಚಾರ ಪ್ರಸ್ತಾಪಿಸಿರುವ ಸಚಿವರು ಆ ಕುರಿತಂತೆ ಸಮಗ್ರ ಮಾಹಿತಿ ನೀಡಿದ್ದಾರೆ.

ಸಚಿವರು ಹೇಳಿದಂತೆ, ಕರ್ನಾಟಕದ ವಿಚಾರಕ್ಕೆ ಬರುವುದಾದರೆ, ಕರ್ನಾಟಕದಲ್ಲಿ ಒಟ್ಟು 28 ಲೋಕಸಭಾ ಕ್ಷೇತ್ರಗಳಿಂದ ಪ್ರತಿ ಲೋಕಸಭಾ ಚುನಾವಣೆಯಲ್ಲಿ ಒಟ್ಟು 28 ಸಂಸದರು ಲೋಕಸಭೆಗೆ ಆಯ್ಕೆಯಾಗುತ್ತಾರೆ. ಪ್ರಸ್ತುತ ಲೋಕಸಭೆಯಲ್ಲಿ ಒಟ್ಟು 543 ಸ್ಥಾನಗಳಿರುವುದರಿಂದ ಕರ್ನಾಟಕದ ಪ್ರಾತಿನಿಧ್ಯ ಶೇ. 5.15ರಷ್ಟಿದೆ. ಮುಂದೆ, ಲೋಕಸಭೆಯ ಸ್ಥಾನಗಳನ್ನು ಈಗಿರುವ ಸ್ಥಾನಗಳ ಶೇ.50ರಷ್ಟು ಹೆಚ್ಚಿಸಿದಾಗ ಒಟ್ಟಾರೆ ಲೋಕಸಭಾ ಸ್ಥಾನಗಳ ಸಂಖ್ಯೆ 816ಕ್ಕೇರುತ್ತದೆ. ಅಂತೆಯೇ, ಕರ್ನಾಟಕದ ಲೋಕಸಭೆಯ ಸ್ಥಾನಗಳೂ ಶೇ. 50ರಷ್ಟು ಹೆಚ್ಚಾಗಿ ಒಟ್ಟು 42 ಆಗುತ್ತದೆ. ಆಗ, ಲೋಕಸಭೆಯ 816 ಸ್ಥಾನಗಳಲ್ಲಿ ಕರ್ನಾಟಕದ ಪ್ರಾತಿನಿಧ್ಯವನ್ನು ಲೆಕ್ಕಹಾಕಿದಾಗ ಶೇ. 5.14ರಷ್ಟಿರುತ್ತದೆ. ಹಾಗಾಗಿ, ಕ್ಷೇತ್ರ ಮರುವಿಂಗಡಣೆಯಿಂದ ಯಾವುದೇ ರಾಜ್ಯಕ್ಕೆ ನಷ್ಟವಾಗುವುದಿಲ್ಲ ಎಂದು ಹೇಳಿದ್ದಾರೆ. ಜೊತೆಗೆ, ಈ ಅಂಕಿಅಂಶಗಳು ದಕ್ಷಿಣ ರಾಜ್ಯಗಳ ಪಾಲು ಒಟ್ಟು ಸೀಟುಗಳಲ್ಲಿ ಸುಮಾರು 24% ಮಟ್ಟದಲ್ಲೇ ಉಳಿಯಲಿದೆ ಎಂದು ಸಚಿವರು ಹೇಳಿದ್ದಾರೆ.

ಅಮಿತ್ ಶಾ ಕೊಟ್ಟ ಲೆಕ್ಕ

ರಾಜ್ಯ	ಈಗಿರುವ ಒಟ್ಟು ಸ್ಥಾನ	ಪ್ರಸ್ತುತ ಪ್ರಾತಿನಿಧ್ಯ	ಹೆಚ್ಚಾಗಲಿರುವ ಸ್ಥಾನ	ಮುಂದಿನ ಪ್ರಾತಿನಿಧ್ಯ
ಕರ್ನಾಟಕ	28	5.15%	42	5.14%
ಆಂಧ್ರಪ್ರದೇಶ	25	4.60%	38	4.65%
ತೆಲಂಗಾಣ	17	3.13%	26	3.18%
ತಮಿಳುನಾಡು	39	7.18%	59	7.23%
ಕೇರಳ	20	3.68%	30	3.67%
ಒಟ್ಟು	129	23.76% ಅಂದಾಜು 24%	195	23.87% ಅಂದಾಜು 24%

'ನಿಮ್ಮ ಕುತಂತ್ರಗಳಿಗೆ ಚಾಣಕ್ಯ ಶಾಕ್ ಆಗ್ತಿದ್ದ'

ಅಮಿತ್ ಶಾ ವಿರುದ್ಧ ಪ್ರಿಯಾಂಕಾ ಗಾಂಧಿ ವಾಗ್ದಾಳಿ

ದೆಹಲಿ: "ನಿಮ್ಮ ಕುತಂತ್ರವನ್ನು ನೋಡಿದ್ದರೆ ಚಾಣಕ್ಯನೇ ಶಾಕ್ ಆಗಿಬಿಡುತ್ತಿದ್ದ" - ಹೀಗೆಂದು ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಪ್ರಿಯಾಂಕಾ ಗಾಂಧಿ ಟೀಕಿಸಿದ್ದಾರೆ. ಈ ಹಾಸ್ಯಮಯ ಪ್ರಸಂಗ ನಡೆದಿದ್ದು ಏ. 16ರ ಲೋಕಸಭಾ ಕಲಾಪದಲ್ಲಿ. ಅವರ ಮಾತನ್ನು ಕೇಳಿ ಖುದ್ದು ಅಮಿತ್ ಶಾ ಹಾಗೂ ಬಿಜೆಪಿಯ ಸಂಸದರು ನಗುವಿನ ಕಡಲಲ್ಲಿ ತೇಲುವಂತೆ ಮಾಡಿತು.

ಮಹಿಳಾ ಮೀಸಲಾತಿ ಕುರಿತಂತೆ ಲೋಕಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಮಾಡಿದ್ದ ಭಾಷಣಕ್ಕೆ ವಿವರಣೆ ನೀಡಿದ ಪ್ರಿಯಾಂಕಾ ಗಾಂಧಿ, 'ಮಹಿಳಾ ಮೀಸಲಾತಿ ವಿಚಾರವಾಗಿ ಇತಿಹಾಸದಲ್ಲಿ ಯಾರ್‍ಯಾರೋ ನಾಯಕರು ಅನ್ಯಾಯ ಮಾಡಿದರು ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ. ಆದರೆ, ಯಾರು ಸುಳ್ಳು ಹೇಳುತ್ತಾರೆಂದು ಮಹಿಳೆಯರಿಗೆ ಸುಲಭವಾಗಿ ಗೊತ್ತಾಗುವ ಕಲೆಯಿದೆ. ಹಾಗಾಗಿ, ನಿಮ್ಮ ಸುಳ್ಳುಗಳು ಮಹಿಳೆಯರಿಗೆ ಬಹುಬೇಗನೇ ಗೊತ್ತಾಗುತ್ತದೆ. ನಿಮ್ಮ ಕುತಂತ್ರ ನೋಡಿ ಚಾಣಕ್ಯನೇ ಶಾಕ್ ಆಗುತ್ತಿದ್ದ' ಎಂದು ಟಾಂಗ್ ಕೊಟ್ಟರು.

ಇತಿಹಾಸದ ಬಗ್ಗೆ ಹೇಳುವಾಗ ಬಿಜೆಪಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಪ್ರಧಾನಿಯವರು ತಾವೇ ಮಹಿಳಾ ಮೀಸಲಾತಿಯ ಅತಿ ದೊಡ್ಡ ಬೆಂಬಲಿಗರು ಹಾಗೂ ಪ್ರತಿಪಾದಕರು ಎಂಬಂತೆ ಮಾತನಾಡಿದ್ದಾರೆ. 2023ರಲ್ಲಿ ಈ ವಿಧೇಯಕ ಮೊದಲ ಬಾರಿ ಲೋಕಸಭೆಯಲ್ಲಿ ಮಂಡನೆಯಾದಾಗ ಕಾಂಗ್ರೆಸ್ ತನ್ನ ಸಿದ್ಧಾಂತಕ್ಕೆ ಅನುಗುಣವಾಗಿ ಅದನ್ನು ಸಂಪೂರ್ಣವಾಗಿ ಬೆಂಬಲಿಸಿತ್ತು' ಎಂದು ಸ್ಪಷ್ಟಪಡಿಸಿದರು.

1931ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕರಾಚಿ ಅಧಿವೇಶನದಲ್ಲಿ ಮಹಿಳೆಯರ ಸಮಾನ ಹಕ್ಕುಗಳ ಕುರಿತು ನಿರ್ಣಯ ಅಂಗೀಕರಿಸಲಾಯಿತು. ಅಮೆರಿಕದಂತಹ ದೇಶಗಳು ಈ ಹಕ್ಕಿಗಾಗಿ 150 ವರ್ಷ ಕಾಯಬೇಕಾಯಿತು. ಆನಂತರ, ಪಂಚಾಯತ್ ಮತ್ತು ಮುನ್ಸಿಪಾಲಿಟಿಗಳಲ್ಲಿ ಶೇ.33ರಷ್ಟು ಮೀಸಲಾತಿಯನ್ನು ಜಾರಿಗೆ ತಂದಿದ್ದು ನನ್ನ ತಂದೆ ಹಾಗೂ ಅಂದಿನ ಪ್ರಧಾನಿ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರ' ಎಂದು ಪ್ರಿಯಾಂಕಾ ಗಾಂಧಿ ನೆನಪಿಸಿದರು.

ಟಿಸಿಎಸ್‌ನಲ್ಲಿ ಲೈಂಗಿಕ ಕಿರುಕುಳ-ಮತಾಂತರ: ಟೀಂ ಲೀಡರ್ಸ್ ಸೇರಿ 7 ಮಂದಿ ಬಂಧನ | ಎಚ್‌ಆರ್ ನಿದಾ ಖಾನ್ ಮಾಸ್ಟರ್ ಮೈಂಡ್: ತನಿಖೆ ವೇಳೆ ಸ್ಫೋಟಕ ಮಾಹಿತಿ ಬಹಿರಂಗ | ವಿದೇಶಿ ಉದ್ಯೋಗ ನೆಪ: ಯುವತಿಯರಿಗೆ ಇಸ್ಲಾಂ ಬೋಧಕ ಇರ್ಮಾನ್ ವಿಡಿಯೊ ಕರೆ

ನಾಸಿಕ್ ಟಿಸಿಎಸ್ ಕಾರ್ಪೊರೇಟ್ ಜಿಹಾದ್‌ಗೆ ಮಲೇಷ್ಯಾ ನಂಟು

ಮುಂಬೈ: ಮಹಾರಾಷ್ಟ್ರ ರಾಜ್ಯದ ನಾಸಿಕ್ ನಗರದಲ್ಲಿರುವ ಪ್ರಮುಖ ತಂತ್ರಜ್ಞಾನ ಸೇವಾ ಕ್ಷೇತ್ರದ ಕಂಪನಿ 'ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್'(ಟಿಸಿಎಸ್) ಬಿಪಿಒ ಘಟಕದಲ್ಲಿ ಇತ್ತೀಚೆಗೆ ಬಯಲಾದ 'ಕಾರ್ಪೊರೇಟ್ ಜಿಹಾದ್' ಪ್ರಕರಣಕ್ಕೆ ಮಲೇಷ್ಯಾ ನಂಟು ಇರುವುದು ತನಿಖೆಯಿಂದ ದೃಢಪಟ್ಟಿದೆ.

ಮಹಾರಾಷ್ಟ್ರ ಪೊಲೀಸರ 'ವಿಶೇಷ ತನಿಖಾ ತಂಡ'(ಎಸ್‌ಐಟಿ) ತನಿಖೆ ನಡೆಸುತ್ತಿದ್ದು, ಟಿಸಿಎಸ್ ಕಂಪನಿಯಿಂದ ಬಂಧಿಸಲಾಗಿರುವ 7 ಆರೋಪಿಗಳ ವಾಟ್ಸಪ್ ಚಾಟ್‌ಗಳನ್ನು ಪರಿಶೀಲಿಸಿದಾಗ ಆರೋಪಿಗಳು ಮಲೇಷ್ಯಾ ಮೂಲದ ಇರ್ಮಾನ್ ಎಂಬಾತನ ಜತೆ ಸಂಪರ್ಕದಲ್ಲಿದ್ದಾರೆ ಎಂಬುದು ತಿಳಿದುಬಂದಿದೆ.

ಇರ್ಮಾನ್‌ನಿಂದ ವಿಡಿಯೊ ಕರೆಗಳು ಬಂದಾಗ ಆರೋಪಿಗಳು ತಮ್ಮ ಕಚೇರಿಯಲ್ಲಿನ ಕೆಲವು ಆಯ್ದ ಮಹಿಳಾ ಉದ್ಯೋಗಿಗಳನ್ನು ಕರೆಗೆ ಸಂಪರ್ಕಗೊಳಿಸುತ್ತಿದ್ದರು. ಮಹಿಳೆಯರಿಗಾದರೆ ಮಲೇಷ್ಯಾದಲ್ಲಿ ಹೆಚ್ಚಿನ ಸಂಬಳದ ಕೆಲಸ ಕೊಡಿಸುವೆ ಎಂದು ಇರ್ಮಾನ್ ನಂಬಿಸುತ್ತಿದ್ದ. ಜತೆಗೆ ಉತ್ತಮ ಜೀವನಶೈಲಿಯ ಆಮಿಷ ತೋರಿಸುತ್ತಿದ್ದ. ಹಿಂದೂ ಯುವತಿಯರ ಪಾಸ್‌ಪೋರ್ಟ್ ಮತ್ತು ಆಧಾರ್ ಕಾರ್ಡ್‌ಗಳನ್ನು ಪಡೆದುಕೊಳ್ಳುತ್ತಿದ್ದ. ಆ ಬಳಿಕ ಮಾನಸಿಕ ಒತ್ತಡ ಹೇರಿ ಧಾರ್ಮಿಕ ಮತಾಂತರಕ್ಕೆ ಪ್ರಚೋದನೆ ನೀಡುತ್ತಿದ್ದ ಎಂಬುದು ತನಿಖೆ ವೇಳೆ ತಿಳಿದುಬಂದಿದೆ.

ವಾಸ್ತವದಲ್ಲಿ ಇರ್ಮಾನ್ ಮಲೇಷ್ಯಾದಲ್ಲಿ ಇಸ್ಲಾಂ ಧರ್ಮದ ಬೋಧಕನಾಗಿದ್ದ. ಆದರೆ, ಬಂಧಿತ ಆರೋಪಿಗಳಾದ ಡ್ಯಾನಿಶ್ ಶೇಖ್ ಮತ್ತು ಇತರೆ ಐವರು ಆರೋಪಿಗಳೆಲ್ಲರೂ ಇರ್ಮಾನ್‌ನನ್ನು 'ವಿದೇಶಿ ಉದ್ಯೋಗದ ಮಾರ್ಗದರ್ಶಕ' ಎಂದೇ ತಮ್ಮ ಕಚೇರಿಯ ಮಹಿಳಾ ಉದ್ಯೋಗಿಗಳಿಗೆ ಪರಿಚಯಿಸುತ್ತಿದ್ದರು. ಆದರೆ, ಇರ್ಮಾನ್ ಉದ್ಯೋಗ ಆಮಿಷವೊಡ್ಡುತ್ತಲೇ ಹಿಂದೂ ಯುವತಿಯರನ್ನು ಮತಾಂತರಕ್ಕೆ ಪ್ರೇರೇಪಿಸುತ್ತಿದ್ದ. ಈತನೊಂದಿಗೆ ಆರೋಪಿಗಳು ನಡೆಸಿರುವ ವಾಟ್ಸಪ್ ಚಾಟ್‌ಗಳನ್ನು ಎಸ್‌ಐಟಿ ವಶಪಡಿಸಿಕೊಂಡಿದೆ.

ಮಹಾರಾಷ್ಟ್ರದ ನಾಸಿಕ್‌ನಲ್ಲಿನ ಟಿಸಿಎಸ್ ಬಿಪಿಒ ಘಟಕದಲ್ಲಿ ಹಿಂದೂ ಯುವತಿಯರಿಗೆ ಲೈಂಗಿಕ ಕಿರುಕುಳ, ಮತಾಂತರಕ್ಕೆ ಒತ್ತಡ ಹೇರುತ್ತಿದ್ದ ಟೀಂ ಲೀಡರ್ ಸೇರಿ 7 ಮುಸ್ಲಿಂ ಉದ್ಯೋಗಿಗಳ ಸೆರೆ. ಬಂಧಿತ ಯುವತಿ ನಿಧಾಖಾನ್.

ಎನ್‌ಐಎ, ಎನ್‌ಎಚ್‌ಆರ್‌ಸಿ ಪ್ರವೇಶ

ಮಹಾರಾಷ್ಟ್ರದ ನಾಸಿಕ್ ನಗರದ 'ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್'(ಟಿಸಿಎಸ್)ನಲ್ಲಿ 'ಕಾರ್ಪೊರೇಟ್ ಜಿಹಾದ್' ಮತ್ತು 'ಲೈಂಗಿಕ ಕಿರುಕುಳ' ಹಾಗೂ 'ಮತಾಂತರ ಯತ್ನ' ಪ್ರಕರಣಗಳು ನಡೆದಿರುವುದರ ತನಿಖೆ ನಡೆಸುತ್ತಿರುವ ನಾಸಿಕ್ ಪೊಲೀಸರ ವಿಶೇಷ ತನಿಖಾ ತಂಡ, ಪ್ರಕರಣದಲ್ಲಿ ವಿದೇಶಿ ಸಂಪರ್ಕ, ಮಾನವ ಕಳ್ಳಸಾಗಣೆ ಯತ್ನ ಕಂಡುಬಂದಿರುವುದರಿಂದ ರಾಷ್ಟ್ರೀಯ ಮಟ್ಟದ ತನಿಖಾ ಸಂಸ್ಥೆಗಳ ನೆರವು ಕೋರಿದೆ. ತನಿಖೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ), ಮಹಾರಾಷ್ಟ್ರ ಗುಪ್ತಚರ ಇಲಾಖೆಯ ಸಹಕಾರ ಅಗತ್ಯವಾಗಿದೆ ಎಂದು ನಾಸಿಕ್ ಪೊಲೀಸ್ ಆಯುಕ್ತ ಸಂದೀಪ್ ಕಾರ್ಣಿಕ್ ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ. ಇದೇ ವೇಳೆ, ರಾಷ್ಟ್ರೀಯ ಮಹಿಳಾ ಆಯೋಗವೂ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಸತ್ಯಶೋಧನಾ ತಂಡವನ್ನು ನಾಸಿಕ್‌ಗೆ ಕಳುಹಿಸಿಕೊಟ್ಟಿದೆ.

ಪ್ರಕರಣ ಬಯಲಾದ ಬಗೆ

ಟಿಸಿಎಸ್‌ನ ನಾಸಿಕ್ ಘಟಕದ ಮಹಿಳಾ ಉದ್ಯೋಗಿಯೊಬ್ಬರು ಅತ್ಯಾಚಾರ ಮತ್ತು ಮತಾಂತರ ಯತ್ನ ದೂರು ದಾಖಲಿಸಿದರು. ಅದನ್ನು ಆಧರಿಸಿ ನಾಸಿಕ್‌ನ ಸಹಾಯಕ ಪೊಲೀಸ್ ಆಯುಕ್ತ(ಎಸಿಪಿ) ಸಂದೀಪ್ ಮಿಟ್ಕೆ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಲಾಯಿತು. 'ಎಸ್‌ಐಟಿ' ಮೊದಲಿಗೆ 9 ಮಹಿಳಾ ಪೊಲೀಸ್ ಅಧಿಕಾರಿಗಳನ್ನು ಗುಪ್ತನಾಮದೊಂದಿಗೆ ಟಿಸಿಎಸ್ ನಾಸಿಕ್ ಶಾಖೆಗೆ ಐಟಿ ತಂತ್ರಜ್ಞರು, ಹೌಸ್ ಕೀಪಿಂಗ್, ಹೆಲ್ಪರ್ ಮೊದಲಾದ ಕೆಲಸಗಳ ಹೆಸರಲ್ಲಿ ನೇಮಕಗೊಳ್ಳುವಂತೆ ಮಾಡಲಾಯಿತು. 9 ಮಂದಿಯೂ ರಹಸ್ಯ ಕಾರ್ಯಾಚರಣೆ ವೇಳೆ ನಾಸಿಕ್ ಶಾಖೆಯೊಳಗಿನ ಹುಳುಕುಗಳನ್ನೆಲ್ಲಾ ಪತ್ತೆ ಮಾಡಿ ಸಾಕ್ಷ್ಯಗಳನ್ನು ಕಲೆ ಹಾಕಿದರು. ಆನಂತರವೇ ಎಚ್ ಆರ್ ಮ್ಯಾನೇಜರ್, ಟೀಂ ಲೀಡರ್ ಸೇರಿದಂತೆ 7 ದುರುಳರನ್ನು ಬಂಧಿಸಿ ಡಿಯೋಲಾಲಿ ಕ್ಯಾಂಪ್ ಠಾಣೆ ಮತ್ತು ಮುಂಬೈ ನಾಕಾ ಠಾಣೆಯಲ್ಲಿ ಒಟ್ಟು 9 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.

ಸಾಕ್ಷ್ಯ ಸಂಗ್ರಹ: ಆರೋಪಿಗಳ ನಡುವೆ ವಿನಿಮಯವಾಗಿರುವ 78 ಅನುಮಾನಾಸ್ಪದ ಕರೆಗಳು, ಇಮೇಲ್‌ಗಳು ಮತ್ತು ವಾಟ್ಸಾಪ್ ಗ್ರೂಪ್ ಚಾಟ್‌ಗಳನ್ನು ಎಸ್‌ಐಟಿ ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದು, ಪ್ರಮುಖ ಸಾಕ್ಷ್ಯಗಳಾಗಿ ಪರಿಗಣಿಸಿದ್ದಾರೆ.

4 ವರ್ಷಗಳಿಂದಲೂ ದುರಾಚಾರ

ಕಳೆದ 4 ವರ್ಷಗಳಿಂದಲೂ(2022) ದುರುಳರ ತಂಡ, ಮಹಿಳಾ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡು, ದುರ್ಬಲ ಮನಸ್ಸಿನ ವರನ್ನು ಕಂಡುಕೊಂಡು ಲೈಂಗಿಕ ಕಿರುಕುಳ ನೀಡುವುದು, ಅದನ್ನು ವಿಡಿಯೊ ರೆಕಾರ್ಡ್ ಮಾಡಿಕೊಂಡು ಬ್ಲ್ಯಾಕ್‌ಮೇಲ್ ಮಾಡುವುದು, ಗೋಮಾಂಸ ಸೇವಿಸುವಂತೆ, ನಮಾಜ್ ಮಾಡುವಂತೆ ಒತ್ತಾಯಿಸುವುದು, ಎದುರಿಗೇ ಹಿಂದೂ ದೇವರುಗಳನ್ನು ಹೀಗಳೆಯುವುದು, ಮತಾಂತರಕ್ಕೆ ಪ್ರಚೋದಿಸುವುದನ್ನು ನಡೆಸುತ್ತಾ ಬಂದಿತ್ತು ಎಂಬುದು ತನಿಖೆ ವೇಳೆ ತಿಳಿದುಬಂದಿದೆ.

ಸೂತ್ರಧಾರಿಣಿ: ಟಿಸಿಎಸ್ ನಾಸಿಕ್ ಘಟಕದಲ್ಲಿನ ಈ ದುಷ್ಕೃತ್ಯಗಳಿಗೆಲ್ಲಾ ಎಚ್‌ಆರ್ ಮ್ಯಾನೇಜರ್ ನಿಧಾಖಾನ್ ಪ್ರಮುಖ ಸೂತ್ರಧಾರಿ. ಕೆಲವು ಮಹಿಳಾ ಉದ್ಯೋಗಿಗಳು ಟೀಂ ಲೀಡರ್‌ಗಳ ವಿರುದ್ಧ ಲವ್ ಜಿಹಾದ್ ಮತ್ತು ಲೈಂಗಿಕ ಕಿರುಕುಳ, ಗೋಮಾಂಸ ಭಕ್ಷಣೆಗೆ ಒತ್ತಾಯ ಸೇರಿದಂತೆ ಹಲವು ಬಾರಿ ದೂರು ನೀಡಿದ್ದರೂ ಎಚ್‌ಆರ್ ಮ್ಯಾನೇಜರ್ ನಿಧಾಖಾನ್ ನಿರ್ಲಕ್ಷಿಸಿದ್ದಳು.

ಇರ್ಮಾನ್ ಅಂತಾರಾಷ್ಟ್ರೀಯ ಮಾನವ ಕಳ್ಳಸಾಗಣೆ ಜಾಲದ ಅಥವಾ ಸಂಘಟಿತ ಮತಾಂತರ ಜಾಲದ ಭಾಗವಾಗಿದ್ದನೇ? ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

ಬಂಧಿತರು: ಡ್ಯಾನಿಷ್ ಶೇಖ್, ತೌಸೀಫ್ ಅತ್ತಾರ್, ರಾಝಾ ಮೆಮೊನ್, ಶಾರುಖ್ ಕುರೇಷಿ, ಶಫಿ ಶೇಖ್ ಮತ್ತು ಆಸಿಫ್ ಅಫ್ತಾಬ್ ಅನ್ಸಾರಿ ಬಂಧಿತರು. ಟಿಸಿಎಸ್ ನಾಸಿಕ್ ಘಟಕದಲ್ಲಿ ಇವರೆಲ್ಲರಿಗೂ ಮಾರ್ಗದರ್ಶಕಳಾಗಿದ್ದ ಕಂಪನಿಯ ಮಾನವ ಸಂಪನ್ಮೂಲ(ಎಚ್‌ಆರ್) ವಿಭಾಗದ ಮ್ಯಾನೇಜರ್, ಪುಣೆ ಮೂಲದ ನಿಧಾ ಖಾನ್‌ಳನ್ನೂ ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ.

ಆರೋಪಿ ಜತೆ ಎಜಿಎಂ: 'ಟಿಸಿಎಸ್' ಕಂಪನಿಯ ನಾಸಿಕ್ ಕಚೇರಿಯಲ್ಲಿನ 6 ಮಂದಿಯ ವಿರುದ್ಧ ಲವ್ ಜಿಹಾದ್, ಲೈಂಗಿಕ ಕಿರುಕುಳ, ಮತಾಂತರ ಯತ್ನ ಪ್ರಕರಣಗಳು ದಾಖಲಾಗಿದ್ದರೂ, ಘಟಕದ ಸಹಾಯಕ ಪ್ರಧಾನ ವ್ಯವಸ್ಥಾಪಕ 3ನೇ ಆರೋಪಿ ಡ್ಯಾನಿಶ್ ಶೇಖ್ ಜತೆ ಸಂಪರ್ಕದಲ್ಲಿದ್ದರು. ಬಂಧನವಾಗುವುದಕ್ಕೂ ಮುನ್ನ ಶೇಖ್‌ಗೆ ಕರೆ ಮಾಡಿದ್ದರು ಎಂಬುದನ್ನೂ ಪೊಲೀಸರು ಕಂಡುಕೊಂಡಿದ್ದಾರೆ.

ಎಸ್‌ಐಟಿ ಅಧಿಕಾರಿಗಳು ಸದ್ಯ 6 ಬಂಧಿತರ ನಡುವಿನ ಫೋನ್ ಕರೆ, ಸಂದೇಶಗಳು ಮತ್ತು ಇಮೇಲ್ ದಾಖಲೆಗಳನ್ನು ವಿಶ್ಲೇಷಿಸಿದ್ದಾಗ ಈ ಮಾಹಿತಿ ಕಂಡುಬಂದಿದೆ.

ನಾಗಮೋಹನದಾಸ್ ವರದಿ ವಿರುದ್ಧ ಕೋರ್ಟ್ ಮೆಟ್ಟಿಲೇರಲು ನಿರ್ಧಾರ

ಬೆಂಗಳೂರು: ಕ್ಯಾಬಿನೆಟ್ ಸಭೆಯಲ್ಲಿ ಯಾರಿಗೂ ಅನ್ಯಾಯವಾಗದಂತೆ ಎಲ್ಲರಿಗೂ ಸಮಾನ ರೀತಿಯಲ್ಲಿ ಒಳ ಮೀಸಲಾತಿಯಲ್ಲಿ ನ್ಯಾಯ ಒದಗಿಸಲು ಸರಕಾರ ನಿರ್ಧಾರಕ್ಕೆ ಬಂದಂತಿದೆ. ಇನ್ನು ಮುಂದೆ ನಮ್ಮ ಸಮುದಾಯವನ್ನು ಎಚ್ಚರಿಕೆಯಿಂದ ಮುನ್ನಡೆಸಬೇಕು ಎಂದು ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ, ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅಭಿಪ್ರಾಯಪಟ್ಟರು

ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದಿಂದ ವಸಂತ ನಗರದಲ್ಲಿರುವ ಡಾ.ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ 'ಒಳ ಮೀಸಲಾತಿ ಕುರಿತು ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ಸಲ್ಲಿಸಿದ್ದ ವರದಿಯಲ್ಲಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ'ದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಕ್ಯಾಬಿನೆಟ್ ಸಭೆಯಲ್ಲಿ ಉಪ ಸಮಿತಿ ಮತ್ತು ತಾಂತ್ರಿಕ ಸಮಿತಿ ರಚಿಸಲು ಸರಕಾರವು ಶಿಫಾರಸು ಮಾಡಬೇಕು. ನಾವು ಕಾನೂನು ಪ್ರಕಾರ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಬೇಕು, ಪ್ರತಿಯೊಬ್ಬರೂ ಈ ಹೋರಾಟದಲ್ಲಿ ಭಾಗವಹಿಸಬೇಕು ಎಂದರು.

ರಾಜ್ಯ ಸಂಚಾಲಕ, ನಿವೃತ್ತ ಐಎಎಸ್ ಅಧಿಕಾರಿ ಸಿದ್ದಯ್ಯ ಮಾತನಾಡಿ, ನಾಗಮೋಹನ್ ದಾಸ್ ಆಯೋಗವು ನೀಡಿರುವ ಅವೈಜ್ಞಾನಿಕ ವರದಿಯ ಹಿನ್ನೆಲೆಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದ್ದು, ಕೂಡಲೇ ವರದಿಯನ್ನು ತಿರಸ್ಕರಿಸಬೇಕು. ಆ ವರದಿಯು ಬಲಗೈ ಸೇರಿದಂತೆ ಹಲವು ಸಮುದಾಯಗಳಿಗೆ ಮರಣ ಶಾಸನವಾಗಿದೆ. ಸರಕಾರವು ಶೀಘ್ರದಲ್ಲೇ 12 ಜಿಲ್ಲೆಗಳಲ್ಲಿ ಮರು ಸಮೀಕ್ಷೆ ನಡೆಸಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದಿಂದ ವಸಂತ ನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಒಳ ಮೀಸಲಾತಿಯ ನ್ಯಾ.ನಾಗಮೋಹನ್ ದಾಸ್ ಆಯೋಗ ವರದಿಯಲ್ಲಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಜ್ಯೋತಿ ಬೆಳಗಿಸುವ ಮೂಲಕ ಗಣ್ಯರು ಉದ್ಘಾಟಿಸಿದರು.

> ನ್ಯಾ.ನಾಗಮೋಹನ್ ದಾಸ್ ಆಯೋಗದ ವರದಿಯಲ್ಲಿ ಅಂಕಿ ಅಂಶಗಳು ಸುಪ್ರೀಂಕೋರ್ಟ್ ಗೆ ವಿರೋಧವಾಗಿದೆ. ನಾವೆಲ್ಲರೂ ದಾಖಲೆಗಳನ್ನು ತೆಗೆದುಕೊಂಡು ಹೈಕೋರ್ಟ್, ಸುಪ್ರೀಂಕೋರ್ಟ್‌ಗೆ ಹೋಗಬೇಕು.
> – ಜ್ಞಾನಪ್ರಕಾಶ ಸ್ವಾಮೀಜಿ, ಬಲಗೈ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷರು

> ನಾಗಮೋಹನದಾಸ್ ಆಯೋಗದ ವರದಿಯು ಬಲಗೈ ಸೇರಿದಂತೆ ಹಲವು ಸಮುದಾಯಗಳಿಗೆ ಮರಣ ಶಾಸನವಾಗಿದೆ. ಸರಕಾರವು ಸದ್ಯದಲೇ 12 ಜಿಲ್ಲೆಗಳಲ್ಲಿ ಮರು ಸಮೀಕ್ಷೆ ನಡೆಸಬೇಕು.
> – ಸಿದ್ದಯ್ಯ ಐಎಎಸ್ (ನಿವೃತ್ತ), ರಾಜ್ಯ ಸಂಚಾಲಕರು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರಯ್ಯ ಮಾತನಾಡಿ, ನಾಗಮೋಹನ ದಾಸ್ ವರದಿಯು ಸಂವಿಧಾನದ ಬಾಹಿರವಾಗಿದೆ. ಇದರ ವಿರುದ್ಧ ಬಲಗೈ ಸಮುದಾಯ ರೆಬೆಲ್ ಆಗಬೇಕಾಗುತ್ತದೆ. ಈಗಾಗಲೇ ಕೇಂದ್ರ ಸರಕಾರದ ಗಣತಿ ಆರಂಭವಾಗಿದ್ದು, ನಮ್ಮ ಜನಾಂಗದ ಸರಿಯಾದ ಮಾಹಿತಿಯನ್ನು ಕುಟುಂಬ ಸಮೀಕ್ಷೆಯ ಅಂಕಿ ಅಂಶದೊಂದಿಗೆ ವೈಜ್ಞಾನಿಕ ಮಾನದಂಡದ ರೀತಿಯಲ್ಲಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಡಿ.ಜಿ.ಸಾಗರ್, ಬಲಗೈ ಸಮುದಾಯಗಳ ಒಕ್ಕೂಟದ ಸಂಚಾಲಕ ಶಿವಣ್ಣ ಬಿ. ಕನಕಪುರ, ವಿಚಾರವಾದಿ ವಿಠಲ ವಗ್ಗನ್, ಡಾ.ದೀಪಕ್ ಅಪ್ಪಾಜಿ, ಡಾ.ಈಶ್ವರ ಸಿರಿಗೇರಿ, ಗೌರಿಶಂಕರ್ ಸೇರಿ 31 ಜಿಲ್ಲಾ ಒಕ್ಕೂಟದ ಪದಾಧಿಕಾರಿಗಳು ಮತ್ತು ಸದಸ್ಯರ ಉಪಸ್ಥಿತರಿದ್ದರು.

ತೃತೀಯ ಭಾಷೆಗೆ ಅಂಕವನ್ನೇ ಕೊಡಿ

ಬೆಂಗಳೂರು: ಪ್ರಸಕ್ತ ಸಾಲಿನಿಂದಲೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಎಸ್ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಗ್ರೇಡ್ ನೀಡುವ ಬಗ್ಗೆ ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ ಸೇರಿ ಮೂವರು ವಿದ್ಯಾರ್ಥಿಗಳು ತಕರಾರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರ ಏಕಸದಸ್ಯ ಪೀಠವು ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ಸರಕಾರಕ್ಕೆ ಸೂಚಿಸಿ, ಅರ್ಜಿ ಇತ್ಯರ್ಥಪಡಿಸಿದೆ.

ಅರ್ಜಿದಾರರ ಪರ ವಕೀಲ ಆರ್.ವಿ.ನಾಯ್ಕ ವಾದ ಮಂಡಿಸಿ, 2025-2026ನೇ ಸಾಲಿನಿಂದಲೇ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿ ತೃತೀಯ ಭಾಷೆ ವಿಷಯಗಳಿಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು 2026ರ ಮಾ.28ರಂದು ಹೇಳಿಕೆ ನೀಡಿದ್ದಾರೆ. ಅಲ್ಲದೇ ಇದಕ್ಕೂ ಮುನ್ನ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಮುಖ್ಯಸ್ಥರು 2024ರ ಅ.18 ಮತ್ತು 2025ರ ಅ.28ರಂದು ಮಾರ್ಗಸೂಚಿ ಹಾಗೂ ಸುತ್ತೋಲೆ ಹೊರಡಿಸಿ, ಎಸ್ಎಸ್ಎಲ್‌ಸಿ ಹಿಂದಿ ಹಾಗೂ ಇತರೆ ತೃತೀಯ ಭಾಷಾ ವಿಷಯಗಳಿಗೆ 100 ಅಂಕ ನೀಡಬೇಕು. ಲಿಖಿತ ಪರೀಕ್ಷೆಯ ಮೌಲ್ಯಮಾಪನದಲ್ಲಿ 80 ಅಂಕ, ಶಾಲಾ ಆಂತರಿಕ ಪರೀಕ್ಷೆ 20 ಅಂಕ ನೀಡಬೇಕು ಎಂದು ಸೂಚಿಸಿದ್ದಾರೆ. ಆದರೆ, ಕೊನೆ ಹಂತದಲ್ಲಿ ಪರೀಕ್ಷೆ ನಡೆಯುತ್ತಿರುವ ಸಮಯದಲ್ಲಿ ಅಂಕಗಳ ಬದಲಿಗೆ ಗ್ರೇಡ್ ನೀಡುವ ತೀರ್ಮಾನ ಸರಕಾರ ಕೈಗೊಂಡಿದೆ ಎಂದು ಆಕ್ಷೇಪಿಸಿದರು.

ನ್ಯಾಯಪೀಠ ಪ್ರತಿಕ್ರಿಯಿಸಿ, ತೃತೀಯ ಭಾಷೆ ವಿಷಯಗಳ ಪರೀಕ್ಷೆಯಲ್ಲಿ ಗ್ರೇಡಿಂಗ್ ನೀಡುವ ಬಗ್ಗೆ ರಾಜ್ಯ ಸರಕಾರ ಸುತ್ತೋಲೆ ಹೊರಡಿಸಿದೆಯೇ ಎಂದು ಸರಕಾರಿ ವಕೀಲರನ್ನು ಕೇಳಿದರು. ಸರಕಾರಿ ವಕೀಲರು, ಸದ್ಯ ಕರಡು ಅಧಿಸೂಚನೆ ಹೊರಡಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಸರಕಾರದಿಂದ ಪಡೆದು ತಿಳಿಸಲಾಗುವುದು ಎಂದು ತಿಳಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಹಾಲಿ ಇರುವ ನಿಯಮಗಳು ಹಾಗೂ ಮಾರ್ಗಸೂಚಿಯಂತೆ 2025-2026ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರೇಡಿಂಗ್‌ಗೆ ಮಾನ್ಯತೆ ಇಲ್ಲ

ಯುಪಿಎಸ್‌ಇ ಸೇರಿ ಕೇಂದ್ರ ಸರಕಾರ ಹಾಗೂ ಕೇಂದ್ರ ಸ್ವಾಮ್ಯದ ಸಂಸ್ಥೆಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಗ್ರೇಡಿಂಗ್ ಅನ್ನು ಪರಿಗಣಿಸುವುದಿಲ್ಲ. ಕೇವಲ ಅಂಕಗಳನ್ನಷ್ಟೆ ಪರಿಗಣಿಸಲಾಗುತ್ತದೆ. ರಾಜ್ಯ ಸರಕಾರ ಹಿಂದಿ ಹಾಗೂ ಇತರೆ ತೃತೀಯ ಭಾಷಾ ವಿಷಯಗಳ ಪರೀಕ್ಷೆಯಲ್ಲಿ ಅಂಕಗಳ ಬದಲಿಗೆ ಗ್ರೇಡ್ ನೀಡಿದರೆ, ರಾಜ್ಯದ ವಿದ್ಯಾರ್ಥಿಗಳು/ಉದ್ಯೋಗ ಆಕಾಂಕ್ಷಿಗಳ ಮೇಲೆ ಭವಿಷ್ಯದಲ್ಲಿ ಸಾಕಷ್ಟು ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ 2025-2026ನೇ ಸಾಲಿನ ಎಸ್ ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನೇ ನೀಡಲು ಸರಕಾರ ಹಾಗೂ ಕೆಎಸ್‌ಇಎಬಿಗೆ ನಿರ್ದೇಶಿಸಬೇಕು ಎಂದು ಕೋರಿದರು.

ಕೆಂಗೇರಿಯ ಸುರಾನಾ ಕಾಲೇಜಿನಲ್ಲಿ 'ವಿಕಸಿತ ಭಾರತ 2047 ರ ಗುರಿಯಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ' ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎನ್‌ಇಪಿಯಿಂದ ಶಿಕ್ಷಣ ಸಂಸ್ಥೆಗಳ ಉನ್ನತಿ ಸಾಧ್ಯ

ಬೆಂಗಳೂರು: ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಹೆಚ್ಚಿಸಲು ರಾಷ್ಟ್ರೀಯ ಶಿಕ್ಷಣ ನೀತಿ ಅವಶ್ಯಕವಾಗಿದೆ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಮಾಜಿ ನಿರ್ದೇಶಕ ಡಾ.ಟಿ.ಜಿ. ಸೀತಾರಾಮ್ ಹೇಳಿದರು.

ಕೆಂಗೇರಿಯಲ್ಲಿರುವ ಸುರಾನಾ ಕಾಲೇಜಿನಲ್ಲಿ ನಡೆದ 'ವಿಕಸಿತ ಭಾರತ 2047 ರ ಗುರಿಯಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ' ಎಂಬ ಕಾರ್ಯಕ್ರಮದಲ್ಲಿ ಮಾತನಾಡಿಜಿ, ಸ್ಥಳೀಯ ಸಮಸ್ಯೆಗಳನ್ನು ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ಒಳಗೊಳಿಸಿಕೊಳ್ಳದೆ ಸರ್ವತೋಮುಖ ಅಭಿವೃದ್ಧಿ ಸಾಧ್ಯವಿಲ್ಲ. ವಿಕಸಿತ ಭಾರತ 2047 ದೇಶದ ಪ್ರಧಾನ ಮಂತ್ರಿಗಳ ಕನಸಿನ ಕರೆಯೋಲೆಯಾಗಿದೆ. ಈ ದೆಸೆಯಲ್ಲಿ ಶಿಕ್ಷಣ ಕ್ಷೇತ್ರ ತನ್ನದೇ ಆದ ಕೊಡುಗೆ ನೀಡಬೇಕಾಗಿದೆ ಎಂದು ಒತ್ತಿ ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞರಾದ ಡಾ.ಅರ್ಚನಾ ಸುರಾನಾ, ಡಾ.ವೀಣಾ.ಕೆ ಹಾಗೂ ಪ್ರೊ.ಗೀತಾ ಉಪಸ್ಥಿತರಿದ್ದರು. ಬೆಂಗಳೂರಿನ ವಿವಿಧ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಐಎಎಸ್ ಅಧಿಕಾರಿ ಎಂದು ನಂಬಿಸಿ ವಂಚನೆ: ಬಂಧನ

ಬೆಂಗಳೂರು: ಐಎಎಸ್ ಅಧಿಕಾರಿ ಎಂದು ನಂಬಿಸಿ ವೈದ್ಯರು, ಉದ್ಯಮಿಗಳು ಮತ್ತು ಸರಕಾರಿ ಅಧಿಕಾರಿಗಳಿಗೆ ಕೋಟ್ಯಂತರ ರು. ವಂಚಿಸಿದ ಆರೋಪಿಯನ್ನು ಅಮೃತಹಳ್ಳಿ ಪೊಲೀಸರು ಬಂಧಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ಮೂಲದ ಮಿಥುನ್ ಎಂಬಾತ ಬಂಧಿತ. ಮಿಥುನ್ ತಾನು 2023ರ ಬ್ಯಾಚ್‌ನ ಐಎಎಸ್ ಅಧಿಕಾರಿ ಎಂದು ಪರಿಚಯಿಸಿಕೊಳ್ಳುತ್ತಿದ್ದ. ಅಷ್ಟೇ ಅಲ್ಲ, ರಾಷ್ಟ್ರೀಯ ಆರೋಗ್ಯ ಅಭಿಯಾನ ವಿಭಾಗದ ಮುಖ್ಯಸ್ಥ ಹಾಗೂ ಆರೋಗ್ಯ ಸೌಧದಲ್ಲಿ ಉನ್ನತ ಅಧಿಕಾರಿ ಎಂದೂ ನಂಬಿಸಿದ್ದ. ಅವನ ಬಲೆಗೆ ಸಿಕ್ಕವರಲ್ಲಿ ಚಿಕ್ಕಮಗಳೂರಿನ ಮಲ್ಲೇಗೌಡ ಸರಕಾರಿ ಆಸ್ಪತ್ರೆಯ ಜಿಲ್ಲಾ ಸರ್ಜನ್ ಡಾ. ಚಂದ್ರಶೇಖರ್ ಕೂಡ ಒಬ್ಬರು. ಆಸ್ಪತ್ರೆಯಲ್ಲೇ ವೈದ್ಯರು ಮತ್ತು ನರ್ಸ್‌ಗಳ ಸಭೆ ನಡೆಸಿ, ತನ್ನ ಪ್ರಭಾವ ಪ್ರದರ್ಶಿಸಿ ಎಲ್ಲರನ್ನೂ ನಂಬಿಸಿದ್ದ. ಜಿಲ್ಲಾ ಸರ್ಜನ್ ಮೂಲಕ ಪರಿಚಯವಾದ ಶ್ರೇಯಸ್ ಮೆಡಿಕಲ್ ಮಾಲೀಕ ಸತೀಶ್ ಅವರಿಗೆ ಸುಮಾರು 1.8 ಕೋಟಿ ರು. ಮೌಲ್ಯದ ಔಷಧ ಸರಬರಾಜು ಟೆಂಡರ್ ಕೊಡಿಸುವುದಾಗಿ ಮಿಥುನ್ ಆಮಿಷವೊಡ್ಡಿದ್ದ. ಇದಕ್ಕಾಗಿ ಶೇ. 20ರಷ್ಟು ಕಮಿಷನ್ ನೀಡಬೇಕೆಂದು ಒಪ್ಪಂದ ಮಾಡಿಕೊಂಡು, ಜಕ್ಕೂರು ಬಳಿ 36 ಲಕ್ಷ ರು. ಸೇರಿದಂತೆ ಒಟ್ಟು 41 ಲಕ್ಷ ರು. ಪಡೆದು ವಂಚಿಸಿದ್ದಾನೆ.

ಇಂದು ಜಾಗತಿಕ ನಾವೀನ್ಯತಾ ಮೈತ್ರಿಕೂಟದ 2ನೇ ಆವೃತ್ತಿ

ಬೆಂಗಳೂರು: ಜಾಗತಿಕ ನಾವೀನ್ಯತಾ ಪರಿಸರದಲ್ಲಿ ಭಾರತದ ಪ್ರವೇಶಕ್ಕೆ ಹೆಬ್ಬಾಗಿಲಿನಂತೆ ಕರ್ನಾಟಕ ರಾಜ್ಯವು ಹೊರಹೊಮ್ಮಿದ್ದು, ಇದನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ದಿಸೆಯಲ್ಲಿ ರಾಜ್ಯ ಸರಕಾರವು ಜಾಗತಿಕ ನಾವೀನ್ಯತಾ ಮೈತ್ರಿಕೂಟದ (ಜಿಐಎ-2.0)-ಎರಡನೆ ಆವೃತ್ತಿಯನ್ನು ಏ.17ರಂದು ದೆಹಲಿಯಲ್ಲಿ ಬ್ರಿಡ್ಜ್ ಬೆಂಗಳೂರು-2026 ರಾಜತಾಂತ್ರಿಕರ ಜತೆ ಸಮಾಲೋಚನೆ ಕಾರ್ಯಕ್ರಮದಲ್ಲಿ ಅನಾವರಣಗೊಳಿಸಲಿದೆ ಎಂದು ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಳೆದ ಒಂದು ವರ್ಷದಿಂದ ನಾವು ಜಾಗತಿಕ ಕಂಪನಿ ಗಳ ಜತೆಗೆ ಮೈತ್ರಿ ಸಹಭಾಗಿತ್ವ ಸಾಧಿಸುವ ದಿಸೆ ಯಲ್ಲಿ ಮತ್ತು ಪ್ರತಿಫಲ ಆಧಾರಿತ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು, ಈ ಯೋಜನೆಗಳು ಈಗಾಗಲೇ ಸಾಕಷ್ಟು ಫಲ ನೀಡಿವೆ. ಜಾಗತಿಕ ನಾವೀನ್ಯತಾ ಮೈತ್ರಿಕೂಟದ ನೆರವಿನೊಂದಿಗೆ ಮುಂದಿನ ದಿನಗಳಲ್ಲಿ ರಾಜ್ಯ ಸರಕಾರವು ಇನ್ನಷ್ಟು ರಹದಾರಿಗಳನ್ನು ಸೃಷ್ಟಿಸುತ್ತಿದ್ದು, ರಾಜ್ಯದ ಕಂಪನಿಗಳಿಗೆ ಜಾಗತಿಕ ಮಾರುಕಟ್ಟೆಯನ್ನು ಕಲ್ಪಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿದೆ ಎಂದರು.

ಮುಂದಿನ ಒಂದು ದಶಕದಲ್ಲಿ ರಾಜ್ಯವು ಡೀಪ್ ಟೆಕ್ ಕ್ಷೇತ್ರದಲ್ಲಿ ಅಗ್ರಗಣ್ಯ ರಾಜ್ಯವಾಗಿ ಹೊರಹೊಮ್ಮಬೇಕೆಂಬ ಕನಸನ್ನು ನನಸು ಮಾಡುವ ದಿಸೆಯಲ್ಲಿ ರಾಜ್ಯ ಸರಕಾರ ಸಂಶೋಧನೆ ಮತ್ತು ಪ್ರತಿಭೆಗಳನ್ನು ಜೋಡಿಸುವ ಕೆಲಸದಲ್ಲಿ ನಿರತವಾಗಿದೆ. ಫಲಿತಾಂಶ ಆಧಾರಿತ ಮತ್ತು ಹೊಸದಾಗಿ ಹೊರಹೊಮ್ಮುತ್ತಿರುವ ಕ್ಷೇತ್ರಗಳೊಂದಿಗೆ ಹಳೆಯ ಉದ್ದಿಮೆಗಳನ್ನು ಜೋಡಿಸುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು. ಏ. 17ರಂದು ನಡೆಯಲಿರುವ ಬ್ರಿಡ್ಜ್ ಟು ಬೆಂಗಳೂರು 2026 ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉದ್ಯಮಿ ಕಿರಣ್ ಮಜುಂದಾರ್ ಷಾ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

> ಕಾರ್ಯಕ್ರಮಗಳ ಪರಿಣಾಮವಾಗಿ ರಾಜ್ಯಕ್ಕೆ ಸುಮಾರು 5,500 ಕೋಟಿ ರು. ಜಾಗತಿಕ ಬಂಡವಾಳ ಹರಿದುಬರುವ ನಿರೀಕ್ಷೆಯಿದ್ದು, ಸುಮಾರು 7,200 ಉದ್ಯೋಗಗಳು ಸೃಷ್ಟಿಯಾಗಲಿವೆ. ಜತೆಗೆ, 6,350 ಕೋಟಿ ರು. ಡೇಟಾ ಸೆಂಟರ್‌ಗಳ ಸ್ಥಾಪನೆಗೆ ಹೂಡಿಕೆ ಆಗಲಿದೆ. ನವದೆಹಲಿಯ ಈ ಸಮಾವೇಶವು ನ. 17ರಿಂದ 19ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಬೆಂಗಳೂರು ಟೆಕ್ ಸಮಿಟ್‌ಗೆ ಪೂರ್ವಭಾವಿಯಾಗಿ ನಡೆಯುತ್ತಿದ್ದು, ಜಾಗತಿಕ ಮಟ್ಟದಲ್ಲಿ ಸಹಭಾಗಿತ್ವ ವಿಸ್ತರಣೆಗೆ ಜಿಐಎ ಮುಖ್ಯ ವೇದಿಕೆಯಾಗಲಿದೆ.
> -ಪ್ರಿಯಾಂಕ್ ಖರ್ಗೆ , ಐಟಿ-ಬಿಟಿ ಸಚಿವ

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್

TEJAS® NETWORKS

ನೋಂದಾಯಿತ ಕಚೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17 & 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು-560 100, ಕರ್ನಾಟಕ, ಭಾರತ.
ಕಾರ್ಪೋರೇಟ್ ಐಡೆಂಟಿಟಿ ನಂಬರ್: L72900KA2000PLC026980
ದೂರವಾಣಿ: +91 80 4179 4600 ಫ್ಯಾಕ್ಸ್: +91 80 2852 0201
ಇ-ಮೇಲ್: corporate@tejasnetworks.com ವೆಬ್‌ಸೈಟ್: www.tejasnetworks.com

ಮಾರ್ಚ್ 31, 2026 ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಪರಿಶೋಧಿತ ಹಣಕಾಸು ಫಲಿತಾಂಶಗಳು

ಏಪ್ರಿಲ್ 15, 2026 ರಂದು ನಡೆದ ಕಂಪೆನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಪರಿಶೋಧಿತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಫಲಿತಾಂಶಗಳನ್ನು ಲೆಕ್ಕಪರಿಶೋಧಕರ ವರದಿಯೊಂದಿಗೆ ಕಂಪೆನಿಯ ವೆಬ್‌ಸೈಟ್ https://www.tejasnetworks.com/quarterly-financial-results/ ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಮತ್ತು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪರಿಶೀಲಿಸಬಹುದು.

ಸ್ಥಳ : ಬೆಂಗಳೂರು
ದಿನಾಂಕ : ಏಪ್ರಿಲ್ 16, 2026

ಮಂಡಳಿಯ ಆದೇಶದ ಮೇರೆಗೆ
ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಅನಂತ ಮೂರ್ತಿ ಎನ್.
ಕಂಪೆನಿ ಕಾರ್ಯದರ್ಶಿ ಮತ್ತು ಕಂಪ್ಲೈಯನ್ಸ್ ಅಧಿಕಾರಿ
ICSI ಸದಸ್ಯತ್ವ ಸಂಖ್ಯೆ: 17134

ಗಮನಿಸಿ: ಮೇಲಿನ ಸೂಚನೆಯು ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015ರ ನಿಯಮಾವಳಿ 33ರ ಜೊತೆಗೆ ಓದಲಾದ ನಿಯಮಾವಳಿ 47(1) ರ ಪ್ರಕಾರವಾಗಿದೆ.

ಎಚ್‌ಡಿಕೆ-ಎಡಿಜಿಪಿ ಪ್ರಕರಣ: ನಿವೃತ್ತ ನ್ಯಾ.ಓಕಾ ಮಧ್ಯಸ್ಥಿಕೆಗಾರ

ಬೆಂಗಳೂರು: ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ಮತ್ತು ಅವರ ಕುಟುಂಬಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬೆದರಿಕೆ ಹಾಕಿರುವ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣವನ್ನು ಸಂಧಾನದ ಮೂಲಕ ಇತ್ಯರ್ಥಪಡಿಸಲು ಮಧ್ಯಸ್ಥಿಕೆದಾರರನ್ನಾಗಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಸ್. ಓಕಾ ಅವರನ್ನು ಕರ್ನಾಟಕ ಹೈಕೋರ್ಟ್ ಗುರುವಾರ ನೇಮಿಸಿದೆ. ನ್ಯಾ. ಓಕಾ ಅವರ ಗೌರವಧನ ಮತ್ತು ವೆಚ್ಚದ ಕುರಿತು ಪಕ್ಷಕಾರರು ನಿರ್ಧರಿಸಿಕೊಳ್ಳಬಹುದು. ಮಧ್ಯಸ್ಥಿಕೆ ಸ್ಥಳ ಮತ್ತು ಇತರೆ ವಿಚಾರಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗುವುದು ಎಂದು ಪೀಠ ಆದೇಶಿಸಿತು.

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1907
ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 18.
ಕಛೇರಿ ದೂರವಾಣಿ : 26678572 : 26600512 : 26609066
CEP No.ARE/UBF/450/2025-26

ಬಹಿರಂಗ ಹರಾಜಿನ ಮುಖಾಂತರ ಕೈಗಾರಿಕೆ ವಸ್ತುಗಳ / ಚರಾಸ್ತಿಗಳ ಮಾರಾಟ

ಶ್ರೀ.ಆರ್.ಷಣ್ಮುಗಂ ಬಿನ್.ಲೇಟ್.ರಾಜು ಮತ್ತು ಶ್ರೀ.ರವಿಚಂದ್ರನ್. ಎಸ್‌ಬಿನ್‌ಆರ್.ಷಣ್ಮುಗಂ ರವರುಗಳು . ತಮಗೆ ಸೇರಿದ ಸ್ಥಿರಾಸ್ತಿ ಸಂಖ್ಯೆ : ಹೊಸ ನಂ. 20, ಹಳೆ ಸ್ವತ್ತಿನ ಸಂಖ್ಯೆ 40, ಸೈಟ್ ನಂ. 2, 10 ನೇ ಕ್ರಾಸ್, ಪೈಪ್ ಲೇನ್ ರಸ್ತೆ, ಚೋಳೂರು ಪಾಳ್ಯ, ಬೆಂಗಳೂರು – 23, ಪಿ.ಐ.ಡಿ ನಂ. 33-65-20, ಬೆಂಗಳೂರು ಈ ಸ್ವತ್ತನ್ನು ಆಧಾರ ಮಾಡಿ ಸ್ಥಿರಾಸ್ತಿ ಸಾಲ ಪಡೆದು ಸುಸ್ತಿಯಾದ ಕಾರಣ ಇವರುಗಳ ವಿರುದ್ಧ ಬಾಕಿ **ರೂ.1,07,22,532/–** ಗಳ ಸಾಲ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ –1959 ರ ಕಲಂ 70(1) ರ ಅಡಿಯಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು, (ನಿಯಮ–441), ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ಇವರ ನ್ಯಾಯಾಲಯ ನಂ. 132, ಕೆ.ಹೆಚ್.ರಸ್ತೆ, ಬೆಂಗಳೂರು–27 ಇಲ್ಲಿ ದಾವೆ ಹೂಡಿದ್ದು, ದಾವೆ ಸಂಖ್ಯೆ: ARD/UBF/692/2022-23 ಆಗಿರುತ್ತದೆ. ದಿನಾಂಕ 19.06.2023 ರಂದು ಸದರಿ ನ್ಯಾಯಾಲಯ ಸುಸ್ತಿದಾರರಿಗೆ ಸೇರಿದ ಚರಾಸ್ತಿ ಮತ್ತು ಚಿರಾಸ್ತಿಗಳನ್ನು ಬಹಿರಂಗ ಹರಾಜು ಮಾಡುವ ಮೂಲಕ ಸಾಲ ವಸೂಲಿ ಮಾಡಿಕೊಳ್ಳಬಹುದೆಂದು ಆದೇಶ ನೀಡಿರುತ್ತದೆ. ಈ ಆದೇಶದನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು (ನಿಯಮ–441), ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ಇವರ ನ್ಯಾಯಾಲಯ ನಂ. 132, ಕೆ.ಹೆಚ್.ರಸ್ತೆ, ಬೆಂಗಳೂರು–27 ರವರು ತಮ್ಮ ಹುಕುಂ ತೀರ್ಪೂ CEP / ARE/UBF/450/2025-26, ದಿನಾಂಕ 20.02.2026 ರ ಪ್ರಕಾರ ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ಅಮಲ್ಜಾರಿ ಕ್ರಮ ನಡೆಸುವಂತೆ ಅಧಿಕಾರ ನೀಡಿರುತ್ತದೆ. ಈ ಆದೇಶದ ಪ್ರಕಾರ ಈ ಕೆಳಕಂಡ ಚರಾಸ್ತಿಗಳನ್ನು "ಎಲ್ಲಿ ಹೇಗಿವೆಯೋ ಹಾಗೆ" ಯ ಸ್ಥಿತಿಯಲ್ಲಿ ದಿನಾಂಕ 15.05.2026 ರಂದು ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜು ಮಾಡಲಾಗುವುದು. ಚರಾಸ್ತಿಗಳನ್ನು ಖರೀದಿಸಲು ಆಸಕ್ತಿವುಳ್ಳ ಖರೀದಿದಾರರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ವಸ್ತುಗಳನ್ನು ಖರೀದಿಸಬಹುದು. ಸದರಿ ವಸ್ತುಗಳು ನಂ. 20, ಹಳೆ ಸ್ವತ್ತಿನ ಸಂಖ್ಯೆ 40, ಸೈಟ್ ನಂ. 2, 10 ನೇ ಕ್ರಾಸ್, ಪೈಪ್ ಲೇನ್ ರಸ್ತೆ, ಚೋಳೂರು ಪಾಳ್ಯ, ಬೆಂಗಳೂರು–23 ಇಲ್ಲಿ ಇರುತ್ತವೆ. ವಸ್ತುಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1) Rolling machine- 1 No., **2)** Centraless grainding machine-4 No, **3)** Thread rolling machine-1 No, **4)** Vibrator machine-1 No, **5)** Iron table-1 No, **6)** Cealing fan-4 No, **7)** Cooler-1 No, **8)** Wooden office table-1 No, **9)** Wheel chair-1 No, **10)** Orient cooler-1 No, **11)** Small chairs-2 No, **12)** Itgo drilling machine-2 No, **13)** Bhuraji injectman plastic-1 No, **14)** Botali bot-1 No, **15)** Cutting machine-1 No, 16) Dell computer-1 No, 17) L G CPU-1 No, **18)** HP LaserJet Printer-1 No, **19)** Capacity Strock (Power Press)- 1 No, **20)** Other Dia, material, Scrap Items etc.,- Lumsum ಮತ್ತು ಇನ್ನಿತರೆ ವಸ್ತುಗಳು

ಮೀಸಲು ಬೆಲೆ ರೂ. 10,43,200/– ಇ.ಎಂ.ಡಿ ರೂ.25,000/– ಆಸ್ತಿಯ ಪರಿವೀಕ್ಷಣೆ ದಿನಾಂಕ ಮತ್ತು ಸಮಯ : 11.05.2026 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ

ನಿಯಮ ಮತ್ತು ನಿಬಂಧನೆಗಳು

1. ಬಹಿರಂಗ ಹರಾಜನ್ನು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಆಡಳಿತ ಕಛೇರಿ : ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018, ಇಲ್ಲಿ ನಡೆಸಲಾಗುವುದು.
2. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹರಾಜಿನ ಮುನ್ನಾ ರೂ.25,000/– ಗಳ ಮುಂಗಡ ಹಣ ಪಾವತಿಸಿ ರಶೀದಿ ಪಡೆದು ಹರಾಜಿನಲ್ಲಿ ಭಾಗವಹಿಸತಕ್ಕದ್ದು.
3. ಅತೀ ಹೆಚ್ಚಿನ ಬಿಡ್‌ದಾರರು ಅದೇ ದಿನದಂದು ಬಿಡ್ಡು ಮೊತ್ತದ ಶೇಕಡ 25 ರಷ್ಟು ಹಣವನ್ನು (ಇ.ಎಂ.ಡಿ ಒಳಗೊಂಡಂತೆ) ಪಾವತಿ ಮಾಡಬೇಕು. ಬಿಡ್ಡಿನ ಬಾಕಿ ಹಣವನ್ನು 15 ದಿನದೊಳಗೆ ನಗದು ರೂಪದಲ್ಲಿ ಅಥವಾ ಡಿ.ಡಿ.ಯ ಮುಖಾಂತರ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇವರಿಗೆ ಪಾವತಿಸತಕ್ಕದ್ದು.
4. ಒಂದೊಮ್ಮೆ ಹರಾಜಿನಲ್ಲಿ ಗೆದ್ದ ಬಿಡ್ಡುದಾರರು ವಿಕ್ರಯದ ಕರಾರುಗಳು ಹಾಗೂ ಸಮಯಕ್ಕೆ ಬದ್ಧರಾಗಲು ವಿಫಲರಾದಲ್ಲಿ ಅವರ ಮುಂಗಡ ಹಣದ ಠೇವಣಿಯನ್ನು ಯಾವುದೇ ಮುನ್ಸೂಚನೆ ನೀಡದೇ ಬ್ಯಾಂಕು ಮುಟ್ಟುಗೋಲು ಹಾಕಿಕೊಳ್ಳುತ್ತದೆ.
5. ಯಾವುದೇ ಕಾರಣ ನೀಡದೇ ಹರಾಜನ್ನು ಅಂಗೀಕರೀಸುವ / ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಮಾರಾಟಾಧಿಕಾರಿಯು ಕಾದಿರಿಸಿಕೊಂಡಿರುತ್ತಾರೆ.
6. ಆಸ್ತಿಯ ಪರಿವೀಕ್ಷಣೆ ಇನ್ನಿತರ ವಿವರಗಳಿಗಾಗಿ ಬಿಡ್‌ದಾರರು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಾರಾಟಾಧಿಕಾರಿಯನ್ನಾಗಲಿ ಅಥವಾ ಶಾಖಾ ವ್ಯವಸ್ಥಾಪಕರನ್ನು ದೂರವಾಣಿ ಸಂಖ್ಯೆ: **9632802275/9342781417** ರ ಮೂಲಕ ಸಂಪರ್ಕಿಸಬಹುದು.

ದಿನಾಂಕ: 16.04.2026
ಸ್ಥಳ: ಬೆಂಗಳೂರು

ಸಹಿ/–ಮಾರಾಟಾಧಿಕಾರಿ
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

NUCLEUS SOFTWARE

CIN: L74899DL1989PLCO34594
ನೋಂದಾಯಿತ ಕಚೇರಿ: 33–35, ತ್ಯಾಗರಾಜ್ ನಗರ ಮಾರ್ಕೆಟ್, ನವದೆಹಲಿ –110003.
ದೂರವಾಣಿ ಸಂಖ್ಯೆ: +91–120–4031400, ಫ್ಯಾಕ್ಸ್: +91–120–4031672
ಇಮೇಲ್: investorrelations@nucleussoftware.com
ವೆಬ್‌ಸೈಟ್: www.nucleussoftware.com

ಸಾರ್ವಜನಿಕ ಸೂಚನೆ

ಪ್ರಿಪೇಯ್ಡ್ ಪೇಮೆಂಟ್ ಇನ್‌ಸ್ಟ್ರುಮೆಂಟ್ ಕಾರ್ಯಾಚರಣೆಯ ಸ್ವಯಂಪ್ರೇರಿತ ಅಧಿಕಾರ ಒಪ್ಪಿಸುವಿಕೆ ಮತ್ತು ಮುಚ್ಚುವಿಕೆಯ ಬಗ್ಗೆ ಸೂಚನೆ

ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ತನ್ನ ಎಲ್ಲಾ ಗ್ರಾಹಕರು ಮತ್ತು ಮಧ್ಯಸ್ಥಗಾರರಿಗೆ ತಿಳಿಸುವುದೇನೆಂದರೆ, ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನೀಡಲಾದ **ಪ್ರಿಪೇಯ್ಡ್ ಪೇಮೆಂಟ್ ಇನ್‌ಸ್ಟ್ರುಮೆಂಟ್ (PPI) ಅನುಮತಿಯನ್ನು** ಸ್ವಯಂಪ್ರೇರಿತವಾಗಿ ಹಿಂದಿರುಗಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ.

ಅದರಂತೆ, ಕಂಪನಿಯು ತನ್ನ ಪಾವತಿ ವ್ಯವಸ್ಥೆಯ ಕಾರ್ಯಾಚರಣೆಯನ್ನು ನಿಲ್ಲಿಸಲು ಉದ್ದೇಶಿಸಿದೆ. ಗ್ರಾಹಕರು ತಮ್ಮ ಬಾಕಿ ಇರುವ ಮೊತ್ತದ ಮರುಪಾವತಿ/ರಿಡೆಮ್ಶನ್ ಸಂಬಂಧಿಸಿದ ಕೆಳಕಂಡ ಮಹತ್ವದ ಮಾಹಿತಿಯನ್ನು ದಯವಿಟ್ಟು ಗಮನಿಸಬೇಕಾಗಿ ವಿನಂತಿಸಲಾಗಿದೆ.

1. **ಬಾಕಿ ಮೊತ್ತದ ಮರುಪಾವತಿಯ ಆಯ್ಕೆಗಳು**
   ಗ್ರಾಹಕರು ತಮ್ಮ ಬಾಕಿ ಇರುವ ಮೊತ್ತದ ಮರುಪಾವತಿಯನ್ನು ಕೆಳಕಂಡಂತೆ ಪಡೆಯಬಹುದು:
   - **ಆಫ್‌ಲೈನ್ ಬ್ಯಾಲೆನ್ಸ್ (PaySe™ ಕಾರ್ಡ್):**
     ಕಂಪನಿಯಿಂದ ನೀಡಲಾದ PaySe™ ಕಾರ್ಡನ್ನು ಹಿಂದಿರುಗಿಸಿದ ನಂತರ, ಗ್ರಾಹಕರು ಲಭ್ಯವಿರುವ ಆಫ್‌ಲೈನ್ ಬ್ಯಾಲೆನ್ಸ್‌ನ ಮರುಪಾವತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.
   - **ಆನ್‌ಲೈನ್ ಬ್ಯಾಲೆನ್ಸ್:**
     ಗ್ರಾಹಕರ ಪಿಪಿಐ ಖಾತೆಯಲ್ಲಿ ಲಭ್ಯವಿರುವ ಆನ್‌ಲೈನ್ ಬ್ಯಾಲೆನ್ಸ್ ಅನ್ನು ಅಗತ್ಯವಾದ ಪರಿಶೀಲನಾ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಕಂಪನಿಯಲ್ಲಿ ನೋಂದಾಯಿಸಲಾದ ಗ್ರಾಹಕರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.
2. **ವಿಮೋಚನಾ ವಿನಂತಿಗಳನ್ನು ಸಲ್ಲಿಸುವ ವಿಧಾನ**
   ಗ್ರಾಹಕರು ತಮ್ಮ ವಿಮೋಚನಾ ವಿನಂತಿಗಳನ್ನು ಕೆಳಕಂಡ ಯಾವುದೇ ವಿಧಾನದ ಮೂಲಕ ಸಲ್ಲಿಸಬಹುದು:
   ಇಮೇಲ್: PaySEsupport@nucleussoftware.com
   - **ಗ್ರಾಹಕ ಸೇವಾ ಸಂಖ್ಯೆ:** 9582191818
   - **ಲಿಖಿತ ಸಂವಹನ:**
     ಪೇಸೇ ಸಪೋರ್ಟ್, ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್, ಎ–39, ಸೆಕ್ಟರ್–62, ನೋಯ್ಡಾ, ಉತ್ತರ ಪ್ರದೇಶ – 201307.
3. **ನೋಡಲ್ ಅಧಿಕಾರಿಯ ವಿವರಗಳು (ಪ್ರಶ್ನೆಗಳು / ದೂರುಗಳಿಗಾಗಿ)**
   ರಿಡೆಮ್ಶನ್/ಮರುಪಾವತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ದೂರುಗಳಿಗಾಗಿ ಗ್ರಾಹಕರು ಕೆಳಕಂಡವರನ್ನು ಸಂಪರ್ಕಿಸಬಹುದು: **ಶ್ರೀ. ಅಜಯ್ ಶರ್ಮಾ** ನೋಡಲ್ ಅಧಿಕಾರಿ, ದೂರವಾಣಿ: 8975906521, ಇಮೇಲ್: ajay.sharma@nucleussoftware.com, ಕಚೇರಿ ವಿಳಾಸ: ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್, ಎ–39, ಸೆಕ್ಟರ್–62, ನೋಯ್ಡಾ, ಉತ್ತರ ಪ್ರದೇಶ – 201307.
4. **ರಿಡೆಮ್ಶನ್ ವಿನಂತಿಗಳ ಪ್ರಕ್ರಿಯೆಯ ಸಮಯಮಿತಿ**
   ಕಂಪನಿಯು ಗ್ರಾಹಕರಿಂದ ಸಂಪೂರ್ಣ ವಿಮೋಚನಾ ವಿನಂತಿಯನ್ನು ಸ್ವೀಕರಿಸಿದ ದಿನಾಂಕದಿಂದ **30 ಕೆಲಸದ ದಿನಗಳ** ಒಳಗಾಗಿ, ಪರಿಶೀಲನೆ ಮತ್ತು ನಿಯಂತ್ರಕ ಅನುಪಾಲನೆಯ ಅವಶ್ಯಕತೆಗಳಿಗೆ ಒಳಪಟ್ಟು, ಮರುಪಾವತಿಯನ್ನು ಪ್ರಕ್ರಿಯೆಗೊಳಿಸಿ ಜಮೆ ಮಾಡುವುದು.
   ಯಾವುದೇ ತೊಂದರೆಯನ್ನು ತಪ್ಪಿಸಲು ಗ್ರಾಹಕರು **31ನೇ ಮೇ 2026** ರೊಳಗಾಗಿ ರಿಡೆಮ್ಶನ್ ಪ್ರಕ್ರಿಯೆಯನ್ನು ಆರಂಭಿಸಲು ಸೂಚಿಸಲಾಗಿದೆ.
   ಯಾವುದೇ ಹೆಚ್ಚಿನ ಸಹಾಯಕ್ಕಾಗಿ, ದಯವಿಟ್ಟು ಮೇಲೆ ನೀಡಲಾದ ನಮ್ಮ ಗ್ರಾಹಕ ಸೇವಾ ಮಾಧ್ಯಮಗಳ ಮೂಲಕ ಸಂಪರ್ಕಿಸಬೇಕಾಗಿ ವಿನಂತಿಸಲಾಗಿದೆ.

ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ ಮತ್ತು ಅದರ ಪ್ರತಿನಿಧಿಯಾಗಿ,
ಸಹಿ/–
ಪರಾಗ್ ಭಿಸೆ
ಸಿಇಒ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು

ಸ್ಥಳ : ನೊಯ್ಡಾ
ದಿನಾಂಕ : 16.04.2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಓ.ಎಸ್ ಸಂಖ್ಯೆ: 464/2019

ವಾದಿಗಳು: ಶ್ರೀ. ಎಂ.ಸಿ.ಚಾಮಯ್ಯ @ ಚಾಮೇಗೌಡ (ಪೌತಿ ವಾರಸುದಾರರು) ವಾಸ: ಮುಡೇನಹಳ್ಳಿ ಗ್ರಾಮ. ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ವಿರುದ್ಧ
ಪ್ರತಿವಾದಿಗಳು: ಶ್ರೀ ಎಂ.ಸಿ. ಪುಟ್ಟಸ್ವಾಮಯ್ಯ ಮತ್ತು ಇತರರು.
2ನೇ ಉದ್ದೇಶಿತ ಪ್ರತಿವಾದಿ, ಶ್ರೀಮತಿ.ಎಂ.ಸಿ. ಸುಜಾತ, ಬಿನ್ ಲೇಟ್ ಎಂ.ಸಿ. ಚಾಮಯ್ಯ @ ಚಾಮೇಗೌಡ, ಕೋಂ ರಮೇಶ್, ವಯಸ್ಸು 49 ವರ್ಷ. 3ನೇ ಉದ್ದೇಶಿತ ಪ್ರತಿವಾದಿ: ಶ್ರೀ.ಕೆ.ನಾಗರಾಜು, ಲೇಟ್ ಪುಷ್ಪಲತಾ ರವರ ಪತಿ, ವಯಸ್ಸು 60 ವರ್ಷ, 4ನೇ ಉದ್ದೇಶಿತ ಪ್ರತಿವಾದಿ, ಶ್ರೀ ನಿತೀನ್.ಎನ್, ಬಿನ್ ಲೇಟ್ ಪುಷ್ಪಲತಾ, ವಯಸ್ಸು 33 ವರ್ಷ, ಎಲ್ಲಾರ ವಾಸ: ಮುಡೇನಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪತ್ರಿಕಾ ಪ್ರಕಟಣೆ
ಈ ಮೂಲಕ ಮೇಲ್ಕಂಡ ಉದ್ದೇಶಿತ ಪ್ರತಿವಾದಿ 2 ರಿಂದ 4 ರವರಿಗೆ ತಿಳಿಸುವುದೇನೆಂದರೆ, ವಾದಿಗಳು ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ, ಇಲ್ಲಿ ಅಸಲು ದಾವಾ ಸಂಖ್ಯೆ : 464/2019 ರ ದಾವೆಯಲ್ಲಿ ಹಿಂದೆ ರಾಮನಗರ ಜಿಲ್ಲೆ ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ಹಾಲಿ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮ, ಹಾರೋಹಳ್ಳಿ ಹಿಂದೆ ಗ್ರಾಮ ಪಂಚಾಯಿತಿ ಹಾಲಿ ಪುರಸಭೆಗೆ ಸೇರಿದ ಖಾನೇಷುಮಾರಿ ಸಂಖ್ಯೆ : 1135/621/638 ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಮತ್ತು ಇತರ ಪರಿಹಾರ ಕೋರಿ, ದಾವೆಯನ್ನು ನಿಮ್ಮಗಳ ಮೇಲೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ನಿಮಗೆ ಸಾಕಷ್ಟು ಬಾರಿ ಘನ ನ್ಯಾಯಾಲಯದ ಮೂಲಕ ಮತ್ತು ನೋಂದಾಣಿ ಅಂಚೆ ಮೂಲಕ ನೋಟಿಸ್ ನೀಡಿದರು ನೀವು ಉದ್ದೇಶಪೂರ್ವಕವಾಗಿ ಸ್ವೀಕರಿಸಿರುವುದಿಲ್ಲ, ಹಾಗಾಗಿ ನಿಮಗೆ ಪತ್ರಿಕಾ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನೆಂದರೇ, ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ, ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ : 28.04.2026 ರಂದು ಬೆಳಗ್ಗೆ 11-00 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯವು ಗೈರು ಹಾಜರಿ ಎಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಏಕ ಪಕ್ಷೀಯವಾಗಿ ಇತ್ಯರ್ಥಗೊಳಿಸಿ ಆದೇಶಿಸುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ :
ಹಿಂದೆ ರಾಮನಗರ ಜಿಲ್ಲೆ ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ಹಾಲಿ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮ, ಹಾರೋಹಳ್ಳಿ ಹಿಂದೆ ಗ್ರಾಮ ಪಂಚಾಯಿತಿ ಹಾಲಿ ಪುರಸಭೆಗೆ ಸೇರಿದ ಖಾನೇಷುಮಾರಿ ಸಂಖ್ಯೆ : 1135/621/638, ಖಾಲಿ ನೀವೇಶನದ ಅಳತೆ ಪೂರ್ವ-ಪಶ್ಚಿಮ 40 ಅಡಿಗಳು, ಉತ್ತರ-ದಕ್ಷಿಣದಲ್ಲಿ ಪೂರ್ವದ ಕಡೆ 80 ಅಡಿಗಳು, ಉತ್ತರ-ದಕ್ಷಿಣವಾಗಿ ಪಶ್ಚಿಮದ ಕಡೆ 58 ಅಡಿಗಳು, ಒಟ್ಟಾರೆ 58+80 ಅಡಿ X 40/2 ಅಡಿಗಳು. ಪೂರ್ವಕ್ಕೆ: ಹೊಸಕೋಟಿ ವೆಂಕಟಚಾಲಯ್ಯರವರಿಗೆ ಸೇರಿದ ಸ್ವತ್ತು. ಪಶ್ಚಿಮಕ್ಕೆ : ರಾಮಶೆಟ್ಟಿ ರವರ ಮನೆ. ಉತ್ತರಕ್ಕೆ : ಹೆಚ್.ಎನ್. ಗೋಪಾಲಕೃಷ್ಣ ಮತ್ತು ಹೆಚ್. ಗುಂಡುರಾವ್ ರವರ ಮನೆ. ದಕ್ಷಿಣಕ್ಕೆ: ಕನಕಪುರ-ಬೆಂಗಳೂರು ರಸ್ತೆ.
ದಿನಾಂಕ: 15 ನೇ ಏಪ್ರಿಲ್ 2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಆದೇಶಿಸಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಬಿ.ಎಸ್ ನಾರಾಯಣ ಗೌಡ ವಕೀಲರು
ಸ್ಥಳ : ಕನಕಪುರ, ದಿನಾಂಕ : 15.04.2026

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 803 /2025

ಅರ್ಜಿದಾರರು : ಶ್ರೀ. ಬಸವರಾಜು ಬಿನ್ ಲೇಟ್ ನಿಂಗೇಗೌಡ @ ತಂತ್ರೇಗೌಡ ವಯಸ್ಸು 67 ವರ್ಷ ವಾಸ: ಕಮಲಾಪುರ ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು ಗೋದೂರು ವೃತ್ತ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾತನವರಾದ ಶ್ರೀ. ನ್ಯಾತ @ ನಿಂಗ, ಬಿನ್ ಲೇಟ್ ಬಸವೇಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಕಮಲಾಪುರ ಗ್ರಾಮದಲ್ಲಿ ದಿನಾಂಕ:10.04.1964 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 26/05/2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಗರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2026ರ ಏಪ್ರಿಲ್ 09ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಲೋಕೇಶ್.ಡಿ ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 26.03.2026

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 211/2026

ಅರ್ಜಿದಾರರು: 1. ಶ್ರೀಮತಿ ಕೆಂಪಮ್ಮ ಬಿನ್ ಮರಿಕೆಂಪೇಗೌಡ, ಕೋಂ. ಬೊಮ್ಮಯ್ಯಗೌಡ, ವಯಸ್ಸು 58 ವರ್ಷ ಮತ್ತು ಇತರರು, ಬಿಜ್ಜಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562126.
V/S
ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ–562117. 2. ಗ್ರಾಮ ಲೇಕ್ಕಾಧಿಕಾರಿ, ಕೋಟೆಕೊಪ್ಪ ವೃತ್ತ, ಉಯ್ಯಂಬಳ್ಳಿ ಹೋ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 3ನೇ ಅರ್ಜಿದಾರರ ಮುತ್ತಜ್ಜಿ. 2 ಮತ್ತು 4ನೇ ಅರ್ಜಿದಾರರ ಅತ್ತೆಯ ಅತ್ತೆ, 5, 6 ಮತ್ತು 8 ಅರ್ಜಿದಾರರ ಅತ್ತೆ. 7ನೇ ಅರ್ಜಿದಾರರ ಅಜ್ಜಿ "ಶ್ರೀಮತಿ. ಕೆಂಪಮ್ಮ ಕೋಂ. ಲೇಟ್.ಕೆಂಪೇಗೌಡ" ಕೋಟೆಕೊಪ್ಪ ಗ್ರಾಮ, ಗೊಲ್ಲಹಳ್ಳಿ ಅಂಚೆ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ದಿನಾಂಕ : 05-06-1985 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 27-05-2026ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.
15/04/2026 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಪ್ರಧಾನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್
ವಕೀಲರು. ಕನಕಪುರ ಟೌನ್

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 212/2026

ಅರ್ಜಿದಾರರು: 1. ಶ್ರೀಮತಿ ಕೆಂಪಮ್ಮ ಬಿನ್ ಮರಿಕೆಂಪೇಗೌಡ, ಕೋಂ. ಬೊಮ್ಮಯ್ಯಗೌಡ, ವಯಸ್ಸು 58 ವರ್ಷ ಮತ್ತು ಇತರರು, ಬಿಜ್ಜಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562126.
V/S
ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ–562117. 2. ಗ್ರಾಮ ಲೇಕ್ಕಾಧಿಕಾರಿ, [illegible]
[illegible]
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್
ವಕೀಲರು. ಕನಕಪುರ ಟೌನ್

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 213/2026

ಅರ್ಜಿದಾರರು: 1. ಶ್ರೀಮತಿ ಕೆಂಪಮ್ಮ ಬಿನ್ ಮರಿಕೆಂಪೇಗೌಡ, ಕೋಂ. ಬೊಮ್ಮಯ್ಯಗೌಡ, ವಯಸ್ಸು 58 ವರ್ಷ ಮತ್ತು ಇತರರು, ಬಿಜ್ಜಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562126.
V/S
ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ–562117. 2. ಗ್ರಾಮ ಲೇಕ್ಕಾಧಿಕಾರಿ, [illegible]
[illegible]
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್
ವಕೀಲರು. ಕನಕಪುರ ಟೌನ್

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 214/2026

ಅರ್ಜಿದಾರರು: 1. ಶ್ರೀಮತಿ ಕೆಂಪಮ್ಮ ಬಿನ್ ಮರಿಕೆಂಪೇಗೌಡ, ಕೋಂ. ಬೊಮ್ಮಯ್ಯಗೌಡ, ವಯಸ್ಸು 58 ವರ್ಷ ಮತ್ತು ಇತರರು, ಬಿಜ್ಜಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562126.
V/S
ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ–562117. 2. ಗ್ರಾಮ ಲೇಕ್ಕಾಧಿಕಾರಿ, [illegible]
[illegible]
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್
ವಕೀಲರು. ಕನಕಪುರ ಟೌನ್

ಮೆಲುಕು

ಸೋತ ಸಿಎಂಗಳು

ಮುಖ್ಯಮಂತ್ರಿಗಳು ತಮ್ಮ ನೇತೃತ್ವದ ಸರಕಾರಗಳ ಜತೆಜತೆಗೆ ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡಿರುವುದಕ್ಕೆ ತಮಿಳುನಾಡಿನ ರಾಜಕಾರಣ ಸಾಕ್ಷಿಯಾಗಿದೆ. 1952ರ ಚುನಾವಣೆಯಲ್ಲಿ,



ಕಾಂಗ್ರೆಸ್‌ನ ಮುಖ್ಯಮಂತ್ರಿ ಪಿ.ಎಸ್. ಕುಮಾರಸ್ವಾಮಿ ರಾಜಾ ಅವರು ಶ್ರೀವಿಲ್ಲಿಪುತ್ತೂರ್ ಕ್ಷೇತ್ರದಲ್ಲಿ ಸೋತರು; ಆದರೆ ಅವರ ಪಕ್ಷವು ಚಕ್ರವರ್ತಿ ರಾಜಗೋಪಾಲಾಚಾರಿ (ರಾಜಾಜಿ) ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿಕೊಂಡು ಸಮ್ಮಿಶ್ರ ಸರಕಾರವನ್ನು ರಚಿಸಿತು ಎಂಬುದು ಗಮನಾರ್ಹ. 1967ರಲ್ಲಿ, ಹಿಂದಿ ವಿರೋಧಿ ಚಳವಳಿಯು ಉತ್ತುಂಗದಲ್ಲಿದ್ದಾಗ, ಮುಖ್ಯಮಂತ್ರಿ ಎಂ. ಭಕ್ತವತ್ಸಲಂ ಅವರು ಡಿಎಂಕೆ ಪಕ್ಷದ ಡಿ. ರಾಜರತ್ನಂ ವಿರುದ್ಧ ಸೋತರು. ಸುಮಾರು ಮೂರು ದಶಕಗಳ ನಂತರ ಜೆ.ಜಯಲಲಿತಾ ಅವರು ಬರಗೂರಿನಲ್ಲಿ ಸೋಲನುಭವಿಸಿದರು, ಅವರ ಸರಕಾರಕ್ಕೂ ಅದೇ ಗತಿಯಾಯಿತು!

ಚುನಾವಣಾ ಚುರುಮುರಿ

ಪ್ರಭಾವಿ ಸಚಿವರು!

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಅರೂಪ್ ಬಿಸ್ವಾಸ್ ಅವರು ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿಯವರ ಸರಕಾರದಲ್ಲಿ ಸಂಪುಟ ದರ್ಜೆಯ ಸಚಿವರಾಗಿರುವವರು. ಸತತ ನಾಲ್ಕು ವಿಧಾನಸಭಾ ಚುನಾವಣೆಗಳಲ್ಲಿ ದಕ್ಷಿಣ ಕೋಲ್ಕತ್ತಾದ ಟಾಲಿಗಂಜ್

ಸ್ಥಾನವನ್ನು ಗೆದ್ದಿರುವ ಹೆಗ್ಗಳಿಕೆ ಇವರದ್ದು. ಕೋಲ್ಕತ್ತಾದ 'ಸಾಲ್ಟ್ ಲೇಕ್ ಕ್ರೀಡಾಂಗಣ'ದಲ್ಲಿ ನಡೆದ, ಅರ್ಜೆಂಟೀನಾದ ಫುಟ್‌ಬಾಲ್ ದಂತಕಥೆ ಲಯೊನೆಲ್ ಮೆಸ್ಸಿಯವರು ಭಾಗವಹಿಸಿದ್ದ ಕಾರ್ಯಕ್ರಮವನ್ನು ಅರೂಪ್ ಬಿಸ್ವಾಸ್ ದುರುಪಯೋಗಪಡಿಸಿಕೊಂಡರು ಎಂಬ ಹುಯಿಲು ಮುನ್ನೆಲೆಗೆ ಬಂದು ಸಾಕಷ್ಟು ವಿವಾದಕ್ಕೂ ಕಾರಣವಾಗಿತ್ತು ಮತ್ತು ಬೇಡದ ಕಾರಣಕ್ಕೆ ಮಾಧ್ಯಮಗಳ ಗಮನವನ್ನೂ ಸೆಳೆಯಿತು. ಈ ಅನಪೇಕ್ಷಿತ ಬೆಳವಣಿಗೆಯ ಕಾರಣಕ್ಕೆ ಬಿಸ್ವಾಸ್ ಅವರು ಪಶ್ಚಿಮ ಬಂಗಾಳದ ಕ್ರೀಡಾ ಸಚಿವರ ಸ್ಥಾನಕ್ಕೆ ಕಳೆದ ಡಿಸೆಂಬರ್‌ನಲ್ಲಿ ರಾಜೀನಾಮೆ ನೀಡಿದ್ದುಂಟು; ಇಷ್ಟಾಗಿಯೂ ವಿದ್ಯುತ್ ಮತ್ತು ವಸತಿಯಂಥ ಪ್ರಮುಖ ಖಾತೆಗಳನ್ನು ಅವರು ಉಳಿಸಿಕೊಂಡಿದ್ದಾರೆ ಎಂಬುದು ಗಮನಾರ್ಹ. ಸಮೀಕ್ಷಾ ವರದಿಗಳು ಹೇಳುವಂತೆ ಬಿಸ್ವಾಸ್ ಅವರು ಅದೇ ಟಾಲಿಗಂಜ್ ಕ್ಷೇತ್ರದಿಂದ ಮತ್ತೆ ಶಾಸಕರಾಗಿ ಆಯ್ಕೆಯಾಗುವ ಸಾಧ್ಯತೆಗಳಿವೆ. ಒಂದೊಮ್ಮೆ ಬಿಜೆಪಿಯವರು ಇವರ ವಿರುದ್ಧ ಬೇರೇನಾದರೂ 'ವ್ಯೂಹಾತ್ಮಕ ಕಾರ್ಯತಂತ್ರ'ವನ್ನು ಹೆಣೆದಿದ್ದರೆ, ಫಲಿತಾಂಶವು ಕೊನೇ ಕ್ಷಣದಲ್ಲಿ 'ಉಲ್ಟಾ' ಕೂಡ ಆಗಬಹುದು. ಅಷ್ಟಕ್ಕೂ, ಚುನಾವಣೆ ಎಂಬುದು 'ನಿಶ್ಚಿತತೆ' ಮತ್ತು 'ಅನಿಶ್ಚಿತತೆ'ಗಳು ತುಂಬಿಕೊಂಡಿರುವ ಮೂಟೆಯಲ್ಲವೇ?!

ವಿಹಾರದ ಮೂಡ್‌ನಲ್ಲಿ!

ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಪ್ರಚಾರಕಾರ್ಯದಲ್ಲಿ ಬಿಡುವಿಲ್ಲದೆ ತೊಡಗಿಸಿಕೊಂಡಿದ್ದ ಕಾಂಗ್ರೆಸ್ ನಾಯಕ ವಿ.ಡಿ. ಸತೀಶನ್ ಅವರು ಈಗ 'ರಿಲ್ಯಾಕ್ಸ್ ಮೂಡ್'ನಲ್ಲಿದ್ದಾರಂತೆ. 'ಚುನಾವಣೆಯ ಫಲಿತಾಂಶ ಬರೋದು ಮೇ 4ರಂದು ತಾನೇ?

ಅಲ್ಲಿಯವರೆಗೂ ವಿಹರಿಸಿಕೊಂಡಿದ್ದರಾಯಿತು' ಎಂಬ ಉಮೇದಿನಲ್ಲಿ ಅವರೀಗ ಕುಟ್ಟಿಕ್ಕಾನಂನಲ್ಲಿರುವ ರೆಸಾರ್ಟ್‌ನಲ್ಲಿ ನಿರಾಳರಾಗಿದ್ದಾರಂತೆ, ವಿರಾಮದ ಕ್ಷಣಗಳಿಗೆ ಸಾಕ್ಷಿಯಾಗಿದ್ದಾರಂತೆ. ಕುಟುಂಬದ ಸದಸ್ಯರೊಂದಿಗಿನ ಪ್ರವಾಸದ ಛಾಯಾಚಿತ್ರಗಳು ಮತ್ತು ವಿಡಿಯೋಗಳನ್ನು ಅವರು ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದು ಇದಕ್ಕೆ ಪುಷ್ಟಿ ನೀಡುತ್ತದೆ. ಇಲ್ಲಿ ಇನ್ನೊಂದು ಗಮ್ಮತ್ತಿದೆ. ''ಈ ಬಾರಿಯ ಚುನಾವಣೆಯಲ್ಲಿ ಯುಡಿಎಫ್ ಪಾಳಯವು ಗೆಲುವು ಸಾಧಿಸಲು ವಿಫಲವಾದರೆ 'ರಾಜಕೀಯ ವನವಾಸ'ಕ್ಕೆ ತೆರಳುವೆ'' ಎಂದು ಸತೀಶನ್ ಅವರು ಪ್ರಚಾರಸಭೆಗಳಲ್ಲಿ ಹೇಳಿಬಿಟ್ಟಿದ್ದರು. ಅದೇ ಮಾತನ್ನು ಗಟ್ಟಿಯಾಗಿ ಹಿಡಿದುಕೊಂಡಿರುವ ಅವರ ಟೀಕಾಕಾರರು, ''ಫಲಿತಾಂಶ ಬರೋಕ್ಕೂ ಮೊದಲೇ ಸತೀಶನ್ ಸಾಹೇಬರು ವನವಾಸಕ್ಕೆ ತೆರಳಿದ್ದಾರಲ್ಲಾ? ಯುಡಿಎಫ್ ಪಾಟ್ಕೊಳ್ಳೋದು ಖಾತ್ರಿಯಾಗಿಬಿಡ್ತಾ?!'' ಎಂದು ಕಾಲೆಳೆಯಲು ಶುರುಮಾಡಿದರಂತೆ. ಇದನ್ನು ಕೇಳಿಸಿಕೊಂಡು 'ಬಭ್ರು ವಾಹನ'ನಂತೆ ಕೆರಳಿದ ಸತೀಶನ್ ಅವರು, ''ನಾನು ಸದ್ಯಕ್ಕೆ ಕಾಡಿನಲ್ಲಿರೋದು ನಿಜ, ಆದರೆ ಇದು ನಾನು ಹೇಳಿದ್ದ ಆ 'ವನವಾಸ'ವಲ್ಲ; ಯುಡಿಎಫ್ ಪಾಳಯದ 'ಬಲವಾದ ಪುನರಾಗಮನ'ವನ್ನು ಸಂಕೇತಿಸುವ ವಿಹಾರವಿದು'' ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಮಾರುತ್ತರ ನೀಡಿ, ಸಕಾರಾತ್ಮಕ ಫಲಿತಾಂಶದ ಕುರಿತು ತಮಗೆ ವಿಶ್ವಾಸವಿರುವುದರ ಸುಳಿವು ನೀಡಿದರಂತೆ. ಇದರ ಜತೆಗೆ ಚಾರಣದ ವಿಡಿಯೋವನ್ನೂ ಅವರು ಹಂಚಿಕೊಂಡಿದ್ದಾರಂತೆ. ಸದರಿ 'ಚಾರಣ'ವು ಅಧಿಕಾರದ ಗದ್ದುಗೆಗೆ ಯುಡಿಎಫ್ 'ಮತ್ತೊಮ್ಮೆ ಏರುವುದರ' ಸಂಕೇತ ಎಂಬುದು ವಿ.ಡಿ. ಸತೀಶನ್ ಅವರ ಸೂಚ್ಯ ಸಂದೇಶವಿರಬಹುದೇ?!

ಕೋಟ್ ಆಫ್ ದ ಡೇ



ತ್ರಿಪುರಾ ಮತ್ತು ಅಸ್ಸಾಂನಲ್ಲಿನ ಬಿಜೆಪಿ ಸರಕಾರಗಳು ಬಾಂಗ್ಲಾದ ನುಸುಳುಕೋರರನ್ನು ಕಟ್ಟುನಿಟ್ಟಾಗಿ ತಡೆಯುತ್ತಿದ್ದರೆ, ಪಶ್ಚಿಮ ಬಂಗಾಳದಲ್ಲಿ ಸಿಎಂ ಮಮತಾ ಬ್ಯಾನರ್ಜಿ ನುಸುಳುಕೋರರನ್ನು ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದಾರೆ.

ಹಿಮಂತ ಬಿಸ್ವ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

ಚಹಾ ತೋಟದ ಆದಿವಾಸಿಗಳ ಚಿತ್ತ ಕೇಸರಿಯತ್ತ?

ಗ್ರೌಂಡ್ ರಿಪೋರ್ಟ್

ರಾಘವಶರ್ಮ ನಿಡ್ಲೆ

ಡಾರ್ಜಿಲಿಂಗ್ ಜಿಲ್ಲೆ (ಬಂಗಾಳ): 1840ರ ಸಂದರ್ಭದಲ್ಲಿ ಭಾರತದಲ್ಲಿದ್ದ ಬ್ರಿಟಿಷರು ಉತ್ತರ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಟೀ ಗಿಡಗಳನ್ನು ನೆಟ್ಟು, ಚಹಾ ಉದ್ಯಮ ಆರಂಭಿಸಿದರು. ಅದು ಬೃಹತ್ ಉದ್ಯಮವಾಗಿ ಬೆಳೆದು ಲಕ್ಷಾಂತರ ಮಂದಿಗೆ ಜೀವನೋಪಾಯದ ಹಾದಿಯಾಗಿದೆ. ಉ. ಬಂಗಾಳದ ಹಲವು ಜಿಲ್ಲೆಗಳಲ್ಲಿ ಟೀ ಎಸ್ಟೇಟ್‌ಗಳು ವಿಸ್ತಾರವಾಗಿ ಹಬ್ಬಿದ್ದು, ಇಲ್ಲಿ ಉತ್ಪಾದನೆಯಾಗುವ ಟೀ ಪೌಡರ್‌ಗಳು ವಿಶ್ವದೆಲ್ಲೆಡೆ ಪೂರೈಕೆಯಾಗುತ್ತಿವೆ. ಬಂಗಾಳದಲ್ಲಿ ಕಾರ್ಮಿಕರ ಕೊರತೆ ಹಾಗೂ ಹವಾಮಾನ ಬದಲಾವಣೆಗಳಿಂದಾಗಿ ಈಚಿನ ವರ್ಷಗಳಲ್ಲಿ ಚಹಾ ಉತ್ಪಾದನೆ ಸಣ್ಣ ಮಟ್ಟಿಗೆ ತಗ್ಗಿದೆ.

ಇಲ್ಲಿನ ಪಟ್ಟಣ-ಗ್ರಾಮೀಣ ಭಾಗಗಳ ವಿಶಾಲ ಜಮೀನುಗಳಲ್ಲಿ ಹಸಿರೆಲೆಗಳಿಂದ ಕಂಗೊಳಿಸುವ ಟೀ ಗಾರ್ಡನ್‌ಗಳಲ್ಲಿ ಆದಿವಾಸಿ ಸಮುದಾಯದ ಕಾರ್ಮಿಕರು ಮಳೆ, ಚಳಿ, ಬಿಸಿಲನ್ನು ಲೆಕ್ಕಿಸದೆ ಎಲೆಗಳನ್ನು ಕೀಳುತ್ತಿರುವ ದೃಶ್ಯ ಕಾಣಸಿಗುತ್ತದೆ. ಈ ಆದಿವಾಸಿ ಕಾರ್ಮಿಕ ವರ್ಗದವರು ಚುನಾವಣೆಗಳಲ್ಲಿ ಮಹತ್ವದ ಪಾತ್ರವಹಿಸುತ್ತಾರೆ. ಆರಂಭದಲ್ಲಿ ಎಡಪಕ್ಷಗಳು, ಕಾಂಗ್ರೆಸ್, ನಂತರ ಟಿಎಂಸಿ, ಬಿಜೆಪಿ ಆದಿವಾಸಿ ಮತಬ್ಯಾಂಕ್ ಅನ್ನು ಸೆಳೆಯುತ್ತಲೇ ಬಂದಿವೆ.

ಸಿಲಿಗುರಿಯಿಂದ ಡಾರ್ಜಿಲಿಂಗ್‌ಗೆ ತೆರಳುತ್ತಿದ್ದಾಗ ಸುಕ್ನಾ ಎಂಬ ಪ್ರದೇಶದಲ್ಲಿ ಆದಿವಾಸಿ ಮಹಿಳೆಯರು ಟೀ ಗಾರ್ಡನ್‌ನಲ್ಲಿ ಎಲೆಗಳನ್ನು ಕೀಳುತ್ತಿದ್ದರು. ಬೆಳಗ್ಗೆ 8ರಿಂದಲೇ ಕೆಲಸ ಆರಂಭಿಸಿದ್ದ ತಾರಾ ನಾಗಾಸಿಯಾ ಎಂಬ 30ರ ಆಸುಪಾಸಿನ ಮಹಿಳೆಯನ್ನು ಚುನಾವಣೆ ಕುರಿತ ಮಾತಿಗೆಳೆದೆ. ಆರಂಭದಲ್ಲಿ ಆಕೆ ಹೆಚ್ಚು ಆಸಕ್ತಿ ತೋರಿಸದಿದ್ದರೂ, ''ನಮ್ಮ ಜೀವನ ಸುಧಾರಿಸುವ ಮಂದಿ ಅಧಿಕಾರಕ್ಕೆ ಬರಬೇಕು'' ಎನ್ನುತ್ತಾ, ತನ್ನ ಜೀವನದ ಬವಣೆಗಳನ್ನು ಬಿಚ್ಚಿಟ್ಟಳು.

ವಿಶ್ವವಾಣಿ ಬಂಗಾಳ ಚುನಾವಣಾ ಯಾತ್ರೆ

''ಬೆಳಗ್ಗೆ 8.30ರ ಆಸುಪಾಸಿಗೆ ಕೆಲಸ ಆರಂಭ. 11.30ರಿಂದ 1 ಗಂಟೆ ತನಕ ಮಧ್ಯಾಹ್ನ ಭೋಜನ ವಿರಾಮ. 1 ಗಂಟೆ ಯಿಂದ ಸಂಜೆ 4.30 ಅಥವಾ 5 ಗಂಟೆ ತನಕ ಗಾರ್ಡನ್‌ನಲ್ಲಿ ಕೆಲಸ. ಆದರೆ ಸಂಬಳ ದಿನಕ್ಕೆ 250 ರು. ಮಾತ್ರ'' ಎಂದಳು ತಾರಾ. ''ಎಸ್ಟೇಟ್ ಮಾಲೀಕರು ಕಾರ್ಮಿಕರಿಗೆ 15 ದಿನಕ್ಕೊಮ್ಮೆ ವೇತನ ನೀಡುತ್ತಾರೆ. ಅಂದರೆ, ತಿಂಗಳಿಗೆ 7500 ರುಪಾಯಿ. ಕರ್ನಾಟಕದ ಕೃಷಿ ತೋಟಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಊಟ-ತಿಂಡಿ ಜತೆಗೆ ದಿನಕ್ಕೆ 500-650 ರು. ನೀಡುತ್ತಾರೆ'' ಎಂಬ ನನ್ನ ಮಾತು ಕೇಳಿ ಆಕೆಗೆ ಪರಮಾಶ್ಚರ್ಯವಾಗಿತ್ತು.

ಕೆಲ ಟೀ ಎಸ್ಟೇಟ್ ಮಾಲೀಕರು ಎಸ್ಟೇಟ್ ಪಕ್ಕದಲ್ಲೇ ಕಾರ್ಮಿಕರಿಗಾಗಿ ಜೋಪಡಿಗಳನ್ನು ನಿರ್ಮಾಣ ಮಾಡಿಕೊಟ್ಟಿದ್ದಾರೆ. ಮತ್ತೆ ಕೆಲವರನ್ನು ಬಸ್, ಟೆಂಪೋಗಳಲ್ಲಿ ಅವರ ಗ್ರಾಮದಿಂದ ಕರೆದುಕೊಂಡು ಬರುತ್ತಾರೆ. ಆದರೆ, ಊಟ ಅಥವಾ ತಿಂಡಿ ವ್ಯವಸ್ಥೆಯಿಲ್ಲ, ಅವುಗಳನ್ನು ಕಾರ್ಮಿಕರು ಮನೆಯಿಂದಲೇ ತರಬೇಕು. ಕಾರ್ಮಿಕರನ್ನು ಕೆಲಸಕ್ಕಾಗಿ ಕರೆದುಕೊಂಡು ಬರುವ ಮತ್ತು ಅಲ್ಲಿನ ಗಾರ್ಡನ್ ಕಾರ್ಮಿಕರ ಉಸ್ತುವಾರಿ ವಹಿಸಿದ್ದ ಆದಿವಾಸಿ ಪುರುಷ ಬಂಧನ್ ಉರಾವ್ 'ವಿಶ್ವವಾಣಿ' ಜತೆ ಮಾತನಾಡುತ್ತಾ, ''ವೇತನ ಜಾಸ್ತಿ ಮಾಡುತ್ತೇವೆ ಎಂದು ಮಾಲೀಕರು ಹೇಳುತ್ತಲೇ ಇದ್ದಾರೆ. ಆದರೆ ಮಾಡಿಲ್ಲ. ಪಿಎಫ್ ಮತ್ತು ವಿಮೆ ಹಣವನ್ನು ಸಂಬಳದಲ್ಲೇ ಕಟ್ ಮಾಡುವುದರಿಂದ ವೇತನವನ್ನು 350-400 ರು. ಮಾಡಬೇಕು ಎಂಬುದು ನಮ್ಮ ನಿರೀಕ್ಷೆ. ಆದರೆ, 50 ರು. ಹೆಚ್ಚಿಸಬಹುದು ಎಂದು ತಿಳಿಸಿದರು. ಚಹಾ ಉತ್ಪಾದನೆ ಕಡಿಮೆಯಾಗಿದೆ. ದರವೂ ಹೆಚ್ಚಿಲ್ಲ, ಹೀಗಾಗಿ, ಕಾರ್ಮಿಕರ ವೇತನ ಏರಿಕೆ ಸಾಧ್ಯವಾಗುತ್ತಿಲ್ಲ ಎಂದು ಮಾಲೀಕರು ಹೇಳುತ್ತಾರೆ. ಎಲ್ಲಾ ಟೀ ಎಸ್ಟೇಟ್‌ಗಳಲ್ಲಿ ಏಕರೂಪದ ವೇತನ ನೀಡಲಾಗುತ್ತದೆ. ಟೀ ಎಸ್ಟೇಟ್ ಮಾಲೀಕರ ಅಸೋಸಿಯೇಷನ್ ವೇತನ ಹೆಚ್ಚಳದ ಬಗ್ಗೆ ತೀರ್ಮಾನ ಮಾಡುತ್ತದೆ. ಸರಕಾರ ಈ ಮಾಲೀಕರಿಗೆ ಒತ್ತಡ ಹೇರಬಹುದು. ಅದನ್ನು ಮಮತಾ ದೀದಿ ಮಾಡಿಲ್ಲ. ಟೀ ಗಾರ್ಡನ್ ಕಾರ್ಮಿಕರ ಸಮಸ್ಯೆಗಳನ್ನು ಕೇಳಲು ಸಿಎಂ ಈ ಭಾಗಕ್ಕೆ ಬಂದೇ ಇಲ್ಲ'' ಎಂದು ಬಂಧನ್ ಉರಾವ್ ದೂರಿದರು.

ಕಾರ್ಯಕರ್ತರ ಸಭೆಯಲ್ಲಿ ಅರುಣ್ ಬಿನ್ನಡಿ.

ಚಹಾ ತೋಟದ ಉಸ್ತುವಾರಿ ರಾಜ್‌ಕುಮಾರ್.

ತಾರಾ ನಾಗಾಸಿಯಾ ಸೇರಿದಂತೆ ಡಾರ್ಜಿಲಿಂಗ್ ಜಿಲ್ಲೆಯ ಕರ್ಸಾಂಗ್ ವಿಧಾನಸಭೆ ವ್ಯಾಪ್ತಿಯ ನ್ಯೂಚಮ್ರಾ ಆದಲ್ಪುರ ಹಳ್ಳಿಯಿಂದ ಬಂದಿದ್ದ ಹಿರಿ ವಯಸ್ಸಿನ ಆದಿವಾಸಿ ಮಹಿಳೆಯರಾದ ರಾಯ್ಮುನಿ ಮುಂಡಾ, ಮನಿಷಾ ಇಂದ್ವಾರ್ ನಗಾಸಿಯಾ ಕೂಡ ಬದಲಾವಣೆಗೆ ಮತ ಹಾಕುವುದಾಗಿ ತಿಳಿಸಿದರು. ''ಪ್ರಧಾನಿ ಮೋದಿ ಅವರು ಟೀ ತೋಟದ ಕಾರ್ಮಿಕರ ಸುಧಾರಣೆಗೆ ಕ್ರಮ ಕೈಗೊಳ್ಳುತ್ತೇವೆ ಎಂದಿದ್ದಾರೆ. ಸಿಎಂ ಮಮತಾ ಬ್ಯಾನರ್ಜಿ, ನಮ್ಮ ವೇತನ ಹೆಚ್ಚಿಸುವ ಬಗ್ಗೆ ಕ್ರಮ ವಹಿಸಿಲ್ಲ. ಹೀಗಾಗಿ, ನಾವೆಲ್ಲರೂ ದಾದಾಗೆ (ಮೋದಿ) ಬೆಂಬಲ ನೀಡುತ್ತೇವೆ'' ಎಂದರು.

ಆದಿವಾಸಿ ವೋಟ್‌ಬ್ಯಾಂಕ್ ಸೆಳೆಯಲು ಬಿಜೆಪಿ ಭಾರಿ ಗ್ರೌಂಡ್‌ವರ್ಕ್ ಮಾಡುತ್ತಿದ್ದು, ಕೆಲ ದಿನಗಳ ಹಿಂದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉತ್ತರ ಬಂಗಾಳದಲ್ಲಿ ಜನಸಭೆ ಉದ್ದೇಶಿಸಿ ಮಾತನಾಡಿದ್ದಾಗಲೂ, ಟೀ ಕಾರ್ಮಿಕರು ಮತ್ತು ಬುಡಕಟ್ಟು ಸಮುದಾಯದ ಏಳಿಗೆಗೆ ಶ್ರಮಿಸುವ ಭರವಸೆ ನೀಡಿದ್ದರು. ಇದು ಆದಿವಾಸಿ ಮುಖಂಡರ ಮನೆಗಳಲ್ಲಿ ಚರ್ಚೆಯಾಗಿದೆ.

ಟಿಎಂಸಿ ಸರಕಾರ 'ಲಕ್ಷ್ಮೀರ್ ಭಂಡಾರ್' ಯೋಜನೆ ಅಡಿಯಲ್ಲಿ ನೀಡುತ್ತಿರುವ 1500 ರು. ಹಣ ಆದಿವಾಸಿ ಮಹಿಳೆಯರ ಖಾತೆಗೂ ಬರುತ್ತಿದೆ. ವಿಚಿತ್ರ ಎಂದರೆ, ಬಿಜೆಪಿ ಅಧಿಕಾರಕ್ಕೆ ಬಂದರೆ 25 ವರ್ಷ ಮೇಲ್ಪಟ್ಟ ಮಹಿಳೆಯರಿಗೆ 3000 ರು. ನೆರವು ನೀಡುತ್ತೇವೆ ಎಂದು ಘೋಷಿಸಿರುವುದು ಅನೇಕ ಆದಿವಾಸಿ ಮಹಿಳಾ ಕಾರ್ಮಿಕರಿಗೆ ಗೊತ್ತೇ ಇಲ್ಲವಂತೆ. ''3000 ರು. ನಿಜಕ್ಕೂ ನೀಡುತ್ತಾರಾ?'' ಎಂದು ನನ್ನಲ್ಲಿ ಪ್ರಶ್ನಿಸಿದರು. ಅವರಲ್ಲಿ ಲೀಲಾ ಕಿರ್ಕೆತ್ತಾ ಎಂಬ ಮಹಿಳೆಗೆ 3000 ರು. ಘೋಷಣೆ ಕುರಿತ ಮಾಹಿತಿ ಇತ್ತು. ಆದರೆ, ''3000 ರು. ಕೊಟ್ಟ ಬಳಿಕ ನಮಗೆ ನೀಡುತ್ತಿರುವ ಉಚಿತ ಅಕ್ಕಿ, ಧಾನ್ಯಗಳ ವಿತರಣೆಯನ್ನು ನಿಲ್ಲಿಸುತ್ತಾರಂತೆ, ಹೌದೇ?'' ಎಂದು ಪ್ರಶ್ನಿಸಿದರು. ''ಆ ರೀತಿ ಘೋಷಣೆ ಮಾಡಿದಂತಿಲ್ಲ'' ಎಂದು ಉತ್ತರಿಸಿ ನಾನು ಸುಕ್ನಾದ ಸಿಮಲ್ ಬಾಡಿ ಪ್ರದೇಶದಲ್ಲಿರುವ ಟೀ ಗಾರ್ಡನ್‌ನತ್ತ ತೆರಳಿದೆ.

ಸುಮಾರು 30 ಕಿಮೀ ದೂರದ ಸಿತುಬಿಟಾ ಹಳ್ಳಿಯಿಂದ ಬಂದು ಕೆಲಸ ಮಾಡುತ್ತಿದ್ದ ಜ್ಯೋತಿ ಮುಂಡಾ, ತನ್ನ ಮಗಳನ್ನೂ ಟೀ ಎಸ್ಟೇಟ್‌ಗೆ ಕರೆದು ತಂದು ಅಲ್ಲಿ ಕೆಲಸ ಮಾಡಿಸುತ್ತಿದ್ದಳು. ''9ನೇ ತರಗತಿಗೆ ಓದು ನಿಲ್ಲಿಸಿ ಇಲ್ಲಿಗೇಕೆ ಕರೆದು ತಂದಿದ್ದೀರಿ?'' ಎಂದು ಆಕೆ ಬಳಿ ಕೇಳಿದೆ. ''ನನ್ನ ತಂಗಿಯ ಮಗ ಡಿಗ್ರಿ ಮಾಡಿದ್ದಾನೆ. ನೌಕರಿ ಸಿಗದೆ ಕೊನೆಗೆ ಇಲ್ಲೇ ಚಹಾ ಎಲೆ ಕೀಳುತ್ತಿದ್ದಾನೆ'' ಎಂದು ಆತನತ್ತ ಬೆರಳು ತೋರಿಸಿದರು. ''ನಮ್ಮಲ್ಲಿ ಯಾರಿಗೂ ಒಳ್ಳೆ ಕೆಲಸ

ಟೀ ಗಾರ್ಡನ್‌ನಲ್ಲಿ ಆದಿವಾಸಿ ಮಹಿಳಾ ಕಾರ್ಮಿಕರು.

ಸಿಗುತ್ತಿಲ್ಲ. ಪದವಿ ಮಾಡಿದ ಎಷ್ಟೋ ಮಂದಿ ಟೀ ಗಾರ್ಡನ್, ಮೇಸ್ತ್ರಿ ಕೆಲಸಕ್ಕೆ ಹೋಗುತ್ತಿದ್ದಾರೆ. ಬಂಗಾಳದಲ್ಲಿ ನಿರುದ್ಯೋಗದ ಸಮಸ್ಯೆ ಇದೆ. ಹೀಗಿದ್ದಾಗ ಮಗಳನ್ನು ಓದಿಸಿ ಏನು ಮಾಡಲಿ?'' ಎಂದು ಪ್ರಶ್ನಿಸಿದಳು. ಜ್ಯೋತಿ ಮುಂಡಾಳ ಪತಿ ದೆಹಲಿಯ ಲಜಪತನಗರದ ಗೆಸ್ಟ್ ಹೌಸ್ ಒಂದರಲ್ಲಿ ಕೆಲಸ ಮಾಡುತ್ತಿದ್ದಾರಂತೆ. ಕೆಲ ದಿನಗಳ ಹಿಂದಷ್ಟೇ ಆಕೆ ಕೂಡ ದೆಹಲಿಗೆ ಹೋಗಿ, ಇದ್ದಷ್ಟು ದಿನ ಬೇರೆಯವರ ಮನೆಗಳಲ್ಲಿ ಅಡುಗೆ, ಕಸ ಗುಡಿಸುವ, ಪಾತ್ರೆ ತೊಳೆಯುವ ಕೆಲಸ ಮಾಡಿದಳಂತೆ. ಈಗ ಟೀ ಗಾರ್ಡನ್‌ಗೆ ವಾಪಸಾಗಿದ್ದಾಳೆ.

ಸಿಮಲ್ಬಾಡಿ ಟೀ ಗಾರ್ಡನ್‌ನ ಸರ್ದಾರ್ (ಉಸ್ತುವಾರಿ) ರಾಜ್‌ಕುಮಾರ್ ನಗಾಸಿಯಾಗೆ ತಿಂಗಳಿಗೆ 9000 ರು. ಸಾವಿರ ಸಂಬಳ. ಜತೆಗೆ ಕಟ್ಟಡ ಕಾಂಟ್ರಾಕ್ಟ್ ಕೆಲಸಕ್ಕೆ ಕಾರ್ಮಿಕರನ್ನು ಪೂರೈಸುವ ಕೆಲಸ ಮಾಡುತ್ತಾ ತಿಂಗಳಿಗೆ 15000 ರು. ಹೆಚ್ಚುವರಿ ದುಡಿಯುತ್ತಾನೆ. ಒಬ್ಬ ಮಗ ದೆಹಲಿಯಲ್ಲಿ ಮತ್ತೊಬ್ಬ ಸುಕ್ನಾ ಆರ್ಮಿ ಕಂಟೋನ್ಮೆಂಟ್‌ನಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಾ ತಿಂಗಳಿಗೆ ತಿಂಗಳಿಗೆ 15 ಸಾವಿರ ರು. ಸಂಪಾದಿಸುತ್ತಾನಂತೆ. ''ನಮ್ಮಲ್ಲಿ ಎಲ್ಲರೂ ದುಡಿಯುವುದರಿಂದ ಸ್ವಂತ ಮನೆ ಕಟ್ಟಿದ್ದೇವೆ. ಆದರೆ ಎಲ್ಲರ ಜೀವನ ಹೀಗಿಲ್ಲ. ಟೀ ತೋಟದ ಕಾರ್ಮಿಕರ ಸಂಬಳ ಹೆಚ್ಚಿಸಲೇಬೇಕು. ನಮ್ಮ ವೃತ್ತಿಗೆ ಘನತೆ ಇಲ್ಲವೇ? ಎಲ್ಲಾ ಸಾಮಗ್ರಿಗಳ ಬೆಲೆ ಏರಿರುವಾಗ ದಿನಕ್ಕೆ ಬರೀ 250 ರು. ನೀಡುವುದು ಎಷ್ಟು ಸರಿ?'' ಎಂದು ಬೇಸರ ಹೊರಹಾಕಿದರು. ''15 ವರ್ಷ ದೀದಿಗೆ ಅವಕಾಶ ನೀಡಿದ್ದೇವೆ. ಹೊಸಬರಿಗೆ ಅವಕಾಶ ನೀಡುವ ಸಮಯ ಬಂದಿದೆ. ಇಲ್ಲಿ ಬಿಜೆಪಿ ಸರಕಾರವನ್ನೂ ಒಮ್ಮೆ ನೋಡಬೇಕು'' ಎನ್ನುತ್ತಾ ತಮ್ಮದು ಬದಲಾವಣೆಗೆ ಮತ ಎಂದು ಖಚಿತಪಡಿಸಿದರು.

ಬಿಜೆಪಿ ಪ್ರಭಾವಲಯ ಹೆಚ್ಚಿರುವ ಉತ್ತರ ಬಂಗಾಳದ ಡಾರ್ಜಿಲಿಂಗ್, ಸಿಲಿಗುರಿ, ಕರ್ಸಾಂಗ್ ಸುತ್ತಮುತ್ತಲಿನ ಟೀ ಎಸ್ಟೇಟ್ ಕಾರ್ಮಿಕರು ಈ ಬಾರಿ ಬದಲಾವಣೆಗೆ ತೆರೆದುಕೊಳ್ಳಲು ಯೋಚಿಸಿದ್ದಾರೆನ್ನುವುದು ಅವರ ಮಾತುಗಳಲ್ಲೇ ವ್ಯಕ್ತವಾಗುತ್ತಿತ್ತು. ಇದೇ ಕಾರಣಕ್ಕೆ ಭೂತಾನ್, ನೇಪಾಳ ಮತ್ತು ಬಾಂಗ್ಲಾ ದೇಶಗಳೊಂದಿಗೆ ಗಡಿ ಹಂಚಿಕೊಂಡಿರುವ ಡಾರ್ಜಿಲಿಂಗ್, ಜಲ್‌ಪಯ್‌ಗುರಿ, ಸಿಲಿಗುರಿ, ಕೂಚ್ ಬೆಹಾರ್, ಅಲಿಪುರ್‌ದ್ವಾರ್, ಕಲಿಂಪಾಂಗ್ ಜಿಲ್ಲೆಗಳ ಬಹುಪಾಲು ಸೀಟುಗಳನ್ನು ನಾವು ಗೆಲ್ಲಲಿದ್ದೇವೆ ಎಂಬ ವಿಶ್ವಾಸದಲ್ಲಿ ಕೇಸರಿ ನಾಯಕರೂ ಇದ್ದಾರೆ.

ಕನ್ನಡಿಗ ಅರುಣ್ ಬಿನ್ನಡಿಗೆ 28 ಕ್ಷೇತ್ರಗಳ ಉಸ್ತುವಾರಿ

ಕಳೆದ ಬಾರಿ ಅತಿ ಹೆಚ್ಚು ರಾಜಕೀಯ ಹಿಂಸಾಚಾರ-ದಾಳಿ ಪ್ರಕರಣಗಳಿಗೆ ಸಾಕ್ಷಿಯಾಗಿದ್ದ ಉತ್ತರ ಬಂಗಾಳದ ಕೂಚ್ ಬೆಹಾರ್, ಅಲಿಪುರ್‌ದ್ವಾರ್ ಸೇರಿದಂತೆ ಜಲ್‌ಪೈಗುರಿ, ಡಾರ್ಜಿಲಿಂಗ್, ಕಲಿಂಪಾಂಗ್, ಸಿಲಿಗುರಿ ಜಿಲ್ಲೆಗಳ ಒಟ್ಟು 28 ಕ್ಷೇತ್ರಗಳ ಉಸ್ತುವಾರಿಯನ್ನು ಬಿಜೆಪಿ ಪೂರ್ಣಾವಧಿ ಕಾರ್ಯಕರ್ತ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿನ್ನೆಲೆಯಿಂದ ಬಂದ ಚಿಕ್ಕಮಗಳೂರು ಮೂಲದ ಅರುಣ್ ಬಿನ್ನಡಿ ಅವರಿಗೆ ನೀಡಲಾಗಿದೆ. ಕಳೆದ 6 ತಿಂಗಳಿನಿಂದ ಅರುಣ್ ಇಲ್ಲೇ ಬೀಡುಬಿಟ್ಟಿದ್ದಾರೆ. ನಿತ್ಯವೂ ವಿವಿಧ ಕ್ಷೇತ್ರಗಳಿಗೆ ಪ್ರವಾಸ ಮಾಡುತ್ತಾ, ಕಾರ್ಯಕರ್ತರನ್ನು ಒಗ್ಗೂಡಿಸಿ, ಪಕ್ಷ ಸಂಘಟನೆ ಬಲಗೊಳಿಸುವಲ್ಲಿ ಅರುಣ್ ತೊಡಗಿದ್ದಾರೆ. ಅರುಣ್ ಬಿನ್ನಡಿ ಮೇಲೆ ಟಿಎಂಸಿ ಕಾರ್ಯಕರ್ತರ ಕೆಂಗಣ್ಣು ಬಿದ್ದಿದ್ದು, ಎರಡು ಬಾರಿ ದಾಳಿ ಯತ್ನವೂ ನಡೆದಿದೆ. ಒಮ್ಮೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಕಚ್ಚಾ ಬಾಂಬ್ ಎಸೆದಿದ್ದರು. ಸಿಟಾಯ್ ಕ್ಷೇತ್ರದಲ್ಲಿ ಕಾರ್ಯಕರ್ತರ ಮೀಟಿಂಗ್ ಮಾಡುತ್ತಿದ್ದಾಗ ಮತ್ತೊಮ್ಮೆ ವೇದಿಕೆಯ ಪಕ್ಕಕ್ಕೇ ಬಾಂಬ್ ಎಸೆದು ಪರಾರಿಯಾಗಿದ್ದರು. ಈ ಹಿಂದೆ ಬೆಂಗಳೂರು ಯುವ ಮೋರ್ಚಾ ಯಶವಂತಪುರ ಘಟಕದ ಕಾರ್ಯದರ್ಶಿ, 'ಸಿವಿಕ್ ಇನಿಷಿಯೇಟಿವ್ ಫಾರ್ ಬೆಟರ್ ಬೆಂಗಳೂರು' ಸಂಸ್ಥೆಯಲ್ಲಿ ಹಲವು ವರ್ಷ ಸೇವೆ ಸಲ್ಲಿಸಿದ್ದರು. ಅಣ್ಣಾ ಹಜಾರೆ ಆಂದೋಲನದಲ್ಲೂ ಭಾಗಿಯಾಗಿದ್ದ ಅರುಣ್, ನಂತರ ರಾಷ್ಟ್ರೀಯ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರೊಂದಿಗೂ ದಿಲ್ಲಿಯಲ್ಲಿ ಕೆಲಸ ಮಾಡಿದ್ದರು. ಜಮ್ಮು-ಕಾಶ್ಮೀರ, ಪಂಜಾಬ್ ಚುನಾವಣೆ ಸಂದರ್ಭದಲ್ಲೂ ಆ ಭಾಗಗಳಲ್ಲಿ ಸಂಘಟನೆ ಪರ ದುಡಿದಿದ್ದ ಅರುಣ್, ಸಂಘರ್ಷಮಯ ರಾಜಕೀಯ ವಾತಾವರಣವಿರುವ ಬಂಗಾಳದಲ್ಲಿ, ಟಿಎಂಸಿಯ ಸವಾಲುಗಳಿಗೆ ಮೈ ಒಡ್ಡುತ್ತಾ ಕಾರ್ಯಕರ್ತರೊಂದಿಗೆ ಪಕ್ಷ ಸಂಘಟನೆಯಲ್ಲಿ ತೊಡಗಿರುವುದು ವಿಭಿನ್ನ ಅನುಭವ ನೀಡುತ್ತಿದೆ. 28 ಸೀಟುಗಳಲ್ಲಿ 23ನ್ನು ಗೆಲ್ಲುವ ಪೂರ್ಣ ವಿಶ್ವಾಸವಿದೆ ಎಂದು ಅವರು 'ವಿಶ್ವವಾಣಿ' ಜತೆ ಅನಿಸಿಕೆ ಹಂಚಿಕೊಂಡರು.

ಬ್ಲಡ್ ಟೀ ಅಭಿಯಾನ

ಡಾರ್ಜಿಲಿಂಗ್ ಅನ್ನು 'ಶಾಂಪೇನ್ ಆಫ್ ಟೀಸ್' ಎಂದು ಕರೆಯಲಾಗುತ್ತದೆ. ಆದರೆ ಇಲ್ಲಿನ ಟೀ ಕಾರ್ಮಿಕರಿಗೆ ಕಡಿಮೆ ವೇತನ ಮತ್ತು ಬೋನಸ್ ಖಂಡಿಸಿ 2024ರಲ್ಲಿ ಡಾರ್ಜಿಲಿಂಗ್‌ನ 'ಗೋರ್ಖಾ ಜನಶಕ್ತಿ ಫ್ರಂಟ್'ನ ನಾಯಕ ಅಜಯ್ ಎಡ್ವರ್ಡ್ ಅವರು 2024ರಲ್ಲಿ 'ಬ್ಲಡ್ ಟೀ' ಎಂಬ ಅಭಿಯಾನವನ್ನು ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಆರಂಭಿಸಿದ್ದರು. ಕಾರ್ಮಿಕರ ಬವಣೆ, ಶೋಷಣೆ, ನೋವನ್ನು ಬಿಂಬಿಸಲು ಟೀ ಎಲೆ ಮೇಲೆ ರಕ್ತ ಚಿಮ್ಮಿಸಿದ್ದರು. ಇದಕ್ಕೆ ಉದ್ಯಮಿಗಳು ಅಸಮಾಧಾನ ಹೊರಹಾಕಿ, ''ಡಾರ್ಜಿಲಿಂಗ್ ಟೀ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದಿದೆ. ಆದರೆ, ಇಂಥಾ ಅಭಿಯಾನದ ಮೂಲಕ ಹೆಸರು ಹಾಳು ಮಾಡಲಾಗುತ್ತಿದೆ'' ಎಂದಿದ್ದರು. ಹಾಗಂತ, ಕಾರ್ಮಿಕರ ಬವಣೆ ಮಾತ್ರ ನಿಂತಿಲ್ಲ.

ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯನ್ನು ಒಪ್ಪಲ್ಲ: ವಿಧೇಯಕದ ಪ್ರತಿ ಸುಟ್ಟು ಪ್ರತಿಭಟಿಸಿದ ಸ್ಟಾಲಿನ್

ಚೆನ್ನೈ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ಮಹತ್ತರ ಆಶಯಗಳಲ್ಲಿ ಒಂದೆನಿಸಿಕೊಂಡಿರುವ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ವಿಧೇಯಕವನ್ನು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ವಿರೋಧಿಸಿದ್ದಾರೆ. ಅವರು ನಾಮಕ್ಕಲ್‌ನಲ್ಲಿ ಕಪ್ಪುಬಾವುಟವನ್ನು ಪ್ರದರ್ಶಿಸಿ, ವಿಧೇಯಕದ ಪ್ರತಿಯನ್ನು ಸುಟ್ಟು ಹಾಕಿ ಕೇಂದ್ರ ಸರಕಾರದ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಭಾರತದ ರಾಜ್ಯಗಳ ಪ್ರಾತಿನಿಧ್ಯವನ್ನು ತೀವ್ರವಾಗಿ ತಗ್ಗಿಸಲಿದೆ ಎನ್ನಲಾಗಿರುವ ಈ ವಿಧೇಯಕವನ್ನು ಅಂಗೀಕರಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆದ ಕೇಂದ್ರದ ಬಿಜೆಪಿ ಸರಕಾರಕ್ಕೆ ನೀಡಲಾದ 'ಕಠಿಣ ಎಚ್ಚರಿಕೆ'ಯ ನಂತರ

ಈ ಪ್ರತಿಭಟನೆ ನಡೆದಿದೆ. ತರುವಾಯದಲ್ಲಿ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಅವರು, ''ಈ ಪ್ರತಿಭಟನೆಯು ಬಿಜೆಪಿ ಸರಕಾರವನ್ನು ಉರುಳಿಸುತ್ತದೆ. ತಮಿಳುನಾಡಿನ ಉದ್ದಗಲಕ್ಕೂ ಈ ಪ್ರತಿರೋಧದ ಜ್ವಾಲೆ ಹರಡಲಿ, ಅದು ಬಿಜೆಪಿಯ ದುರಹಂಕಾರವನ್ನು ಅಡಗಿಸಲಿ'' ಎಂದು

ಬರೆದುಕೊಂಡಿದ್ದಾರೆ. ಲಭ್ಯ ಮಾಹಿತಿಗಳ ಪ್ರಕಾರ, ಸ್ಟಾಲಿನ್ ಅವರ ಈ ಪ್ರತಿಭಟನೆಯನ್ನು ಅನುಸರಿಸಿ, ರಾಜ್ಯಾದ್ಯಂತ ಕಪ್ಪು ಬಾವುಟಗಳನ್ನು ಹಾರಿಸಿ, ವಿಧೇಯಕದ ಪ್ರತಿಗಳನ್ನು ಸುಟ್ಟು ಪ್ರತಿಭಟನೆ ನಡೆಸಲು ಡಿಎಂಕೆ ಪಕ್ಷವು ಸಜ್ಜಾಗಿದೆ ಎಂದು ತಿಳಿದುಬಂದಿದೆ.

ಕಾರನ್ನು ತಡೆದಿದ್ದೇಕೆ? ಮಮತಾ ಆಕ್ರೋಶ

ಇಸ್ಲಾಂಪುರ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ನಾಯಕರನ್ನು ಗುರಿ ಯಾಗಿಸಿಕೊಂಡು 'ಒಳನುಗ್ಗಿ ತಪಾಸಣೆ ನಡೆಸುವ' ಚಟುವಟಿಕೆಗಳಿಗೆ ಆಸ್ಪದ ನೀಡಲಾಗುತ್ತಿದೆ ಎಂಬುದಾಗಿ ಆ ಪಕ್ಷವು ಇತ್ತೀಚೆಗೆ ಆರೋಪಿಸಿದ್ದುಂಟು. ಈ ಬೆಳವಣಿಗೆಯ ನಂತರ, ''ಕೇಂದ್ರ ಪಡೆಗಳು ನನ್ನ ಕಾರನ್ನು ಶೋಧಿಸಲು ಪ್ರಯತ್ನಿಸಿದವು'' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಆರೋಪಿಸಿದ್ದಾರೆ.

ಇಸ್ಲಾಂಪುರದಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ''ಕೋಲ್ಕತ್ತಾದ 'ಡಮ್ ಡಮ್' ವಿಮಾನ ನಿಲ್ದಾಣದ ಬಳಿ ಕೇಂದ್ರ ಪಡೆಗಳು ನನ್ನ ಕಾರನ್ನು ಪರಿಶೀಲಿಸಲು ಪ್ರಯತ್ನಿಸಿದವು. ಮುಂದುವರಿಯುವಂತೆ ಆ ಪಡೆಗಳಿಗೆ ನಾನು ಸೂಚಿಸಿದೆ, ಶೋಧನೆಗೂ ಅವಕಾಶ ನೀಡಿದೆ. ಆದರೆ ಸಂಬಂಧಿತ ಸಿಬ್ಬಂದಿ ಓಡಿಹೋದರು. ಬಿಜೆಪಿ ನಾಯಕರ ವಿಷಯದಲ್ಲೂ ಇದೇ ರೀತಿಯ ತಪಾಸಣೆಗಳನ್ನು ಏಕೆ ನಡೆಸಲಾಗಿಲ್ಲ? ಟಿಎಂಸಿ ಪಕ್ಷದ ನಾಯಕರನ್ನು ಹೀಗೆ ತಪಾಸಣೆಗೆ ಒಳಪಡಿಸುವುದಾದರೆ, ಪ್ರಧಾನಮಂತ್ರಿ, ಗೃಹ ಸಚಿವರು ಅಥವಾ ಬಿಜೆಪಿಯ ಇತರ ನಾಯಕರನ್ನೂ ಇದೇ ರೀತಿಯಲ್ಲಿ ಏಕೆ ತಪಾಸಣೆಗೆ ಒಳಪಡಿಸಬಾರದು?'' ಎಂದು ಆಕ್ರೋಶ ಭರಿತರಾಗಿ ಪ್ರಶ್ನಿಸಿದರು.

ಮಾತು ಮುಂದುವರಿಸಿದ ಮಮತಾ, ''ಕೇಂದ್ರೀಯ ಸಂಸ್ಥೆಗಳನ್ನು ಬಿಜೆಪಿಯು ದುರುಪಯೋಗಪಡಿಸಿಕೊಂಡಿರುವುದರ ಜತೆಗೆ, ವಿಧಾನಸಭಾ ಚುನಾವಣೆ ನಡೆಯಲಿರುವ ಬಂಗಾಳಕ್ಕೆ 'ಭಾರಿ ಪ್ರಮಾಣದ ಹಣವನ್ನು' ತಂದಿದೆ'' ಎಂದು ಆರೋಪಿಸಿದರು.



ಪಶ್ಚಿಮ ಬಂಗಾಳ

ಹೀಗೊಂದು ಪಕ್ಷಿನೋಟ

ಏಪ್ರಿಲ್ 23, 29 ಮತದಾನದ ದಿನಾಂಕ	ಮೇ 4 ಮತಗಳ ಎಣಿಕೆ

136	ಅಪರಾಧ ಪ್ರಕರಣಗಳನ್ನು ಹೊಂದಿರುವ ಶಾಸಕರು
109	ಗಂಭೀರ ಸ್ವರೂಪದ ಆರೋಪಗಳನ್ನು ಎದುರಿಸುತ್ತಿರುವ ಶಾಸಕರು
8	ಕೊಲೆ ಪ್ರಕರಣಗಳನ್ನು ಹೊಂದಿರುವ ಶಾಸಕರು
29	ಕೊಲೆ ಯತ್ನದ ಪ್ರಕರಣಗಳನ್ನು ಹೊಂದಿರುವ ಶಾಸಕರು
22	ಮಹಿಳೆಯರ ವಿರುದ್ಧ ಅಪರಾಧಗಳನ್ನು ಎಸಗಿರುವ ಶಾಸಕರು
1	ಅತ್ಯಾಚಾರದ ಪ್ರಕರಣ ಹೊಂದಿರುವ ಶಾಸಕರು
92	ಅಪರಾಧ ಪ್ರಕರಣ ಹೊಂದಿರುವ ಟಿಎಂಸಿ ಶಾಸಕರು
42	ಅಪರಾಧ ಪ್ರಕರಣ ಹೊಂದಿರುವ ಬಿಜೆಪಿ ಶಾಸಕರು

ಟಿಎಂಸಿ ವಿರುದ್ಧ ಹಿಮಂತ ಕಿಡಿ

ಕೂಚ್ ಬೆಹಾರ್: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದರೆ, ಮೀನು ಮತ್ತು ಮಾಂಸದ ಸೇವನೆಯನ್ನು ನಿಲ್ಲಿಸುತ್ತದೆ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಸುಳ್ಳು

ಹೇಳಿಕೆಗಳನ್ನು ನೀಡುತ್ತಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಆರೋಪಿಸಿದ್ದಾರೆ.

ಬಿಜೆಪಿ ಅಭ್ಯರ್ಥಿಗಳ ಪರವಾಗಿ ಉತ್ತರ ಬಂಗಾಳದಲ್ಲಿ ನಡೆದ ಚುನಾವಣಾ ಪ್ರಚಾರಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ''ಬಿಜೆಪಿಯ ಆಡಳಿತವಿರುವ ಅಸ್ಸಾಂನಲ್ಲಿ ವ್ಯಕ್ತಿಯೊಬ್ಬರು ಎಷ್ಟು ಬೇಕಾದರೂ ಮಾಂಸಾಹಾರವನ್ನು ಸೇವಿಸಬಹುದು; ಅಲ್ಲಿ ಗೋಮಾಂಸ ಸೇವನೆಯ ಮೇಲಷ್ಟೇ ನಿರ್ಬಂಧ ಇದೆ. ನೀವು ಗೋಲ್‌ಪಾರಾ ಮತ್ತು ಧುಬ್ರಿಗೆ ಹೋಗಿ ಇಷ್ಟ ಬಂದಷ್ಟು ಮೀನು-ಮಾಂಸವನ್ನು ತಿನ್ನಬಹುದು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಇಲ್ಲಿ ಗೋಮಾಂಸದ ವ್ಯಾಪಾರ ನಿಲ್ಲುತ್ತದೆ ಎಂಬುದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಚಿಂತೆಗೆ ಕಾರಣವಾಗಿದೆ. ಟಿಎಂಸಿ ಪಕ್ಷವು ಬಾಂಗ್ಲಾದೇಶಕ್ಕೆ ದನಗಳ ಕಳ್ಳಸಾಗಣೆಯನ್ನು ಮುಂದುವರಿಸಿ, ತನ್ನ ಜೇಬನ್ನು ತುಂಬಿಸಿಕೊಳ್ಳಬಹುದು'' ಎಂದು ಕುಟುಕಿದರು.

ಮೊಳಗಿಸುವವರೇ ವಿಜಯ ದುಂದುಭಿ?

ಚೆನ್ನೈ: ತಮಿಳುನಾಡಿನಲ್ಲಿ ಏಪ್ರಿಲ್ 23ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಛಾಪು ಮೂಡಿಸಲು ಪ್ರಮುಖ ರಾಜಕೀಯ ಪಕ್ಷಗಳು ಟೊಂಕ ಕಟ್ಟಿವೆ. ಆಡಳಿತಾರೂಢ ಡಿಎಂಕೆ ಪಕ್ಷದ ನೇತೃತ್ವದ 'ಸೆಕ್ಯುಲರ್ ಪ್ರೊಗ್ರೆಸಿವ್ ಅಲಯನ್ಸ್' (ಎಸ್‌ಪಿಎ) ಮತ್ತು ಎಐಎಡಿಎಂಕೆ ನೇತೃತ್ವದ 'ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್' (ಎನ್‌ಡಿಎ) ನಡುವೆ ನಡೆಯಲಿರುವ ಜಿದ್ದಾಜಿದ್ದಿ ಕಾಳಗವಿದು.

ಆದರೆ, ಈ ಬಾರಿ ಬಹುತೇಕ ರಾಜಕೀಯಾಸಕ್ತರ ಗಮನ ಹರಿದಿರುವುದು ನಟ ವಿಜಯ್ ಕಡೆಗೆ. ಅವರು ಹೊಸದಾಗಿ ಕಟ್ಟಿ ಕಣಕ್ಕಿಳಿಸಿರುವ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷವು ಆಯ್ದ ಕೆಲವೇ ಕ್ಷೇತ್ರಗಳ ಬದಲಿಗೆ ರಾಜ್ಯದ ಎಲ್ಲಾ 234 ಕ್ಷೇತ್ರಗಳಲ್ಲೂ ಸ್ಪರ್ಧಿಸಿರುವುದೇ ಇದಕ್ಕೆ ಕಾರಣ. ಟಿವಿಕೆ ಈ ಚುನಾವಣೆಯಲ್ಲಿ ಗೆಲ್ಲುವುದೇ? ಗೆದ್ದರೂ ಸ್ವತಂತ್ರವಾಗಿ ಸರಕಾರವನ್ನು ರಚಿಸಬಲ್ಲಷ್ಟು ಬಹುಮತವನ್ನು ದಕ್ಕಿಸಿಕೊಂಡೀತೇ? ಒಂದೊಮ್ಮೆ ಅದು ಸಾಧ್ಯವಾಗದಿದ್ದಲ್ಲಿ 'ಮೈತ್ರಿ ಸರಕಾರ'ದಂಥ 'ಅನುಕೂಲಸಿಂಧು' ರಾಜಕಾರಣದೆಡೆಗೆ ಮುಖ ಮಾಡುವುದೇ? ಎಂಬ ಪ್ರಶ್ನೆಗಳೂ ಇಲ್ಲಿ ಮೂಡುತ್ತವೆ.

ಬಹುತೇಕರಿಗೆ ಗೊತ್ತಿರುವಂತೆ, ತಮಿಳುನಾಡಿನ 'ಎಂಜಿಆರ್' (ಎಂ.ಜಿ.ರಾಮಚಂದ್ರನ್) ಮತ್ತು ಆಂಧ್ರಪ್ರದೇಶದ 'ಎನ್‌ಟಿಆರ್' (ಎನ್.ಟಿ.ರಾಮ ರಾವ್) ಚಿತ್ರನಟರಾಗಿದ್ದುಕೊಂಡು ಮೊದಲ ಯತ್ನದಲ್ಲೇ ಮುಖ್ಯಮಂತ್ರಿಗಳೂ ಆದವರು. ನಟ ವಿಜಯ್ ಕೂಡ ಈ 'ಭಾಗ್ಯ'ವನ್ನು ತಮ್ಮದಾಗಿಸಿಕೊಳ್ಳುವರೇ? ಏಕೆಂದರೆ ವಿಜಯ್ ಅವರಿಗೂ ಭರ್ಜರಿ 'ಅಭಿಮಾನಿ ಬಳಗ' ಇದೆ. ತಮಿಳುನಾಡಿನಲ್ಲಿ ಸದ್ಯ ಚೊಚ್ಚಲ ಮತದಾರರು ಮತ್ತು ಯುವ ಮತದಾರರ ಸಂಖ್ಯೆಗಳು ಕ್ರಮವಾಗಿ 12.51 ಲಕ್ಷ ಮತ್ತು 1.18 ಕೋಟಿಯಷ್ಟಿದ್ದು, ಇದರ ಸಿಂಹಪಾಲು ವಿಜಯ್‌ರವರ 'ಟಿವಿಕೆ' ಪಕ್ಷದೆಡೆಗೆ ತಿರುಗಿದರೆ ಚುನಾವಣಾ ಫಲಿತಾಂಶದ ದಿಕ್ಕೇ ಬದಲಾಗಿಬಿಡುತ್ತದೆ ಎನ್ನಲಾಗುತ್ತಿದೆ. ನಟರಾಗಿ ವಿಜಯ್ ಯುವಜನರನ್ನು ಭಾರಿ ಪ್ರಮಾಣದಲ್ಲಿ ಸೆಳೆದಿರುವುದೇ ಈ ಗ್ರಹಿಕೆಗೆ ಕಾರಣ. ಜತೆಗೆ, ಅಲ್ಪಸಂಖ್ಯಾತರ, ಅದರಲ್ಲೂ ನಿರ್ದಿಷ್ಟವಾಗಿ ಕ್ರೈಸ್ತ ಬಾಂಧವರ ಮತಗಳನ್ನು ವಿಜಯ್ ಸಾರಾಸಗಟಾಗಿ ಪಡೆಯಲಿದ್ದಾರೆ ಎಂಬ ಲೆಕ್ಕಾಚಾರವೂ ಇದೆ.

'ಎಸ್‌ಪಿಎ' ಮೈತ್ರಿಕೂಟದಲ್ಲಿರುವ ಡಿಎಂಕೆ ಮತ್ತು ಕಾಂಗ್ರೆಸ್ ಪಕ್ಷಗಳು ಕ್ರಮವಾಗಿ 164 ಮತ್ತು 28 ಸ್ಥಾನಗಳಲ್ಲಿ ಸ್ಪರ್ಧಿಸಿದ್ದರೆ, 'ಎನ್‌ಡಿಎ' ಮೈತ್ರಿಕೂಟದಲ್ಲಿರುವ ಎಐಎಡಿಎಂಕೆ ಮತ್ತು ಬಿಜೆಪಿ ಕ್ರಮವಾಗಿ 169 ಮತ್ತು 27 ಸ್ಥಾನಗಳಲ್ಲಿ ಕಣಕ್ಕಿಳಿದಿವೆ. ರಾಜಕೀಯವಾಗಿ 'ಎಣ್ಣೆ-ಸೀಗೇಕಾಯಿ'ಗಳಂತಿರುವ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು 121 ಕ್ಷೇತ್ರಗಳಲ್ಲಿ ನೇರ ಎದುರಾಳಿಗಳಾಗಿವೆ. ಬಲಿಷ್ಠ ಸಂಘಟನಾಶಕ್ತಿ ಮತ್ತು ಬೂತ್ ಮಟ್ಟದಲ್ಲಿ ಉತ್ತಮ ಕಾರ್ಯಕರ್ತರ ಪಡೆಯಿರುವುದು ಡಿಎಂಕೆಯ ಪ್ಲಸ್ ಪಾಯಿಂಟ್; ಆದರೆ ಆಡಳಿತ ವಿರೋಧಿ ಅಲೆ, ಹಣದುಬ್ಬರ, ರೈತರ ಆಕ್ರೋಶ ಮುಂತಾದವು ಡಿಎಂಕೆಗೆ ಮುಳುವಾಗಬಲ್ಲವು.

ಮತ್ತೊಂದೆಡೆ, ಅಧಿನಾಯಕಿ ಜೆ.ಜಯಲಲಿತಾರ ಸಾವಿನ ನಂತರ, ಜನರನ್ನು ಸೆಳೆಯಬಲ್ಲ 'ಸ್ಟಾರ್ ನಾಯಕ'ರಿಲ್ಲದ ಕೊರತೆ ಎಐಎಡಿಎಂಕೆ ಪಕ್ಷವನ್ನು ಕಾಡುತ್ತಿದೆ. 2016ರ ತರುವಾಯದಲ್ಲಿ ಯಾವುದೇ ಚುನಾವಣೆಯನ್ನು ಗೆಲ್ಲಲಾಗದ ಈ ಪಕ್ಷದ ಈಗಿನ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಎ.ಪಳನಿಸ್ವಾಮಿಯವರು 'ಏಕಾಂಗವೀರ'ನಾಗಿ ಹೋರಾಡಬೇಕಾಗಿ ಬಂದಿದೆ. ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಈಗಲೂ ಇರುವ ಪ್ರಭಾವ, ಸಮರ್ಥ ಕಾರ್ಯಕರ್ತರ ಪಡೆ ಹಾಗೂ ಬಿಜೆಪಿಯ ಜತೆಗಿನ ಸಖ್ಯ ಮುಂತಾದ ಅಂಶಗಳು ಕೈಹಿಡಿದರೆ ಮಾತ್ರವೇ ಎಐಎಡಿಎಂಕೆಯ ದೆಸೆ ಕುದುರೀತು; ಆದರೆ ಅದಕ್ಕಾಗಿ ಸಾಕಷ್ಟು 'ರಾಗಿ ಬೀಸಬೇಕು' ಎಂಬುದು ಸುಳ್ಳಲ್ಲ! ಒಟ್ಟಿನಲ್ಲಿ, 'ಡಿಎಂಕೆ' ಮತ್ತು 'ಎಐಎಡಿಎಂಕೆ' ಯಂಥ ಹಳೆಯ ಹುಲಿಗಳು ಹಾಗೂ 'ಟಿವಿಕೆ' ಯಂಥ 'ಅಪ್ರೆಂಟಿಸ್'ಗಳಿಂದಾಗಿ ಈ ಬಾರಿಯ ತಮಿಳುನಾಡು ಚುನಾವಣೆ ಕಳೆಗಟ್ಟಿರುವುದಂತೂ ಖರೆ!

ಸವಾಲು ಹಾಕಿ ಎಲ್ಲರ ಮನ ಗೆದ್ದ ಆಶಾ!

ತಮ್ಮ ಬದುಕಿನುದ್ದಕ್ಕೂ ಸವಾಲು ಹಾಕಿಕೊಂಡೇ ಮುಂದುವರಿದವರು ಆಶಾ ಭೋಸ್ಲೆ. ಜತೆಗೆ, ತಮ್ಮ ಮನಸ್ಸು ಹೇಳಿದಂತೆ ನಿರ್ಣಯಗಳನ್ನು ಕೈಗೊಂಡು, ಬದುಕಿನ ಸವಾಲನ್ನು ಗೆದ್ದ ಆಶಾ ಭೋಸ್ಲೆ ಅವರು, ಆಧುನಿಕ ಮತ್ತು ಪಾಶ್ಚಾತ್ಯ ಶೈಲಿಯ ಹಾಡುಗಳನ್ನು ಹಾಡುವಲ್ಲಿ ಪ್ರಸಿದ್ಧಿ ಪಡೆದರು.

• ಅಜಯ್ ಅಂಚೆಪಾಳ್ಯ

ಇತ್ತೀಚೆಗೆ ನಮ್ಮನ್ನು ಅಗಲಿದ ಆಶಾ ಭೋಸ್ಲೆ ಅವರದ್ದು ಸವಾಲಿನ ಬದುಕು; ಸಂಕಷ್ಟಗಳನ್ನು ಎದುರಿಸಿ, ಛಲದಿಂದ ಮುನ್ನುಗ್ಗಿ ಅಪಾರ ಜನಪ್ರಿಯತೆ ಗಳಿಸಿದ ಆಶಾ ಭೋಸ್ಲೆ ಅವರು, ಹಿಂದಿ ಚಿತ್ರರಂಗದ ಅಪ್ರತಿಮ ಗಾಯಕಿಯರಲ್ಲಿ ಒಬ್ಬರು.

ವಿಶೇಷವೆಂದರೆ, ಆಶಾ ಭೋಸ್ಲೆ ಅವರು ಎದುರಿಸಬೇಕಾಗಿಬಂದ ಸವಾಲುಗಳಿಗೆ ಕಾರಣರೆಂದರೆ ಅವರ ಕುಟುಂಬದವರೇ! ಮುಖ್ಯವಾಗಿ, ಅವರ ಅಕ್ಕ ಲತಾ ಮಂಗೇಷ್ಕರ್ ಅವರ ಗಾಯನದ ಯಶಸ್ಸು, ಆಶಾ ಅವರ ಪಾಲಿನ ಸವಾಲು ಎನಿಸಿತು! ಅವರಿಬ್ಬರೂ ಆರಂಭದಲ್ಲಿ ತೀರಾ ಅನ್ಯೋನ್ಯವಾಗಿದ್ದರೂ, ಕೆಲವೇ ವರ್ಷಗಳಲ್ಲಿ ಪರಿಸ್ಥಿತಿ ಎಂಥ ಮಟ್ಟವನ್ನು ಮುಟ್ಟಿತು ಎಂದರೆ, ಲತಾ ಮಂಗೇಶ್ಕರ್ ಅವರು ಆಶಾ ಅವರ ನಡೆಗಳನ್ನು ಒಪ್ಪದೇ ದೂರ ಮಾಡಿದರು. ವಿಪರ್ಯಾಸ ಎಂದರೆ, ಕೆಲವು ಗೀತೆಗಳನ್ನು ಸುಸಂಸ್ಕೃತವಲ್ಲ ಎಂದೋ ಅಥವಾ ಬೇರಾವುದೋ ಕಾರಣಕ್ಕೋ ಲತಾ ಅವರು ಹಾಡಲು ಒಪ್ಪದೇ ತಿರಸ್ಕರಿಸಿದಾಗ, ಅದನ್ನೇ ಆಶಾ ಅವರು ಹಾಡುತ್ತಿದ್ದರು! ಅಂಥ ಅನಿವಾರ್ಯತೆ, ಹಣದ ಅವಶ್ಯಕತೆ ಒಂದು ಕಾಲದಲ್ಲಿ ಅವರಿಗಿತ್ತು.

ಲತಾ ಮಂಗೇಶ್ಕರ್ ಅವರು ಕ್ಯಾಬರೆಗೆ ಸಂಬಂಧಿಸಿದ ಮತ್ತು ತೀರಾ ಮಾಡರ್ನ್ ಎನಿಸುವ ಹಾಡುಗಳನ್ನು ಹಾಡಲು ಇಷ್ಟಪಡುತ್ತಿರಲಿಲ್ಲ; ಅಂಥ ಹಾಡುಗಳನ್ನು ಆಶಾ ಭೋಸ್ಲೆ ಅವರು ಹಾಡುತ್ತಾರೆ ಎಂದು ಗೊತ್ತಾದ ನಂತರ, ಕ್ಯಾಬರೆ ಹಾಡುಗಳಿಗೆಲ್ಲಾ ಇವರೇ ಧ್ವನಿ ನೀಡುವಂಥ ಸನ್ನಿವೇಶ ಸೃಷ್ಟಿಯಾಯಿತು. ಐಟಂ ಸಾಂಗ್, ಕ್ಯಾಬರೆ ನೃತ್ಯ, 'ದಮ್' ಹೊಡೆಯುವಾಗ ಹಾಡುವಂಥ ಮತ್ತೇರಿಸುವ ಹಾಡು- ಇವೆಲ್ಲವೂ ಆಶಾ ಅವರ ಪಾಲಾಯಿತು!

ವಿಶೇಷವೆಂದರೆ, ಅಂಥ ಹೊಸ ಟ್ರೆಂಡ್‌ನ ಹಾಡುಗಳನ್ನು ಹಾಡುವಲ್ಲಿ ಆಶಾ ಭೋಸ್ಲೆ ವಿಶೇಷ ಪರಿಣತಿ ಸಾಧಿಸಿದರು! ಆದ್ದರಿಂದಲೇ, ಇಂದು ಅವರು, ಹಿಂದಿ ಚಿತ್ರರಂಗದ ಹಿನ್ನೆಲೆಗಾಯಕರ ಸಾಲಿನಲ್ಲಿ ದಂತಕಥೆಯಾಗಿ ಹೋಗಿದ್ದಾರೆ.

ಆಶಾ ಭೋಸ್ಲೆ ಅವರು ಬಾಲ್ಯದಿಂದಲೇ ಸಂಗೀತದಲ್ಲಿ ತೊಡಗಿಕೊಂಡವರು. ಅದಕ್ಕೆ ಮುಖ್ಯ ಕಾರಣ, ಅವರ ತಂದೆ ದೀನನಾಥ ಮಂಗೇಶ್ಕರ್ ಅವರು ಆದಾಗಲೇ ಪ್ರಸಿದ್ಧ ಗೀತ ಸಂಯೋಜಕರು, ನಟ ಮತ್ತು ಹಿಂದೂಸ್ತಾನಿ ಸಂಗೀತಗಾರರಾಗಿದ್ದರು. ತಮ್ಮ ಮಕ್ಕಳಿಗೆ ಅವರು ಸಂಗೀತದ ತರಬೇತಿ ನೀಡಿದರು; ಆದ್ದರಿಂದಲೇ, ಲತಾ ಮಂಗೇಶ್ಕರ್, ಉಷಾ ಮಂಗೇಷ್ಕರ್ ಮತ್ತು ಆಶಾ ಭೋಸ್ಲೆ ಗಾಯಕಿಯರಾದರು; ಆಶಾ ಅವರ ಅಕ್ಕ ಮೀನಾ ಮಂಗೇಷ್ಕರ್ ಮತ್ತು ತಮ್ಮ ಹೃದಯನಾಥ ಮಂಗೇಶ್ಕರ್ ಅವರು ಸಂಗೀತ ಸಂಯೋಜಕರಾದರು.

'ದಮ್' ಹೊಡೆಯುವ ಹಾಡು

1960-70ರ ದಶಕದಲ್ಲಿ, ಅತಿ ಆಧುನಿಕ ಎನಿಸುವ ಶೈಲಿಯಲ್ಲಿ ಹಿಂದಿ ಹಾಡುಗಳನ್ನು ಹಾಡುತ್ತಿದ್ದ ಆಶಾ ಭೋಸ್ಲೆ ಅವರ ಬಹು ಪ್ರಸಿದ್ಧ ಹಾಡುಗಳಲ್ಲಿ 'ದಮ್ ಮಾರೋ ದಮ್' ಸಹ ಸೇರಿದೆ; ಇಂದಿನ ಪರಿಭಾಷೆಯಲ್ಲಿ 'ಡ್ರಗ್ಸ್ ಸೇವನೆ'ಯ ದೃಶ್ಯ ಎಂದು ಕರೆಯಬಹುದಾದ ಆ ಒಂದು ದೃಶ್ಯದಲ್ಲಿ, ಜೀನತ್ ಅಮಾನ್ ನಟಿಸಿದ ಆ ಒಂದು ಹಾಡು, ಸಂಗೀತ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ಮಾಡಿತು. 'ನಮ್ಮ ಸುತ್ತಲಿನ ಜಗತ್ತನ್ನು ಮರೆದು, ದಮ್ ಹೊಡೆಯಿರಿ' ಎಂದು ಕರೆ ಕೊಡುವ 'ದಮ್ ಮಾರೋ ದಮ್' ಹಾಡು, ತನ್ನ ನಾವೀನ್ಯ, ಅನನ್ಯತೆಯಿಂದಾಗಿ ಅಚ್ಚರಿ ಹುಟ್ಟಿಸುತ್ತದೆ. 'ಸೈಕೆಡೆಲಿಕ್ ರಾಕ್' ಸಂಗೀತ ಶೈಲಿಯನ್ನು ನಮ್ಮ ದೇಶದ ಹಾಡುಗಳೊಂದಿಗೆ ಬೆರೆಸಿರುವ ಆ ಪ್ರಯತ್ನವು,

ಚಿತ್ರರಸಿಕರನ್ನು ಸೆಳೆದ ರೀತಿ ಅಭೂತಪೂರ್ವ. ಈ ಹಾಡು ಇಂದಿಗೂ ಇಷ್ಟಪಟ್ಟು ಕೇಳುವಂತಿದೆ! ಇದಕ್ಕೆ ಸಂಗೀತ ಸಂಯೋಜನೆ ಮಾಡಿದ ಆರ್.ಡಿ.ಬರ್ಮನ್ ಅವರು, ಆಶಾ ಅವರ ಎರಡನೆಯ ಪತಿ; ಆದರೆ, ಆಶಾರಿಗಿಂತ ಆರು ವರ್ಷ ಚಿಕ್ಕವರು! ತಮ್ಮ ಮನಸ್ಸು ಇಷ್ಟಪಟ್ಟಂತೆ ಬದುಕುವ ಹಾದಿಯನ್ನು ಹಿಡಿದಿದ್ದ ಆಶಾ ಭೋಸ್ಲೆ ಅವರು ಇಂಥ ಹಲವು ದಿಟ್ಟ ನಿರ್ಧಾರಗಳನ್ನು ತಮ್ಮ ಜೀವನದಲ್ಲಿ ಕೈಗೊಂಡಿದ್ದಾರೆ.

ತಮ್ಮ 16ನೆಯ ವಯಸ್ಸಿನಲ್ಲೇ ಗಣಪತ್ ರಾವ್ ಭೋಸ್ಲೆಯವರೊಂದಿಗೆ ಹೊರಟುಹೋಗಿ, ಮದುವೆಯಾದರು! ಆದರೆ, ಆ ದಾಂಪತ್ಯ ಹೆಚ್ಚು ದಿನ ಉಳಿಯಲಿಲ್ಲ. 1960ರಲ್ಲಿ ಅವರಿಂದ ಬೇರಾದ ನಂತರ, 1980ರ ದಶಕದಲ್ಲಿ ಸಂಗೀತ ನಿರ್ದೇಶಕ ಆರ್.ಡಿ.ಬರ್ಮನ್‌ರನ್ನು ಮದುವೆಯಾದರು. ಬರ್ಮನ್ ಅವರು ಆಶಾರ ದನಿಯಲ್ಲಿ ಹಲವು ಮಧುರ, ಆಧುನಿಕ ಹಿಂದಿ ಹಾಡುಗಳನ್ನು ಸಿದ್ಧಪಡಿಸಿರುವುದು ಒಂದು ದಾಖಲೆಯಾಗಿ ಉಳಿದಿದೆ.

ಕನ್ನಡದಲ್ಲಿ ಆಶಾ

1. 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' (1967) ಚಿತ್ರದಲ್ಲಿ ಆಶಾ ಭೋಸ್ಲೆ ಹಾಡಿದ ಹಾಡು- 'ಯಾಕೋ, ಏನೋ...'. ಆದರೆ ಅದು ಅಷ್ಟೊಂದು ಪ್ರಸಿದ್ಧವಾಗಲಿಲ್ಲ; ಅದೇ ಸಿನಿಮಾದಲ್ಲಿ ಅವರ ಸಹೋದರಿ ಲತಾ ಮಂಗೇಷ್ಕರ್ ಹಾಡಿದ 'ಬೆಳ್ಳನೆ ಬೆಳಗಾಯಿತು' ಬಹಳ ಪ್ರಸಿದ್ಧವಾಯಿತು; ಇಲ್ಲೂ ಆ ಸಹೋದರಿಯರ ನಡುವಿನ ಸ್ಪರ್ಧೆಯಲ್ಲಿ, ಅಕ್ಕನೇ ಮೇಲುಗೈ ಸಾಧಿಸಿದರು.
2. 'ದೂರದ ಬೆಟ್ಟ' (1971) ಚಿತ್ರದಲ್ಲಿ 'ಸವಾಲು ಹಾಕಿ ಸೋಲಿಸಿ ಎಲ್ಲರ, ತಲೆಗಳ ಮೆಟ್ಟಲು ಬಂದಿರುವೆ!' ಹಾಡನ್ನು ಹಾಡಿದವರು ಆಶಾ ಮಂಗೇಶ್ಕರ್ ಮತ್ತು ಪಿ.ಬಿ.ಶ್ರೀನಿವಾಸ್. ಡಾ. ರಾಜ್‌ಕುಮಾರ್ ಅಭಿನಯದಿಂದ ಮತ್ತು ಮರಾಠಿ ಶೈಲಿಯ ನೃತ್ಯಕ್ಕೆ ಸಂಯೋಜಿಸಿದ ಈ ಹಾಡು ಸಾಕಷ್ಟು ಜನಪ್ರಿಯವಾಯಿತು. ಆ ಒಂದು ನೃತ್ಯವು ಕನ್ನಡ ಸಿನಿಮಾ ಚರಿತ್ರೆಯಲ್ಲೇ ಅನನ್ಯ ಎನಿಸುವಷ್ಟು ಚೆನ್ನಾಗಿ ಚಿತ್ರೀಕರಣಗೊಂಡಿದೆ.
3. 'ಮತ್ತೆ ಮುಂಗಾರು' (2010) ಚಿತ್ರಕ್ಕಾಗಿ 'ಹೇಳದೆ ಕಾರಣ' ಎಂಬ ಹಾಡನ್ನು ಆಶಾ ಭೋಸ್ಲೆ ಹಾಡಿದ್ದರೂ, ಆ ಹಾಡು ಕನ್ನಡದ ಚಿತ್ರಗೀತೆ ಪ್ರಿಯರನ್ನು ತಲುಪುವಲ್ಲಿ ಹೆಚ್ಚಿನ ಯಶಸ್ಸು ಕಂಡಿಲ್ಲ ಎಂದೇ ಹೇಳಬಹುದು.

ಆಶಾ ಭೋಸ್ಲೆ ಅವರು ಹಿಂದಿ, ಮರಾಠಿ, ಕನ್ನಡ, ತಮಿಳು ಸೇರಿದಂತೆ ಹಲವು ಭಾಷೆಗಳಲ್ಲಿ ಸುಮಾರು 12,000 ಹಾಡುಗಳನ್ನು ಹಾಡಿದ್ದಾರೆ. ಅವರು ಪ್ರಾರಂಭದಲ್ಲಿ ಹಲವಾರು ಸಂಕಷ್ಟಗಳನ್ನು ಎದುರಿಸಿದರೂ, ತಮ್ಮ ಪರಿಶ್ರಮ ಮತ್ತು ತಾಳ್ಮೆಯಿಂದ ಸಂಗೀತ ಲೋಕದಲ್ಲಿ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡರು. ವಿಶೇಷವಾಗಿ ಆಧುನಿಕ ಶೈಲಿಯ ಚಿತ್ರಗೀತೆಗಳಲ್ಲಿ ಅವರ ಕೊಡುಗೆ ಅನನ್ಯ. ಭಾವಗೀತೆಗಳು, ನೃತ್ಯಗೀತೆಗಳು, ಗಝಲ್‌ಗಳು ಹಾಗೂ ಭಕ್ತಿಗೀತೆಗಳು ಸೇರಿದಂತೆ ವಿವಿಧ ಶೈಲಿಗಳಲ್ಲಿ ಅವರು ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ತುಂಬು ಜೀವನ ನಡೆಸಿ, 92ನೆಯ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದ ಆಶಾ ಭೋಸ್ಲೆ ಅವರು, ಚಿತ್ರಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಮೂಲ್ಯ, ಅಪಾರ.

ಚಿತ್ರವಿಹಾರ

ಆಂತರಿಕ ಯಾತ್ರೆ

• ಅರವಿಂದ ಜಿ. ಜೋಷಿ, ಮೈಸೂರು

ನನ್ನ ಈ ಒಂಟಿತನ, ಬೇಸರ ಮತ್ತು
ಅತೃಪ್ತಿಗಳನ್ನು ತಡೆಹಿಡಿದು ನಿಲ್ಲಿಸಿ
ಜನಜಂಗುಳಿಯಿಂದ ದೂರ ಬಹುದೂರ
ಹೋಗಿ, ನನ್ನ ಅಂತರಂಗದಲ್ಲಿಯೇ ಯಾತ್ರೆ
ಮಾಡಲು ಸಿದ್ಧತೆ ನಡೆಸಿದ್ದೇನೆ...

ನಾನು ಜನರಿಗೆ ಮಾಡುವ ಪ್ರಶ್ನೆಗಳೆಲ್ಲವು
ತುಟಿ ಅಂಚಿನ ತನಕ ಬಂದು, ಮುಂದೆ ಬಾರದೇ
ನಿಲ್ಲುವುದನ್ನು ಗಮನಿಸುತ್ತಿದ್ದೇನೆ.
ಆದರೂ ನಾನು ಅವುಗಳಿಗೆ ಎಷ್ಟೇ ವಿಧದಲ್ಲಿ
ತಿಳಿವಳಿಕೆ ಹೇಳುವುದರಲ್ಲಿ ಸೋತು ಹೋಗಿ
ಮೌನಕ್ಕೆ ಶರಣಾಗುತಿಹೆನು...

ಈ ಮೊದಲಾದರೆ ನನ್ನ ಎಲ್ಲ ಪ್ರಶ್ನೆಗಳಿಗೂ
ಜನರಿಂದಲೇ ನಾ ಉತ್ತರ ಬಯಸುತ್ತಿದ್ದೆ.
ಆದರೆ ಇತ್ತೀಚಿಗೆ ಆ ಎಲ್ಲ ಪ್ರಶ್ನೆಗಳೂ
ನನ್ನೊಳಗೇ ಬಂಧಿ ಆಗಿ ಅವಿರತ ಹಿಂಸೆ
ಕೊಡುವುದನ್ನು ಅನುಭವಿಸುತ್ತಿದ್ದೇನೆ...

ನನಗೆ ಈ ಒಂಟಿತನ, ಬೇಸರ ಯಾವುದೂ
ಭಾರವಾಗಿ ಉಳಿದಿಲ್ಲ, ಆದರೆ ಅದೇ ಪ್ರಶ್ನೆಗಳಾಗಿ
ನನ್ನೊಳಗೆ ಉಳಿದು, ನಿಧಾನವಾಗಿ ನನ್ನ
ಅಸ್ತಿತ್ವವನ್ನೇ ಇಲ್ಲವಾಗಿಸುತ್ತಿವೆ ಎಂದು
ಇನ್ನಿಲ್ಲದಂತೆ ಕೊರಗುತಿಹೆನು...

ಮನದ ಭಾವನೆಗಳೂ ಈಗ ಮುಂಚಿನಂತೆ
ಅಘಟಿಸುತ್ತಿಲ್ಲ, ಅವು ಶಾಂತವಾಗಿ ನದಿಯಂತೆ
ಹರಿಯುತ್ತಿವೆ. ನಾನು ದಡದ ಮೇಲೆ ಕುಳಿತು
ಅದನ್ನೇ ಕಣ್ಣುಂಬಿ ನೋಡುತಿಹೆನು...

ಪ್ರಾಯಶಃ ಇದೇ ನನ್ನ ಆಂತರಿಕ ಯಾತ್ರೆ
ಎನಿಸುತ್ತದೆ. ಏಕೆಂದರೆ ಎಲ್ಲಿ ಎಲ್ಲವನೂ
ನಾನು ಕಳೆದುಕೊಂಡು, ಕೊನೆಗೂ ನನ್ನನು
ನಾನೇ ಕಂಡು, ಹಿಡಿದಿಟ್ಟಿರುವ
ಬಿಟ್ಟೆ ಎಂದು ಅಂದುಕೊಳ್ಳುತಿಹೆನು...

ಸೂಕ್ತ ಮಾರ್ಗದರ್ಶನ

• ಬೇಲೂರು ರಾಮಮೂರ್ತಿ

ನಮ್ಮ ಮಕ್ಕಳಿಗೆ ಸಾಮಾನ್ಯ ನ್ಯಾಯವನ್ನು ಕಲಿಸಿಕೊಡುವುದಾಗ ಸರಿಯಾದ ರೀತಿಯಲ್ಲಿ ಕಲಿಸಬೇಕು. ಉದಾಹರಣೆಗೆ ಅವರಿಗೆ ಯಾವುದಾದರೂ ಒಂದು ಕೆಲಸವನ್ನು ವಹಿಸಿದರೆ ಅದನ್ನು ಅವರು ಸಂಪೂರ್ಣವಾಗಿ ಮಾಡಬೇಕು. ಉದಾಹರಣೆಗೆ ಮಗನಿಗೆ "ಅಂಗಡಿಗೆ ಹೋಗಿ ಒಂದು ಕೆಜಿ ಉಪ್ಪು ತೆಗೆದುಕೊಂಡು ಬಾ" ಅಂತ ಹೇಳಿ ಕಳಿಸಿದರೆ ಅವನು 'ಅಂಗಡಿ ಬಾಗಿಲು ಹಾಕಿತ್ತು' ಅಂತ ಹಿಂದಿರುಗಿ ಬರಬಾರದು. ಒಂದು ಅಂಗಡಿ ಬಾಗಿಲು ಹಾಕಿದ್ದರೆ ಮತ್ತೊಂದು ಅಂಗಡಿಯಿಂದ ತರಬೇಕು. ಉಪ್ಪು ತರಬೇಕಾದುದು ಮುಖ್ಯ. ಅಂಗಡಿ ಯಾವುದಾದರೇನು? ಇದಕ್ಕೆ ನಮ್ಮ ಪರಂಪರೆಯಲ್ಲಿ ಒಂದು ಒಳ್ಳೆಯ ಉದಾಹರಣೆ ಇದೆ. ಅದನ್ನು ಸಂಸ್ಕೃತದಲ್ಲಿ 'ಕಾಕದಧಿಘಾತಕ ನ್ಯಾಯ' ಎನ್ನುತ್ತಾರೆ. ಈ ರೀತಿಯ ನ್ಯಾಯಗಳು ಬಹಳ ಇವೆ. ಅವುಗಳಲ್ಲಿ ಇದೂ ಒಂದು.

ಮೊಸರು ಮಾರುವ ಒಬ್ಬ ಹೆಂಗಸು ತನ್ನ ಮಗನಿಗೆ "ನಾನು ಮನೆಗೆ ಹೋಗಿ ಬರುವವರೆಗೂ ಮೊಸರಿನ ಗಡಿಗೆ ಕಾಯುತ್ತಿರಬೇಕು, ಕಾಗೆ ಬಂದರೆ ಓಡಿಸು" ಎಂದು ಹೇಳಿ ಹೋಗಿರುತ್ತಾಳೆ. ಕಾಗೆ ಬಂದರೆ ಓಡಿಸಬೇಕಾದುದು ಅವನ ಕೆಲಸ. ಆದರೆ ನಾಯಿ ಬಂದರೆ, ಅದನ್ನೂ ಓಡಿಸಬೇಕು ಎನ್ನುವುದು ಸಾಮಾನ್ಯ ಜ್ಞಾನ. 'ಅಮ್ಮ ನನಗೆ ಕಾಗೆ ಮಾತ್ರ ಓಡಿಸು ಎಂದು ಹೇಳಿದ್ದಳೆ; ನಾಯಿ ಬಂದರೆ ಓಡಿಸು ಅಂತ ಹೇಳಿಲ್ಲ' ಅಂತ ಸುಮ್ಮನೆ ಕೂತುಕೊಳ್ಳಬಾರದು. ಒಟ್ಟಿನಲ್ಲಿ ಮೊಸರು ಗಡಿಗೆ ಕಾಯುವುದು ಮುಖ್ಯ. ಅದನ್ನು ಎಲ್ಲಾ ಪ್ರಾಣಿಗಳಿಂದಲೂ ಕಾಯಬೇಕು ಎನ್ನುವುದು ಸಾಮಾನ್ಯ ಜ್ಞಾನ. ಇಲ್ಲಿ ಕಾಗೆ ಎಂದರೆ ಮೊಸರನ್ನು ಕದಿಯುವ ಎಲ್ಲ ಪ್ರಾಣಿಗಳೂ ಎಂದು ಅರ್ಥ ಮಾಡಿಕೊಳ್ಳಬೇಕು. ಇದನ್ನೇ ಸಂಸ್ಕೃತದಲ್ಲಿ 'ಕಾಕದಧಿಘಾತಕ ನ್ಯಾಯ' ಎನ್ನುತ್ತಾರೆ.

ಹೀಗೆ ಮಕ್ಕಳಿಗೆ ವಿಷಯಗಳ ಕುರಿತು ಹೇಳುವಾಗ ಪ್ರತಿಯೊಂದನ್ನೂ ಬಿಡಿಸಿ ಹೇಳುವುದು ಅಸಾಧ್ಯ. ಮೊದಮೊದಲು ಹಾಗೆ ಹೇಳಿದರೂ ನಂತರದ ದಿನಗಳಲ್ಲಿ ಹಿರಿಯರು ಹೇಳಿದ ಕೆಲಸವನ್ನು ಯಾವ ದಾರಿಯಿಂದಾದರೂ ಮಾಡಬೇಕಾದ್ದು ಅಪೇಕ್ಷಣೀಯ ಎನ್ನುವುದು ಅವರಿಗೆ ಮನದಟ್ಟಾಗುವಂತೆ ಹೇಳುವುದು ಮುಖ್ಯ. ಉಪ್ಪು ತರುವಾಗ ಅಂಗಡಿ ಮುಖ್ಯವಲ್ಲ, ಉಪ್ಪು ಮುಖ್ಯ ಎನ್ನುವುದು ತಿಳಿಯಬೇಕು. ಅದಕ್ಕೆ ಮುಖ್ಯವಾದುದು ಗ್ರಹಿಕೆ. ದೊಡ್ಡವರು ನಮಗೆ ಏನನ್ನಾದರೂ ಹೇಳುತ್ತಿರುವಾಗ ಗಮನ ಅವರ ಕಡೆಗೇ ಇರಬೇಕು. ಅವರು ಏನನ್ನು ಹೇಳುತ್ತಿದ್ದಾರೆ, ಅವರು ನನ್ನಿಂದ ಏನನ್ನು ನಿರೀಕ್ಷಿಸುತ್ತಿದ್ದಾರೆ ಎನ್ನುವುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು.

ಊರು ಕಟ್ಟಿದ ಮನಸು, ನಗರ ಕೊಟ್ಟ ಕನಸು!

• ಕುಶಾಂಗಿ ಪಟೇಲ್ ಎಚ್.ಸಿ.

ಹಳ್ಳಿಯ ನಿಶ್ಚಲತೆ ಕಳೆದುಹೋಗುತ್ತಿದೆ ಎಂದು ದುಃಖಿಸಲು ಮನಸ್ಸಾಗುತ್ತದೆ. ಆದರೆ ನಿಜವಾಗಿಯೂ ನಾವು ಕಳೆದುಕೊಳ್ಳುತ್ತಿರುವುದು ಏನು? ನನ್ನ ಅಜ್ಜಿ ಯಾವತ್ತೂ ಹೇಳುತ್ತಿದ್ದರು ''ಮಗಳೇ, ಬೆಳಗ್ಗೆ ಎದ್ದು ತೋಟಕ್ಕೆ ಹೋಗಿ ನೀರು ಹಾಕಿದರೆ ದಿನ ಒಳ್ಳೆಯದಾಗುತ್ತದೆ'' ಅಂತ. ಆ ಮಾತಿನಲ್ಲಿ ಒಂದು ನಿರ್ಮಲ ಸತ್ಯ ಇತ್ತು. ಆದರೆ, ಇಂದು ನನ್ನ ಮಗು ಬೆಳಗ್ಗೆ ಎದ್ದ ಕೂಡಲೇ ಮೊಬೈಲ್ ಕೈಗೆ ತೆಗೆದುಕೊಳ್ಳುತ್ತದೆ. ಅದು ಬೆಂಗಳೂರಿನ ಅಪಾರ್ಟ್‌ಮೆಂಟ್‌ನಲ್ಲಿ ಅಲ್ಲ, ನಮ್ಮ ಊರಿನಲ್ಲೇ.

ಇದು ಕೇವಲ ನನ್ನ ಮನೆಯ ಕಥೆ ಅಲ್ಲ. ನಾನು ಕಳೆದ ಬೇಸಗೆಯಲ್ಲಿ ತವರೂರಿಗೆ ಹೋದಾಗ, ಗಲ್ಲಿಯ ಮೂಲೆಯಲ್ಲಿ ಯಾರೂ ಮಾತನಾಡುತ್ತಾ ಕೂರುವ ದೃಶ್ಯ ಕಾಣಲಿಲ್ಲ. ಅಜ್ಜ-ಅಜ್ಜಿಯರು ಕೂಡ ಫೋನ್‌ನಲ್ಲಿ ರೀಲ್ಸ್ ನೋಡುತ್ತಿದ್ದರು. ಅಂಗಳದಲ್ಲಿ ಮಕ್ಕಳ ಆಟ ಇರಲಿಲ್ಲ. ಅವರೆಲ್ಲ ಒಳಗೆ, ಪ್ರತ್ಯೇಕ ಪ್ರಪಂಚದಲ್ಲಿ ಇದ್ದರು.

ಬೆಂಗಳೂರಿನಲ್ಲಿ ನಾನು ನೋಡುವ ಜನರಿಗೆ ಎಲ್ಲವೂ ಸಿಗುತ್ತದೆ- ಉದ್ಯೋಗ, ವಿದ್ಯೆ, ಅವಕಾಶ. ಆದರೆ, ಒಂದು ಶಾಂತ ಮಧ್ಯಾಹ್ನ ಸಿಗುವುದಿಲ್ಲ. ಗೆಳೆಯ-ಗೆಳತಿಯರ ಮನೆಗೆ ಹೋಗಿ ಅವರ ಅಮ್ಮ ಮಾಡಿದ ಅಡುಗೆ ತಿನ್ನುವ ಸಮಯ ಸಿಗುವುದಿಲ್ಲ. ಬಾಲ್ಕನಿಯಲ್ಲಿ ನಿಂತು ನಕ್ಷತ್ರ ನೋಡುವ ಬಿಡುವು ಇರುವುದಿಲ್ಲ. ಟ್ರಾಫಿಕ್‌ನಲ್ಲಿ ಕಳೆಯುವ ಎರಡು ಗಂಟೆ ಒಂದು

ದೊಡ್ಡ ತ್ಯಾಗ. ಆದರೆ ಇದನ್ನು ಯಾರೂ ದೂರುವುದಿಲ್ಲ. ಏಕೆಂದರೆ ಇಲ್ಲಿ ಎಲ್ಲರೂ ಓಡುತ್ತಿದ್ದಾರೆ, ಮತ್ತು ಓಡುವುದೇ ಬದುಕು ಎಂದು ನಂಬಲು ಶುರುಮಾಡಿದ್ದಾರೆ.

ಆದರೆ, ಅದೇ ಸಮಯದಲ್ಲಿ ಹಳ್ಳಿಯ ಯುವಕರನ್ನು ನೋಡಿ. ಅವರಿಗೆ ಊರಿನ ಬದುಕು ಸಾಕಾಗಿದೆ. ಕೃಷಿಯಲ್ಲಿ ಭವಿಷ್ಯ ಕಾಣಿಸುತ್ತಿಲ್ಲ. ಊರಿನ ಹುಡುಗ ನಗರಕ್ಕೆ ಹೋಗಿ ಸೆಟಲ್ ಆಗದ ಹೊರತು ಮದುವೆಯೂ ಆಗುವುದಿಲ್ಲ ಎನ್ನುವ ಒತ್ತಡ ಇನ್ನೂ ಇದೆ. ಹಾಗಾಗಿ ಅವರೂ ನಗರದ ವೇಗವನ್ನು ಅಪ್ಪಿಕೊಳ್ಳುತ್ತಿದ್ದಾರೆ. ಶರೀರ ಹಳ್ಳಿಯಲ್ಲಿ ಇದ್ದರೂ, ಮನಸ್ಸು ಎಲ್ಲೋ ಬೇರೆ ಕಡೆ ಇರುತ್ತದೆ.

ಆದರೂ ಒಂದು ವಿಷಯ ಹಳ್ಳಿ ಮತ್ತು ನಗರ ಎರಡರಲ್ಲೂ ಉಳಿದಿದೆ- ಅದು ಮನುಷ್ಯನ ಹಂಬಲ. ನಗರದ ಜನ ರಜೆ ಸಿಕ್ಕಾಗ ಎಲ್ಲಿಗಾದರೂ ಹೊರಡುತ್ತಾರೆ- ಅಂದರೆ ಬೆಟ್ಟ, ಕಡಲು, ಕಾಡಿನ ಕಡೆಗೆ ಹೆಜ್ಜೆ ಹಾಕುತ್ತಾರೆ. ಏಕೆ? ಏಕೆಂದರೆ ಅವರ ಒಳಗಿನ ಮನುಷ್ಯ ಇನ್ನೂ ಶಾಂತಿ ಹುಡುಕುತ್ತಿದ್ದಾನೆ. ಹಳ್ಳಿಯ ಮನುಷ್ಯ ನಗರಕ್ಕೆ ಹೋಗುತ್ತಾನೆ ಏಕೆಂದರೆ ಅಲ್ಲಿ ಅವಕಾಶ ಇದೆ. ಇಬ್ಬರೂ ಓಡುತ್ತಿದ್ದಾರೆ ತಮ್ಮ ಪ್ರಕಾರ ಒಳ್ಳೆಯದರ ಕಡೆಗೆ.

ಇಂದು ನಮ್ಮ ದೇಶದಲ್ಲಿ ಒಂದು ವಿಚಿತ್ರ ಸಂಧಿಕಾಲ ಇದೆ. ಹಳ್ಳಿಯಲ್ಲಿ 4-ಜಿ ಇದೆ, ಆದರೆ ಕುಡಿಯುವ ನೀರು ಇಲ್ಲ. ನಗರದಲ್ಲಿ ಸ್ಮಾರ್ಟ್ ಸಿಟಿ ಇದೆ, ಆದರೆ ನೆರೆಹೊರೆ ಗೊತ್ತಿಲ್ಲ. ಅಭಿವೃದ್ಧಿ ಎಲ್ಲ ಕಡೆ ಹರಡುತ್ತಿದೆ. ಆದರೆ, ಮನುಷ್ಯನ ನೆಮ್ಮದಿ ಮಾತ್ರ ಯಾರ ಬಳಿಯೂ ಇಲ್ಲ. ನನ್ನ ಅಜ್ಜಿ ತೀರಿಕೊಂಡು ಹದಿನಾರು ವರ್ಷ ಆಯಿತು. ಅವರ ತೋಟ ಈಗ ಬಿದ್ದುಹೋಗಿದೆ. ಅಲ್ಲಿ ಒಂದು ಹೊಸ ಕಟ್ಟಡ ಏಳುತ್ತಿದೆ. ಅಜ್ಜಿ ಹೇಳಿದ ಮಾತು ಮಾತ್ರ ಮನಸ್ಸಿನಲ್ಲಿ ಉಳಿದಿದೆ- 'ಬೆಳಗ್ಗೆ ತೋಟಕ್ಕೆ ಹೋಗಿ ನೀರು ಹಾಕಿದರೆ ದಿನ ಒಳ್ಳೆಯದಾಗುತ್ತದೆ' ಎಂಬುದು. ಇಂದಿನ ಬದುಕಿನ ತೊಡಕುಗಳ ನಡುವೆ ಆ ಮಾತಿನ ಅರ್ಥ ಹಿಂದಿಗಿಂತ ಹೆಚ್ಚು ಮನದಟ್ಟಾಗುತ್ತದೆ.

ನಗರ ಮತ್ತು ಹಳ್ಳಿ ಒಂದೇ ದಾರಿಗೆ ಬರುತ್ತಿರಬಹುದು, ಆದರೆ ಆ ದಾರಿ ಎಲ್ಲಿಗೆ ಹೋಗುತ್ತದೆ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಅವಕಾಶ ಮತ್ತು ನೆಮ್ಮದಿ ಎರಡನ್ನೂ ಒಟ್ಟಿಗೆ ಇಟ್ಟುಕೊಳ್ಳಲು ಸಾಧ್ಯವೇ ಎನ್ನುವ ಹುಡುಕಾಟ ನಡೆಯುತ್ತಲೇ ಇದೆ. ಬಹುಶಃ ಆ ಸಮತೋಲನ ಕಂಡುಕೊಳ್ಳುವುದೇ ನಮ್ಮ ತಲೆಮಾರಿನ ಅಸಲಿ ಕೆಲಸ. ನಗರದ ವೇಗ ಹಾಗೂ ಹಳ್ಳಿಯ ನಿಶ್ಚಲತೆ ಎರಡೂ ಇಂದೂ ಒಂದೇ ದಿಕ್ಕಿನೆಡೆಗೆ ಸಾಗುತ್ತಿವೆ ಎಂದು ಭಾವಿಸಬೇಕೇ?

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1			2	■	3			4

ಎಡದಿಂದ ಬಲಕ್ಕೆ

1. ಸಹಾಯ ಅಥವಾ ನೆರವು (4)
3. ಲೆಕ್ಕ ಬರೆಯುವವನು (4)
5. ಹೆಂಗಳೆಯರು ಮನೆಯ ಮುಂದೆ ಬಿಡಿಸುವ ಚಿತ್ತಾರ (4)
6. ದೇವಾಲಯದ ಸಭಾಮಂಟಪ (4)
8. ಕೆಲವರು ಮುಖ ನೋಡಿ ಇದನ್ನು ಹಾಕುವುದುಂಟು (2)
9. ಬೃಹತ್ತಾಗಿ ಬೆಳೆಯುವ ವಟವೃಕ್ಷದ ಆರಂಭವೇ ಹ್ರಸ್ವವಾಗಿದೆ! (2)
11. ನಮ್ರತೆಯಿಂದ ಕೂಡಿದ (4)
13. ಒಂದು ಭಾಷೆಯಿಂದ ಮತ್ತೊಂದಕ್ಕೆ ಮಾಡುವ ತರ್ಜುಮೆ ತಿರುಗಿಬಂದಿದೆ (4)
14. ತಮ್ಮ ಬೇಡಿಕೆ ಈಡೇರಿಕೆಗೆ ಮಾಡಿದ ಸಂಪು (4)
15. ವನದಲ್ಲಿ ಬೀಸಿದ ಗಾಳಿ (4)

ಮೇಲಿಂದ ಕೆಳಕ್ಕೆ

1. ಸೀನ ತೋರಿದ ಅಲಕ್ಷ್ಯ (4)
2. ರಂಗ ಹೋದ ಯುದ್ಧಭೂಮಿ (4)
3. ಮನಸ್ಸಿಗಾದ ತಳಮಳಕ್ಕೆ ಮತ್ತೊಂದು ಹೆಸರು (4)
4. ಈ ಆಜ್ಞೆಯನ್ನು ಧಿಕ್ಕರಿಸುವಂತಿಲ್ಲ (4)
7. ವೃತ್ತಾಕಾರವಾದುದು (3)
8. ಜಳಕ ಅಥವಾ ಸ್ನಾನಕ್ಕೆ ಮತ್ತೊಂದು ಹೆಸರು (3)
9. ಅವನು ತೋರಿದ ಕೃಪೆ (4)
10. ಮನಸ್ಸಿನ ಒಳಭಾಗಕ್ಕೆ ಹೀಗೆನ್ನಬಹುದೇ? (4)
11. ಸಭೆಯ ಮುಂದೆ ನಿಂತು ಮಾತನಾಡುವಾಗ ಹೆದರಿಕೆಯಿಂದಾದ ನಡುಕ (4)
12. ಕರಾವಳಿಯ ಪ್ರಸಿದ್ಧವಾದ ಕಲಾಪ್ರಕಾರ (4)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಉಪಕಾರ 3.ಕರಣಿಕ 5.ರಂಗವಲ್ಲಿ
6.ನವರಂಗ 8.ಮಣೆ 9.ಅಲ
11.ಸವಿನಯ 13.ರತಷಾಂಭಾ
14.ಹರತಾಳ 15.ಪವಮಾನ

ಮೇಲಿಂದ ಕೆಳಕ್ಕೆ
1.ಉದಾಸೀನ 2.ರಣರಂಗ 3.ಕಳವಳ
4.ಕಟ್ಟಪ್ಪಣೆ 7.ವರ್ತುಲ 8.ಮಜ್ಜನ
9.ಅನುಗ್ರಹ 10.ಅಂತರಾಳ
11.ಸಭಾಕಂಪ 12.ಯಕ್ಷಗಾನ

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ರಾಮಚರಿತ ಮಾನಸ: ಹನುಮನಿಗೆ ಅಶೋಕವನದಲ್ಲಿ ಸೀತೆಯ ದರ್ಶನ

ಲಂಕೆಯ ಅಂಧಕಾರದ ನಡುವೆ ಜಗನ್ಮಾತೆ ಸೀತೆಯನ್ನು ಹುಡುಕುತ್ತಾ ಹೊರಟ ಹನುಮಂತನಿಗೆ ಅಶೋಕವನವು ಒಂದು ಕಣ್ಣೀರಿನ ಕಡಲಂತೆ ಕಂಡಿತು. ಅಲ್ಲಿನ ಪ್ರತಿಯೊಂದು ಗಿಡ-ಮರಗಳೂ ತಾಯಿಯ ದುಃಖಕ್ಕೆ ಸಾಕ್ಷಿಯಾಗಿದ್ದವು. ದಟ್ಟವಾದ ಶಿಂಶುಪಾ ವೃಕ್ಷದ ಕೆಳಗೆ, ಸಾಧಾರಣವಾದ ವಸ್ತ್ರವನ್ನು ಧರಿಸಿ, ಉಪವಾಸದಿಂದ ಕೃಶಳಾಗಿ ಕುಳಿತಿದ್ದ ಸೀತಾದೇವಿಯನ್ನು ಕಂಡಾಗ ಹನುಮಂತನ ಹೃದಯ ಕಿವುಚಿದಂತಾಯಿತು. ಜಗತ್ತನ್ನೇ ಸಲಹುವ ತಾಯಿ ಇಂದು ಒಂಟಿಯಾಗಿ ಕುಳಿತು, ಮಿಣುಕು ದೀಪದಂತೆ ಕೇವಲ 'ರಾಮ.. ರಾಮ' ಎಂದು ಜಪಿಸುತ್ತಿರುವುದನ್ನು ಕಂಡು ಹನುಮಂತನು ಮರದ ಎಲೆಗಳ ಮರೆಯಲ್ಲಿ ಅಡಗಿ ಕಣ್ಣೀರು ಹಾಕಿದನು.

ಅಷ್ಟರಲ್ಲಿ, ಹತ್ತು ತಲೆಗಳ ಅಹಂಕಾರದ ಸಾಕಾರ ರೂಪದಂತಿದ್ದ ರಾವಣನು ಅಲ್ಲಿಗೆ ಬಂದನು. ಅವನು ಸೀತೆಯನ್ನು ನಾನಾ ರೀತಿಯಲ್ಲಿ ಬೆದರಿಸಿ, ತನ್ನ ಪಟ್ಟದ ರಾಣಿಯಾಗುವಂತೆ ಒತ್ತಾಯಿಸಿದನು. ಆದರೆ ಸೀತೆಯು ಅವನ ಮುಖವನ್ನೂ ನೋಡದೆ, ನೆಲದ ಮೇಲಿದ್ದ ಒಂದು ಪುಟ್ಟ ಹುಲ್ಲುಕಡ್ಡಿಯನ್ನು ತನ್ನ ಮತ್ತು ಅವನ ನಡುವೆ ತಡೆಗೋಡೆಯಾಗಿ ಇಟ್ಟುಕೊಂಡಳು. ''ರಾವಣನೇ, ಸಮುದ್ರವನ್ನು ಮೀರಬಹುದು, ಆದರೆ ರಾಮನ ಬಾಣವನ್ನು ನೀನು ಮೀರಲಾರೆ. ನಿನ್ನ ಅಹಂಕಾರದ ಲಂಕೆ ಶೀಘ್ರದಲ್ಲೇ ಸ್ಮಶಾನವಾಗಲಿದೆ'' ಎಂದು ಗುಡುಗಿದಳು ಸೀತೆ. ರಾವಣನು ಕ್ರೋಧದಿಂದ ಅವಳಿಗೆ ಒಂದು ತಿಂಗಳ ಗಡುವು ನೀಡಿ ಅಲ್ಲಿಂದ ತೆರಳಿದನು.

ರಾವಣನು ಹೋದ ಮೇಲೆ ಸೀತೆಯ ದುಃಖದ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special

ಯೂಟ್ಯೂಬ್ ಚಾನೆಲ್‌ನಲ್ಲಿ

ಕಟ್ಟೆಯೊಡೆಯಿತು. ವಿರಹದ ವೇದನೆ ತಾಳಲಾರದೆ, ರಾಮನು ಬರುವುದು ತಡವಾಗುತ್ತಿದೆ ಎಂದು ಭಾವಿಸಿದ ಅವಳು, ಪ್ರಾಣತ್ಯಾಗ ಮಾಡುವುದೇ ಲೇಸೆಂದು ನಿರ್ಧರಿಸಿದಳು. ಆ ಕ್ಷಣದಲ್ಲಿ ಹನುಮಂತನಿಗೆ ಸುಮ್ಮನಿರಲು ಸಾಧ್ಯವಾಗಲಿಲ್ಲ. ಸೀತೆಯನ್ನು ಆ ಅತೀವ ಹತಾಶೆಯಿಂದ ಹೊರತರಲು ಅವನು ಒಂದು ದೈವಿಕ ಉಪಾಯ ಮಾಡಿದನು. ಮರದ ಮೇಲಿಂದಲೇ ಅತ್ಯಂತ ಮಧುರವಾದ ಧ್ವನಿಯಲ್ಲಿ ಶ್ರೀರಾಮನ ಗುಣಗಾನ ಮಾಡಲು ಆರಂಭಿಸಿದನು. ರಾಮನ



ಜನನ, ವಿಶ್ವಾಮಿತ್ರರ ಜತೆಗಿನ ಯಾನ, ಸೀತಾಕಲ್ಯಾಣ ಮತ್ತು ವನವಾಸದವರೆಗಿನ ಕಥೆಯನ್ನು ಅಮೃತದ ಸವಿಯಂತೆ ಹಾಡಿದನು. ಆ ಮಾತುಗಳು ಸೀತೆಯ ಕಿವಿಗೆ ಬಿದ್ದಾಗ ಅವಳು ಸ್ತಬ್ಧಳಾದಳು. ಈ ಪಾಪಿಗಳ ನಾಡಿನಲ್ಲಿ ರಾಮನ ಕಥೆಯನ್ನು ಹೇಳುತ್ತಿರುವ ಆ ಪುಣ್ಯಾತ್ಮ ಯಾರು? ಎಂದು ಅವಳು ಮೇಲೆ ನೋಡಿದಳು.

ತಕ್ಷಣವೇ ಹನುಮಂತನು ತಾನು ತಂದಿದ್ದ ಶ್ರೀರಾಮನ ಮುದ್ರಿಕೆಯನ್ನು (ಉಂಗುರ) ಸೀತೆಯ ಮಡಿಲಿಗೆ ಬೀಳುವಂತೆ ಕೆಳಗೆ ಹಾಕಿದನು.

ರಾಮ ನಾಮ ಅಂಕಿತ ಅತಿ ಸುಂದರ।
ಚಕಿತ ಚಿತ್ತ ಮುದರೀ ಪಹಚಾನೀ ॥

ಆ ಸುಂದರವಾದ ಮುದ್ರಿಕೆಯನ್ನು ಕಂಡೊಡನೆ ಸೀತೆಯ ಹೃದಯದ ಬಡಿತ ಜೋರಾಯಿತು. ಅದರ ಮೇಲೆ ಕೆತ್ತಿದ್ದ 'ರಾಮ' ಎಂಬ ಅಕ್ಷರಗಳನ್ನು ಕಂಡಾಗ ಅವಳ ಕಣ್ಣುಗಳಿಂದ ಆನಂದಬಾಷ್ಪ ಸುರಿಯಿತು. ಇದು ರಾವಣನ ಮಾಯೆಯಲ್ಲ, ಇದು ನನ್ನ ಪ್ರಭುವಿನದ್ದೇ ಮುದ್ರಿಕೆ ಎಂದು ಅದನ್ನು ಕಣ್ಣಿಗೊತ್ತಿಕೊಂಡಳು. ಹನುಮಂತನು ಮೆಲ್ಲನೆ ಕೆಳಗಿಳಿದು ಬಂದು ವಿನಯದಿಂದ ತಲೆಬಾಗಿ ನಮಸ್ಕರಿಸಿ, ''ತಾಯಿ, ನಾನು ರಾಮನ ಸೇವಕ. ನಿನ್ನ ವಿರಹದಲ್ಲಿ ಬೆಂದು ಹೋಗುತ್ತಿರುವ ಪ್ರಭುವಿನ ಸಂದೇಶವನ್ನು ತಂದಿದ್ದೇನೆ. ನೀನು ಅನಾಥೆಯಲ್ಲ, ಇಡೀ ವಾನರ ಸೈನ್ಯವೇ ನಿನ್ನ ರಕ್ಷಣೆಗಾಗಿ ಸಜ್ಜಾಗಿದೆ'' ಎಂದು ಹೇಳಿದಾಗ ಸೀತೆಯ ಮೊಗದಲ್ಲಿ ಸೂರ್ಯೋದಯದಂಥ ಭರವಸೆ ಮೂಡಿತು. ಒಬ್ಬ ಸಜ್ಜನ ಭಕ್ತನ ಭೇಟಿಯು ಕೇವಲ ಸಮಾಧಾನವನ್ನಷ್ಟೇ ಅಲ್ಲ, ಸಾವಿನ ಅಂಚಿನಲ್ಲಿದ್ದ ಜೀವಕ್ಕೆ ಹೊಸ ಚೈತನ್ಯವನ್ನೇ ನೀಡಬಲ್ಲದು ಎಂಬುದಕ್ಕೆ ಈ ಪ್ರಸಂಗವೇ ಸಾಕ್ಷಿ. ಹನುಮಂತನ ಭಕ್ತಿ ಮತ್ತು ರಾಮನ ಮುದ್ರಿಕೆಯು ಅಶೋಕವನದಲ್ಲಿದ್ದ ಕತ್ತಲೆಯನ್ನು ಓಡಿಸಿ ವಿಜಯದ ಮುನ್ಸೂಚನೆ ನೀಡಿತು.

ನಮಗೂ ಜೀವನದಲ್ಲಿ ಕೆಲವೊಮ್ಮೆ ಕಷ್ಟಗಳ ಸರಣಿ ಮುಗಿಯುವುದೇ ಇಲ್ಲ. ಇನ್ನು ನಮ್ಮಿಂದ ಸಹಿಸಲಾಗದು ಎನ್ನುವ ಸ್ಥಿತಿ ತಲುಪುವ ಹೊತ್ತಿಗೆ, ಭಗವಂತನಿಂದ ಯಾವುದೋ ಒಂದು ರೀತಿಯ ಬೆಳಕಿನ ಸಂದೇಶವನ್ನು ಹೊತ್ತ ಜೀವ ನಮ್ಮ ನೆರವಿಗೆ ಬಂದಿರುತ್ತದೆ. ಅವರು ಯಾರು, ಹೇಗೆ, ಎಲ್ಲಿಂದ ಬಂದರು? ಎಂದು ಯೋಚಿಸುವ ವ್ಯವಧಾನವೂ ನಮಗಿರುವುದಿಲ್ಲ. ಆದರೆ ಸಮಯಕ್ಕೆ ಸರಿಯಾಗಿ ನಮ್ಮ ಕಷ್ಟಕ್ಕೆ ನೆರವಾಗಿ ನಿಲ್ಲುವ ಹೃದಯವಂತಿಕೆ ಅವರಿಗಿರುತ್ತದೆ. ಇದು ಭಗವಂತನ ಅನುಗ್ರಹ ಅಲ್ಲವೇ? ಇದನ್ನು ನಾವೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಖಂಡಿತ ಪಡೆದಿರುತ್ತೇವೆ.

ಸಮಾಚಾರ ಸಣ್ಣದಲ್ಲ

ವೈಶಾಲಿಗೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಪ್ರಶಸ್ತಿ

ದೆಹಲಿ: ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಅವರು ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಯನ್ನು ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಅವರು ಈ ಸಾಧನೆಗೆ ಪಾತ್ರರಾದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು. ಅಂತಿಮ ಸುತ್ತಿನಲ್ಲಿ ವೈಶಾಲಿ ಅವರು ರಷ್ಯಾದ ಕ್ಯಾತರಿನಾ ಲಾಗ್ನೊ ಅವರನ್ನು ಸೋಲಿಸಿ ಈ ಸಾಧನೆಗೈದರು. ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿನ ಗೆಲುವು ಕಳೆದ ಮೂರು ವರ್ಷಗಳಲ್ಲಿ ವೈಶಾಲಿ ಗೆದ್ದ ಮೂರನೇ ದೊಡ್ಡ ಟೂರ್ನಿಯಾಗಿದೆ. 24 ವರ್ಷದ ಅವರು ಎರಡು ಬಾರಿ ಫಿಡೆ ಗ್ರ್ಯಾಂಡ್ ಸ್ವಿಸ್ ಪಂದ್ಯಾವಳಿ ಗೆದ್ದಿದ್ದರಲ್ಲದೆ, 2024ರಲ್ಲಿ ಮಹಿಳಾ ಒಲಿಂಪಿಯಾಡ್ ಗೆಲುವಿನ ತಂಡದ ಆಟಗಾರ್ತಿಯಾಗಿದ್ದರು. ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಅಂತಿಮ ಸುತ್ತಿನ ಗೆಲುವಿನ ನಂತರ 8.5 ಅಂಕ ಗಳಿಸಿದ ವೈಶಾಲಿ ಅರ್ಧ ಪಾಯಿಂಟ್ ಅಂತರದಿಂದ ಅಗ್ರಸ್ಥಾನ ಪಡೆದರು. ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ (8) ಎರಡನೇ ಸ್ಥಾನ ಪಡೆದರು.

ಶನಿವಾರ ಧೋನಿ ಐಪಿಎಲ್ ಕಣಕ್ಕೆ?

ಹೈದರಾಬಾದ್: ಚೆನ್ನೈ ಸೂಪರ್ ಕಿಂಗ್ಸ್ ತಂಡದ ದಿಗ್ಗಜ ಆಟಗಾರ ಎಂಎಸ್ ಧೋನಿ ತಂಡಕ್ಕೆ ಸದ್ಯದಲ್ಲೇ ಮರಳುವ ಸೂಚನೆ ಹೊರಬಿದ್ದಿದೆ. ಅವರು ಚೆನ್ನೈ ತಂಡದೊಂದಿಗೆ ಹೈದರಾಬಾದ್‌ಗೆ ಪ್ರಯಾಣ ಬೆಳೆಸಿದ್ದಾರೆ. ಹೀಗಾಗಿ ಅವರು ಶನಿವಾರದ ಪಂದ್ಯದಲ್ಲಿ ಕಣಕ್ಕಿಳಿಯುವ ಸಾಧ್ಯತೆಯಿದೆ. ತೊಡೆಸಂದು ಗಾಯದಿಂದಾಗಿ ಈ ಐಪಿಎಲ್ ಋತುವಿನ ಮೊದಲ ಎರಡು ವಾರಗಳ ಕಾಲ ಹೊರಗುಳಿದಿದ್ದ ಧೋನಿ, ಈ ಹಿಂದೆ ಗುವಾಹಟಿ ಮತ್ತು ಬೆಂಗಳೂರಿಗೆ ಚೆನ್ನೈ ತಂಡದ ಪ್ರವಾಸಗಳಿಂದ ಹೊರಗುಳಿದಿದ್ದರು. ಸಿಎಸ್‌ಕೆ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳು ತಂಡದೊಂದಿಗೆ ಧೋನಿ ಪ್ರಯಾಣಿಸಿದ ಹೃದಯಸ್ಪರ್ಶಿ ವಿಡಿಯೊವನ್ನು ಹಂಚಿಕೊಂಡಿವೆ. ಆ ಕ್ಲಿಪ್‌ನಲ್ಲಿ, ಫಿಟ್ ಆಗಿ ಕಾಣುವ ಧೋನಿ ಚೆನ್ನೈನಲ್ಲಿ ತಂಡದ ಬಸ್ ಹತ್ತಿದ್ದಾರೆ. ಧೋನಿ ಈ ಬಾರಿ ಪೂರ್ಣ ಪ್ರಮಾಣದಲ್ಲಿ ಆಡುವುದು ಅನುಮಾನವಾಗಿದ್ದರೂ, ಇಂಪ್ಯಾಕ್ಟ್ ಬ್ಯಾಟರ್ ಆಗಿ ಕಣಕ್ಕಿಳಿಯಬಹುದು.

ಪ್ರಭ್‌ಸಿಮ್ರನ್, ಶ್ರೇಯಸ್ ಅಯ್ಯರ್ ಭರ್ಜರಿ ಬ್ಯಾಟಿಂಗ್

ಪಂಜಾಬ್ ಅಬ್ಬರಕ್ಕೆ ಮುಂಬೈ ತತ್ತರ

ಮುಂಬೈ: ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಉತ್ತಮ ನಿರ್ವಹಣೆ ತೋರಿದ ಪಂಜಾಬ್ ಕಿಂಗ್ಸ್ ತಂಡವು ಗುರುವಾರ ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ 7 ವಿಕೆಟ್ ಅಂತರದ ಗೆಲುವು ಸಾಧಿಸಿತು. ಈ ಗೆಲುವಿನೊಂದಿಗೆ ಹಾಲಿ ಆವೃತ್ತಿಯಲ್ಲಿ ತನ್ನ ಅಜೇಯ ಓಟ ಮುಂದುವರಿಸಿ, ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ತನ್ನದಾಗಿಸಿಕೊಂಡಿತು.

ಇಲ್ಲಿನ ವಾಂಖೆಡೆ ಕ್ರಿಕೆಟ್ ಸ್ಟೇಡಿಯಂನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ತಂಡವು ಬೌಲಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಮುಂಬೈ ತಂಡವು ಕ್ವಿಂಟನ್ ಡಿ ಕಾಕ್ ಅವರ ಶತಕದ ನೆರವಿನಿಂದ 6 ವಿಕೆಟ್‌ಗೆ 195 ರನ್ ಬಾರಿಸಿತು. ಪಂಜಾಬ್ ಯಾವುದೇ ಒತ್ತಡವಿಲ್ಲದೆ 16.3 ಓವರ್‌ಗಳಲ್ಲಿ ಕೇವಲ 3 ವಿಕೆಟ್ ನಷ್ಟಕ್ಕೆ 198 ರನ್ ಬಾರಿಸಿ ಸುಲಭ ಗೆಲುವನ್ನು ತನ್ನದಾಗಿಸಿಕೊಂಡಿತು.

ಪಂಜಾಬ್ ಕೂಡ ಮುಂಬೈನಂತೆ ಆರಂಭಿಕ ಆಘಾತ ಎದುರಿಸಿತು. ಪ್ರಿಯಾಂಶ್ ಆರ್ಯ(15) ಮತ್ತು ಕೂಪರ್ ಕೊನೋಲಿ(17) ವಿಕೆಟ್ ಬೇಗನೆ ಕಳೆದುಕೊಂಡಿತು. ಆದರೆ ನಾಯಕ ಶ್ರೇಯಸ್ ಅಯ್ಯರ್ ಮತ್ತು ಪ್ರಭ್‌ಸಿಮ್ರನ್ ಸಿಂಗ್ ಬಿರುಸಿನ ಬ್ಯಾಟಿಂಗ್ ಮೂಲಕ ತಂಡವನ್ನು ಆಧರಿಸಿದರು. ಪ್ರಭ್‌ಸಿಮ್ರಾನ್ ಅಜೇಯರಾಗಿ ಉಳಿದು ತಂಡವನ್ನು ಗೆಲುವಿನ ದಡ ಸೇರಿಸಿದದರು. ಅಯ್ಯರ್ 35 ಎಸೆತಗಳಲ್ಲಿ 66 ರನ್ ಬಾರಿಸಿದರೆ, ಪ್ರಭ್‌ಸಿಮ್ರನ್ 39 ಎಸೆತಗಳಿಂದ 80 (ಅಜೇಯ) ರನ್ ಬಾರಿಸಿದರು. ಮುಂಬೈ ತಂಡದ ಬೌಲರ್ ಜಸ್ಪ್ರೀತ್ ಬುಮ್ರಾ ಈ ಪಂದ್ಯದಲ್ಲಿಯೂ ವಿಕೆಟ್ ಪಡೆಯಲು ವಿಫಲರಾದರು.

ಇದಕ್ಕೂ ಮೊದಲು ಬ್ಯಾಟಿಂಗ್ ನಡೆಸಿದ ಮುಂಬೈಗೆ, ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್ ಆಘಾತ ನೀಡಿದರು. ತಾನೆಸೆದ ಎರಡನೇ ಓವರ್‌ನಲ್ಲಿ ರಯಾನ್ ರಿಕೆಲ್ಟನ್(2) ಮತ್ತು ಸೂರ್ಯಕುಮಾರ್ ಯಾದವ್ (0) ವಿಕೆಟ್ ಪಡೆದರು. ಆದರೆ ಮೂರನೇ ವಿಕೆಟ್‌ಗೆ ಜತೆಯಾದ ಕ್ವಿಂಟನ್ ಡಿ ಕಾಕ್ ಮತ್ತು ನಮನ್ ಧೀರ್ ದೀರ್ಘ ಜತೆಯಾಟ ಪ್ರದರ್ಶಿಸಿ ತಂಡಕ್ಕೆ ಆಸರೆಯಾದರು.

ಡಿ ಕಾಕ್ ಶತಕ ವ್ಯರ್ಥ

ಗಾಯದಿಂದಾಗಿ ಈ ಪಂದ್ಯದಿಂದ ಹೊರಗುಳಿದ ರೋಹಿತ್ ಶರ್ಮ ಬದಲು, ಹಾಲಿ ಐಪಿಎಲ್ ಆವೃತ್ತಿಯಲ್ಲಿ ಮೊದಲ ಪಂದ್ಯವಾಡಿದ ಡಿ ಕಾಕ್ ಆಕರ್ಷಕ ಶತಕ ಬಾರಿಸಿ ತನ್ನ ಆಯ್ಕೆಯನ್ನು ಸಮರ್ಥಿಸಿಕೊಂಡರು. ಆರಂಭದಿಂದಲೇ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದ ಅವರು 60 ಎಸೆತಗಳಿಂದ 7 ಸಿಕ್ಸರ್ ಮತ್ತು 8 ಬೌಂಡರಿ ನೆರವಿನಿಂದ ಅಜೇಯ 112 ರನ್ ಗಳಿಸಿದರು. ನಮನ್ ಧೀರ್(50) ಅರ್ಧಶತಕ ಬಾರಿಸಿದರೆ, ಹಾರ್ದಿಕ್ ಪಾಂಡ್ಯ 14 ರನ್ ಗಳಿಸಿದರು. ಪಂಜಾಬ್ ಪರ ಮಾರಕ ಬೌಲಿಂಗ್ ದಾಳಿ ನಡೆಸಿದ ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್ 22 ರನ್‌ಗೆ 3 ವಿಕೆಟ್ ಪಡೆದು ಮಿಂಚಿದರು.

ಸೋತರೆ ಕೆಕೆಆರ್‌ಗೆ ಪ್ಲೇ ಆಫ್ ಅವಕಾಶ ಕಷ್ಟ

ಗುಜರಾತ್‌ಗಿಂದು ಕೋಲ್ಕತ್ತಾ ಎದುರಾಳಿ

ಅಹಮದಾಬಾದ್: ಇಲ್ಲಿನ ಮೋದಿ ಸ್ಟೇಡಿಯಂನಲ್ಲಿ ಶುಕ್ರವಾರ ನಡೆಯಲಿರುವ ಐಪಿಎಲ್ ಟೂರ್ನಿಯಲ್ಲಿ ಅತಿಥೇಯ ಗುಜರಾತ್ ತಂಡವು ಕೋಲ್ಕತ್ತಾವನ್ನು ಎದುರಿಸಲಿದೆ.

ಶುಭ್‌ಮನ್ ಗಿಲ್ ನಾಯಕತ್ವದ ಗುಜರಾತ್ ತಂಡವು ಈಗಾಗಲೇ 4 ಪಂದ್ಯಗಳನ್ನು ಆಡಿದ್ದು 2 ಪಂದ್ಯಗಳನ್ನು ಗೆದ್ದು, 2 ಪಂದ್ಯಗಳಲ್ಲಿ ಸೋತು 4 ಅಂಕಗಳನ್ನು ಗಳಿಸಿದೆ. ಅಜಿಂಕ್ಯಾ ರಹಾನೆ ನಾಯಕತ್ವದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಆಡಿರುವ 5 ಪಂದ್ಯಗಳ ಪೈಕಿ 4ರಲ್ಲೂ ಸೋತಿದ್ದು, ಮಳೆ 1 ಪಂದ್ಯಕ್ಕೆ ಅಡ್ಡಿಯಾಗಿದ್ದರಿಂದ ಕೇವಲ 1 ಅಂಕ ಗಳಿಸಿದೆ.

ಮಾ.31ರಂದು ನಡೆದಿದ್ದ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಮತ್ತು ಏ.4ರಂದು ನಡೆದಿದ್ದ ಪಂದ್ಯದಲ್ಲಿ ರಾಜಸ್ಥಾನದ ವಿರುದ್ಧವೂ ಗುಜರಾತ್ ಸೋಲುಂಡಿತ್ತು. ಆದರೆ ಏ.8ರಂದು ಡೆಲ್ಲಿ ವಿರುದ್ಧ ಮತ್ತು ಏ.12ರಂದು ಲಖನೌ ವಿರುದ್ಧವೂ ಗುಜರಾತ್ ಟೈಟಾನ್ಸ್ ಗೆಲುವನ್ನು ಕಾಣುವ ಮೂಲಕ ಟೂರ್ನಿಯಲ್ಲಿ ಮತ್ತೆ ಲಯ ಕಂಡುಕೊಂಡಿತ್ತು. ಕೋಲ್ಕತ್ತಾ ತಂಡವು ಮಾ.29ರಂದು ಮುಂಬೈ ವಿರುದ್ಧ, ಏ.2ರಂದು ಹೈದರಾಬಾದ್ ವಿರುದ್ಧ, ಏ.9ರಂದು ಲಖನೌ ವಿರುದ್ಧ ಮತ್ತು ಏ.14ರಂದು ಚೆನ್ನೈ ವಿರುದ್ಧ ಸೋಲುಂಡರೆ, ಏ.6ರಂದು ಪಂಜಾಬ್ ವಿರುದ್ಧ ಮಳೆಯಿಂದಾಗಿ ಪಂದ್ಯ ನಡೆಯದ ಕಾರಣ 1 ಅಂಕ ಪಡೆಯಲು ಶಕ್ತವಾಯಿತು.

ತನ್ನ ತವರಿನಲ್ಲಿ ಪಂದ್ಯ ನಡೆಯುತ್ತಿರುವ ಕಾರಣ ಗುಜರಾತ್ ತಂಡಕ್ಕೆ ಸಹಜವಾದ ಒತ್ತಡ ಇರಲಿದ್ದು, ಪ್ರೇಕ್ಷಕರ ಬೆಂಬಲ ಸಿಗುವುದಂತೂ ಖಚಿತ. ಮೊದಲ 2 ಪಂದ್ಯ ಸೋತರೂ ಮತ್ತೆ ಪುಟಿದೆದ್ದಿರುವ ತಂಡದ ಬಗ್ಗೆ ಸಹಜವಾಗಿಯೇ ತವರಿನ ಅಭಿಮಾನಿಗಳಿಗೆ ಹೆಮ್ಮೆ ಇದೆ. ಆದರೆ ಮೊದಲ ಪಂದ್ಯದಿಂದಲೇ ಸೋತು ಸೊರಗುತ್ತಾ ಬರುತ್ತಿರುವ ಕೋಲ್ಕತ್ತಾ ತಂಡ ಈ ಆವೃತ್ತಿಯಲ್ಲಿ ಇನ್ನುಳಿದ ತನ್ನ ಪಂದ್ಯಗಳಿಂದ ಪ್ಲೇ ಆಫ್‌ಗೆ ಅವಕಾಶ ಗಿಟ್ಟಿಸುವುದೇ ಕಷ್ಟ ಎಂಬಂತಾಗಿದೆ.

ಇಂದಿನ ಪಂದ್ಯ

ಗುಜರಾತ್ VS ಕೋಲ್ಕತ್ತಾ

ತಾಣ	ಮೋದಿ ಸ್ಟೇಡಿಯಂ, ಅಹಮದಾಬಾದ್
ಸಮಯ	ರಾ. 7.30
ನೇರ ಪ್ರಸಾರ	ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್	ಜಿಯೋ ಹಾಟ್‌ಸ್ಟಾರ್

ಐಪಿಎಲ್ ಆಡಲು ಪ್ಯಾಟ್ ಕಮಿನ್ಸ್‌ಗೆ ಅವಕಾಶ: ಕ್ರಿಕೆಟ್ ಆಸ್ಟ್ರೇಲಿಯಾ ಸ್ಪಷ್ಟನೆ

ಹೈದರಾಬಾದ್‌ಗಿನ್ನು ಕಮಿನ್ಸ್ ಬಲ



ಹೈದರಾಬಾದ್: ಈ ಆವೃತ್ತಿಯ ಐಪಿಎಲ್‌ನ ದ್ವಿತೀಯಾರ್ಧಕ್ಕೂ ಮುನ್ನ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಶುಭ ಸುದ್ದಿಯೊಂದು ಲಭಿಸಿದೆ. ತಂಡದ ನಾಯಕ, ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್‌ಗೆ ಬೌಲಿಂಗ್ ಅನುಮತಿ ಸಿಕ್ಕಿದೆ. ಆದರೂ ಅವರು ಇದೇ ಶನಿವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಮುಂಬರುವ ಪಂದ್ಯದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಕಡಿಮೆ. ತಂಡಕ್ಕೆ ಮರಳಿದಾಕ್ಷಣ ಕಮಿನ್ಸ್ ಅವರು ನಾಯಕತ್ವ ವಹಿಸಿಕೊಳ್ಳಲಿದ್ದಾರೆ.

ಕಮ್ಮಿನ್ಸ್ ಅವರ ದೀರ್ಘಕಾಲದ ಬೆನ್ನುಮೂಳೆಯ ಸಮಸ್ಯೆ ಈಗ ಬಗೆಹರಿದಿದೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ದೃಢಪಡಿಸಿದೆ. ಅವರ ಅನುಪಸ್ಥಿತಿಯಲ್ಲಿ ಹೈದರಾಬಾದ್ ತಂಡಕ್ಕೆ ಇಶಾನ್ ಕಿಶನ್ ಅವರನ್ನು ಹಂಗಾಮಿ ನಾಯಕನಾಗಿ ನೇಮಕ ಮಾಡಲಾಗಿತ್ತು. ಇದೀಗ ದೇಹದ ಸ್ಕ್ಯಾನಿಂಗ್‌ಗಳ ನಂತರ ಪ್ಯಾಟ್ ಕಮ್ಮಿನ್ಸ್ ಅವರಿಗೆ ಬೌಲಿಂಗ್‌ಗೆ ಮರಳಲು ಅನುಮತಿ ನೀಡಲಾಗಿದೆ. ಸನ್‌ರೈಸರ್ಸ್ ಹೈದರಾಬಾದ್ ತಂಡವು ಆಡಿದ 5 ಪಂದ್ಯಗಳಲ್ಲಿ ಕೇವಲ 2 ಪಂದ್ಯಗಳನ್ನು ಗೆದ್ದಿದೆ.

ಬೌಲಿಂಗ್ ನಡೆಸಲು ಅನುಮತಿ ಸಿಕ್ಕಿದ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ಕಮಿನ್ಸ್, 'ನಾನು ಸದ್ಯದಲ್ಲೇ ಬೌಲಿಂಗ್‌ಗೆ ಮರಳಲಿದ್ದೇನೆ, ಪಂದ್ಯಾವಳಿಯ ಮಧ್ಯ ಭಾಗದ ವೇಳೆ ನಾನು ತಂಡಕ್ಕೆ ಸೇರ್ಪಡೆಯಾಗುತ್ತಿದ್ದು, ಫೈನಲ್‌ನಲ್ಲಿಯೂ ಆಡಲಿದ್ದೇನೆ' ಎಂದಿದ್ದಾರೆ. ಏ.25ರಂದು ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಅವರು ಆಡುವ ಹನ್ನೊಂದರ ಬಳಗದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು ಎಂದು ಹೈದರಾಬಾದ್ ತಂಡದ ಮೂಲಗಳು ತಿಳಿಸಿದೆ. ಪ್ರಫುಲ್ ಹಿಂಗೆ ಮತ್ತು ಸಕೀಬ್ ಹುಸೇನ್‌ರಂತಹ ಯುವ ಆಟಗಾರ ಮೂಲಕ ಇದೀಗ ಅದ್ಭುತ ಪ್ರದರ್ಶನಗಳನ್ನು ನೀಡುತ್ತಿರುವ ಹೈದರಾಬಾದ್ ತಂಡಕ್ಕೆ, ಪ್ಲೇಆಫ್ ರೇಸ್ ತೀವ್ರಗೊಳ್ಳುತ್ತಿದ್ದಂತೆ ಕಮ್ಮಿನ್ಸ್ ಅವರ ಪುನರಾಗಮನವು ಮತ್ತಷ್ಟು ಬಲ ನೀಡಲಿದೆ.

ಕಾಂಬ್ಳಿಗೆ ಬ್ರೈನ್‌ಸ್ಟ್ರೋಕ್ ಸಮಸ್ಯೆ

ದೆಹಲಿ: ಭಾರತದ ಮಾಜಿ ಕ್ರಿಕೆಟಿಗ ವಿನೋದ್ ಕಾಂಬ್ಳಿ ಅವರ ಆರೋಗ್ಯದ ಬಗ್ಗೆ ಮತ್ತೊಮ್ಮೆ ಕಳವಳಕಾರಿ ಮಾಹಿತಿ ಹೊರಬಿದ್ದಿದೆ. ಹಿಂದೊಮ್ಮೆ ಕ್ರಿಕೆಟ್ ಮೈದಾನದಲ್ಲಿ ತಮ್ಮ ಬ್ಯಾಟಿಂಗ್ ಪ್ರತಿಭೆಯಿಂದ ಬೌಲರ್‌ಗಳನ್ನು ಬೆವರಿಳಿಸಿದ್ದ ಕಾಂಬ್ಳಿ ಇದೀಗ ತೀವ್ರ ಚಲನಶೀಲತೆ ಮತ್ತು ಸ್ಮರಣಶಕ್ತಿಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಅವರ ಆಪ್ತ ಸ್ನೇಹಿತ ಮಾರ್ಕಸ್ ಕೌಟೊರವರು ಕಾಂಬ್ಳಿ ಅವರು ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ಬಹಿರಂಗಪಡಿಸಿದ್ದು, ಅವರ ಈ ಸ್ಥಿತಿ ಮೆದುಳಿನ ಪಾರ್ಶ್ವವಾಯುವಿಗೆ ಕಾರಣವಾಗಬಹುದು ಎಂದು ವೈದ್ಯರೂ ಎಚ್ಚರಿಸಿದ್ದಾಗಿಯೂ ಹೇಳಿದ್ದಾರೆ.

'ಖ್ಯಾತ ನರಶಸ್ತ್ರಚಿಕಿತ್ಸಕ ಡಾ.ಆದಿಲ್ ಛಗ್ಲಾ ಪ್ರಸ್ತುತ ಕಾಂಬ್ಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಕಾಂಬ್ಳಿಯವರು ಆಗಾಗ್ಗೆ ಹಲವಾರು ವಿಷಯಗಳನ್ನು ಮರೆತು ಬಿಡುತ್ತಾರೆ ಮತ್ತು ಇದ್ದಕ್ಕಿದ್ದಂತೆ ಕೆಲವು ವಿಷಯಗಳನ್ನು ನೆನಪಿಸಿಕೊಳ್ಳುತ್ತಾರೆ. ಅವರು ಮದ್ಯವನ್ನು ಸಂಪೂರ್ಣವಾಗಿ ತ್ಯಜಿಸಿದ್ದರೂ, ಸಿಗರೇಟ್ ವ್ಯಸನದೊಂದಿಗೆ ಹೋರಾಡುತ್ತಲೇ ಇದ್ದಾರೆ. ಆಗಾಗ ದಾರಿಹೋಕರು ಅಥವಾ ಆಟೋ ರಿಕ್ಷಾ ಚಾಲಕರಿಂದ ಸಿಗರೇಟ್ ಕೇಳುತ್ತಿರುತ್ತಾರೆ' ಎಂದು ಸ್ನೇಹಿತ ಮಾರ್ಕಸ್ ಕೌಟೊ ವಿವರಿಸಿದ್ದಾರೆ.

ಕಾಂಬ್ಳಿಯವರ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲೆಂದು, ಅವರ ಮಾಜಿ ಕ್ರಿಕೆಟ್ ಸ್ನೇಹಿತರು ವಾಟ್ಸಾಪ್ ಗುಂಪೊಂದನ್ನು ರಚಿಸಿದ್ದಾರೆ. ವೈದ್ಯಕೀಯ ಚಿಕಿತ್ಸೆ ಮತ್ತು ಮನೆಯ ವೆಚ್ಚಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಅನಾಮಧೇಯವಾಗಿ ಕಾಂಬ್ಳಿಯವರಿಗೆ ಆರ್ಥಿಕ ಸಹಾಯವನ್ನು ನೀಡುತ್ತಿದ್ದಾರೆ ಎಂದೂ ಮಾರ್ಕಸ್ ಕೌಟೊ ಹೇಳಿದ್ದಾರೆ.

ವಿಟಾಕೀಸ್

ಕರ್ನಾಟಕದ ಸಾಂಸ್ಕೃತಿಕ ಪರಂಪರೆಗಳಲ್ಲಿ ಒಂದಾದ ವೀರಗಾಸೆ ಕಲೆ ಹಾಗೂ ವೀರಭದ್ರ ದೇವರ ಇತಿಹಾಸವನ್ನು ತೆರೆದಿಡುವ 'ರುದ್ರಾಭಿಷೇಕಂ' ಚಿತ್ರೀಕರಣ ಪೂರ್ಣಗೊಂಡಿದ್ದು, ಮೇ ತಿಂಗಳಲ್ಲಿ ತೆರೆಗೆ ಬರಲಿದೆ. ಈಗಾಗಲೇ ತನ್ನ ಶೂಟಿಂಗ್ ಹಾಗೂ ಪೋಸ್ಟ್‌ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡಿರುವ ಈ ಚಿತ್ರ ಪ್ರೇಕ್ಷಕರಿಗೆ ದರ್ಶನ ಕೊಡಲಿದೆ. ಈ ಚಿತ್ರಕ್ಕೆ ವಸಂತ್ ಕುಮಾರ್ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ವೀರಗಾಸೆ ಕುಟುಂಬವೊಂದರ ಹಿನ್ನೆಲೆಯಲ್ಲಿ ಆ ಕಲೆಯ ಮೂಲ ಅದರ ಇತಿಹಾಸವನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ನಟ ವಿಜಯ ರಾಘವೇಂದ್ರ ಅವರು ವೀರಗಾಸೆ ಕಲಾವಿದ ಅಲ್ಲದೆ, ಇದೇ ಮೊದಲ ಬಾರಿಗೆ ತಂದೆ, ಮಗನಾಗಿ, ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬಿಗ್‌ಬಾಸ್ ಬೆಡಗಿ ಪ್ರಿಯಾಂಕಾ ತಿಮ್ಮೇಶ್ ಚಿತ್ರದ ನಾಯಕಿಯಾಗಿ ನಟಿಸಿದ್ದಾರೆ. ರುದ್ರಾಭಿಷೇಕಂ ಫ್ಯಾನ್ ಇಂಡಿಯಾ ಚಿತ್ರವಾಗಿದ್ದು, ನಿರ್ದೇಶಕ ವಸಂತ ಕುಮಾರ್ ಜತೆಗೆ ಮಂಜುನಾಥ ಕೆ.ಎನ್, ಎನ್.ಜಯರಾಮ್, ಕೆ.ವೆಂಕಟೇಶ್, ಚಿದಾನಂದ ಮೂರ್ತಿ, ಸುರೇಶ್ ಬಾಬು, ಅಶ್ವಥ್ ನಾರಾಯಣ, ಶಿವಕುಮಾರ್, ರವಿ ಕುಮಾರ್ ಚಿತ್ರ ನಿರ್ಮಾಣ ಮಾಡಿದ್ದಾರೆ.

ದೈವದ ಹಿನ್ನೆಲೆ ಇರುವ ಜನಪದ ಕಲೆಯನ್ನು ನಾಡಿನ ಮನೆ ಮನೆಗೂ ತಲುಪಿಸಬೇಕು ಎನ್ನುವುದೇ ನಮ್ಮ ಉದ್ದೇಶ. ನಾಯಕ ವಿಜಯ ರಾಘವೇಂದ್ರ ಕೂಡ ನಮಗೆ ತುಂಬಾ ಸಹಕಾರ ಕೊಟ್ಟಿದ್ದಾರೆ. ಚಿತ್ರದಲ್ಲಿ ನಾನೂ ಒಬ್ಬ ತತ್ವಜ್ಞಾನಿಯಾಗಿ ನಟಿಸಿದ್ದೇನೆ. ತಂದೆ, ಮಗ ಎರಡೂ ಪಾತ್ರಗಳ ಜತೆ ಇಡೀ ಚಿತ್ರದಲ್ಲಿ ಬರುವ ನನ್ನ ಪಾತ್ರಕ್ಕೆ ಎರಡು ಗೆಟಪ್ ಇದೆ ಎಂದೂ ನಿರ್ದೇಶಕ ವಸಂತ ಕುಮಾರ್ ಹೇಳಿದರು. ಕರಾವಳಿಯ ಗೋಕರ್ಣ, ಹೊನ್ನಾವರ, ಕುಮಟಾ, ಅಬ್ಬಕ್ಕ ಫೋರ್ಟ್ ಅಲ್ಲದೆ ಅಘನಾಶಿನಿ ಹಿನ್ನೀರಿನಲ್ಲಿ ಚಿತ್ರೀಕರಣ ನಡೆಸಲಾಗಿದೆ. ನಮ್ಮ ನಾಡಿನ ಜನಪದ ಹಿನ್ನೆಲೆ ಇಟ್ಟುಕೊಂಡು, ನೂರಾರು ವರ್ಷ ಗಳ ಇತಿಹಾಸ ಇರುವ ವೀರಗಾಸೆ ಕಲೆಯ ಮಹತ್ವ, ಇತಿಹಾಸವನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಈ ಕಥೆಯ ಮೂಲ ಹಂದರ ವೀರಭದ್ರ ದೇವರು. ಆತ ಹೇಗೆ ಬಂದ, ಆತ ಬರಲು ಕಾರಣವೇನು ಎಂಬುದನ್ನು ರುದ್ರಾಭಿಷೇಕಂ ಚಿತ್ರ ಹೇಳುತ್ತದೆ. ವಿ.ಮನೋಹರ್, ಮನು, ಸನತ್, ಬುಲೆಟ್ ವಿನು, ಮಮತಾ ತುರುವೇಕೆರೆ, ನವನಿತಾ ಶೆಟ್ಟಿ, ಮಂಜುಳಾ ಹಾಗೂ ಇತರರು ಪ್ರಮುಖ ಪಾತ್ರದಲ್ಲಿದ್ದಾರೆ. ವಿ. ಮನೋ ಹರ್ ಅವರ ಸಂಗೀತ ಸಂಯೋಜನೆ, ಮುತ್ತುರಾಜ್ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಮೇನಲ್ಲಿ ರುದ್ರಾಭಿಷೇಕಂ ದರ್ಶನ

ಮನಗೆದ್ದ ಲವ್ ಸೀಸನ್ಸ್

ಕನ್ನಡ ಚಿತ್ರರಂಗಕ್ಕೆ ಮತ್ತೊಂದು ಹೊಸಬರ ತಂಡದ ಆಗಮನವಾಗಿದ್ದು ಲವ್ ಸೀಸನ್ ಶೀರ್ಷಿಕೆಯಲ್ಲಿ ಸಿನಿಮಾ ನಿರ್ಮಾಣ ಮಾಡಿದೆ. ಇತ್ತೀಚೆಗಷ್ಟೇ ಶೂಟಿಂಗ್ ಮುಗಿಸಿದ ಚಿತ್ರತಂಡ ಈಗ ಟೀಸರ್ ರಿಲೀಸ್ ಮಾಡುವ ಮೂಲಕ ಪ್ರೇಕ್ಷಕರ ಮನಸೆಳೆದಿದೆ. ಲವ್ ಸೀಸನ್ ಶೀರ್ಷಿಕೆಯೇ ಹೇಳುವಂತೆ ,ನವಿರಾದ ಪ್ರೇಮ ಕಥೆಯನ್ನು ಒಳಗೊಂಡಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ. ಹಿರಿಯ ನಟ ರಾಜೇಶ್ ನಟರಂಗ, ಸಂಗೀತಾ, ಮಂಡ್ಯ ರಮೇಶ್, ಜಯತೀರ್ಥ, ಚೇತನ್ ದುರ್ಗ, ಕಾಮಿಡಿ ಕಿಲಾಡಿ ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರು ಸಿನಿಮಾದಲ್ಲಿ ನಟಿಸಿದ್ದಾರೆ.

ಎನ್.ಆರ್ ಮಂಜುನಾಥ ಈ ಚಿತ್ರದ ಮೂಲಕ ನಿರ್ಮಾಪಕರಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಕ್ಷತ್ರಿಯ, ಬುದ್ಧಿವಂತ 2, ಗುರುದೇವ ಹೊಯ್ಸಳ ಮುಂತಾದ ಚಿತ್ರಗಳಲ್ಲಿ ಕಾರ್ಯನಿರ್ವಹಿಸಿರುವ ಕೃತ್ವಿಕ್, ಲವ್ ಸೀಸನ್ಸ್ ಚಿತ್ರಕ್ಕೆ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಈ ಸಿನಿಮಾದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಮುಕುಂದ ರಾಮಸ್ವಾಮಿ ನಾಯಕನಾಗಿ ನಟಿಸಿದ್ದು, ದಿಯಾ ಕೀರ್ತಿ ಮತ್ತು ಚಂದನಾ ಗೌಡ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ.

ಲವ್ ಸೀಸನ್ಸ್ ಲವ್‌ಸ್ಟೋರಿ ಸಿನಿಮಾವಾಗಿದೆ. ಈ ಚಿತ್ರ ಹೊಸಬರ ತಂಡದಿಂದ ನಿರ್ಮಾಣವಾದರೂ, ಅದ್ಭುತವಾಗಿ ಮೂಡಿ ಬಂದಿದೆ. ಒಂದೊಳ್ಳೆಯ ಸಿನಿಮಾದಲ್ಲಿ ನಟಿಸಿದ ಖುಷಿ ಇದೆ ಎಂದು ರಾಜೇಶ್ ನಟರಂಗ ಹೇಳಿದರು. ಈ ಚಿತ್ರದಲ್ಲಿ ಒಳ್ಳೆಯ ಪಾತ್ರ ಸಿಕ್ಕಿದ ಖುಷಿಯಿದೆ. ನಿರ್ದೇಶಕರು ಅದ್ಭುತ ಕಥೆ ಹೆಣೆದಿದ್ದು ಅದನ್ನು ಅಷ್ಟೇ ಸೊಗಸಾಗಿ ತೆರೆಯಲ್ಲಿ ನಿರೂಪಿಸಿದ್ದಾರೆ ಎಂದು ಸಂಗೀತಾ ಸಂತಸದಿಂದ ನುಡಿದರು. ನಮ್ಮ ಚಿತ್ರದ ಶೂಟಿಂಗ್ ಮುಕ್ತಾಯ ವಾಗಿದ್ದು, ಟೀಸರ್ ರಿಲೀಸ್ ಆಗಿದೆ. ಆ ಬಳಿಕ ಟ್ರೇಲರ್ ಹಾಗೂ ಹಾಡು ಬಿಡುಗಡೆಯಾಗ ಲಿದೆ. ನಂಬಿಕೆಯ ಆಧಾರದಲ್ಲಿ ಸಿನಿಮಾದ ಕಥೆ ಸಾಗಲಿದೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಸ್ಟೋರಿಯಾಗಿದ್ದು, ಸಿನಿಪ್ರಿಯರಿಗೆ ಹಿಡಿಸಲಿದೆ. ಬೆಂಗಳೂರು ಸುತ್ತಮುತ್ತ ಸಿನಿಮಾದ ಚಿತ್ರೀಕರಣ ನಡೆಸಲಾಗಿದೆ ಎಂದು ನಿರ್ದೇಶಕ ಕೃತ್ವಿಕ್ ಹೇಳಿದರು.

ಎನ್.ಆರ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಎನ್.ಆರ್ ಮಂಜುನಾಥ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಚಿತ್ರದ ಹಾಡುಗಳಿಗೆ ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿದ್ದು, ವೀರ್ ಸಮರ್ಥ್ ಸಂಗೀತ ಸಂಯೋಜಿಸಿದ್ದಾರೆ. ಅವಿನಾಶ ಶಾಸ್ತ್ರಿ ಛಾಯಾಗ್ರಹಣ, ಮಧು ತುಂಬಕೆರೆ ಸಂಕಲನ, ಭಜರಂಗಿ ಮೋಹನ್ ನೃತ್ಯ ಈ ಚಿತ್ರಕ್ಕಿದೆ.

ಸರಿಗಮಪ ಲಿಟಲ್ ಚಾಂಪ್ಸ್

ಪುಟ್ಟ ಗಾಯಕರ ವೈಭವ

ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಕಾರ್ಯಕ್ರಮದ ಯಶಸ್ಸಿನ ನಂತರ, ಜೀ ಕನ್ನಡ ವಾಹಿನಿಯು ಸಂಗೀತದ ಮಾಯಾಲೋಕವನ್ನು ಮರಳಿ ತರಲು ಸಜ್ಜಾಗಿದೆ. ಅಸಾಧಾರಣ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವಲ್ಲಿ ಹೆಸರುವಾಸಿಯಾದ ಜನಪ್ರಿಯ ಗಾಯನ ರಿಯಾಲಿಟಿ ಶೋ ಸರಿಗಮಪ ಲಿಟಲ್ ಚಾಂಪ್ಸ್, ಮತ್ತೊಮ್ಮೆ ಪ್ರೇಕ್ಷಕರನ್ನು ರಂಜಿಸಲು ಸಿದ್ಧವಾಗಿದೆ. ಮೂರರಿಂದ ಹದಿನೈದು ವರ್ಷದೊಳಗಿನ ಪುಟಾಣಿ ಪ್ರತಿಭೆಗಳು ಭಾಗವಹಿಸುವ ಈ ಸೀಸನ್, ಕರ್ನಾಟಕದ ಮೂಲೆ ಮೂಲೆಯ ಕಿರಿಯ ಗಾಯಕರ ಅದ್ಭುತ ಪ್ರದರ್ಶನಗಳು ಮತ್ತು ಮರೆಯ ಲಾಗದ ಸಂಗೀತದ ಕ್ಷಣಗಳಿಗೆ ಸಾಕ್ಷಿಯಾಗಲಿದೆ. ಸರಿಗಮಪ ಲಿಟಲ್ ಚಾಂಪ್ಸ್ ಇದೇ ಶನಿವಾರ ಆರಂಭವಾಗಲಿದೆ. ಸೀಸನ್‌ನಲ್ಲಿ ಅಪ್ರತಿಮ ಪ್ರತಿಭೆ ಹೊಂದಿರುವ ಪುಟ್ಟ ಗಾಯಕರು ತಮ್ಮ ದನಿಯ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಲಿದ್ದಾರೆ. ಮನರಂಜನೆ ಮತ್ತು ಭಾವನೆಗಳ ಸಮ್ಮಿಶ್ರಣವಾಗಿರುವ ಈ ಕಾರ್ಯಕ್ರಮವು, ಉದಯೋನ್ಮುಖ ಗಾಯಕರಿಗೆ ವೇದಿಕೆಯನ್ನು ಕಲ್ಪಿಸಿಕೊಡುವುದರ ಜತೆಗೆ ಸಂಗೀತದ ಸಂಭ್ರಮವನ್ನು ಆಚರಿಸಲಿದೆ. ಗಾಯಕ ರಾಜೇಶ್ ಕೃಷ್ಣನ್, ವಿಜಯ್ ಪ್ರಕಾಶ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ತೀರ್ಪುಗಾರರಾಗಿದ್ದು ಸ್ಪರ್ಧಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ತಮ್ಮ ಅಪಾರ ಅನುಭವದ ಮೂಲಕ ಪುಟಾಣಿ ಪ್ರತಿಭೆಗಳು ವೇದಿಕೆಯ ಮೇಲೆ ಮಿಂಚಲು ಇವರು ಸ್ಫೂರ್ತಿಯಾಗಲಿದ್ದಾರೆ. ಸಂಗೀತ ಸಂಭ್ರಮದ ಜತೆಗೆ ಸ್ಪರ್ಧಿಗಳ ಪಯಣ ಮತ್ತು ಹಾಸ್ಯ ಸನ್ನಿವೇಶಗಳ ತುಣುಕುಗಳನ್ನು ಆನಂದಿಸಬಹುದಾಗಿದೆ.

ಯುವ ಚಿತ್ರಕ್ಕೆ ಸೂರಿ ನಿರ್ದೇಶನ

ದೊಡ್ಮನೆ ಮೊಮ್ಮಗ ಯುವರಾಜ್ ಕುಮಾರ್, ಯುವ ಸಿನಿಮಾದ ಮೂಲಕ ಚಂದನವನಕ್ಕೆ ಪರಿಚಿತರಾದರು. ಆ ಬಳಿಕ ರೋಹಿತ್ ಪದಕಿ ನಿರ್ದೇಶನದ ಸಿನಿಮಾದಲ್ಲಿ ಎಕ್ಕನಾಗಿ ಅಬ್ಬರಿಸಿದರು. ಈ ಎರಡು ಸಿನಿಮಾಗಳು ಯುವ ಅವರಿಗೆ ಯಶಸ್ಸು ತಂದು ಕೊಟ್ಟವು. ಹೀಗಿರುವಾಗಲೇ ಯುವ ಅವರ ಮುಂದಿನ ಸಿನಿಮಾ ಯಾವುದು ಎಂಬ ಕುತೂಹಲ ಸಹಜವಾಗಿಯೇ ಕಾಡುತ್ತಿದೆ. ಯುವ ಮುಂದೆ ಸುಕ್ಕ ಸೂರಿ ನಿರ್ದೇಶನದ ಸಿನಿಮಾಗಳಲ್ಲಿ ಅಭಿನಯಿಸುವುದು ಬಹುತೇಕ ಖಚಿತವಾಗಿದೆ. ಈಗಾಗಲೇ ಸೂರಿ ತಮ್ಮ ಹೊಸ ಸಿನಿಮಾದ ಚಿತ್ರಕಥೆ ಬರೆಯುತ್ತಿದ್ದು, ಇನ್ನೇನು ಸಿನಿಮಾ ಕೂಡ ಸೆಟ್ಟೇರಲಿದೆ. ಸೂರಿ ಸಿನಿಮಾಗಳು ಎಂದರೆ ರಾ ಸ್ಟೈಲ್‌ನಲ್ಲಿ ಮೂಡಿಬರಲಿವೆ. ಹಾಗಾಗಿ ಯುವ ನಾಯಕನಾಗಿ ಅಭಿನಯಿಸಲಿರುವ ಹೊಸ ಸಿನಿಮಾ ಕೂಡ ರಾ ಸ್ಟೈಲ್‌ನಲ್ಲಿಯೇ ಮೂಡಿಬರಲಿದೆ. ಯುವ ಹೊಸ ಲುಕ್‌ನಲ್ಲಿ ಅಬ್ಬರಿಸಲಿದ್ದಾರೆ.

ಇನ್ನು ಈ ಸಿನಿಮಾದ ಬಳಿಕ ಯುವ, ನರ್ತನ್ ನಿರ್ದೇಶನದ ಸಿನಿಮಾಗಳಲ್ಲಿ ಅಭಿನಯಿಸಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ಹಿಂದೆ ಮಫ್ತಿ ಸಿನಿಮಾವನ್ನು ನಿರ್ದೇಶನ ಮಾಡಿದ ನರ್ತನ್, ಬಳಿಕ ಭೈರತಿ ರಣಗಲ್ ಸಿನಿಮಾವನ್ನು ನಿರ್ದೇಶನ ಮಾಡಿ ಗಮನಸೆಳೆದಿದ್ದರು. ಅಂತೆಯೇ ಈಗ ಯುವ ಅಭಿನಯದ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ಇದು ಅಂಡರ್ ವರ್ಲ್ಡ್ ಸಿನಿಮಾವಾಗಿರಲಿದೆ ಎಂಬ ನಿರೀಕ್ಷೆಯೂ ಇದೆ. ಈ ವರ್ಷವೇ ಯುವ ನಟಿಸಲಿರುವ ಎರಡು ಸಿನಿಮಾಗಳು ಸೆಟ್ಟೇರಲಿವೆ.